ಶುಕ್ರವಾರ, ಏಪ್ರಿಲ್ 8, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಿಸಿಲಿನ ಬೇಗೆ

ಬೆಂಗಳೂರಿನಲ್ಲಿ ಗುರುವಾರ ಬಿಸಿಲಿನ ತಾಪ ಹೆಚ್ಚಿದ ಕಾರಣ ಚರ್ಚ್‌ಸ್ಟ್ರೀಟ್‌ನಲ್ಲಿ ಕೊಡೆ ಹಿಡಿದು ಸಾಗಿದ ಯುವತಿ

TUITIONS ARE BACK,
BUT BETTER THAN EVER

CLASSES
4 to 10
STATE BOARD, ICSE & CBSE

INTRODUCING
BYJU'S
TUITION CENTRE

Upgrade to the next-generation classroom experience from BYJU'S. Ensure complete understanding of concepts while making your child exam ready.

NOW IN
BANGALORE

BYJU'S ADMISSION CUM SCHOLARSHIP TEST

Attend offline at a Tuition Centre near you.

Know where you stand and get upto 100% scholarship on admissions

Classes 4 - 10
APRIL
9th & 10th

Register for FREE
900 900 2000

Scan to register

Our centres: **Richmond Circle:** No.76/1, 1st Floor, Mission Rd, Sampangi Rama Nagara, Next to Canara Bank, Bengaluru, Karnataka - 560027 | **JP Nagar:** Premises No. 276, 2nd floor, 15th Cross, 5th Phase, J.P. Nagar, Bengaluru - 560078 | **Sadashiva Nagar:** 190, 2nd Floor, Sankey Road, Sadashivanagar, Bengaluru - 560080 | **HSR Layout:** No. 1, 3rd Floor, 14th Main Road, Sector 7, HSR Layout, Above Mc Donald's, Bengaluru - 560102 | **Whitefield:** 2nd Floor, Sri Narayani Arcade, ITPL main road, above BATA showroom, Kundanahalli, Brookefield. Bengaluru - 560066 | **Yelahanka:** No. 896/4, 'KALPAVRUKSHA', 1st A Main Road, Sector A, Yelahanka New Town, Bengaluru - 560064 | **Rajrajeshwari Nagar:** 1st Floor, Raghavendra Arcade, Jawaharlal Nehru Road, BEML Layout, 4th Stage, Above KFC, Rajarajeshwari Nagar, Bengaluru - 560098 | **Vijaya Nagar:** Second Floor of Square 55, 17th Cross, MRCR Layout, Vijayanagar, Bengaluru - 560040 | **Mahalakshmi Layout:** No.52,1st Floor,Mahalakshmipura,12th Cross. Mahalakshmi Layout, Bangalore - 560086 | **Kalyan Nagar:** No.232 & 234, 10th Main, 100 Feet Road, HRBR Layout, 1st Block, Kalyannagar, Bangalore - 560043

ಶುಕ್ರವಾರ, ಏಪ್ರಿಲ್ 8, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 97 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಕೆ.ಜಿ.ಎಫ್. ಚಾಪ್ಟರ್–2 ಬಿಡುಗಡೆಯ ಹೊಸ್ತಿನಲ್ಲಿ 'ರಾಕಿಭಾಯ್' ಯಶ್ ಅವರ ಲಹರಿ



ಆಳ-ಅಗಲ: ಶ್ರೀಲಂಕಾದಲ್ಲಿ ಸಂಕಷ್ಟಗಳ ಸರಮಾಲೆ
₹ 1.50 ಕೋಟಿ ವ್ಯತ್ಯಾಸ: ಬೆಂಕಿ ಹಚ್ಚಿ ಮಗನ ಕೊಲೆ 6
ಮೂವರಿಗೆ ನಾಡೋಜ ಗೌರವ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,035	17,639	₹53,421 (ಬೆಂಗಳೂರು)	₹68,200 (ಬೆಂಗಳೂರು)	76.03

ಗ್ರಾಮ ಪಂಚಾಯಿತಿಗಳಲ್ಲಿ ಸ್ಥಿರಾಸ್ತಿ ತೆರಿಗೆ ಪರಿಷ್ಕರಣೆಗೆ ಹೊಸ ನಿಯಮ ಪ್ರಕಟ

ಗ್ರಾಮ ವ್ಯಾಪ್ತಿಯಲ್ಲಿ ತೆರಿಗೆ ಭಾರ

• ಭರತ್ ಜೋಶಿ

ಮುಖ್ಯಾಂಶಗಳು

- 30 ವರ್ಷಗಳಲ್ಲಿ ಮೊದಲ ಬಾರಿಗೆ ಸಮಗ್ರ ತೆರಿಗೆ ನಿಯಮ
- ನಲ್ಲಿ ನೀರಿನ ಸಂಪರ್ಕ ಕಲ್ಪಿಸಲು ಶುಲ್ಕ ನಿಗದಿಗೆ ಅವಕಾಶ
- ಗ್ರಾಮಗಳ ವ್ಯಾಪ್ತಿಯಲ್ಲಿ ಏಕ ರೂಪದ ತೆರಿಗೆ ವ್ಯವಸ್ಥೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಗ್ರಾಮೀಣ ಪ್ರದೇಶಗಳಲ್ಲಿ ಸ್ಥಿರಾಸ್ತಿಯ ಮಾರ್ಗಸೂಚಿ ದರದ ಆಧಾರದಲ್ಲಿ ವಸತಿ ಮತ್ತು ಕೈಗಾರಿಕಾ ಉದ್ದೇಶದ ಆಸ್ತಿಗಳಿಗೆ ತೆರಿಗೆ ನಿಗದಿ ಮಾಡುವುದಕ್ಕೆ ಅವಕಾಶ ಕಲ್ಪಿಸುವ ಹೊಸ ನಿಯಮಗಳ ಜಾರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧಿಸೂಚನೆ ಹೊರಡಿಸಿದೆ. ಈ ನಿಯಮಗಳ ಜಾರಿಯಿಂದ ಗ್ರಾಮೀಣ ಪ್ರದೇಶದಲ್ಲಿ ತೆರಿಗೆಯ ಭಾರ ಹೆಚ್ಚಲಿದೆ.

'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ತೆರಿಗೆ, ದರ ಮತ್ತು ಫೀಜುಗಳು) ನಿಯಮಗಳು–2021' ಜಾರಿಗೊಳಿಸಿ ಮಾರ್ಚ್ 31ರಂದು ಅಧಿಸೂಚನೆ ಹೊರಡಿಸಲಾಗಿದೆ. ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳಲ್ಲೂ ತೆರಿಗೆ ನಿಗದಿಗೆ ಈ ನಿಯಮಗಳು ಅನ್ವಯವಾಗುತ್ತವೆ.

'30 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಗ್ರಾಮೀಣ ಪ್ರದೇಶಗಳಿಗೆ ಅನ್ವಯಿಸಿ ಸಮಗ್ರವಾದ ತೆರಿಗೆ ನಿಯಮಗಳನ್ನು ರೂಪಿಸಲಾಗಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್ ತಿಳಿಸಿದರು.

'ಹಿಂದೆ ಗ್ರಾಮ ಪಂಚಾಯಿತಿಗಳಲ್ಲಿ ಏಕರೂಪದ ತೆರಿಗೆ ವ್ಯವಸ್ಥೆ ಇರಲಿಲ್ಲ. ಆಯಾ ಗ್ರಾಮ ಪಂಚಾಯಿತಿಗಳು ಇಚ್ಛಾನುಸಾರ ತೆರಿಗೆ ವಿಧಿಸುತ್ತಿದ್ದವು. ಈಗ ಆರ್ಥಿಕ ಸ್ವಾಯತ್ತತೆಗೆ ಪೂರಕವಾಗಿ ತೆರಿಗೆ ನಿಯಮಗಳಲ್ಲಿ ಏಕರೂಪತೆ ತಂದಿದ್ದೇವೆ' ಎಂದು ಹೇಳಿದರು.

ಆಸ್ತಿಯ ಮೌಲ್ಯವನ್ನು ಆಧರಿಸಿ ತೆರಿಗೆ ನಿಗದಿ ಮಾಡುವ ಪದ್ಧತಿಯನ್ನು ಹೊಸ ನಿಯಮಗಳ ಅಡಿಯಲ್ಲಿ ಜಾರಿಗೊಳಿಸಲಾಗುತ್ತಿದೆ. ಸ್ಥಿರಾಸ್ತಿಯ ಸದ್ಯದ ಮಾರ್ಗಸೂಚಿ ದರದ ಆಧಾರದಲ್ಲಿ ತೆರಿಗೆ ಹೆಚ್ಚಳ ಮಾಡಲಾಗುತ್ತದೆ. ಇನ್ನು ಎಲ್ಲ ಗ್ರಾಮ ಪಂಚಾಯಿತಿಗಳೂ ಆಯಾ ಪ್ರದೇಶದ ಸ್ಥಿರಾಸ್ತಿ ಮಾರ್ಗಸೂಚಿ ದರದ ಆಧಾರದಲ್ಲೇ ತೆರಿಗೆ ನಿಗದಿ ಮಾಡಬೇಕಾಗುತ್ತದೆ.

ಈ ನಿಯಮಗಳ ಕರಡು ಪ್ರಕಟಿಸಿದ್ದಾಗಲೇ ಕೈಗಾರಿಕೆ ಮತ್ತು ಉದ್ಯಮ ವಲಯದ ಹಲವರು ತೆರಿಗೆ ಹೆಚ್ಚಳದ ಕುರಿತು ಆತಂಕ ವ್ಯಕ್ತಪಡಿಸಿದ್ದರು. ಹೊಸ ನಿಯಮಗಳಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳನ್ನೂ ಸಲ್ಲಿಸಿದ್ದರು.

ಕೈಗಾರಿಕೆ: ಮೂರು ವರ್ಗಗಳ ತೆರಿಗೆ

ಹೊಸ ನಿಯಮಗಳ ಪ್ರಕಾರ, ಗ್ರಾಮೀಣ ಪ್ರದೇಶಗಳಲ್ಲಿನ ಕೈಗಾರಿಕೆಗಳಿಗೆ ಮೂರು ವರ್ಗಗಳಲ್ಲಿ ತೆರಿಗೆ ದರ ನಿಗದಿ ಮಾಡಲಾಗುತ್ತದೆ. ಸಣ್ಣ ಕೈಗಾರಿಕೆಗಳಿಗೆ ಕಟ್ಟಡದ ಮೌಲ್ಯದ ಶೇ. 0.40 ರಷ್ಟು, ಮಧ್ಯಮ ಕೈಗಾರಿಕೆಗಳಿಗೆ ಕಟ್ಟಡ ಮೌಲ್ಯದ ಶೇ 0.50 ರಷ್ಟು ಮತ್ತು ಬೃಹತ್ ಕೈಗಾರಿಕೆಗಳಿಗೆ ಕಟ್ಟಡ ಮೌಲ್ಯದ ಶೇ 0.60 ರಷ್ಟು ತೆರಿಗೆ ವಿಧಿಸಲು ಗ್ರಾಮ ಪಂಚಾಯಿತಿಗಳಿಗೆ ಅವಕಾಶ ನೀಡಲಾಗಿದೆ.

'ಹಿಂದೆ ಕಟ್ಟಡಗಳ ಮೌಲ್ಯದ ಆಧಾರದಲ್ಲಿ ಮಾತ್ರ ತೆರಿಗೆ ನಿಗದಿ ಮಾಡಲಾಗುತ್ತಿತ್ತು. ಈಗ ಕಟ್ಟಡಗಳ ಮೌಲ್ಯದ ಜತೆಗೆ ಆಸ್ತಿಯ ಮಾರ್ಗಸೂಚಿ ದರವನ್ನೂ ಆಧರಿಸಿ ತೆರಿಗೆ ಲೆಕ್ಕ ಹಾಕಲಾಗುತ್ತದೆ. ಮಾರ್ಗಸೂಚಿ ದರ ಆಗಾಗ ಬದಲಾಗುವುದರಿಂದ ತೆರಿಗೆಯ ಪ್ರಮಾಣವೂ ಬದಲಾಗುತ್ತಿರುತ್ತದೆ. ಇದರಿಂದ ಸಮಸ್ಯೆಯಾಗುತ್ತದೆ' ಎನ್ನುತ್ತಾರೆ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ ಎಂ.ಜಿ.ರಾಜಗೋಪಾಲ್.

ತೆರಿಗೆ ಬಾಕಿ ಉಳಿಸಿಕೊಳ್ಳುವ ಕೈಗಾರಿಕೆಗಳಿಗೆ ನೋಟಿಸ್ ನೀಡುವ ಅಧಿಕಾರ ಗ್ರಾಮ ಪಂಚಾಯಿತಿಗಳಿಗೆ ಇದೆ. ಇದರಿಂದ ಕೈಗಾರಿಕೋದ್ಯಮಿಗಳಿಗೆ ಕಿರುಕುಳ ಹೆಚ್ಚಬಹುದು ಎಂದು ಆತಂಕ ವ್ಯಕ್ತಪಡಿಸುತ್ತಾರೆ.

ಶುಲ್ಕ ನಿಗದಿಗೂ ಅವಕಾಶ

ಗ್ರಾಮ ಪಂಚಾಯಿತಿಗಳು ಕೆಲವು ಹೊಸ ಶುಲ್ಕಗಳನ್ನು ವಿಧಿಸುವುದಕ್ಕೂ ಈಗ ಅವಕಾಶ ಕಲ್ಪಿಸಲಾಗಿದೆ. ನಲ್ಲಿ ನೀರಿನ ಸಂಪರ್ಕ ಪಡೆಯಲು ಒಂದು ಬಾರಿಗೆ ₹ 2,000 ಶುಲ್ಕ ಪಾವತಿಸಬೇಕು. 10 ಕಿಲೋ ಲೀಟರ್‌ವರೆಗಿನ ನೀರಿನ ಬಳಕೆಗೆ ತಿಂಗಳಿಗೆ ₹ 80 ಶುಲ್ಕ ವಿಧಿಸಬಹುದು. ಇಂತಹ ಅನೇಕ ಶುಲ್ಕ ವಿಧಿಸಲು ಅವಕಾಶ ನೀಡಲಾಗಿದೆ.

'ಕುಕ್ಕುಟ ಸಾಕಣೆ ಮತ್ತು ಕೃಷಿ ಸಂಬಂಧಿ ಉದ್ಯಮಗಳು ತೆರಿಗೆ ಪಾವತಿಯಿಂದ ತಪ್ಪಿಸಿಕೊಳ್ಳುತ್ತಿದ್ದವು. ಹೊಸ ನಿಯಮಗಳಲ್ಲಿ ಈ ಉದ್ದಿಮೆಗಳನ್ನೂ ತೆರಿಗೆ ವ್ಯಾಪ್ತಿಗೆ ತರಲಾಗಿದೆ. ಆಸ್ತಿ ಸಂಖ್ಯೆ ಮತ್ತು ಆಸ್ತಿಯ ಗುರುತಿನ ವಿವರಗಳನ್ನು ನಮೂದಿಸಿದ ತಕ್ಷಣ ಸ್ವಯಂಚಾಲಿತವಾಗಿ ತೆರಿಗೆ ಲೆಕ್ಕ ಹಾಕುವಂತಹ ವ್ಯವಸ್ಥೆಯನ್ನು ರೂಪಿಸಲಾಗುತ್ತಿದೆ' ಎಂದು ಅತೀಕ್ ವಿವರಿಸಿದರು.

ಮೀನು ಬೇಟೆ
ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಹಳ್ಳಿಕೊಪ್ಪ ಗ್ರಾಮದ ಚೌಡೇಶ್ವರಿ ದೇವಸ್ಥಾನದ ಕಟ್ಟಡ ನಿರ್ಮಾಣದ ಸಹಾಯಾರ್ಥ ಗುರುವಾರ ಖುಣಿಗಳನ್ನು ಬಳಸಿ ಜನರು ಮೀನು ಹಿಡಿದರು. ವಿವಿಧ ಗ್ರಾಮಗಳ ನೂರಾರು ಮಂದಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಆರೋಪ ಕೈಬಿಡಲು ಸಿಬಿಐ ಅರ್ಜಿ

ಸಮ್ಮಿಶ್ರ ಸರ್ಕಾರದ ಅವಧಿಯ ದೂರವಾಣಿ ಕದ್ದಾಲಿಕೆ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ದೂರವಾಣಿ ಕದ್ದಾಲಿಕೆ ಪ್ರಕರಣದಲ್ಲಿ ತನಿಖಾಧಿಕಾರಿ ಸಲ್ಲಿಸಿದ್ದ 'ಬಿ' ವರದಿ ತಿರಸ್ಕರಿಸಿ ಹೊರಡಿಸಿರುವ ಆದೇಶದಲ್ಲಿ ಸಿಬಿಐ ಪ್ರಕರಣಗಳ ವಿಶೇಷ ನ್ಯಾಯಾಲಯವು ತನಿಖಾಧಿಕಾರಿ ವಿರುದ್ಧ ಮಾಡಿರುವ ಆರೋಪಗಳನ್ನು ಕೈಬಿಡುವಂತೆ ಕೋರಿ ಸಿಬಿಐ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

2018ರ ಆಗಸ್ಟ್‌ನಿಂದ 2019ರ ಆಗಸ್ಟ್ ಅವಧಿಯಲ್ಲಿ ಬೆಂಗಳೂರು ನಗರ ಪೊಲೀಸ್ ಕಮಿಷನರೇಟ್‌ನ ತಾಂತ್ರಿಕ ಕೋಶದ ಮೂಲಕ ದೂರವಾಣಿ ಕದ್ದಾಲಿಕೆ ನಡೆಸಿರುವ ಆರೋಪ ಕೇಳಿಬಂದಿತ್ತು. ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲಾಗಿತ್ತು. 2021ರ ಜೂನ್‌ನಲ್ಲಿ ಕೋರ್ಟ್‌ಗೆ ವರದಿ ಸಲ್ಲಿಸಿದ್ದ ಸಿಬಿಐ ಎಸ್‌ಪಿ ಎಸ್.ಕಿರಣ್, 'ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಅಲೋಕ್ ಕುಮಾರ್ ಸೇರಿದಂತೆ ಆರೋಪಿಗಳ ವಿರುದ್ಧ ತನಿಖೆ ಮುಂದುವರಿಸಲು ಸಾಕ್ಷ್ಯ ಸಂಗ್ರಹಕ್ಕೆ ಅಡಚಣೆ ಉಂಟಾಗಿದೆ' ಎಂದು ಉಲ್ಲೇಖಿಸಿ, ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ಕೋರಿದ್ದರು.

ಸಿಬಿಐ ಸಲ್ಲಿಸಿದ್ದ 'ಬಿ' ವರದಿಯನ್ನು ತಿರಸ್ಕರಿಸಿ, ಪ್ರಕರಣದ ಕುರಿತು ಹೆಚ್ಚಿನ ತನಿಖೆ ನಡೆಸುವಂತೆ 2021ರ ಅಕ್ಟೋಬರ್ 18ರಂದು ಆದೇಶ ಹೊರಡಿಸಿದ್ದ ಸಿಬಿಐ ಪ್ರಕರಣಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಶ್ರೀನಿವಾಸ, ತನಿಖಾಧಿಕಾರಿ ಕಾರ್ಯನಿರ್ವಹಣೆಯನ್ನು ಕಟುವಾಗಿ ಆಕ್ಷೇಪಿಸಿದ್ದರು. ಟೀಕೆಗಳಿರುವ ಮೂರು ಪ್ಯಾರಾಗಳನ್ನೇ ಆದೇಶದಿಂದ ಕೈಬಿಡುವಂತೆ ಸಿಬಿಐ ಹೈಕೋರ್ಟ್‌ಗೆ ಮನವಿ ಮಾಡಿದೆ.

ಮಾರ್ಚ್ 7 ರಂದು ಸಿಬಿಐ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಪ್ರಕರಣದ ತನಿಖೆಯ ಮೇಲೆ ಪ್ರಭಾವ ಬೀರಲಾಗಿದೆ ಮತ್ತು ಆರೋಪಿಗಳಿಗೆ ಅನುಕೂಲಕರವಾದ ರೀತಿಯಲ್ಲಿ 'ಬಿ' ವರದಿ ಸಲ್ಲಿಸಲಾಗಿದೆ ಎಂಬ ವಿಚಾರಣಾ ನ್ಯಾಯಾಲಯದ ಅಭಿಪ್ರಾಯಗಳನ್ನು ಆದೇಶದಿಂದ ತೆಗೆದುಹಾಕುವಂತೆ ಕೋರಿದೆ.

ಯಾವ ಅಂಶ ಕೈಬಿಡಲು ಕೋರಿಕೆ: 'ಈ 'ಬಿ' ವರದಿಯನ್ನು ಗಮನಿಸಿದರೆ ಪೊಲೀಸ್ ಇಲಾಖೆಯಲ್ಲಿನ ಮುಖ್ಯಸ್ಥರೊಬ್ಬರು ಅಧಿಕಾರವನ್ನು ಬಳಸಿಕೊಂಡು ಪ್ರಭಾವ ಬೀರಿ ತಮಗೆ ಅನುಕೂಲಕರವಾಗುವ ರೀತಿಯಲ್ಲಿ ನ್ಯಾಯಾಲಯಕ್ಕೆ ವರದಿ ಸಲ್ಲಿಕೆಯಾಗುವಂತೆ ಮಾಡಿದ್ದಾರೆ.

6ನೇ ಪುಟ ನೋಡಿ

ಕೋಲಾಹಲ ಸೃಷ್ಟಿಸಿದ್ದ ಪ್ರಕರಣ

2019 ರಲ್ಲಿ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಹುದ್ದೆಯಿಂದ ಅಲೋಕ್ ಕುಮಾರ್ ಅವರನ್ನು ವರ್ಗಾವಣೆ ಮಾಡಿ, ಬಿ.ಭಾಸ್ಕರ್ ರಾವ್ ಅವರನ್ನು ನೇಮಿಸಲಾಗಿತ್ತು. ಅದೇ ಸಂದರ್ಭದಲ್ಲಿ ಭಾಸ್ಕರ್ ರಾವ್ ಮತ್ತು ಇತರ ವ್ಯಕ್ತಿಗಳ ದೂರವಾಣಿ ಸಂಭಾಷಣೆಯ ತುಣುಕು ಬಹಿರಂಗವಾಗಿತ್ತು. ಇದು ದೂರವಾಣಿ ಕದ್ದಾಲಿಕೆ ನಡೆದಿರುವುದು ಬಹಿರಂಗಗೊಳ್ಳಲು ಕಾರಣವಾಗಿತ್ತು. ಬೆಂಗಳೂರು ನಗರ ಸಿಸಿಬಿ ಪೊಲೀಸರು ಆರಂಭದಲ್ಲಿ ತನಿಖೆ ನಡೆಸಿದ್ದರು. ನಂತರ ತನಿಖೆಯನ್ನು ಸಿಬಿಐಗೆ ವಹಿಸಲಾಗಿತ್ತು.

ಕೆನರಾ ಬ್ಯಾಂಕ್ Canara Bank
Government of India Undertaking
Together We Can
ಗೃಹ ಸಾಲ 6.65% ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
*ಷರತ್ತುಗಳು ಅನ್ವಯಿಸುತ್ತವೆ
1800 425 0018

ಮಾನವ ಹಕ್ಕು ಮಂಡಳಿ: ರಷ್ಯಾ ಅಮಾನತು

ಜಿನೀವಾ (ವಿಶ್ವಸಂಸ್ಥೆ) (ರಾಯಿಟರ್ಸ್): ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಯಿಂದ ರಷ್ಯಾವನ್ನು ಅಮಾನತು ಮಾಡಿ ವಿಶ್ವ ಸಂಸ್ಥೆಯ ಮಹಾ ಸಭೆಯು ಆದೇಶ ಹೊರಡಿಸಿದೆ. ಮಾನವ ಹಕ್ಕುಗಳ ಮಂಡಳಿಯಿಂದ ರಷ್ಯಾವನ್ನು ಅಮಾನತು ಮಾಡುವ ನಿರ್ಣಯವನ್ನು ಮಹಾ ಸಭೆಯಲ್ಲಿ ಮತಕ್ಕೆ ಹಾಕಲಾಗಿತ್ತು. ಅಮಾನತು ಮಾಡಬಹುದು ಎಂಬ ನಿರ್ಣಯಕ್ಕೆ ಹೆಚ್ಚಿನ ಮತಗಳು ಬಂದ ಕಾರಣ, ಮಹಾ ಸಭೆಯು ಈ ಕ್ರಮ ತೆಗೆದುಕೊಂಡಿದೆ.

ಉಕ್ರೇನ್‌ನ ಬುಕಾ ನಗರದಿಂದ ವಾಪಸ್ಸಾಗುವಾಗ ರಷ್ಯಾ ಸೇನೆಯು ನೂರಾರು ನಾಗರಿಕರನ್ನು ಕೊಂದು ಹಾಕಿದೆ ಎಂದು ಉಕ್ರೇನ್ ಆರೋಪಿಸಿತ್ತು. ಉಕ್ರೇನ್‌ನಲ್ಲಿ ರಷ್ಯಾ ಎಸಗಿರಬಹುದಾದ ಯುದ್ಧಾಪರಾಧಗಳ ಕಾರಣ ಮಾನವ ಹಕ್ಕುಗಳ ಮಂಡಳಿಯಿಂದ ಅದನ್ನು ಅಮಾನತು ಮಾಡುವ ನಿರ್ಣಯವನ್ನು ಮಹಾ ಸಭೆ ಮಂಡಿಸಿತ್ತು.

193 ಸದಸ್ಯ ರಾಷ್ಟ್ರಗಳ ಮಹಾ ಸಭೆಯಲ್ಲಿ ಈ ನಿರ್ಣಯವನ್ನು ಗುರುವಾರ ಮತಕ್ಕೆ ಹಾಕಲಾಗಿತ್ತು. ನಿರ್ಣಯದ ಪರವಾಗಿ 93 ದೇಶಗಳು ಮತ ಹಾಕಿದವು. ನಿರ್ಣಯದ ವಿರುದ್ಧವಾಗಿ 24 ದೇಶಗಳು ಮತ ಹಾಕಿದವು. ಭಾರತವೂ ಸೇರಿ 58 ದೇಶಗಳು ಮತದಾನದಿಂದ ದೂರ ಉಳಿದವು. ನಿರ್ಣಯವು ಅಂಗೀಕಾರವಾಗಲು ಮತ ಹಾಕಿದ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟು ಮತಗಳು ಬೇಕಿತ್ತು. 58 ದೇಶಗಳು ಮತದಾನದಿಂದ ದೂರ ಉಳಿದ ಕಾರಣ, ನಿರ್ಣಯದಲ್ಲಿದ್ದ ಸದಸ್ಯ ದೇಶಗಳ ಸಂಖ್ಯೆ 117ಕ್ಕೆ ಕುಸಿದಿತ್ತು. 93 ದೇಶಗಳು ಪರವಾಗಿ ಮತಹಾಕಿದ ಕಾರಣ, ನಿರ್ಣಯವು ಅಂಗೀಕಾರವಾಯಿತು.

58 ದೇಶಗಳು ಮತದಾನದಿಂದ ದೂರ ಉಳಿದುದ್ದರ ಬಗ್ಗೆ ರಷ್ಯಾ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದೆ. 'ಮತದಾನದಿಂದ ದೂರ ಉಳಿದಿದ್ದನ್ನು ನಾವು, ನಿರ್ಣಯದ ಪರವಾದ ಮತ ಎಂದೇ ಪರಿಗಣಿಸುತ್ತೇವೆ. ಇದು ಆಯಾ ದೇಶಗಳೊಂದಿಗೆ, ನಮ್ಮ ದ್ವಿಪಕ್ಷೀಯ ಸಂಬಂಧದ ಮೇಲೆ ಪರಿಣಾಮ ಬೀರಲಿದೆ' ಎಂದು ರಷ್ಯಾ ಎಚ್ಚರಿಕೆ ನೀಡಿದೆ.

ನಾಗರಿಕರ ಹತ್ಯೆಯ ಬಗ್ಗೆ ಭಾರತವು ಆಘಾತ ವ್ಯಕ್ತಪಡಿಸಿತ್ತು. ಬುಕಾದಲ್ಲಿನ ಹತ್ಯೆಗಳ ಕುರಿತು ಸ್ವತಂತ್ರ ತನಿಖೆ ನಡೆಯಬೇಕು ಎಂಬ ಬೇಡಿಕೆಗೆ ಬೆಂಬಲವಿದೆ ಎಂದು ಭಾರತ ಹೇಳಿತ್ತು.

ಪಾಕ್: ಮತ್ತೆ ಅವಿಶ್ವಾಸ ನಿರ್ಣಯಕ್ಕೆ ಸುಪ್ರೀಂ ಕೋರ್ಟ್ ಆದೇಶ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಸಂಸತ್ತನ್ನು ವಿಸರ್ಜಿಸುವ ನಿರ್ಧಾರವು ಅಸಾಂವಿಧಾನಿಕ ಎಂದು ಆ ದೇಶದ ಸುಪ್ರೀಂ ಕೋರ್ಟ್ ಗುರುವಾರ ಸಂಜೆ ತೀರ್ಪು ನೀಡಿದೆ. ಇಮ್ರಾನ್ ಖಾನ್ ನೇತೃತ್ವದ ಸರ್ಕಾರದ ವಿರುದ್ಧ ವಿರೋಧ ಪಕ್ಷಗಳು ಮಂಡಿಸಿದ್ದ ಅವಿಶ್ವಾಸ ನಿರ್ಣಯವನ್ನು ತಿರಸ್ಕರಿಸಿದ ಉಪ ಸ್ಪೀಕರ್ ಖಾಸಿಂ ಸೂರಿ ಅವರ ನಿರ್ಧಾರವನ್ನು ಕೋರ್ಟ್ ರದ್ದುಪಡಿಸಿದೆ.

ಅವಿಶ್ವಾಸ ನಿರ್ಣಯವನ್ನು ಮತ್ತೆ ಮತಕ್ಕೆ ಹಾಕಬೇಕು. ಅದಕ್ಕಾಗಿ ಶನಿವಾರ ಸಂಸತ್ತಿನ ಅಧಿವೇಶನ ನಡೆಸಬೇಕು. ಶನಿವಾರ ಬೆಳಿಗ್ಗೆ 10 ಗಂಟೆಗೆ ಅವಿಶ್ವಾಸ ನಿರ್ಣಯವನ್ನು ಮತಕ್ಕೆ ಹಾಕಬೇಕು ಎಂದು ಮುಖ್ಯ ನ್ಯಾಯಮೂರ್ತಿ ಉಮರ್ ಅತಾ ಬಂದ್ಯಾಲ್ ನೇತೃತ್ವದ ಐವರು ನ್ಯಾಯಮೂರ್ತಿಗಳ ಪೀಠವು ಸೂಚನೆ ನೀಡಿದೆ.

7ನೇ ಪುಟ ನೋಡಿ

ಅಲ್‌ಕೈದಾ ಹೇಳಿಕೆ – ವಿಚಾರಣೆಗೆ ಸೂಚನೆ: ಮುಖ್ಯಮಂತ್ರಿ

ಮೈಸೂರು: 'ಜನರಲ್ಲಿ ಅಶಾಂತಿ, ಗೊಂದಲ ಸೃಷ್ಟಿಸಲು ಕೆಲ ಶಕ್ತಿಗಳು ಪ್ರಯತ್ನ ನಡೆಸುತ್ತಿದ್ದು, ದೇಶದ ಕಾನೂನಿಗೆ ವಿರುದ್ಧವಾಗಿ ವರ್ತಿಸುತ್ತಿವೆ. ಅದರ ಒಂದು ಭಾಗವಾಗಿ ಅಲ್‌ಕೈದಾ ಎಂದು ಹೇಳಿಕೊಂಡು ವಿಡಿಯೊ ಹರಿಬಿಡಲಾಗಿದೆ. ಅದರ ನೈಜತೆ ಬಗ್ಗೆ ವಿಚಾರಣೆ ನಡೆಸಲು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ತಿಳಿಸಿದರು.

ಶ್ರೀಲಂಕಾ: ಸಾಲ ಮರು ಹೊಂದಾಣಿಕೆಗೆ ಸಮಿತಿ

ಕೊಲಂಬೊ: ಶ್ರೀಲಂಕಾವನ್ನು ಆರ್ಥಿಕ ಬಿಕ್ಕಟ್ಟಿನಿಂದ ಹೊರಗೆ ತರುವುದಕ್ಕಾಗಿ ಸಾಲ ಮರುಹೊಂದಾಣಿಕೆಗೆ ಪರಿಣತರ ಸಮಿತಿಯೊಂದನ್ನು ಅಧ್ಯಕ್ಷ ಗೊಟಬಯ ರಾಜಪಕ್ಸ ಗುರುವಾರ ನೇಮಿಸಿದ್ದಾರೆ. 7

ಒಳ ಪುಟಗಳು

'ಬೇಗ ಶಸ್ತ್ರಾಸ್ತ್ರ ಕೊಡಿ, ಜನರ ಜೀವ ಉಳಿಸಿ' 7
'ವಿದ್ಯುತ್ ವ್ಯವಸ್ಥೆ ಮೇಲೆ ಚೀನಾ ಹ್ಯಾಕರ್‌ಗಳ ದಾಳಿ ಯತ್ನ ವಿಫಲ' 7

ಚಿನಕುರಳಿ
ಪ್ರಕಾಶ್ ಶೆಟ್ಟಿ

ದ್ವಿತೀಯ ಪಿಯುಸಿ ಪರೀಕ್ಷೆ ಪರಿಷ್ಕೃತ ವೇಳಾಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2021–22 ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ಏಪ್ರಿಲ್ 22 ರಿಂದ ಮೇ 18 ರ ವರೆಗೆ ನಡೆಯಲಿವೆ. ಪರಿಷ್ಕೃತ ಅಂತಿಮ ವೇಳಾಪಟ್ಟಿಯನ್ನು ಪದವಿಪೂರ್ವ ಶಿಕ್ಷಣ ಇಲಾಖೆಯು ಗುರುವಾರ ಪ್ರಕಟಿಸಿದೆ.

ಕೆಲ ತಾಂತ್ರಿಕ ಕಾರಣಗಳಿಂದ ಅಲ್ಪ ಬದಲಾವಣೆಯೊಂದಿಗೆ ಪರಿಷ್ಕೃತ ಅಂತಿಮ ವೇಳಾಪಟ್ಟಿ ಪ್ರಕಟಿಸಲಾಗಿದೆ ಎಂದು ಇಲಾಖೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರೀಕ್ಷೆಗಳು ಬೆಳಿಗ್ಗೆ 10.15 ರಿಂದ ಮಧ್ಯಾಹ್ನ 1.30 ರವರೆಗೆ ನಡೆಯಲಿವೆ. ಈ ಮೊದಲು ಮೇ 5ರಂದು ನಿಗದಿಯಾಗಿದ್ದ ಇಂಗ್ಲಿಷ್ ವಿಷಯದ ಪರೀಕ್ಷೆಯು ಪರಿಷ್ಕೃತ ವೇಳಾಪಟ್ಟಿಯಂತೆ ಈಗ ಮೇ 6ರಂದು ನಡೆಯಲಿದೆ.

ಅಂತಿಮ ವೇಳಾಪಟ್ಟಿ ವಿವರ: ಏಪ್ರಿಲ್ 22ರಂದು ವ್ಯವಹಾರ ಅಧ್ಯಯನ ಮತ್ತು ತರ್ಕಶಾಸ್ತ್ರ, 23ರಂದು ಗಣಿತ ಮತ್ತು ಶಿಕ್ಷಣ ಶಾಸ್ತ್ರ, 25ರಂದು ಅರ್ಥಶಾಸ್ತ್ರ, 26ರಂದು ರಸಾಯನ ವಿಜ್ಞಾನ ಮತ್ತು ಹಿಂದೂಸ್ತಾನಿ ಸಂಗೀತ ಹಾಗೂ ಮನಃಶಾಸ್ತ್ರ, 27ರಂದು ಸಂಸ್ಕೃತ, ಮರಾಠಿ, ತಮಿಳು, ತೆಲುಗು, ಮಲಯಾಳಿ, ಉರ್ದು ಮತ್ತು ಫ್ರೆಂಚ್ ವಿಷಯಗಳ ಪರೀಕ್ಷೆಗಳು ನಡೆಯಲಿವೆ.

ಏ.28 ರಂದು ಕನ್ನಡ ಮತ್ತು ಅರೇಬಿಕ್, ಮೇ 4ರಂದು ಭೂಗೋಳ ಶಾಸ್ತ್ರ, ಜೀವವಿಜ್ಞಾನ, ಮೇ 5ರಂದು ಮಾಹಿತಿ ತಂತ್ರಜ್ಞಾನ ಮತ್ತು ಆಟೋಮೊಬೈಲ್, ಮೇ 6ರಂದು ಇಂಗ್ಲಿಷ್, 10ರಂದು ಇತಿಹಾಸ, ಭೌತವಿಜ್ಞಾನ, 12ರಂದು ರಾಜ್ಯಶಾಸ್ತ್ರ ಮತ್ತು ಸಂಖ್ಯಾಶಾಸ್ತ್ರ, 14ರಂದು ಸಮಾಜಶಾಸ್ತ್ರ, ವಿದ್ಯುನ್ಮಾನ ವಿಜ್ಞಾನ, ಗಣಕ ವಿಜ್ಞಾನ, 17ರಂದು ಭೂಗರ್ಭಶಾಸ್ತ್ರ ಮತ್ತು ಐಚ್ಛಿಕ ಕನ್ನಡ ಹಾಗೂ ಲೆಕ್ಕಶಾಸ್ತ್ರ ಮತ್ತು 18ರಂದು ಹಿಂದಿ ವಿಷಯದ ಪರೀಕ್ಷೆಗಳು ನಡೆಯಲಿವೆ.

ಆಕಾರ್ ಪಟೇಲ್ ವಿರುದ್ಧದ ಎಲ್‌ಒಸಿ ಹಿಂಪಡೆಯಲು ಸಿಬಿಐಗೆ ಕೋರ್ಟ್ ಸೂಚನೆ

ನವದೆಹಲಿ: ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ) ಉಲ್ಲಂಘನೆ ಆರೋಪದಡಿ ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಇಂಡಿಯಾದ ಅಧ್ಯಕ್ಷ ಆಕಾರ್ ಪಟೇಲ್ ವಿರುದ್ಧ ಹೊರಡಿಸಲಾಗಿರುವ ಲುಕ್‌ಔಟ್ ನೋಟಿಸ್ ಅನ್ನು (ಎಲ್‌ಒಸಿ) ಹಿಂಪಡೆಯುವಂತೆ ಸಿಬಿಐಗೆ ದೆಹಲಿ ಕೋರ್ಟ್ ಗುರುವಾರ ನಿರ್ದೇಶನ ನೀಡಿದೆ.

ಅಲ್ಲದೇ, ಈ 'ಲೋಪ'ಕ್ಕಾಗಿ ಆಕಾರ್ ಪಟೇಲ್ ಅವರಲ್ಲಿ ಲಿಖಿತರೂಪದಲ್ಲಿ ಕ್ಷಮೆ ಕೇಳುವಂತೆ ಸಿಬಿಐ ನಿರ್ದೇಶಕರಿಗೆ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಪವನ್‌ಕುಮಾರ್ ಸೂಚಿಸಿದರು.

'ಸಮರ್ಪಕ ಆಧಾರಗಳಿಲ್ಲದೇ 2021ರ ಡಿಸೆಂಬರ್ 31ರಂದು ಅವರ ವಿರುದ್ಧ ಲುಕ್‌ಔಟ್ ನೋಟಿಸ್ ಹೊರಡಿಸಲಾಗಿದೆ. ತನಿಖೆ ಪ್ರಗತಿಯಲ್ಲಿ ಇರುವಾಗ ಅವರನ್ನು ಬಂಧಿಸಿಲ್ಲ. ತಮಗೆ ನೋಟಿಸ್ ನೀಡಿದಾಗಲೆಲ್ಲಾ ಅವರು ವಿಚಾರಣೆಗೂ ಹಾಜರಾಗಿದ್ದಾರೆ' ಎಂದು ಅಭಿಪ್ರಾಯಪಟ್ಟರು.

ವಿದೇಶ ಪ್ರಯಾಣ ಕೈಗೊಂಡರೆ ಪಟೇಲ್ ಅವರು ತನಿಖೆಯಿಂದ ತಪ್ಪಿಸಿಕೊಳ್ಳುತ್ತಾರೆ ಎಂಬ ಸಿಬಿಐನ ಗುಮಾನಿಗೆ ಯಾವುದೇ ಆಧಾರ ಇಲ್ಲ. ಹೀಗಾಗಿ ಅವರ ವಿರುದ್ಧದ ಲುಕ್‌ಔಟ್ ನೋಟಿಸ್ ಅನ್ನು ತಕ್ಷಣವೇ ಹಿಂಪಡೆಯಬೇಕು ಎಂದು ನ್ಯಾಯಾಧೀಶರು ಸೂಚಿಸಿದರು.

ವಿವಿಧ ವಿಶ್ವವಿದ್ಯಾಲಯಗಳು ಆಯೋಜಿಸಿದ್ದ ಸರಣಿ ಉಪನ್ಯಾಸ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಅಮೆರಿಕಕ್ಕೆ ಪ್ರಯಾಣಿಸಲಿದ್ದ ಪಟೇಲ್ ಅವರನ್ನು ವಲಸೆ ಅಧಿಕಾರಿಗಳು ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬುಧವಾರ ತಡೆದಿದ್ದರು.

ICL
Integrated Couriers & Logitstics
A reputed express courier company wishes to appoint business partners
All Across Karnataka For
FRANCHISE OPPORTUNITY
info@iclexpress.in
Best and Market driven rates
Online Track & Trace
Reaches Over 220+Countries All Across the Globe
Services
Courier
Logistics
Air Freight
DGR Cargo
Regional Office Bangalore KA
Mr. Vinay
090355 61234
vinay.blr@iclexpress.in
Mr. Maheshwer
087920 03304
maheshwer.blr@iclexpress.in
Head Office Hyderabad TS
ICL COURIERS (A Brand of Sri Balaji Maxmail Pvt Ltd)
#243/242, 6th Cross, 8th Main Road, Sampangiramanagar, Bangalore, 560027
www.iclexpress.in | 080 - 22112210

'ಆತಿಥ್ಯ' ನಿರ್ವಹಣೆಗೆ ಐಎಎಸ್, ಐಎಫ್‌ಎಸ್, ಐಪಿಎಸ್ ಅಧಿಕಾರಿಗಳು

ಕರ್ನಾಟಕ ಭವನ: ಅಧಿಕಾರಿಗಳದ್ದೇ ದರ್ಬಾರ್!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವದೆಹಲಿಯಲ್ಲಿರುವ ಕರ್ನಾಟಕ ಭವನದಲ್ಲಿ ಈಗ ಐಎಎಸ್, ಐಎಫ್‌ಎಸ್, ಐಪಿಎಸ್ ಅಧಿಕಾರಿಗಳದ್ದೇ ದರ್ಬಾರ್. ಈ ಭವನದ ಆಡಳಿತ ನಿರ್ವಹಣೆಗೆ ಒಬ್ಬ ಐಎಎಸ್ (ಸ್ಥಾನಿಕ ಆಯುಕ್ತ), ಒಬ್ಬ ಕೆಎಎಸ್ (ಉಪ ಸ್ಥಾನಿಕ ಆಯುಕ್ತ) ಅಧಿಕಾರಿ ಇದ್ದರೆ ಸಾಕು. ಆದರೆ, ರಾಜ್ಯ ಸರ್ಕಾರ ಐವರು ಐಎಎಸ್, ತಲಾ ಒಬ್ಬರು ಐಎಫ್‌ಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ನೇಮಿಸಿದೆ!

ಈ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಪತ್ರ ಬರೆದಿರುವ ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿ (ಸಿಬಿಎಫ್‌ಸಿ) ಸದಸ್ಯ ಸುಹಾಸ್ ಎಂ.ಎ, 'ಅನಗತ್ಯ ಅಧಿಕಾರಿಗಳನ್ನು ವಾಪಸು ಕರೆಯಿಸಿಕೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

'ಈ ಅಧಿಕಾರಿಗಳಿಗೆ ಕರ್ನಾಟಕ ಭವನದ ಮೊದಲ ಮಹಡಿಯಲ್ಲಿ ಪ್ರತ್ಯೇಕ ಕೊಠಡಿ ನೀಡಲಾಗಿದೆ. ಚಾಲಕ ಸಹಿತ ಕಾರು, ಒಬ್ಬ ಆಪ್ತ ಸಹಾಯಕ, ಒಬ್ಬ 'ಡಿ' ವೃಂದದ ಸಿಬ್ಬಂದಿ ಇದ್ದಾರೆ. ಅಲ್ಲದೆ, ಕೇಂದ್ರ ಸರ್ಕಾರದ ವಸತಿ ಸೌಲಭ್ಯವೂ ಇದೆ. ರಾಜ್ಯದ ಇತಿಹಾಸದಲ್ಲಿಯೇ ಈ ಹಿಂದಿನ ಯಾವುದೇ ಸರ್ಕಾರ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಐಎಎಸ್ ಅಧಿಕಾರಿಗಳನ್ನು ಕರ್ನಾಟಕ ಭವನಕ್ಕೆ ನೇಮಿಸಿದ ನಿದರ್ಶನವಿಲ್ಲ' ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಈ ಪೈಕಿ, ಕೆಲವು ಅಧಿಕಾರಿಗಳನ್ನು ಕೋವಿಡ್ ಆರಂಭದ ದಿನಗಳಲ್ಲಿ ನೇಮಿಸಲಾಗಿದೆ. ಅವರು ಕೂಡಾ ಅಲ್ಲಿಯೇ ಮುಂದುವರಿದಿದ್ದಾರೆ. ಐಎಎಸ್ ಅಧಿಕಾರಿಗಳಿಗೆ ವಿಲಾಸಿಯಾಗಿ ಇರಲು ತೆರಿಗೆ ಹಣವನ್ನು ಅನವಶ್ಯಕವಾಗಿ ವೆಚ್ಚ ಮಾಡಲಾಗುತ್ತಿದೆ' ಎಂದು ದೂರಿದ್ದಾರೆ.

'ಕೇಂದ್ರದಲ್ಲಿ ಮೋದಿ ನೇತೃತ್ವದ ಸರ್ಕಾರದಲ್ಲಿರುವ ಅಧಿಕಾರಿ ವರ್ಗ ಅತ್ಯುತ್ತಮ ಕೆಲಸ ಮಾಡುತ್ತಿದೆ. ಕೇಂದ್ರದಲ್ಲಿ 2–3 ಅಧಿಕಾರಿಗಳು ಒಂದು ಕ್ಯಾಬಿನ್ ಹೊಂದಿದ್ದಾರೆ. ಆದರೆ, ಕರ್ನಾಟಕ ಭವನದಲ್ಲಿರುವ ಈ ಏಳು ಅಧಿಕಾರಿಗಳಿಗೂ ಪ್ರತ್ಯೇಕ ವ್ಯವಸ್ಥೆ ಇದೆ. ಕರ್ನಾಟಕ ಭವನ–1ರ (ಕಾವೇರಿ) ಮೊದಲ ಮಹಡಿಯನ್ನು ಸಂಪೂರ್ಣವಾಗಿ ಅಧಿಕಾರಿಗಳೇ ಬಳಸುತ್ತಿದ್ದಾರೆ' ಎಂದಿದ್ದಾರೆ.

'ಉಕ್ರೇನ್‌ನಿಂದ ಕರ್ನಾಟಕದ ವಿದ್ಯಾರ್ಥಿಗಳನ್ನು ತಾಯ್ನಾಡಿಗೆ ಮರಳಿ ತರಲು ನಡೆದ 'ಆಪರೇಷನ್ ಗಂಗಾ' ಕಾರ್ಯಾಚರಣೆಯಲ್ಲಿ ಈ ಐಎಎಸ್ ಅಧಿಕಾರಿಗಳ ಪೈಕಿ, ಇಮ್‌ಕೊಂಗ್ಲಾ ಜಮೀರ್ ಮತ್ತು ಎಚ್. ಪ್ರಸನ್ನ ಮಾತ್ರ ಹಗಲು ರಾತ್ರಿ ಎನ್ನದೇ ಕೆಲಸ ಮಾಡಿದ್ದಾರೆ. ಇತರ ಯಾವುದೇ ಅಧಿಕಾರಿ ಈ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡಿಲ್ಲ. ಅಲ್ಲದೆ, ಗಣ್ಯರು, ಅತಿಗಣ್ಯರು, ರಾಜ್ಯದ ಅತಿಥಿಗಳಿಗೆ ಆತಿಥ್ಯ ನೀಡುವ ಕರ್ನಾಟಕ ಭವನದ ನಿರ್ವಹಣೆಗೆ ಒಬ್ಬರು ಐಎಎಸ್ (ಸ್ಥಾನಿಕ ಆಯುಕ್ತರು) ಮತ್ತು ಒಬ್ಬ ಕೆಎಎಸ್ ಅಧಿಕಾರಿ (ಉಪ ಸ್ಥಾನಿಕ ಆಯುಕ್ತರು) ಮಾತ್ರ ಸಾಕು ಎನ್ನುವುದು ಭವನದ ಸಿಬ್ಬಂದಿಯ ಅಭಿಪ್ರಾಯ' ಎಂದೂ ಪತ್ರದಲ್ಲಿ ಹೇಳಿದ್ದಾರೆ.

ಕರ್ನಾಟಕ ಭವನದಲ್ಲಿರುವ ಅಧಿಕಾರಿಗಳು

ಅಧಿಕಾರಿ	ಹುದ್ದೆ
ಇಮ್‌ಕೊಂಗ್ಲಾ ಜಮೀರ್ (ಐಎಎಸ್)	ಸ್ಥಾನಿಕ ಆಯುಕ್ತರು
ಆಕೃತಿ ಬನ್ಸಲ್ (ಐಎಎಸ್)	ಹೆಚ್ಚುವರಿ ಸ್ಥಾನಿಕ ಆಯುಕ್ತರು
ಗುರ್ನೀತ್ ತೇಜ್ (ಐಎಎಸ್)	ಹೆಚ್ಚುವರಿ ಸ್ಥಾನಿಕ ಆಯುಕ್ತರು
ಖುಷ್ಬು ಗೋಯೆಲ್ ಚೌಧರಿ (ಐಎಎಸ್)	ಹೆಚ್ಚುವರಿ ಸ್ಥಾನಿಕ ಆಯುಕ್ತರು
ಎಚ್. ಪ್ರಸನ್ನ (ಐಎಎಸ್)	ಉಪ ಸ್ಥಾನಿಕ ಆಯುಕ್ತರು
ಡಾ. ಸಿಮಿ ಮರಿಯಂ ಜಾರ್ಜ್ (ಐಪಿಎಸ್)	ಹೆಚ್ಚುವರಿ ಸ್ಥಾನಿಕ ಆಯುಕ್ತರು
ವಿಜಯರಂಜನ್ ಸಿಂಗ್ (ಐಎಫ್‌ಎಸ್)	ವಿಶೇಷ ಸ್ಥಾನಿಕ ಆಯುಕ್ತರು

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನನ್ನ ಕಕ್ಷಿದಾರರು ಕೆಲವು ಷೆಡ್ಯೂಲ್ ಸ್ವತ್ತುಗಳನ್ನು (ಕೆಳಗಿನ ಷೆಡ್ಯೂಲ್‌ನಲ್ಲಿ ಸಂಪೂರ್ಣವಾಗಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ "ಷೆಡ್ಯೂಲ್ ಪ್ರಾಪರ್ಟಿ" ಎನ್ನಲಾಗುವ) ಅವುಗಳ ಮಾಲಿಕರುಗಳಾದ 1) ಪಿ. ಭಾಗ್ಯಲಕ್ಷ್ಮೀ ಕೋಂ. ಶ್ರೀ. ಲೇಟ್ ಪಿ.ಗುರುಸ್ವಾಮಿ ನಾಯ್ಡು, ನಂ.11, ಕತ್ರಿಗುಪ್ಪೆ ಮುಖ್ಯರಸ್ತೆ, ಐಟಿಐ ಕಾಲೋನಿ ಎದುರು, ಬನಶಂಕರಿ 3ನೇ ಹಂತ, ಬೆಂಗಳೂರು – 560 085, 2) ಶ್ರೀ. ಚಲುವೇಗೌಡ ಬಿನ್ ಲೇಟ್ ಶ್ರೀ. ಜವರೇಗೌಡ, ನಂ.105, ಪ್ರಮೋದ್ ಲೇಔಟ್, ಬನಶಂಕರಿ 2ನೇ ಹಂತ, ಬೆಂಗಳೂರು – 560 039, 3) ಶ್ರೀಮತಿ. ಪಾರ್ವತಮ್ಮ ಕೋಂ. ಶ್ರೀ. ಲೇಟ್ ವಿಶ್ವಮೂರ್ತಿ, ವಿಳಾಸ ಹೆಗ್ಗಡಗೆರೆ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ, 4) ಶ್ರೀ. ಬಿ.ಸಿ. ನಂಜುಂಡಪ್ಪ ಅಲಿಯಾಸ್ ಬಿ.ಸಿ. ನಂಜುಂಡಯ್ಯ ಬಿನ್ ಶ್ರೀ. ಲೇಟ್ ಚೋಳುರಯ್ಯ, ವಿಳಾಸ ಬಾನಂದೂರ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ, ("ಜಮೀನಿನ ಮಾಲಿಕರು") 5) ಮೆ. ಮ್ಯಾಕ್ಸ್ ಕಾನ್‌ಕಾರ್ಡ್ ಡೆವಲಪರ್ಸ್, ಪ್ರತಿನಿಧಿಸುವ ವ್ಯವಸ್ಥಾಪಕ ಪಾಲುದಾರರು ಶ್ರೀ. ವೆಂಕಟೇಶ.ಸಿ ಮತ್ತು ಶ್ರೀ. ಹೆಚ್.ಬಿ. ಜಯರಾಮ, ನೋಂದಾಯಿತ ಕಚೇರಿ ವಿಳಾಸ ನಂ.2231, 3ನೇ ಮಹಡಿ, 11ನೇ ಮುಖ್ಯರಸ್ತೆ, 3ನೇ ಬ್ಲಾಕ್ ಈಸ್ಟ್, ಜಯನಗರ, ಬೆಂಗಳೂರು–560 011 ("ಅಗ್ರೀಮೆಂಟ್ ಮತ್ತು ಜಿಪಿಎ ಹೋಲ್ಡರ್ಸ್") ಇವರುಗಳಿಂದ ಖರೀದಿಸಲು ಉದ್ದೇಶಿಸಿದ್ದಾರೆ.

ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಅಥವಾ ಷೆಡ್ಯೂಲ್ ಸ್ವತ್ತಿನ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಾಗಲಿ, ಹಿಂದೂ ಅವಿಭಜಿತ ಕುಟುಂಬಕ್ಕಾಗಲಿ, ಕಂಪನಿ, ಬ್ಯಾಂಕ್, ಹಣಕಾಸು ಸಂಸ್ಥೆಗಳು, ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು, ಸಂಸ್ಥೆ, ವ್ಯಕ್ತಿಗಳ ಸಂಘ ಅಥವಾ ವ್ಯಕ್ತಿಗಳ ಅಂಗ – ಸಂಸ್ಥಾಪಿತ ಅಥವಾ ಸಂಸ್ಥಾಪಿತವಲ್ಲದ, ಲೇವಾದೇವಿದಾರರು ಮತ್ತು/ಅಥವಾ ಸಾಲ ನೀಡುವವರಿಗೆ ಮಾರಾಟ, ಮೆಮೊರ್‍ಯಾಂಡಮ್ ಆಫ್ ಅಂಡರ್‌ಸ್ಟ್ಯಾಂಡಿಂಗ್, ಎಕ್ಸ್‌ಚೇಂಜ್, ಮಾರ್ಟ್‌ಗೇಜ್, ಪ್ಲೆಡ್ಜ್, ಚಾರ್ಜ್, ಗಿಫ್ಟ್, ಟ್ರಸ್ಟ್, ಇನ್ಹೆರಿಟನ್ಸ್, ಸಕ್ಸೆಶನ್, ಪೊಸೆಶನ್, ಲೀಸ್, ಟೆನೆನ್ಸಿ, ಮೈಂಟೇನನ್ಸ್ ಈಸ್‌ಮೆಂಟ್, ಲೈಸನ್ಸ್, ಬಿಕ್ವೆಥ್, ಷೇರ್, ಅಸೈನ್‌ಮೆಂಟ್, ಲೀನ್, ಅಟ್ಯಾಚ್‌ಮೆಂಟ್, ಡೆವಲಪ್‌ಮೆಂಟ್ ರೈಟ್ಸ್, ರೈಟ್ ಆಫ್ ವೇ, ಲಿಸ್ಪೆಂಡೆಂಟ್ಸ್, ರಿಸರ್ವೇಶನ್, ಅಗ್ರೀಮೆಂಟ್, ಎಫ್‌ಎಸ್‌ಐ ಕನ್ಸೂಮ್ಷನ್ ರೂಪದ ಯಾವುದೇ ಅಕ್ಷೇಪಣೆಗಳಿದ್ದಲ್ಲಿ ಅಥವಾ ಯಾವುದೇ ಹೊಣೆಗಾರಿಕೆ ಅಥವಾ ಬದ್ಧತೆ ಅಥವಾ ಇನ್ನಾವುದೇ ಅಥವಾ ಯಾವುದೇ ಸ್ವರೂಪದ ಡಿಮಾಂಡ್ ಹೊಂದಿದ್ದಲ್ಲಿ, ಅಂತಹವರು ಸದರಿ ಪ್ರಕಟಣೆಯ ಪ್ರಕಟಗೊಂಡ ದಿನಾಂಕದಿಂದ 21 ದಿನಗಳ (ಇಪ್ಪತ್ತೊಂದು) ಅವಧಿಯೊಳಗೆ, ಈ ಕೆಳಗೆ ಸಹಿ ಹಾಕಿರುವವರ ವಿಳಾಸಕ್ಕೆ ತಮ್ಮ ವಿಷಯಗಳನ್ನು ಲಿಖಿತವಾಗಿ, ಪೂರಕ ದಾಖಲಾತಿಗಳ ಸಮೇತ ಸಲ್ಲಿಸಬೇಕೆಂದು ಕೋರಲಾಗಿದೆ, ಇಲ್ಲವಾದಲ್ಲಿ, ನಿಗದಿತ ಅವಧಿಯ ನಂತರ ಎದುರಾಗುವ ಯಾವುದೇ ವ್ಯಕ್ತಿಯ ಅಥವಾ ವ್ಯಕ್ತಿಗಳ ಕ್ಲೇಮ್ ಅಥವಾ ಕ್ಲೇಮ್‌ಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಅಂತಹವುಗಳನ್ನು ಕೈಬಿಡಲಾಗುತ್ತದೆ ಮತ್ತು/ಅಥವಾ ನಿರ್ಲಕ್ಷಿಸಲಾಗುತ್ತದೆ.

ಷೆಡ್ಯೂಲ್ ಸ್ವತ್ತು

ಐಟಂ ನಂ. 1 : ಬಾನಂದೂರ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ ವಿಳಾಸದ ಸರ್ವೆ ನಂಬರ್‌ಗಳಲ್ಲಿ ಸ್ಥಿತಗೊಂಡಿರುವ ಕೃಷಿ ಭೂ ಭಾಗಗಳ ವಿಸ್ತೀರ್ಣ ಮತ್ತು ಚಕ್ಕುಬಂದಿ ವಿವರ ಕೆಳಗಿನಂತಿರುತ್ತದೆ.

ಕ್ರ. ಸಂ.	ಸರ್ವೆ	ವಿಸ್ತೀರ್ಣ ಎಕರೆ	ವಿಸ್ತೀರ್ಣ ಗುಂಟೆ	ಚಕ್ಕುಬಂದಿ		ಮಾಲಿಕರು
1	29/2	02	04	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ರಸ್ತೆ ಸರ್ವೆ ನಂ. 31 ರಲ್ಲಿನ ಜಮೀನು ಸರ್ಕಾರಿ ಟ್ಯಾಂಕ್ ಸರ್ವೆ ನಂ. 69/8, 69/10, 69/14 ಮತ್ತು 68/3 ಗಳಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ

ಐಟಂ ನಂ. 2 : ಹೆಗ್ಗಡಗೆರೆ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ ವಿಳಾಸದ ಸರ್ವೆ ನಂಬರ್‌ಗಳಲ್ಲಿ ಸ್ಥಿತಗೊಂಡಿರುವ ಕೃಷಿ ಭೂ ಭಾಗಗಳ ವಿಸ್ತೀರ್ಣ ಮತ್ತು ಚಕ್ಕುಬಂದಿ ವಿವರ ಕೆಳಗಿನಂತಿರುತ್ತದೆ.

ಕ್ರ. ಸಂ.	ಸರ್ವೆ ನಂಬರ್	ವಿಸ್ತೀರ್ಣ ಎಕರೆ	ವಿಸ್ತೀರ್ಣ ಗುಂಟೆ	ಚಕ್ಕುಬಂದಿ		ಮಾಲಿಕರು
1	67/8	00	09.12	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 68/3 ರಲ್ಲಿನ ಜಮೀನು ಸರ್ವೆ ನಂ. 66/1 ರಲ್ಲಿನ ಜಮೀನು ಸರ್ವೆ ನಂ. 67/1 ರಲ್ಲಿನ ಜಮೀ ಸರ್ವೆ ನಂ. 67/9 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
2	67/9	00	09.12	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 68/3 ರಲ್ಲಿನ ಜಮೀನು ಸರ್ವೆ ನಂ. 66/1 ರಲ್ಲಿನ ಜಮೀನು ಸರ್ವೆ ನಂ. 67/8 ರಲ್ಲಿನ ಜಮೀನು ಸರ್ವೆ ನಂ. 67/10 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
3	67/10	00	09.12	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 68/8 ರಲ್ಲಿನ ಜಮೀನು ಸರ್ವೆ ನಂ. 66/1 ರಲ್ಲಿನ ಜಮೀನು ಸರ್ವೆ ನಂ. 67/9 ರಲ್ಲಿನ ಜಮೀನು ಸರ್ವೆ ನಂ. 67/11 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
4	67/11	00	09.12	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 68/8 ಮತ್ತು 68/2 ಗಳಲ್ಲಿನ ಜಮೀನು ಸರ್ವೆ ನಂ. 66/1 ರಲ್ಲಿನ ಜಮೀನು ಸರ್ವೆ ನಂ. 67/10 ರಲ್ಲಿನ ಜಮೀನು ಸರ್ವೆ ನಂ. 67/12 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
5	67/12	00	09.12	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 68/2 ರಲ್ಲಿನ ಜಮೀನು ಸರ್ವೆ ನಂ. 66/1 ರಲ್ಲಿನ ಜಮೀನು ಸರ್ವೆ ನಂ. 67/11 ರಲ್ಲಿನ ಜಮೀನು ಸರ್ವೆ ನಂ. 67/13 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
6	67/13	00	09.08	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 68/2 ಮತ್ತು 68/7 ಗಳಲ್ಲಿನ ಜಮೀನು ಸರ್ವೆ ನಂ. 66/1 ರಲ್ಲಿನ ಜಮೀನು ಸರ್ವೆ ನಂ. 67/12 ರಲ್ಲಿನ ಜಮೀನು ಸರ್ವೆ ನಂ. 67/14 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
7	67/14	00	04.12	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 68/7 ರಲ್ಲಿನ ಜಮೀನು ಸರ್ವೆ ನಂ. 66/1 ರಲ್ಲಿನ ಜಮೀನು ಸರ್ವೆ ನಂ. 67/13 ರಲ್ಲಿನ ಜಮೀನು ಸರ್ವೆ ನಂ. 67/15 ರಲ್ಲಿನ ಜಮೀನು	ಶ್ರೀ. ಬಿ.ಸಿ. ನಂಜುಂಡಪ್ಪ ಮತ್ತು ಇತರರ ಪರವಾಗಿ ಜಿಪಿಎದಾರರಾದ ಮೆ. ಮ್ಯಾಕ್ಸ್ ಕಾನ್‌ಕಾರ್ಡ್ ಡೆವಲಪರ್ಸ್
8	67/15	00	31.04	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 68/6 ಮತ್ತು 68/7 ಗಳಲ್ಲಿನ ಜಮೀನು ಸರ್ವೆ ನಂ. 66/1 ರಲ್ಲಿನ ಜಮೀನು ಸರ್ವೆ ನಂ. 67/14 ರಲ್ಲಿನ ಜಮೀನು ಸರ್ವೆ ನಂ. 67/4 ರಲ್ಲಿನ ಜಮೀನು	ಶ್ರೀಮತಿ. ಪಾರ್ವತಮ್ಮ ಮತ್ತು ಇತರರ ಪರವಾಗಿ ಜಿಪಿಎದಾರರಾದ ಮೆ. ಮ್ಯಾಕ್ಸ್ ಕಾನ್‌ಕಾರ್ಡ್ ಡೆವಲಪರ್ಸ್
9	95/1	01	23	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/3, 69/4 ಮತ್ತು 69/2 ಗಳಲ್ಲಿನ ಜಮೀನು ಸರ್ವೆ ನಂ. 96 ರಲ್ಲಿನ ಜಮೀನು ಸರ್ವೆ ನಂ. 69/1 ರಲ್ಲಿನ ಜಮೀನು ರಸ್ತೆ ಮತ್ತು ಸರ್ವೆ ನಂ. 95 ರಲ್ಲಿನ ಉಳಿಕೆ ಭಾಗ	ಶ್ರೀ. ಚಲುವೇಗೌಡರ ಪರವಾಗಿ ಜಿಪಿಎದಾರರಾದ ಶ್ರೀ. ವೆಂಕಟೇಶ. ಸಿ
10	68/1	00	03	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 95/1 ರಲ್ಲಿನ ಜಮೀನು ಸರ್ವೆ ನಂ. 67/4 ರಲ್ಲಿನ ಜಮೀನು ಸರ್ವೆ ನಂ. 68/4 ಮತ್ತು 69/1 ಗಳಲ್ಲಿನ ಜಮೀನು ಸರ್ವೆ ನಂ. 68/9 ರಲ್ಲಿನ ಜಮೀನು	ಶ್ರೀ. ಬಿ.ಸಿ. ನಂಜುಂಡಪ್ಪ ಮತ್ತು ಇತರರ ಪರವಾಗಿ ಜಿಪಿಎದಾರರಾದ ಮೆ. ಮ್ಯಾಕ್ಸ್ ಕಾನ್‌ಕಾರ್ಡ್ ಡೆವಲಪರ್ಸ್
11	68/2	00	04	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/17 ಮತ್ತು 69/18 ಗಳಲ್ಲಿನ ಜಮೀನು ಸರ್ವೆ ನಂ. 67/11, 67/12 ಮತ್ತು 67/13 ಗಳಲ್ಲಿನ ಜಮೀನು ಸರ್ವೆ ನಂ. 68/8 ರಲ್ಲಿನ ಜಮೀನು ಸರ್ವೆ ನಂ. 68/7 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
12	68/4	00	04	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/1 ರಲ್ಲಿನ ಜಮೀನು ಸರ್ವೆ ನಂ. 67/4 ರಲ್ಲಿನ ಜಮೀನು ಸರ್ವೆ ನಂ. 68/5 ರಲ್ಲಿನ ಜಮೀನು ಸರ್ವೆ ನಂ. 68/1 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
13	68/5	00	04	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/1 ಮತ್ತು 69/15 ಗಳಲ್ಲಿನ ಜಮೀನು ಸರ್ವೆ ನಂ. 67/4 ಮತ್ತು 67/75 ಗಳಲ್ಲಿನ ಜಮೀನು ಸರ್ವೆ ನಂ. 68/6 ರಲ್ಲಿನ ಜಮೀನು ಸರ್ವೆ ನಂ. 68/4 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
14	68/6	00	04	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/15 ಮತ್ತು 69/16 ಗಳಲ್ಲಿನ ಜಮೀನು ಸರ್ವೆ ನಂ. 67/15 ರಲ್ಲಿನ ಜಮೀನು ಸರ್ವೆ ನಂ. 68/7 ರಲ್ಲಿನ ಜಮೀನು ಸರ್ವೆ ನಂ. 68/5 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
15	68/7	00	04	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/16 ಮತ್ತು 69/17 ಗಳಲ್ಲಿನ ಜಮೀನು ಸರ್ವೆ ನಂ. 67/13 ಮತ್ತು 67/5 ಗಳಲ್ಲಿನ ಜಮೀನು ಸರ್ವೆ ನಂ. 68/2 ರಲ್ಲಿನ ಜಮೀನು ಸರ್ವೆ ನಂ. 68/6 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
16	68/7	00	04	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/18 ರಲ್ಲಿನ ಜಮೀನು ಸರ್ವೆ ನಂ. 67/10 ಮತ್ತು 67/11 ಗಳಲ್ಲಿನ ಜಮೀನು ಸರ್ವೆ ನಂ. 68/3 ರಲ್ಲಿನ ಜಮೀನು ಸರ್ವೆ ನಂ. 68/2 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
17	68/9	00	13	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 95/1 ರಲ್ಲಿನ ಜಮೀನು ಸರ್ವೆ ನಂ. 67/2 ಮತ್ತು 67/4 ಗಳಲ್ಲಿನ ಜಮೀನು ಸರ್ವೆ ನಂ. 68/1 ರಲ್ಲಿನ ಜಮೀನು ಸರ್ವೆ ನಂ. 96 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
18	69/1	00	07	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/2, 69/19 ಮತ್ತು 69/20 ಗಳಲ್ಲಿನ ಜಮೀನು ಸರ್ವೆ ನಂ. 68/4 ಮತ್ತು 68/5 ಗಳಲ್ಲಿನ ಜಮೀನು ಸರ್ವೆ ನಂ. 69/15 ರಲ್ಲಿನ ಜಮೀನು ಸರ್ವೆ ನಂ. 95/1 ಮತ್ತು 68/1 ಗಳಲ್ಲಿನ ಜಮೀನು	ಶ್ರೀ. ಬಿ.ಸಿ. ನಂಜುಂಡಪ್ಪ ಮತ್ತು ಇತರರ ಪರವಾಗಿ ಜಿಪಿಎದಾರರಾದ ಮೆ. ಮ್ಯಾಕ್ಸ್ ಕಾನ್‌ಕಾರ್ಡ್ ಡೆವಲಪರ್ಸ್
19	69/2	00	04	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/3 ಮತ್ತು 69/23 ಗಳಲ್ಲಿನ ಜಮೀನು ಸರ್ವೆ ನಂ. 95/1 ಮತ್ತು 69/1 ಗಳಲ್ಲಿನ ಜಮೀನು ಸರ್ವೆ ನಂ. 69/19 ರಲ್ಲಿನ ಜಮೀನು ಸರ್ವೆ ನಂ. 69/3 ಮತ್ತು 69/23 ಗಳಲ್ಲಿನ ಜಮೀನು	ಶ್ರೀ. ಬಿ.ಸಿ. ನಂಜುಂಡಪ್ಪ ಮತ್ತು ಇತರರ ಪರವಾಗಿ ಜಿಪಿಎದಾರರಾದ ಮೆ. ಮ್ಯಾಕ್ಸ್ ಕಾನ್‌ಕಾರ್ಡ್ ಡೆವಲಪರ್ಸ್
20	69/7	00	06	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/9 ಮತ್ತು 69/10 ಗಳಲ್ಲಿನ ಜಮೀನು ಸರ್ವೆ ನಂ. 68/3 ರಲ್ಲಿನ ಜಮೀನು ಸರ್ವೆ ನಂ. 69/8 ರಲ್ಲಿನ ಜಮೀನು ಸರ್ವೆ ನಂ. 69/18 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
21	69/8	00	06	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/10 ರಲ್ಲಿನ ಜಮೀನು ಸರ್ವೆ ನಂ. 68/3 ರಲ್ಲಿನ ಜಮೀನು ಬಾನಂದೂರ ಗ್ರಾಮದ ಸರ್ವೆ ನಂ. 29/1 ರಲ್ಲಿನ ಜಮೀನು ಸರ್ವೆ ನಂ. 69/7 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
22	69/9	00	04	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/13 ರಲ್ಲಿನ ಜಮೀನು ಸರ್ವೆ ನಂ. 69/7 ಮತ್ತು 69/18 ಗಳಲ್ಲಿನ ಜಮೀನು ಸರ್ವೆ ನಂ. 69/10 ರಲ್ಲಿನ ಜಮೀನು ಸರ್ವೆ ನಂ. 69/22 ಮತ್ತು 69/18 ಗಳಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
23	69/10	00	04	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/14 ರಲ್ಲಿನ ಜಮೀನು ಸರ್ವೆ ನಂ. 69/7 ಮತ್ತು 68/8 ಗಳಲ್ಲಿನ ಜಮೀನು ಬಾನಂದೂರ ಗ್ರಾಮದ ಸರ್ವೆ ನಂ. 29/1 ರಲ್ಲಿನ ಜಮೀನು ಸರ್ವೆ ನಂ. 69/9 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
24	69/11	00	05	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ರಸ್ತೆ ಮತ್ತು ಸರ್ವೆ ನಂ. 70 ರಲ್ಲಿನ ಜಮೀನು ಸರ್ವೆ ನಂ. 69/20 ಮತ್ತು 69/21 ಗಳಲ್ಲಿನ ಜಮೀನು ಸರ್ವೆ ನಂ. 69/12 ರಲ್ಲಿನ ಜಮೀನು ಸರ್ವೆ ನಂ. 69/24 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
25	69/12	00	05	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ರಸ್ತೆ ಮತ್ತು ಸರ್ವೆ ನಂ. 70 ರಲ್ಲಿನ ಜಮೀನು ಸರ್ವೆ ನಂ. 69/21 ಮತ್ತು 69/22 ಗಳಲ್ಲಿನ ಜಮೀನು ಸರ್ವೆ ನಂ. 69/13 ರಲ್ಲಿನ ಜಮೀನು ಸರ್ವೆ ನಂ. 69/11 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
26	69/13	00	05	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ರಸ್ತೆ ಮತ್ತು ಸರ್ವೆ ನಂ. 70 ರಲ್ಲಿನ ಜಮೀನು ಸರ್ವೆ ನಂ. 69/9 ಮತ್ತು 69/22 ಗಳಲ್ಲಿನ ಜಮೀನು ಸರ್ವೆ ನಂ. 69/14 ರಲ್ಲಿನ ಜಮೀನು ಸರ್ವೆ ನಂ. 69/12 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
27	69/14	00	05	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ರಸ್ತೆ ಮತ್ತು ಸರ್ವೆ ನಂ. 70 ರಲ್ಲಿನ ಜಮೀನು ಸರ್ವೆ ನಂ. 69/10 ರಲ್ಲಿನ ಜಮೀನು ಬಾನಂದೂರ ಗ್ರಾಮದ ಸರ್ವೆ ನಂ. 29/1 ರಲ್ಲಿನ ಜಮೀನು ಸರ್ವೆ ನಂ. 69/13 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
28	69/15	00	06	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/19, 69/20 ಮತ್ತು 69/21 ಗಳಲ್ಲಿನ ಜಮೀನು ಸರ್ವೆ ನಂ. 68/5 ಮತ್ತು 68/6 ಗಳಲ್ಲಿನ ಜಮೀನು ಸರ್ವೆ ನಂ. 69/16 ರಲ್ಲಿನ ಜಮೀನು ಸರ್ವೆ ನಂ. 69/1 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
29	69/16	00	06	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/19 ಮತ್ತು 69/20 ಗಳಲ್ಲಿನ ಜಮೀನು ಸರ್ವೆ ನಂ. 68/6, 68/7 ಮತ್ತು 69/21 ಗಳಲ್ಲಿನ ಜಮೀನು ಸರ್ವೆ ನಂ. 69/17 ರಲ್ಲಿನ ಜಮೀನು ಸರ್ವೆ ನಂ. 69/15 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
30	69/17	00	06	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/22 ರಲ್ಲಿನ ಜಮೀನು ಸರ್ವೆ ನಂ. 68/2 ಮತ್ತು 68/7 ಗಳಲ್ಲಿನ ಜಮೀನು ಸರ್ವೆ ನಂ. 69/18 ರಲ್ಲಿನ ಜಮೀನು ಸರ್ವೆ ನಂ. 69/16 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
31	69/18	00	06	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/9 ಮತ್ತು 69/22 ಗಳಲ್ಲಿನ ಜಮೀನು ಸರ್ವೆ ನಂ. 68/2, 68/3 ಮತ್ತು 68/8 ಗಳಲ್ಲಿನ ಜಮೀನು ಸರ್ವೆ ನಂ. 69/7 ರಲ್ಲಿನ ಜಮೀನು ಸರ್ವೆ ನಂ. 69/17 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
32	69/19	00	04	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/23 ಮತ್ತು 69/24 ಗಳಲ್ಲಿನ ಜಮೀನು ಸರ್ವೆ ನಂ. 69/1 ರಲ್ಲಿನ ಜಮೀನು ಸರ್ವೆ ನಂ. 69/20 ರಲ್ಲಿನ ಜಮೀನು ಸರ್ವೆ ನಂ. 69/2 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
33	69/20	00	04	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/11 ಮತ್ತು 69/24 ಗಳಲ್ಲಿನ ಜಮೀನು ಸರ್ವೆ ನಂ. 69/15 ಮತ್ತು 69/1 ಗಳಲ್ಲಿನ ಜಮೀನು ಸರ್ವೆ ನಂ. 69/21 ರಲ್ಲಿನ ಜಮೀನು ಸರ್ವೆ ನಂ. 69/19 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
34	69/21	00	04	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/11 ಮತ್ತು 69/12 ಗಳಲ್ಲಿನ ಜಮೀನು ಸರ್ವೆ ನಂ. 69/16 ಮತ್ತು 69/15 ಗಳಲ್ಲಿನ ಜಮೀನು ಸರ್ವೆ ನಂ. 69/22 ರಲ್ಲಿನ ಜಮೀನು ಸರ್ವೆ ನಂ. 69/20 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
35	69/22	00	04	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ಸರ್ವೆ ನಂ. 69/12 ಮತ್ತು 69/13 ಗಳಲ್ಲಿನ ಜಮೀನು ಸರ್ವೆ ನಂ. 67/17 ಮತ್ತು 69/18 ಗಳಲ್ಲಿನ ಜಮೀನು ಸರ್ವೆ ನಂ. 69/9 ರಲ್ಲಿನ ಜಮೀನು ಸರ್ವೆ ನಂ. 69/21 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
36	69/23	00	05	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ರಸ್ತೆ ಮತ್ತು ಸರ್ವೆ ನಂ. 70 ರಲ್ಲಿನ ಜಮೀನು ಸರ್ವೆ ನಂ. 69/2, 69/19 ಮತ್ತು 69/13 ಗಳಲ್ಲಿನ ಜಮೀನು ಸರ್ವೆ ನಂ. 69/24 ರಲ್ಲಿನ ಜಮೀನು ಸರ್ವೆ ನಂ. 69/6 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ
37	69/24	00	05	ಪೂರ್ವ ಪಶ್ಚಿಮ ಉತ್ತರ ದಕ್ಷಿಣ	ರಸ್ತೆ ಮತ್ತು ಸರ್ವೆ ನಂ. 70 ರಲ್ಲಿನ ಜಮೀನು ಸರ್ವೆ ನಂ. 69/19 ಮತ್ತು 69/20 ಗಳಲ್ಲಿನ ಜಮೀನು ಸರ್ವೆ ನಂ. 69/11 ರಲ್ಲಿನ ಜಮೀನು ಸರ್ವೆ ನಂ. 69/23 ರಲ್ಲಿನ ಜಮೀನು	ಶ್ರೀಮತಿ. ಪಿ ಭಾಗ್ಯಲಕ್ಷ್ಮೀ

ಮಂಜುನಾಥ ರೆಡ್ಡಿ. ಆರ್ – ವನ್ಯ & ಅಸೋಸಿಯೇಟ್ಸ್ ಅಡ್ವೊಕೇಟ್ಸ್ ಮತ್ತು ಕನ್ಸಲ್ಟಂಟ್ಸ್
ನಂ.1932, 15ನೇ ಎ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಜುಡಿಷಿಯಲ್ ಬಡಾವಣೆ, ಜಿಕೆವಿಕೆ ಅಂಚೆ, ಬೆಂಗಳೂರು–65
ದಿನಾಂಕ: 08ನೇ ಏಪ್ರಿಲ್, 2022
ಇಮೇಲ್: vanyaassociates@gmail.com

ಕನ್ನಡ ಕಡ್ಡಾಯ ಚರ್ಚೆಗೆ ತುರ್ತು ಅಧಿವೇಶನ: ವಾಟಾಳ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪದವಿ ಹಂತದಲ್ಲಿ ಕನ್ನಡ ಕಡ್ಡಾಯಗೊಳಿಸುವ ರಾಜ್ಯ ಸರ್ಕಾರದ ಆದೇಶಕ್ಕೆ ಹೈಕೋರ್ಟ್ ನೀಡಿದ ತಡೆಯಾಜ್ಞೆಯಿಂದ ಕನ್ನಡಿಗರಿಗೆ ಬರಸಿಡಿಲು ಬಡಿದಂತಾಗಿದೆ. ಈ ಕುರಿತು ಚರ್ಚಿಸಲು ತುರ್ತು ಅಧಿವೇಶನ ಕರೆಯಬೇಕು' ಎಂದು 'ಕನ್ನಡ ವಾಟಾಳ್' ಪಕ್ಷದ ವಾಟಾಳ್ ನಾಗರಾಜ್ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ನ್ಯಾಯಾಲಯದ ಮೇಲೆ ನಮಗೆ ಗೌರವ ಇದೆ. ಪದವಿಯಲ್ಲಿ ಕನ್ನಡ ಕಲಿಯಬಾರದು ಎನ್ನುವುದಾದರೆ ಮುಂದೆ ರಾಜ್ಯದ ಕನ್ನಡಿಗರ ಸ್ಥಿತಿ ಏನು. ಕನ್ನಡಿಗರ ಉದ್ಯೋಗ ಪರಿಸ್ಥಿತಿ ಏನು' ಎಂದು ಅವರು ಪ್ರಶ್ನಿಸಿದರು.

'ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆ. ಕನ್ನಡಕ್ಕೆ ಮಾನ್ಯತೆ, ಗೌರವ ಸಿಗಬೇಕು. ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸುತ್ತೇನೆ. ಈ ವಿಚಾರಕ್ಕೆ ವಿಶೇಷ ಅಧಿವೇಶನ ನಡೆದರೆ, ಅಲ್ಲಿ ಕನ್ನಡಕ್ಕೆ ಎಷ್ಟು ಶಕ್ತಿ ತುಂಬಬಹುದು, ಯಾವ ರೀತಿ ಕಾನೂನು ಮಾಡಬಹುದು ಎಂಬ ಕುರಿತು ಚರ್ಚಿಸಬಹುದು' ಎಂದರು.

'ಕನ್ನಡ ಕಡ್ಡಾಯಗೊಳಿಸುವ ವಿಚಾರದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸಾಹಿತ್ಯ ಪರಿಷತ್ತು, ಗಡಿ ಅಭಿವೃದ್ಧಿ ಪ್ರಾಧಿಕಾರ ಗಂಭೀರ ಚಿಂತನೆ ನಡೆಸಬೇಕು. ರಾಷ್ಟ್ರೀಯ ಶಿಕ್ಷಣ ನೀತಿಯಿಂದ (ಎನ್‌ಇಪಿ) ಪ್ರಾದೇಶಿಕ ಭಾಷೆಗಳಿಗೆ ಸವಾಲು ಎದುರಾಗಲಿದೆ. ಭಾಷಾವಾರು ಪ್ರಾಂತ್ಯಗಳು ಈ ಬಗ್ಗೆ ಸಮಗ್ರ ಚರ್ಚೆ ಮಾಡಬೇಕು. ಎನ್‌ಇಪಿಯಲ್ಲಿ ಬದಲಾವಣೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಬೇಕು' ಎಂದು ಆಗ್ರಹಿಸಿದರು.

ತಂಬಾಕು ಉತ್ಪನ್ನ: ಪರವಾನಗಿ ಜಾರಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಂಬಾಕು ಉತ್ಪನ್ನಗಳ ಸೇವನೆ ವ್ಯಸನದಿಂದ ಮಕ್ಕಳನ್ನು ರಕ್ಷಿಸಲು 'ಮಾರಾಟಗಾರರ ಪರವಾನಗಿ' ಜಾರಿಗೆ ತರಬೇಕು ಎಂದು ಸಾರ್ವಜನಿಕ ಆರೋಗ್ಯ ಮತ್ತು ಮಕ್ಕಳ ಹಕ್ಕುಗಳ ಪ್ರತಿಪಾದಕರು ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಇಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ತಂಬಾಕುಮುಕ್ತ ಕರ್ನಾಟಕ ವೇದಿಕೆ ಅಧ್ಯಕ್ಷ ಡಾ. ರಮೇಶ್ ಬಿಳಿಮಗ್ಗ, 'ತಂಬಾಕು ಉತ್ಪನ್ನಗಳ ಮಾರಾಟಕ್ಕಾಗಿ 2013ರಲ್ಲಿ ಮಾರಾಟಗಾರರ ಪರವಾನಗಿ ಪರಿಚಯಿಸಲಾಗಿತ್ತು. ಇದನ್ನು ಅನುಷ್ಠಾನಗೊಳಿಸಲು ಮುಂದಾಗಿದ್ದ ರಾಜ್ಯ ಸರ್ಕಾರ, ನಂತರದ ದಿನಗಳಲ್ಲಿ ನಿರಾಸಕ್ತಿ ತಾಳಿತು. ಮಾರಾಟಗಾರರ ಪರವಾನಗಿ ಇಲ್ಲದಿರುವುದರಿಂದ ತಂಬಾಕು ಕಂಪನಿಗಳ ಅಗ್ಗದ ಮಾರುಕಟ್ಟೆ ತಂತ್ರಕ್ಕೆ ಮಕ್ಕಳು ಬಲಿಯಾಗುತ್ತಿದ್ದಾರೆ. ರಾಜ್ಯ ಸರ್ಕಾರವು ತಕ್ಷಣವೇ ಮಾರಾಟಗಾರರ ಪರವಾನಗಿಯನ್ನು ಜಾರಿಗೊಳಿಸಿ, 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ತಂಬಾಕು ಲಭ್ಯವಾಗದಂತೆ ಮಾಡಬೇಕು' ಎಂದರು.

ಐಎಂಎ ಕರ್ನಾಟಕ ಶಾಖೆ ಪ್ರಧಾನ ಕಾರ್ಯದರ್ಶಿ ಡಾ. ಪ್ರಸಾದ್ ಎಸ್.ಎಂ., 'ತಂಬಾಕು ಉತ್ಪನ್ನಗಳ ಸೇವನೆಯಿಂದ ಉಸಿರಾಟದ ತೊಂದರೆ ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆಗಳೂ ಕಾಣಿಸಿಕೊಳ್ಳಲಿವೆ. ಹೀಗಾಗಿ, ಸರ್ಕಾರವು ಆದಷ್ಟು ಬೇಗ ಮಾರಾಟಗಾರರ ಪರವಾನಗಿ ಜಾರಿಗೊಳಿಸಬೇಕು' ಎಂದು ಒತ್ತಾಯಿಸಿದರು.

ಕರ್ನಾಟಕ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್, 'ಬಿಡಿಯಾಗಿ ಸಿಗರೇಟ್ ಮತ್ತು ಬೀಡಿಗಳನ್ನು ಮಕ್ಕಳಿಗೆ ಮಾರಾಟ ಮಾಡುವ ಮಾರಾಟಗಾರರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ತಿಪ್ಪೆ ಸೇರಿದ್ದ ಬಂಗಾರದ ಕಣ್ಣು

ಮಧುಗಿರಿ: ಪಟ್ಟಣದ ರಾಘವೇಂದ್ರ ಸ್ವಾಮಿಯ 8 ಗ್ರಾಂ ತೂಕದ ಬಂಗಾರದ ಕಣ್ಣು ಹೂವಿನೊಂದಿಗೆ ತ್ಯಾಜ್ಯ ಘಟಕಕ್ಕೆ ಸೇರಿತ್ತು.

ಗುರುವಾರ ದೇವರ ವಿಗ್ರಹವನ್ನು ತೊಳೆಯುವಾಗ ಒಂದು ಕಣ್ಣು ಮಾತ್ರ ಕಾಣಿಸಿದೆ. ಕಸ ವಿಲೇವಾರಿ ಘಟಕಕ್ಕೆ ತೆರಳಿ ಹುಡುಕಿದಾಗ ಬಂಗಾರದ ಕಣ್ಣು ಪತ್ತೆಯಾಗಿದೆ. ಅದನ್ನು ಪುರಸಭೆ ಅಧಿಕಾರಿಗಳು ದೇವಾಲಯಕ್ಕೆ ತಲುಪಿಸಿದ್ದಾರೆ.

ನೈಋತ್ಯ ರೈಲ್ವೆ
Azadi Ka Amrit Mahotsav
ಇ–ಟೆಂಡರ್ ಪ್ರಕಟಣೆ ಸಂ.:
ಸಿಎಒ/ಸಿಎನ್/ಬಿಎನ್‌ಸಿ/16/2022 ದಿನಾಂಕ: 30.03.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳಗಿನ ಕಾಮಗಾರಿಗಾಗಿ ಇ–ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.

ಐಟಂ ವಿವರ	ಅಂದಾಜು ವೆಚ್ಚ
ನೈಋತ್ಯ ರೈಲ್ವೆ ಯೋಜನೆ ನಿರ್ಮಾಣ ಘಟಕ/ಬೆಂಗಳೂರು ಕಂಟೋನ್ಮೆಂಟ್‌ನ ವಿವಿಧ ಸ್ಥಳಗಳಲ್ಲಿ ಎನ್‌ಐ ಕೆಲಸಗಳಿಗೆ ವಿದ್ಯುತ್ ಸರಬರಾಜು ಮತ್ತು ಲೈಟಿಂಗ್ ವ್ಯವಸ್ಥೆಗಳನ್ನು ನೇಮಿಸಿಕೊಳ್ಳುವುದು ಮತ್ತು ಒದಗಿಸುವುದು.	Rs. 64,92,500/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 22.04.2022 ಸಮಯ: 11:00 ಗಂಟೆಯವರೆಗೆ.
ಹೆಚ್ಚಿನ ಮಾಹಿತಿಗಾಗಿ www.ireps.gov.in ಲಾಗ್‌ಆನ್ ಮಾಡಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್ (ನಿರ್ಮಾಣ)
ಪಿಯುಬಿ/13/ಎಎಎಲ್/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2022–23 ಬೆಂಗಳೂರು ಕಂಟೋನ್ಮೆಂಟ್
S.W.Railways SWRRLY SWRRLY

ನೈಋತ್ಯ ರೈಲ್ವೆ
Azadi Ka Amrit Mahotsav
ಇ–ಟೆಂಡರ್ ಪ್ರಕಟಣೆ ಸಂ.:
ಸಿಎಒ/ಸಿಎನ್/ಬಿಎನ್‌ಸಿ/17/2022 ದಿನಾಂಕ: 30.03.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳಗಿನ ಕಾಮಗಾರಿಗಾಗಿ ಇ–ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.

ಐಟಂ ವಿವರ	ಅಂದಾಜು ವೆಚ್ಚ
ಪೆನುಕೊಂಡ – ಧರ್ಮಾವರಂ ನಡುವಿನ ದ್ವಿಗುಣ ಕಾಮಗಾರಿಗೆ ಅನುಕೂಲ ಮಾಡಿಕೊಡಲು ಎಲ್‌ಸಿ ಗೇಟ್ ಸಂಖ್ಯೆ 83 ರ ಬದಲಾಗಿ ಪ್ರಸ್ತಾವಿತ ಆರ್‌ಒಬಿ ನಿರ್ಮಾಣಕ್ಕಾಗಿ ಸಿವಿಲ್ ಕೆಲಸಕ್ಕೆ ಅನುಕೂಲವಾಗುವಂತೆ ಅಸ್ತಿತ್ವದಲ್ಲಿರುವ ಹೆಚ್‌ಟಿ (33 ಕಿವ್ಯಾ. / 11 ಕಿವ್ಯಾ.) ಮತ್ತು ಎಲ್‌ಸಿ ಓವರ್‌ಹೆಡ್ ಪವರ್ ಲೈನ್ ಜೋಡಣೆಯನ್ನು ಮಾರ್ಪಡಿಸುವುದು / ಬದಲಾಯಿಸುವುದು ಮತ್ತು ಲೈಟಿಂಗ್ ವ್ಯವಸ್ಥೆಗಳನ್ನು ಒದಗಿಸುವುದು ಹಾಗೂ ಇತರ ವಿದ್ಯುತ್ ಉಲ್ಲಂಘನೆಗಳು / ಉಪಯುಕ್ತತೆಗಳನ್ನು ಬದಲಾಯಿಸುವುದು.	Rs. 1,08,15,488/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 22.04.2022 ಸಮಯ: 11:00 ಗಂಟೆಯವರೆಗೆ.
ಹೆಚ್ಚಿನ ಮಾಹಿತಿಗಾಗಿ www.ireps.gov.in ಲಾಗ್‌ಆನ್ ಮಾಡಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್ (ನಿರ್ಮಾಣ)
ಪಿಯುಬಿ/14/ಎಎಎಲ್/ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2022–23 ಬೆಂಗಳೂರು ಕಂಟೋನ್ಮೆಂಟ್
S.W.Railways SWRRLY SWRRLY

ನೈಋತ್ಯ ರೈಲ್ವೆ
Azadi Ka Amrit Mahotsav
ಟೆಂಡರ್ ಸೂಚನೆ ಸಂ. 10/MYS/2022
ದಿನಾಂಕ: 04.04.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	ಹಾಸನ–ಮಂಗಳೂರು ಜಂಕ್ಷನ್: ಕಬಕ ಪುತ್ತೂರು ಸ್ಟೇಷನ್ ಯಾರ್ಡ್‌ನಲ್ಲಿ ಕಿಮೀ139/100–200 ರಲ್ಲಿ ಮಾನವಸಹಿತ ಲೆವೆಲ್ ಕ್ರಾಸಿಂಗ್ ನಂ.105 ರ ಬದಲಾಗಿ 2x9.15 ಮೀ ಪಿಎಸ್‌ಸಿ ಸ್ಲ್ಯಾಬ್ ಇಂದ ಕೆಳ ಸೇತುವೆ ರಸ್ತೆಯ ಉದ್ದೇಶಿತ ನಿರ್ಮಾಣ.	ರೂ. 8,11,97,919/–
2	ಮೈಸೂರಿನಲ್ಲಿ ಪ್ರಸ್ತಾವನೆ ಸಲ್ಲಿಸಲಾದಂತೆ ಹಾವೇರಿಯಲ್ಲಿ ಆರ್‌ಪಿಎಫ್ ಸಿಬ್ಬಂದಿಗಾಗಿ ಆರ್‌ಪಿಎಫ್ ಬ್ಯಾರಕ್‌ನ ಉದ್ದೇಶಿತ ನಿರ್ಮಾಣ. ಮೈಸೂರಿನಲ್ಲಿ ಆರ್‌ಪಿಎಫ್ ಸಿಬ್ಬಂದಿಗಾಗಿ (ಮಹಿಳೆಯರಿಗಾಗಿ) ಆರ್‌ಪಿಎಫ್ ಬ್ಯಾರಕ್ ನಿರ್ಮಾಣ (ಸ್ಥಳ ಬದಲಾವಣೆಗಾಗಿ ಜಿಎಂ/ಎಸ್‌ಡಬ್ಲ್ಯೂಆರ್ / ಯುಬಿಎಲ್ ನಿಂದ ಅನುಮೋದಿಸಲಾಗಿದೆ).	ರೂ. 71,17,732/–
3	ಅರಸೀಕೆರೆ: ಎರಡು ವರ್ಷಗಳ ಅವಧಿಗೆ ಪಿ.ವೇ ಡಿಪೋದಲ್ಲಿ (ಎಸ್ ಎಸ್ ಇ /ಪಿ.ವೇ/ಡಿಪೊ/ಇಎಸ್ ಕೆ) ಪಿ.ವೇ ಸಾಮಗ್ರಿಗಳನ್ನು ಅನ್‌ಲೋಡ್, ಲೀಡಿಂಗ್ ಮತ್ತು ಸ್ಟಾಕಿಂಗ್ ಮಾಡುವುದು.	ರೂ. 13,45,030/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 26–04–2022, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಇಂಜಿನೀಯರ್/ಕೋ–ಆರ್ಡ್ ಮೈಸೂರು
PUB/17/AAV/PRB/SWR/2022-23
S.W.Railways SWRRLY SWRRLY

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಮೆ॥ ಭವಾನಿ ಎಂಟರ್ ಪ್ರೈಸಸ್, ಇದರ ಪಾಲುದಾರರಾದ ಶ್ರೀ ಪ್ರಸಾದ್ ಆರ್. ದೇಶಪಾಂಡೆ ಬಿನ್ ಶ್ರೀ ರಘುನಾಥ ವಿಶ್ವನಾಥ್ ದೇಶಪಾಂಡೆ, ವಾಸ ನಂ. 372, 'ನಿಲಯ', ಆರ್.ಟಿ. ನಗರ ಪೊಲೀಸ್ ಸ್ಟೇಷನ್ ಎದುರು, ಆರ್.ಟಿ. ನಗರ ಮುಖ್ಯರಸ್ತೆ, ಬೆಂಗಳೂರು–560032 ರವರಿಂದ ಶುದ್ಧ ಕ್ರಯಕ್ಕೆ ಖರೀದಿಸಲು ಇಚ್ಛೆಪಟ್ಟಿರುತಾರೆ. ಈ ಕೆಳಕಂಡ ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಹಕ್ಕು, ಬಾಧ್ಯತೆ, ಹಿತಾಸಕ್ತಿಗಳು, ಮೈನರ್ ಹಕ್ಕು, ಕೋರ್ಟ್ ಅಟಾಚ್‌ಮೆಂಟ್ ಇತ್ಯಾದಿ ಇದ್ದಲ್ಲಿ ಮತ್ತು ಈ ಕ್ರಯದ ಬಗ್ಗೆ ಯಾರಿಂದಲಾದರೂ ಯಾವುದಾದರೂ ತಂಟೆ ತಕರಾರು, ಆಕ್ಷೇಪಣೆಗಳು ಇದ್ದಲ್ಲಿ ಅಂತಹ ಆಕ್ಷೇಪಣೆಗಳನ್ನು ಈ ಪ್ರಕಟಣೆ ದಿನದಿಂದ **10 ದಿನಗಳ** ಒಳಗಾಗಿ ತಮ್ಮ ತಕರಾರು/ಆಕ್ಷೇಪಣೆಗಳನ್ನು ಸಂಬಂಧಪಟ್ಟ ದಸ್ತಾವೇಜುಗಳ ಆಧಾರ ಸಹಿತವಾಗಿ ಈ ಕೆಳಗೆ ಸಹಿ ಮಾಡಿರುವ ನನಗೆ ಸಲ್ಲಿಸಲು ಕೋರಿದೆ. ಒಂದು ವೇಳೆ ನಿಗಧಿತ ಅವಧಿಯಲ್ಲಿ ಯಾವುದೇ ತಕರಾರು ಅಥವಾ ಆಕ್ಷೇಪಣೆಗಳು ಬಾರದಿದ್ದಲ್ಲಿ ಸ್ವತ್ತು ನಿರುಪಾಧಿಕವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಕ್ರಯದ ಮುಂದಿನ ವ್ಯವಹಾರ ಮುಂದುವರಿಸಲ್ಲಿದ್ದಾರೆ ಮತ್ತು ನಿಗಧಿತ ಅವಧಿಯ ನಂತರ ಬರತಕ್ಕ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು

ಐಟಂ ನಂ. 1: ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಯಡೆಹಳ್ಳಿ ಗ್ರಾಮದ ಸರ್ವೆ ನಂ. 98 (ಈ ಹಿಂದೆ ಸರ್ವೆ ನಂ. 98/2 ರಲ್ಲಿ ವಿಸ್ತೀರ್ಣ 0–15 ಗುಂಟೆ ಮತ್ತು 1 ಎಕರೆ 25 ಗುಂಟೆ ಸರ್ವೆ ನಂ. 98/3) ವಿಸ್ತೀರ್ಣ 2–00 ಎಕರೆ ಕೈಗಾರಿಕಾ ಉದ್ದೇಶಕ್ಕಾಗಿ ಮಾನ್ಯ ಜಿಲ್ಲಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ ಭೂಪರಿವರ್ತನೆಯಾಗಿರುವ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ ಎಎಲ್‌ಎನ್(ಎನ್‌ಎಸ್) ಎಸ್.ಆರ್. 5/2016–17, ಮತ್ತು ಎಎಲ್‌ಎನ್(ಎನ್‌ಎಸ್) ಎಸ್.ಆರ್. 6/2016–17, ದಿನಾಂಕ: 29–06–2016ರ ಜಮೀನಿಗೆ ಚಕ್ಕುಬಂದಿ: **ಪೂರ್ವಕ್ಕೆ:** ಸ. ನಂ. 98/2ರ ಉಳಿಕೆ ಜಮೀನು, **ಪಶ್ಚಿಮಕ್ಕೆ:** ಸ.ನಂ. 99ರ ಜಮೀನು, **ಉತ್ತರಕ್ಕೆ:** ಸ.ನಂ. 97, **ದಕ್ಷಿಣಕ್ಕೆ:** ಸ.ನಂ. 100/2 ರ ಜಮೀನು (ಹೊಸ ಸ.ನಂ. 100/4).

ಐಟಂ ನಂ. 2: ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಯಡೆಹಳ್ಳಿ ಗ್ರಾಮದ ಸರ್ವೆ ನಂ. 100/3 (ಈ ಹಿಂದೆ ಸರ್ವೆ ನಂ. 100/2) ವಿಸ್ತೀರ್ಣ 1 ಎಕರೆ 21 ಗುಂಟೆ ಜಮೀನು ಕೈಗಾರಿಕಾ ಉದ್ದೇಶಕ್ಕಾಗಿ ಮಾನ್ಯ ಜಿಲ್ಲಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ ಭೂಪರಿವರ್ತನೆಯಾಗಿರುವ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ ಎಎಲ್‌ಎನ್(ಎನ್‌ಎಸ್) ಎಸ್.ಆರ್. 5/2016–17, ದಿನಾಂಕ: 29–06–2016 ರ ಜಮೀನಿಗೆ ಚಕ್ಕುಬಂದಿ: **ಪೂರ್ವಕ್ಕೆ:** ಸ.ನಂ. 100/2 (ಹೊಸ ಸ.ನಂ. 100/4) ರ ಉಳಿಕೆ ಜಮೀನು, **ಪಶ್ಚಿಮಕ್ಕೆ:** ಚಂದನಹೊಸಹಳ್ಳಿ ಗಡಿ ಮತ್ತು ಹೆಗ್ಗಡೆಯವರ ಜಮೀನು, **ಉತ್ತರಕ್ಕೆ:** ಸ.ನಂ. 98, **ದಕ್ಷಿಣಕ್ಕೆ:** ರಸ್ತೆ.

ಸಿ.ಆರ್. ಕೃಷ್ಣಪ್ಪ, ವಕೀಲರು
ನಂ. 313, 3ನೇ ಮಹಡಿ, ಕರ್ನಾಟಕ ಪ್ರದೇಶ ಕುರುಬರ ಸಂಘ ಬಿಲ್ಡಿಂಗ್, 2ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು–560009.
ಮೊಬೈಲ್ ನಂ. 9845577155

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಶ್ರೀ ಪ್ರಸಾದ್ ರಘುನಾಥ್ ದೇಶಪಾಂಡೆ ಬಿನ್ ಶ್ರೀ ರಘುನಾಥ ವಿಶ್ವನಾಥ್ ದೇಶಪಾಂಡೆ, ವಾಸ ನಂ. 372, 'ನಿಲಯ', ಆರ್.ಟಿ. ನಗರ ಪೊಲೀಸ್ ಸ್ಟೇಷನ್ ಎದುರು, ಆರ್.ಟಿ. ನಗರ ಮುಖ್ಯರಸ್ತೆ, ಬೆಂಗಳೂರು–560032ರವರಿಂದ ಶುದ್ಧ ಕ್ರಯಕ್ಕೆ ಖರೀದಿಸಲು ಇಚ್ಛೆಪಟ್ಟಿರುತ್ತಾರೆ. ಈ ಕೆಳಕಂಡ ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಹಕ್ಕು, ಬಾಧ್ಯತೆ, ಹಿತಾಸಕ್ತಿಗಳು, ಮೈನರ್ ಹಕ್ಕು, ಕೋರ್ಟ್ ಅಟಾಚ್‌ಮೆಂಟ್ ಇತ್ಯಾದಿ ಇದ್ದಲ್ಲಿ ಮತ್ತು ಈ ಕ್ರಯದ ಬಗ್ಗೆ ಯಾರಿಂದಲಾದರೂ ಯಾವುದಾದರೂ ತಂಟೆ ತಕರಾರು, ಆಕ್ಷೇಪಣೆಗಳು ಇದ್ದಲ್ಲಿ ಅಂತಹ ಆಕ್ಷೇಪಣೆಗಳನ್ನು ಈ ಪ್ರಕಟಣೆ ದಿನದಿಂದ 10 ದಿನಗಳ ಒಳಗಾಗಿ ತಮ್ಮ ತಕರಾರು/ಆಕ್ಷೇಪಣೆಗಳನ್ನು ಸಂಬಂಧಪಟ್ಟ ದಸ್ತಾವೇಜುಗಳ ಆಧಾರ ಸಹಿತವಾಗಿ ಈ ಕೆಳಗೆ ಸಹಿ ಮಾಡಿರುವ ನನಗೆ ಸಲ್ಲಿಸಲು ಕೋರಿದೆ. ಒಂದು ವೇಳೆ ನಿಗಧಿತ ಅವಧಿಯಲ್ಲಿ ಯಾವುದೇ ತಕರಾರು ಅಥವಾ ಆಕ್ಷೇಪಣೆಗಳು ಬಾರದಿದ್ದಲ್ಲಿ ಸ್ವತ್ತು ನಿರುಪಾಧಿಕವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಕ್ರಯದ ಮುಂದಿನ ವ್ಯವಹಾರ ಮುಂದುವರಿಸಲ್ಲಿದ್ದಾರೆ ಮತ್ತು ನಿಗಧಿತ ಅವಧಿಯ ನಂತರ ಬರತಕ್ಕ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು

ಐಟಂ ನಂ. 1: ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಯಡೆಹಳ್ಳಿ ಗ್ರಾಮದ ಸರ್ವೆ ನಂ. 100/4 (ಈ ಹಿಂದೆ ಸರ್ವೆ ನಂ. 100/2) ವಿಸ್ತೀರ್ಣ 2 ಎಕರೆ 3 ಗುಂಟೆ ಜಮೀನು ಕೈಗಾರಿಕಾ ಉದ್ದೇಶಕ್ಕಾಗಿ ಮಾನ್ಯ ಜಿಲ್ಲಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ ಭೂಪರಿವರ್ತನೆಯಾಗಿರುವ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ ಎಎಲ್‌ಎನ್(ಎನ್‌ಎಸ್) ಎಸ್.ಆರ್.5/2016–17, ದಿನಾಂಕ: 29–6–2016 ರ ಜಮೀನಿಗೆ ಚಕ್ಕುಬಂದಿ: **ಪೂರ್ವಕ್ಕೆ:** ಸಿದ್ದಪ್ಪನವರ ಜಮೀನು, **ಪಶ್ಚಿಮಕ್ಕೆ:** ಸ.ನಂ. 100/3ರ ಉಳಿಕೆ ಸ್ವತ್ತು, **ಉತ್ತರಕ್ಕೆ:** ಸ.ನಂ. 98, **ದಕ್ಷಿಣಕ್ಕೆ:** ರಸ್ತೆ.

ಐಟಂ ನಂ. 2: ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಯಡೆಹಳ್ಳಿ ಗ್ರಾಮದ ಸರ್ವೆ ನಂ. 98 (ಈ ಹಿಂದೆ ಸರ್ವೆ ನಂ. 98/2) ವಿಸ್ತೀರ್ಣ 1 ಎಕರೆ 15 ಗುಂಟೆ ಜಮೀನು ಕೈಗಾರಿಕಾ ಉದ್ದೇಶಕ್ಕಾಗಿ ಮಾನ್ಯ ಜಿಲ್ಲಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ ಭೂಪರಿವರ್ತನೆಯಾಗಿರುವ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ ಎಎಲ್‌ಎನ್(ಎನ್‌ಎಸ್) ಎಸ್.ಆರ್. 5/2016–17, ದಿನಾಂಕ: 29–06–2016 ರ ಜಮೀನಿಗೆ ಚಕ್ಕುಬಂದಿ: **ಪೂರ್ವಕ್ಕೆ:** ಸ. ನಂ. 101ರ ಸ್ವತ್ತು, **ಪಶ್ಚಿಮಕ್ಕೆ:** ಸ.ನಂ. 98ರ ಉಳಿಕೆ ಸ್ವತ್ತು, **ಉತ್ತರಕ್ಕೆ:** ಸ.ನಂ. 97, **ದಕ್ಷಿಣಕ್ಕೆ:** ಸ.ನಂ.100/4 & 100/3 (ಹಳೆ ಸ.ನಂ. 100/2).

ಸಿ.ಆರ್. ಕೃಷ್ಣಪ್ಪ, ವಕೀಲರು
ನಂ. 313, 3ನೇ ಮಹಡಿ, ಕರ್ನಾಟಕ ಪ್ರದೇಶ ಕುರುಬರ ಸಂಘ ಬಿಲ್ಡಿಂಗ್, 2ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು–560009.
ಮೊಬೈಲ್ ನಂ. 9845577155

ಕಡತ ವಿಲೇವಾರಿ ವೇಳೆ ವಿಳಂಬ ಆರೋಪ

ಎಲಿಷಾ ಅಮಾನತಿಗೆ ಎಸಿಎಸ್ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಡತ ವಿಲೇವಾರಿ ವೇಳೆ ವಿಳಂಬ ಧೋರಣೆ ಅನುಸರಿಸಿದ ಹಾಗೂ ಸರ್ಕಾರಿ ನೌಕರರ ತರವಲ್ಲದ ವರ್ತನೆ ತೋರಿದ ಆರೋಪ ಎದುರಿಸುತ್ತಿರುವ ನಗರಾಭಿವೃದ್ಧಿ ಇಲಾಖೆಯ ಉಪಕಾರ್ಯದರ್ಶಿ–3 ಎಲಿಷಾ ಆಂಡ್ರೂಸ್ ಅವರನ್ನು ಅಮಾನತು ಮಾಡುವಂತೆ ಶಿಫಾರಸು ಮಾಡಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

'ಕಡತಗಳನ್ನು ನಿಗದಿತ ಕಾಲಮಿತಿಯೊಳಗೆ ವಿಲೇವಾರಿ ಮಾಡುವಂತೆ ಸತತವಾಗಿ ನಿರ್ದೇಶನ ನೀಡಿದರೂ ಎಲಿಷಾ ಅವರು ನಿರ್ಲಕ್ಷಿಸಿದ್ದಾರೆ. 1966ರ ಕರ್ನಾಟಕ ನಾಗರಿಕ ಸೇವೆ (ನಡತೆ) ನಿಯಮ 3 (1) ಅನ್ನು ಉಲ್ಲಂಘಿಸುವ ಮೂಲಕ ಅವರು ಕರ್ತವ್ಯಲೋಪ ಎಸಗಿದ್ದಾರೆ. ಈ ಆರೋಪಗಳನ್ನು ಇದುವರೆಗೂ ಅವರು ಅಲ್ಲಗಳೆದಿಲ್ಲ. ಹಾಗಾಗಿ ಅವರ ಮೇಲೆ ತಕ್ಷಣದಿಂದಲೇ ಇಲಾಖಾ ವಿಚಾರಣೆ ಆರಂಭಿಸಬೇಕು. ಇಲಾಖಾ ವಿಚಾರಣೆಗೆ ಅವರು ಅಡ್ಡಿಪಡಿಸುವ ಮತ್ತು ಸಾಕ್ಷ್ಯದಾರರ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇರುವುದರಿಂದ ಅವರನ್ನು ತಕ್ಷಣದಿಂದ ಅಮಾನತುಗೊಳಿಸಬೇಕು' ಎಂದೂ ರಾಕೇಶ್ ಸಿಂಗ್ ಪತ್ರದಲ್ಲಿ ತಿಳಿಸಿದ್ದಾರೆ.

'ಎಂಜಿನಿಯರ್‌ಗಳ ಬಡ್ತಿಗೆ ₹ 4.5 ಕೋಟಿ ಲಂಚ; ಸಿ.ಎಂ.ಗೆ ದೂರು' ಎಂಬ ಶೀರ್ಷಿಕೆಯಲ್ಲಿ 'ಪ್ರಜಾವಾಣಿ'ಯ 2022ರ ಮಾರ್ಚ್ 30ರ ಸಂಚಿಕೆಯಲ್ಲಿ ಪ್ರಕಟವಾದ ವಿಶೇಷ ವರದಿಯನ್ನೂ ಪತ್ರದ ಜೊತೆ ರಾಕೇಶ್ ಸಿಂಗ್ ಲಗತ್ತಿಸಿದ್ದಾರೆ. 'ಬಿಬಿಎಂಪಿ ಎಂಜಿನಿಯರ್‌ಗಳ ಬಡ್ತಿಗೆ ಮುಖ್ಯಮಂತ್ರಿ ಹೆಸರಲ್ಲೇ ₹4.50 ಕೋಟಿ ಲಂಚ ಪಡೆಯಲಾಗಿದೆ. ಇದರಲ್ಲಿ ನಗರಾಭಿವೃದ್ಧಿ ಇಲಾಖೆಯ ಕೆಲವು ಅಧಿಕಾರಿಗಳು ಭಾಗಿಯಾಗಿದ್ದಾರೆ' ಎಂದು ಆರೋಪಿಸಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಇತ್ತೀಚೆಗೆ ದೂರು ನೀಡಿತ್ತು.

ಬಿಬಿಎಂಪಿಯ ವಿವಿಧ ವೃಂದಗಳ ಹುದ್ದೆಗಳಿಗೆ ವಿವಿಧ ಇಲಾಖೆಗಳ ಎರವಲು ಸೇವೆ ಮೇಲೆ ನಿಯೋಜನೆ ಮಾಡಲು 1976ರ ಕೆಎಂಸಿ ಕಾಯ್ದೆಯಡಿ ಹೊರಡಿಸಿದ ನಿಯೋಜನಾ ಮಾರ್ಗಸೂಚಿ ಬದಲು 2020ರ ಬಿಬಿಎಂಪಿ ಕಾಯ್ದೆಯಡಿ ರೂಪಿಸಲಾದ ಹೊಸ ನಿಯೋಜನೆ ನೀತಿ/ ಮಾರ್ಗಸೂಚಿ ಹೊರಡಿಸಲು ಎರಡು ತಿಂಗಳು ವಿಳಂಬ ಮಾಡಿರುವ ಆರೋಪ ಎಲಿಷಾ ಆಂಡ್ರೂಸ್ ಅವರ ಮೇಲಿದೆ. ಬಿಬಿಎಂಪಿಗೆ ಅಧಿಕಾರಿಗಳನ್ನು ನಿಯುಕ್ತಿಗೊಳಿಸಿ, ಅಧಿಕಾರಿಗಳನ್ನು ಬಿಬಿಎಂಪಿ ಸೇವೆಯಲ್ಲಿ ಮುಂದುವರಿಸುವ ಹಾಗೂ ಕಡ್ಡಾಯ ನಿರೀಕ್ಷಣಾ ಅವಧಿ ಮಂಜೂರು ಮಾಡುವ ಕುರಿತ 13 ಕಡತಗಳ ವಿಲೇವಾರಿಯಲ್ಲಿ ಅವರು ವಿಳಂಬ ಧೋರಣೆ ಅನುಸರಿಸಿದ್ದಾರೆ ಎಂಬ ಪಟ್ಟಿಯನ್ನೂ ಪತ್ರದ ಜೊತೆ ಎಸಿಎಸ್ ಅವರು ಲಗತ್ತಿಸಿದ್ದಾರೆ.

ವಾರ್ಷಿಕೋತ್ಸವ ಜ್ಯೋತಿ ನಿವಾಸ್ ಕಾಲೇಜು ನಗರದಲ್ಲಿ ಹಮ್ಮಿಕೊಂಡ ಕಾಲೇಜು ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಆಂತರಿಕಾ ಭದ್ರತಾ ವಿಭಾಗದ ಎಡಿಜಿಪಿ ಅರುಣ್ ಚಕ್ರವರ್ತಿ ಹಾಗೂ ಪ್ರಾಂಶುಪಾಲೆ ಡಾ. ಲಲಿತಾ ಥಾಮಸ್ ಅವರೊಂದಿಗೆ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಇದ್ದಾರೆ. –ಪ್ರಜಾವಾಣಿ ಚಿತ್ರ

ರಾಜಕಾಲುವೆ ಸಂರಕ್ಷಣೆ ಬಿಬಿಎಂಪಿ ಹೊಣೆ: ಎಸಿಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ನಗರದಲ್ಲಿ ಅಭಿವೃದ್ಧಿಪಡಿಸಿದ ಬಡಾವಣೆಗಳ ಕೆರೆ ಹಾಗೂ ರಾಜಕಾಲುವೆಗಳು ಬಿಬಿಎಂಪಿಗೆ ಅಧಿಕೃತವಾಗಿ ಹಸ್ತಾಂತರ ಆಗದಿದ್ದರೂ ಅವು ಪಾಲಿಕೆಯದೇ ಸ್ವತ್ತು. ತನ್ನ ವ್ಯಾಪ್ತಿಯ ಕೆರೆಗಳು ಹಾಗೂ ರಾಜಕಾಲುವೆಗಳು ಒತ್ತುವರಿಯಾಗದಂತೆ ಸಂರಕ್ಷಿಸಲು ಬಿಬಿಎಂಪಿ ಕಟಿಬದ್ಧವಾಗಿರಬೇಕು ಎಂದು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಸೂಚಿಸಿದ್ದಾರೆ.

ಕೆರೆ ಹಾಗೂ ರಾಜಕಾಲುವೆಗಳ ಸಂರಕ್ಷಣೆಯ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಬಿಡಿಎ ಹಾಗೂ ಬಿಬಿಎಂಪಿಯ ಕಾರ್ಯವ್ಯಾಪ್ತಿಗೆ ಸಂಬಂಧಿಸಿದ ಗೊಂದಲ ನಿವಾರಿಸುವ ಉದ್ದೇಶದಿಂದ ಅವರು ಪಾಲಿಕೆಯ ಮುಖ್ಯ ಆಯುಕ್ತರಿಗೆ ಹಾಗೂ ಬಿಡಿಎ ಆಯುಕ್ತರಿಗೆ ಬುಧವಾರ ಪತ್ರ ಬರೆದಿದ್ದಾರೆ.

ಸುಬ್ರಹ್ಮಣ್ಯಪುರ ಕೆರೆ, ಕಗ್ಗದಾಸಪುರ ಕೆರೆ, ಬೇಗೂರು ಕೆರೆ ಹಾಗೂ ಕೆ.ಆರ್. ಪುರ ಕೆರೆಗಳ ಸಂರಕ್ಷಣೆಗೆ ಸಂಬಂಧಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆಯನ್ನು ಹೈಕೋರ್ಟ್ ಏ.1ರಂದು ಕೈಗೆತ್ತಿಕೊಂಡಿತ್ತು. ಈ ಪ್ರಕರಣಗಳಲ್ಲಿ ಸರ್ಕಾರ, ಬಿಬಿಎಂಪಿ, ಬಿಡಿಎ ಹಾಗೂ ಜಲಮಂಡಳಿ ಕೂಡಾ ಪ್ರತಿವಾದಿಗಳು. ಕೆಲವು ಕಡೆ ಕೆರೆ ಜಾಗ ಹಾಗೂ ಅದರ ಮೀಸಲು ಪ್ರದೇಶಗಳು ಒತ್ತುವರಿ ಆಗಿರುವುದರಿಂದ ಕೆರೆಗಳ ಸಮಗ್ರತೆ ಕಾಯ್ದುಕೊಳ್ಳುವುದಕ್ಕೆ ಮತ್ತು ಅವುಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಅಡ್ಡಿ ಉಂಟಾಗಿದೆ. ರಾಜಕಾಲುವೆಗಳೂ ಒತ್ತುವರಿಯಾಗಿದ್ದು, ಅವುಗಳನ್ನು ತೆರವುಗೊಳಿಸಬೇಕಿದೆ ಎಂದು ಅರ್ಜಿದಾರರು ಹೈಕೋರ್ಟ್ ಗಮನ ಸೆಳೆದಿದ್ದರು.

'ಈ ರಾಜಕಾಲುವೆಗಳು ಇನ್ನೂ ನಮಗೆ ಹಸ್ತಾಂತರವಾಗಿಲ್ಲ. ಅವುಗಳನ್ನು ಬಿಡಿಎ ಹಸ್ತಾಂತರ ಮಾಡಿದ ಬಳಿಕ ಒತ್ತುವರಿ ತೆರವು ಕಾರ್ಯ ಆರಂಭಿಸುತ್ತೇವೆ' ಎಂದು ಬಿಬಿಎಂಪಿ ಪರ ವಕೀಲರು ವಿಚಾರಣೆ ಸಂದರ್ಭದಲ್ಲಿ ತಿಳಿಸಿದ್ದರು. ರಾಜಕಾಲುವೆಗಳನ್ನು ಬಿಬಿಎಂಪಿಗೆ ಹಸ್ತಾಂತರಿಸಲು ಅಧಿಸೂಚನೆ ಹೊರಡಿಸುವಂತೆ ನಗರಾಭಿವೃದ್ಧಿ ಇಲಾಖೆಗೆ ಮತ್ತು ಬಿಡಿಎಗೆ ಹೈಕೋರ್ಟ್ ನಿರ್ದೇಶನ ನೀಡಿತ್ತು.

'2020ರ ಬಿಬಿಎಂಪಿ ಕಾಯ್ದೆಯ ಪ್ರಕಾರ ರಾಜಕಾಲುವೆಗಳು ಹಾಗೂ ಸರ್ಕಾರಿ ಜಾಗಗಳು ಒತ್ತುವರಿ ಆಗದಂತೆ ಸಂರಕ್ಷಣೆ ಮಾಡುವುದು ಬಿಬಿಎಂಪಿಯ ಆದ್ಯ ಕರ್ತವ್ಯ. ಪಾಲಿಕೆಯ ವ್ಯಾಪ್ತಿಯ ಎಲ್ಲ ರಾಜಕಾಲುವೆಗಳು ಈಗಾಗಲೇ ಬಿಬಿಎಂಪಿಯ ಅಧೀನದಲ್ಲೇ ಇವೆ. ಹಾಗಾಗಿ ಅವುಗಳ ಹಸ್ತಾಂತರಕ್ಕೆ ಸರ್ಕಾರವು ಪ್ರತ್ಯೇಕ ಅಧಿಸೂಚನೆ ಪ್ರಕಟಿಸುವ ಅಗತ್ಯ ಇರುವುದಿಲ್ಲ. ಹಾಗಾಗಿ ಬಿಬಿಎಂಪಿ ಈ ಕುರಿತು ಬದ್ಧತೆಯನ್ನು ಪ್ರದರ್ಶಿಸಬೇಕು' ಎಂದು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು ಪತ್ರದಲ್ಲಿ ಸೂಚಿಸಿದ್ದಾರೆ.

'ಬಿಡಿಎ ತಾನು ಅಭಿವೃದ್ಧಿಪಡಿಸಿದ ಬಡಾವಣೆಗಳನ್ನು ಇದುವರೆಗೆ ಬಿಬಿಎಂಪಿಗೆ ಹಸ್ತಾಂತರ ಮಾಡಿಲ್ಲದೇ ಇದ್ದರೆ, ಅಲ್ಲಿನ ರಾಜಕಾಲುವೆಗಳನ್ನು ಮಾತ್ರ ಬಿಬಿಎಂಪಿಗೆ ಹಸ್ತಾಂತರಿಸುವ ಬದಲು ಇಡೀ ಬಡಾವಣೆಯ ಹಸ್ತಾಂತರಕ್ಕೆ ಕ್ರಮಕೈಗೊಳ್ಳಬೇಕು. ಈ ಕುರಿತು ಮುಂದಿನ ವಿಚಾರಣೆ ಸಂದರ್ಭದಲ್ಲಿ ಹೈಕೋರ್ಟ್‌ಗೂ ಮನವರಿಕೆ ಮಾಡಲಾಗುತ್ತದೆ' ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಮಗಳ ಮೇಲೆ ಅತ್ಯಾಚಾರ: ತಂದೆಗೆ 20 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಗಳ ಮೇಲೆ ಅತ್ಯಾಚಾರ ಎಸಗಿದ್ದ ತಂದೆ ಸರ್ವೇಶ್ (44) ಎಂಬಾತನಿಗೆ 20 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿ ನಗರದ ನ್ಯಾಯಾಲಯ ಆದೇಶ ಹೊರಡಿಸಿದೆ.

'ಬಿಹಾರದ ಸರ್ವೇಶ್, ಪತ್ನಿ ಹಾಗೂ 12 ವರ್ಷದ ಮಗಳ ಜೊತೆ ಕೆಲ ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಿದ್ದ. ಎಚ್‌ಎಎಲ್ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ. ದಂಪತಿ ಕೂಲಿ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'2015ರಲ್ಲಿ ಪತ್ನಿ ಸಂಬಂಧಿಕರ ಕಾರ್ಯಕ್ರಮ ನಿಮಿತ್ತ ಬಿಹಾರಕ್ಕೆ ಹೋಗಿದ್ದರು. ಸರ್ವೇಶ್ ಹಾಗೂ ಮಗಳು ಮಾತ್ರ ಮನೆಯಲ್ಲಿದ್ದರು. ಅದೇ ವೇಳೆಯೇ ಅಪರಾಧಿ, ಮಗಳ ಮೇಲೆ ಅತ್ಯಾಚಾರ ಎಸಗಿದ್ದ. ಸ್ಥಳೀಯರು ನೀಡಿದ್ದ ಮಾಹಿತಿ ಆಧರಿಸಿ ಮಕ್ಕಳ ಸಹಾಯವಾಣಿ ಸಿಬ್ಬಂದಿ ಬಾಲಕಿಯನ್ನು ರಕ್ಷಿಸಿದ್ದರು'

'ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಅಪರಾಧಿ ಸರ್ವೇಶ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಆತನನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ಪಬ್ಲಿಕ್ ಪ್ರಾಸಿಕ್ಯೂಟರ್ ಕೆ.ವಿ. ಅಶ್ವತ್‌ನಾರಾಯಣಗೌಡ ವಾದಿಸಿದ್ದರು' ಎಂದೂ ತಿಳಿಸಿದರು.

ನಗರದಲ್ಲಿ ಇಂದು

ಬಸವರಾಜ ಬೊಮ್ಮಾಯಿ, ಮುಖ್ಯ ಅತಿಥಿಗಳು: ಪಿ.ಸಿ. ಮೋಹನ್, ನಿರ್ಮಲ್ ಕುಮಾರ್ ಸುರಾನಾ, ನವೀನ್, ರಿಜ್ವಾನ್ ಅರ್ಷದ್, ಆಯೋಜನೆ: ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನ ಅಭಿವೃದ್ಧಿ ಸಂಘ, ಸ್ಥಳ: ಲಕ್ಷ್ಮೀವೆಂಕಟರಮಣಸ್ವಾಮಿ ದೇವಸ್ಥಾನ, 8ನೇ ಮುಖ್ಯರಸ್ತೆ, ವಸಂತನಗರ, ಬೆಳಿಗ್ಗೆ 10

ಏಕವ್ಯಕ್ತಿ ಕಲಾ ಪ್ರದರ್ಶನ 'ಬ್ಲೆಂಡ್ ಆಫ್ ನೇಚರ್': ಆಶಾ ವಿವೇಕ್, ಉದ್ಘಾಟನೆ: ಅರವಿಂದ ಜತ್ತಿ, ಗೌರವ ಅತಿಥಿ: ಅರ್ಚನಾ ಉಡುಪ, ಸ್ಥಳ: ಗ್ಯಾಲರಿ 1, ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 10.30

ಯುಗಾದಿ ಉತ್ಸವ: 'ಶ್ರೀ ಕೃಷ್ಣದೇವರಾಯ ಪುರಸ್ಕಾರ' ಪ್ರದಾನ, ಪ್ರಶಸ್ತಿ ಪುರಸ್ಕೃತರು: ಆಲಿ, ಸರಿಗಮ ವಿಜಿ, ಮುಖ್ಯ ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಕೆ.ಆರ್. ರಮೇಶ್ ಕುಮಾರ್, ಉದ್ಘಾಟನೆ: ಎಂ.ಆರ್. ಜಯರಾಮ್, ಅಧ್ಯಕ್ಷತೆ: ಎ. ರಾಧಾಕೃಷ್ಣ ರಾಜು, ಗೌರವ ಅತಿಥಿ: ಕೆ. ಮುನಿಸ್ವಾಮಿ ರಾಜು, ಸಾಂಸ್ಕೃತಿಕ ಕಾರ್ಯಕ್ರಮ: ಪ್ರಿನ್ಸ್ ರಾಮ ವರ್ಮಾ ಮತ್ತು ತಂಡ, ಆಯೋಜನೆ ಹಾಗೂ ಸ್ಥಳ: ಶ್ರೀ ಕೃಷ್ಣ ದೇವರಾಯ ಕಲಾಮಂದಿರ, ತೆಲುಗು ವಿಜ್ಞಾನ ಸಮಿತಿ, ವೈಯಾಲಿಕಾವಲ್, ಸಂಜೆ 5

ಹರಿದಾಸ ವಾಣಿ ಗಾಯನ: ಭಾವನಾ ಮೂರ್ತಿ, ರಂಜಿತಾ ಪ್ರಸಾದ್, ಆಯೋಜನೆ ಹಾಗೂ ಸ್ಥಳ: ಹರಕೆ ಹನುಮ ದೇವಸ್ಥಾನ ಟ್ರಸ್ಟ್, ಐಟಿಐ ಬಡಾವಣೆ, ಕತ್ರಿಗುಪ್ಪೆ ಮುಖ್ಯರಸ್ತೆ, ಸಂಜೆ 6.30

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಕರ್ನಾಟಕ ಸಂಗೀತ ಕಾರ್ಯಕ್ರಮ: ವಿಜಯ ಶಂಕರ್ ಮತ್ತು ತಂಡ, ಸಂಜೆ 4.30 ರಿಂದ, ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮ: ಪ್ರವೀಣ್ ಗೋಡ್ಖಿಂಡಿ, ಷಡಜ್ ಗೋಡ್ಖಿಂಡಿ, ಓಜಸ್ ಅಧಿಯಾ, ಆಯೋಜನೆ: ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ: ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 6.45ರಿಂದ

ಡಾ.ಬಿ.ಟಿ. ರುದ್ರೇಶ್ ಅವರ ವೈದ್ಯಜೀವನ ಕಥನ 'ಸಾಧನೆಯೇ ಬದುಕು' ಪುಸ್ತಕ ಬಿಡುಗಡೆ: ಬಸವರಾಜ ಬೊಮ್ಮಾಯಿ, ಪುಸ್ತಕ ಅವಲೋಕನ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಉಪಸ್ಥಿತಿ: ಡಾ.ಬಿ.ಟಿ. ರುದ್ರೇಶ್, ಉಪನ್ಯಾಸಕರು: ಬೆಳವಾಡಿ ಮಂಜುನಾಥ, ಆಯೋಜನೆ: ಮಡಿಲು ಪ್ರಕಾಶನ, ಸ್ಥಳ: ಕೃಷ್ಣಾ, ಮುಖ್ಯಮಂತ್ರಿಗಳ ಗೃಹ ಕಚೇರಿ, ಕುಮಾರಕೃಪ ರಸ್ತೆ, ಸಂಜೆ 5

'ಕಾಶ್ಮೀರ ನರಮೇಧದ ಕುರಿತು ಸಂವಾದ': ಅಶೋಕ್ ಹಾರನಹಳ್ಳಿ, ಮಾಳವಿಕಾ ಅವಿನಾಶ್, ಆರ್.ಕೆ. ಮಟ್ಟು, ಗೋಪಾಲ್ ಹೊಸೂರು, ಗೌರವ ಅತಿಥಿಗಳು: ತೇಜಸ್ವಿ ಸೂರ್ಯ, ಎಲ್.ಎ.ರವಿ ಸುಬ್ರಹ್ಮಣ್ಯ, ಉದಯ್ ಗರುಡಾಚಾರ್, ಕಟ್ಟೆ ಸತ್ಯನಾರಾಯಣ, ಆಯೋಜನೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಯುವ ಘಟಕ, ಸ್ಥಳ: ಅಶ್ವಥ್ ಕಲಾಭವನ, ಎನ್.ಆರ್. ಕಾಲೊನಿ ಬಸ್ ನಿಲ್ದಾಣದ ಎದುರು, ಬಸವನಗುಡಿ, ಸಂಜೆ 5.30

ದು.ಗು. ಲಕ್ಷ್ಮಣ ಅವರ 'ಮುಸ್ಲಿಂ ಮತಾಂಧತೆ' ಕೃತಿ ಲೋಕಾರ್ಪಣೆ: ಮುಖ್ಯ ಅತಿಥಿಗಳು: ಜಗದೀಶ ಕಾರಂತ, ಬಿ.ಜಿ. ಹರೀಶ, ದಿಲೀಪ್ ಕಚ್ಚೂರು, ಹರ್ಷ ಸಮೃದ್ಧ, ಆಯೋಜನೆ: ಸಮೃದ್ಧ ಸಾಹಿತ್ಯ, ಸ್ಥಳ: ಸುಚಿತ್ರ, ಬನಶಂಕರಿ ಎರಡನೇ ಹಂತ, ಬಿ.ವಿ. ಕಾರಂತ ರಸ್ತೆ, ಸಂಜೆ 5.30

ಸಂಜೀವಿನಿ ಸರಸ್ ಮೇಳ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಆಯೋಜನೆ: ಸಂಜೀವಿನಿ–ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ, ಸ್ಥಳ: ನ್ಯಾಷನಲ್ ಕಾಲೇಜು ಆವರಣ, ಬಸವನಗುಡಿ, ಸಂಜೆ 7

‘ಕಾವೇರಿ’ಯಿಂದ ತುಂಗಾನಗರ ನೆಮ್ಮದಿ ಭಂಗ

ತುಂಗಾನಗರದ ಮುಖ್ಯರಸ್ತೆಯಲ್ಲಿ ಕೊಳವೆ ಅಳವಡಿಕೆ – ಪ್ರಜಾವಾಣಿ ಚಿತ್ರಗಳು/ಅನೂಪ್ ರಾಘ ಟಿ.

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಉತ್ತರ ಭಾಗದ ಬೆಂಗಳೂರಿಗೆ ಕಾವೇರಿ ನೀರು ಪೂರೈಸಲು ನಡೆಯುತ್ತಿರುವ ಪೈಪ್‌ಲೈನ್ ಅಳವಡಿಕೆ ಕಾಮಗಾರಿಯು ಮಾಗಡಿ ರಸ್ತೆಯ ತುಂಗಾನಗರ, ಅಂದ್ರಹಳ್ಳಿ ಮತ್ತು ಹೇರೋಹಳ್ಳಿ ಸುತ್ತಮುತ್ತಲ ಜನರ ನೆಮ್ಮದಿಯನ್ನೇ ಕಸಿದುಕೊಂಡಿದೆ.

ಕಾವೇರಿ ಕುಡಿಯುವ ನೀರು ಸರಬರಾಜು 4ನೇ ಹಂತದ ಯೋಜನೆಯಡಿ ನೈಸ್ ರಸ್ತೆ ಜಂಕ್ಷನ್ ಸಮೀಪದ ಹೊಸ ಬೈರೋಹಳ್ಳಿ ಬಳಿ ನಿರ್ಮಾಣ ಆಗಲಿರುವ 25 ಲಕ್ಷ ಲೀಟರ್ ಸಾಮರ್ಥ್ಯದ ಜಲಸಂಗ್ರಹ ಕೇಂದ್ರದಿಂದ ಯಲಹಂಕ ತನಕ 65 ಕಿಲೋ ಮೀಟರ್ ಉದ್ದದ ಪೈಪ್ ಅಳವಡಿಕೆ ಕಾಮಗಾರಿ ಈಗ ತುಂಗಾನಗರದಲ್ಲಿ ನಡೆಯುತ್ತಿದೆ.

ಮಾಗಡಿ ರಸ್ತೆಗೆ ಹೊಂದಿಕೊಂಡಂತೆ ಇರುವ ತುಂಗಾನಗರ ಈಗ ಕೆಮ್ಮಣ್ಣಿನಗುಂಡಿಯಾಗಿ ಮಾರ್ಪಟ್ಟಿದೆ. ಈ ಬಡಾವಣೆಯ ಮುಖ್ಯರಸ್ತೆಗೆ ಕಾಲಿಡಲು ಸಾಧ್ಯವಾಗದ ಸ್ಥಿತಿ ಇದೆ. ಮಾಗಡಿರಸ್ತೆ ಕಡೆಯಿಂದ ತುಂಗಾನಗರಕ್ಕೆ ಹೋಗಬೇಕೆಂದರೆ ರಸ್ತೆಯೇ ಇಲ್ಲವಾಗಿದೆ. ರಸ್ತೆಯನ್ನು ಪೂರ್ಣ ಪ್ರಮಾಣದಲ್ಲಿ ಅಗೆದು ದೊಡ್ಡ ದೊಡ್ಡ ಕೊಳವೆಗಳನ್ನು ನೆಲದೊಳಗೆ ಜೋಡಿಸಲಾಗುತ್ತಿದೆ.

‘ರಸ್ತೆ ಬದಿಯಲ್ಲಿದ್ದ ಅಂಗಡಿ ಮುಂಗಟ್ಟುಗಳಿಗೆ ಪಾದಚಾರಿಗಳು ಹೋಗಲು ಸಾಧ್ಯವಾಗದ ಸ್ಥಿತಿ ಇದೆ. ಆದ್ದರಿಂದ ಹಲವರು ಹೋಟೆಲ್ ಮತ್ತು ಅಂಗಡಿಗಳನ್ನು ಮುಚ್ಚಿದ್ದಾರೆ. ಅಂಗಡಿ ತೆರೆದರೆ ದೂಳು ತುಂಬಿಕೊಳ್ಳುತ್ತದೆ. ದೂಳಿನ ನಡುವೆ ಖರೀದಿಗೆ ಜನ ಕೂಡ ಬರುವುದಿಲ್ಲ. ಆದ್ದರಿಂದ ಬಂದ್ ಮಾಡಿದ್ದೇವೆ’ ಎನ್ನುತ್ತಾರೆ ವ್ಯಾಪಾರಿಗಳು.

ಕಾಮಗಾರಿ ಆರಂಭವಾದ ದಿನದಿಂದ ಹೋಟೆಲ್ ತೆರೆದಿಲ್ಲ. ತೆರೆದರೆ ದೂಳು ತುಂಬಿಕೊಂಡು ಊಟಕ್ಕೆ ಜನ ಬರುವುದೂ ಇಲ್ಲ. ಜೀವನ ನಿರ್ವಹಣೆಯೇ ಕಷ್ಟವಾಗಿದೆ

–ಚಿದಾನಂದ, ತುಂಗಾನಗರ

‘ಕಾಮಗಾರಿ ಆರಂಭವಾದ ದಿನದಿಂದ ನಮ್ಮ ನೆಮ್ಮದಿಯೇ ಹಾಳಾಗಿದೆ. ರಸ್ತೆ ಬದಿಯಲ್ಲಿ ಮಾತ್ರವಲ್ಲ ಇಡೀ ಬಡಾವಣೆಗೆ ದೂಳು ತುಂಬಿಕೊಂಡಿದೆ. ಮನೆಯ ಒಳಗೂ ದೂಳು ತುಂಬಿಕೊಳ್ಳುತ್ತಿದ್ದು, ಜೀವನ ನಡೆಸುವುದೇ ಕಷ್ಟವಾಗಿದೆ’ ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸುತ್ತಾರೆ.

‘ಮುಖ್ಯರಸ್ತೆಯ ಸ್ಥಿತಿ ಇದಾದರೆ, ಅಡ್ಡರಸ್ತೆಗಳಲ್ಲಿ 110 ಹಳ್ಳಿ ಯೋಜನೆಯಡಿ ಒಳಚರಂಡಿ ಮತ್ತು ಕಾವೇರಿ ಪೈಪ್‌ಲೈನ್ ಅಳವಡಿಸಲಾಗಿದೆ. ಆದರೆ, ರಸ್ತೆಗಳ ದುರಸ್ತಿ ಕಾಮಗಾರಿ ಮಾತ್ರ ನಡೆದಿಲ್ಲ. ತುಂಗಾನಗರದ ಯಾವ ರಸ್ತೆಗೆ ಹೋದರೂ ವಾಹನ ಸಂಚರಿಸಲು ಸಾಧ್ಯವಿಲ್ಲದಷ್ಟು ದುಸ್ತರವಾಗಿದೆ. ಸಮಸ್ಯೆಗೆ ಮುಕ್ತಿ ದೊರಕಲು ಇನ್ನೆಷ್ಟು ದಿನ ಕಾಯಬೇಕೋ ಗೊತ್ತಿಲ್ಲ’ ಎಂದು ತುಂಗಾನಗರದಲ್ಲಿ ಬೇಕರಿ ನಡೆಸುವ ನವೀನ್‌ಗೌಡ ಬೇಸರ ವ್ಯಕ್ತಪಡಿಸಿದರು.

ಅಂದ್ರಹಳ್ಳಿ ಮುಖ್ಯರಸ್ತೆಯಲ್ಲಿ ದೂಳಿನ ನಡುವೆ ಸಂಚರಿಸುವ ವಾಹನಗಳು

ಹೊರ ವಲಯ ಒಳ ಬೇಗುದಿ

‘ಮೂರು ತಿಂಗಳಲ್ಲಿ ರಸ್ತೆ ದುರಸ್ತಿ’

ಕಾವೇರಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿಗೆ ಅಗೆದಿರುವ ರಸ್ತೆಗಳನ್ನು ಜಲ ಮಂಡಳಿಯೇ ದುರಸ್ತಿಗೊಳಿಸಲಿದೆ ಎಂದು ಬಿಬಿಎಂಪಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್(ಹೇರೋಹಳ್ಳಿ) ನಾಗರಾಜ್ ಹೇಳಿದರು.

‘110 ಹಳ್ಳಿ ಯೋಜನೆಯಡಿ ಅಗೆದಿರುವ ರಸ್ತೆಗಳ ದುರಸ್ತಿ ಕಾಮಗಾರಿ ಆರಂಭವಾಗಿದೆ. ಶೇ 50ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಮನೆ–ಮನೆಗಳಿಂದ ಒಳಚರಂಡಿ ಸಂಪರ್ಕ ಪಡೆಯಲು ಮತ್ತೆ ರಸ್ತೆ ಅಗೆಯುವ ಸಾಧ್ಯತೆ ಇರುವುದರಿಂದ ಸಂಪರ್ಕ ಪಡೆದುಕೊಳ್ಳಲು ಅವಕಾಶ ನೀಡಲಾಗಿದೆ. ಇನ್ನು ಮುರು ತಿಂಗಳಲ್ಲಿ ಎಲ್ಲ ರಸ್ತೆಗಳೂ ದುರಸ್ತಿ ಆಗಲಿವೆ’ ಎಂದು ಹೇಳಿದರು.

ತುಂಗಾನಗರ ಮುಖ್ಯರಸ್ತೆ ಸಂಪೂರ್ಣ ಹಾಳಾಗಿ ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು

ಅಂದ್ರಹಳ್ಳಿ ಮುಖ್ಯರಸ್ತೆಯಲ್ಲಿ ಸಂಚಾರ ದುಸ್ತರ

ಮಾಗಡಿ ರಸ್ತೆಯಿಂದ ತುಮಕೂರು ರಸ್ತೆಯ 8ನೇ ಮೈಲಿಗೆ ಸಂಪರ್ಕ ಕಲ್ಪಿಸುವ ಅಂದ್ರಹಳ್ಳಿ ಮುಖ್ಯರಸ್ತೆಯಲ್ಲಿ ಕಾವೇರಿ ಕೊಳವೆ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿದೆ. ಆದರೆ, ರಸ್ತೆ ಅಭಿವೃದ್ಧಿ ಕಾಣದೆ ವಾಹನ ಸವಾರರು ಹೈರಾಣಾಗಿದ್ದಾರೆ.

ಹೇರೋಹಳ್ಳಿಯಿಂದ ಅಂದ್ರಹಳ್ಳಿ ತನಕ ರಸ್ತೆಯ ಒಂದು ಬದಿಯಲ್ಲಿ ಅಗೆದು ಪೈಪ್‌ಗಳನ್ನು ಹೂಳಲಾಗಿದೆ. ಅದರ ಮೇಲೆ ಮಣ್ಣು ಮುಚ್ಚಿ ಜಲ್ಲಿ ಸುರಿಯಲಾಗಿದೆ. ದೂಳು ಮತ್ತು ಗುಂಡಿಗಳ ನಡುವೆ ವಾಹನ ಸಂಚಾರ ದುಸ್ತರವಾಗಿದೆ.

‘ಜಲ್ಲಿಯ ನಡುವೆ ಸಾಗುವ ವಾಹನಗಳ ಚಕ್ರಕ್ಕೆ ಸಿಲುಕಿ ಹಾರುವ ಕಲ್ಲುಗಳು ರಸ್ತೆ ಬದಿಯ ಅಂಗಡಿಗಳಿಗೆ, ಪಾದಚಾರಿಗಳಿಗೆ ಬಡಿಯುತ್ತಿವೆ. ಜಲ್ಲಿ ನಡುವೆ ಸಾಗಲು ಸಾಧ್ಯವಾಗದೆ ಪ್ರತಿನಿತ್ಯ ದ್ವಿಚಕ್ರ ವಾಹನ ಸವಾರರು, ಅದರಲ್ಲೂ ಮಹಿಳೆಯರು ಬಿದ್ದು ಪೆಟ್ಟು ಮಾಡಿಕೊಳ್ಳುತ್ತಿದ್ದಾರೆ’ ಎಂದು ಡಿ ಗ್ರೂಪ್ ಬಡಾವಣೆಯ ಆಟೋಚಾಲಕ ರವೀಂದ್ರ ಹೇಳಿದರು.

ಪ್ರಸನ್ನ ಲೇಔಟ್ ಮುಖ್ಯರಸ್ತೆಯನ್ನು ಒಂದು ವರ್ಷದ ಹಿಂದಷ್ಟೇ ಅಭಿವೃದ್ಧಿಪಡಿಸಲಾಗಿತ್ತು. ಚೆನ್ನಾಗಿದ್ದ ರಸ್ತೆಯನ್ನು ಅಗೆದು ಪೈಪ್‌ಲೈನ್ ಅಳವಡಿಸಲಾಗಿದೆ. ಶ್ರೀನಿಧಿ ಲೇಔಟ್, ಮಾರುತಿನಗರ, ಮತ್ತು ಸುತ್ತಮುತ್ತಲ ಬಡಾವಣೆಗಳ ಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ. ಇರುವ ರಸ್ತೆಗಳನ್ನೆಲ್ಲಾ ಬಗೆದು ಬಿಟ್ಟಿರುವುದು ನಿವಾಸಿಗಳನ್ನು ರೋಸಿಹೋಗುವಂತೆ ಮಾಡಿದೆ.

ಆಸ್ತಿ ತೆರಿಗೆಯಲ್ಲಿ ರಿಯಾಯಿತಿ ಘೋಷಿಸಿದ ಬಿಡಿಎ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ತೆರಿಗೆಯನ್ನು ಏ. 30ರ ಒಳಗೆ ಪಾವತಿಸುವವರಿಗೆ ಶೇ 5ರಷ್ಟು ರಿಯಾಯಿತಿ ನೀಡುವುದಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಪ್ರಕಟಿಸಿದೆ. ಜೂನ್ 30ರ ನಂತರ ತೆರಿಗೆ ಪಾವತಿಸುವವರಿಗೆ ಶೇ 10ರಷ್ಟು ವಾರ್ಷಿಕ ಬಡ್ಡಿ ವಿಧಿಸಲಾಗುವುದು ಎಂದು ಬಿಡಿಎ ತಿಳಿಸಿದೆ.

ಆದರೆ, ಹೊಸ ಆರ್ಥಿಕ ವರ್ಷ ಆರಂಭವಾಗಿ ಒಂದು ವಾರವಾದರೂ ಆಸ್ತಿ ತೆರಿಗೆಗೆ ಸಂಬಂಧಿಸಿದಂತೆ ಬಿಡಿಎ ಇನ್ನೂ ವೆಬ್‌ಸೈಟ್ ಆರಂಭಿಸಿಲ್ಲ. ಇದರಿಂದ, ಆಸ್ತಿ ಮಾಲೀಕರಿಗೆ ನಿರಾಶೆಯಾಗಿದೆ.

‘ಬಿಡಿಎನ ವಿವಿಧ ವಿಭಾಗಗಳ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ವೆಬ್‌ಸೈಟ್ ಆರಂಭಿಸದೆಯೇ ರಿಯಾಯಿತಿ ಘೋಷಿಸಿದರೆ ಏನು ಪ್ರಯೋಜನ’ ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆಯ ನಿವೇಶನದ ಮಾಲೀಕರೊಬ್ಬರು ಪ್ರಶ್ನಿಸಿದ್ದಾರೆ.

‘ನಾಲ್ಕು ದಿನಗಳಲ್ಲಿ ವೆಬ್‌ಸೈಟ್ ಸಿದ್ಧವಾಗಲಿದೆ. ಈಗಿರುವ ಆನ್‌ಲೈನ್ ವ್ಯವಸ್ಥೆ ಮೂಲಕ ಆಸ್ತಿ ತೆರಿಗೆ ಸ್ವೀಕರಿಸಬಹುದು. ಆದರೆ, ಆಸ್ತಿ ಮೌಲ್ಯದ ಲೆಕ್ಕಚಾರದ ವ್ಯವಸ್ಥೆ ಮಾಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಸಿಬ್ಬಂದಿಗಳೇ ಆಸ್ತಿ ವಿವರಗಳನ್ನು ಅಪ್‌ಲೋಡ್ ಮಾಡಬೇಕಾಗಿದೆ. ಇದರಿಂದಾಗಿ ವಿಳಂಬವಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮರು ನೇಮಕಕ್ಕೆ ಆಗ್ರಹಿಸಿ ಪ್ರತಿಭಟನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ನಿಯಂತ್ರಣದಿಂದ ಕೈಬಿಟ್ಟ 6,463 ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರನ್ನು ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಿಗೆ ಮರು ನೇಮಕ ಮಾಡಿಕೊಳ್ಳಬೇಕು’ ಎಂದು ಆಗ್ರಹಿಸಿರುವ ಕರ್ನಾಟಕ ಸಂಯುಕ್ತ ಆರೋಗ್ಯ ಇಲಾಖೆ ಗುತ್ತಿಗೆ ನೌಕರರ ಸಂಘ, ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ಹಮ್ಮಿಕೊಂಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಮಹೇಶ ನಾಡಗೌಡ, ‘ಕೋವಿಡ್ ಕಾಣಿಸಿಕೊಂಡ ಬಳಿಕ ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಸಾವಿರಾರು ಮಂದಿಯನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಸೋಂಕು ನಿಯಂತ್ರಣಕ್ಕಾಗಿ ಕುಟುಂಬದಿಂದ ದೂರ ಉಳಿದ ನೌಕರರು, ಹಗಲು ರಾತ್ರಿ ಎನ್ನದೆ ಕಾರ್ಯನಿರ್ವಹಿಸಿದರು. ಕೆಲವರು ಕೋವಿಡ್ ಪೀಡಿತರಾಗಿ ಸಮಸ್ಯೆ ಎದುರಿಸಿದರು. ಈಗ ದಿಢೀರ್ ನಮ್ಮ ಸೇವೆ ಸ್ಥಗಿತಗೊಳಿಸಿರುವುದರಿಂದ ನೌಕರರ ಕುಟುಂಬ ಬೀದಿಗೆ ಬರಲಿದೆ. ಆರೋಗ್ಯ ಇಲಾಖೆಯಲ್ಲಿ ಹಲವು ಹುದ್ದೆಗಳು ಖಾಲಿ ಉಳಿದಿದ್ದು, ಸರ್ಕಾರವು ನೇಮಕಾತಿಗೆ ಕ್ರಮವಹಿಸಬೇಕು’ ಎಂದು ಒತ್ತಾಯಿಸಿದರು.

‘ಹಲವು ಜಿಲ್ಲೆಗಳಲ್ಲಿ ನೌಕರರ ವೇತನ ಬಾಕಿ ಉಳಿಸಿಕೊಳ್ಳಲಾಗಿದೆ. ಸರ್ಕಾರ ಘೋಷಣೆ ಮಾಡಿದ ವಿಶೇಷ ಪ್ರೋತ್ಸಾಹ ಧನವೂ ಬಿಡುಗಡೆಯಾಗಿಲ್ಲ. ಇದರಿಂದ ನೌಕರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬಾಕಿ ಹಣ ಹಾಗೂ ಪ್ರೋತ್ಸಾಹ ಧನವನ್ನು ತಕ್ಷಣವೇ ಸರ್ಕಾರ ಬಿಡುಗಡೆ ಮಾಡಬೇಕು’ ಎಂದು ಆಗ್ರಹಿಸಿದರು.

11ಕ್ಕೆ ಸಮಾನತೆಯ ದಿನ ಆಚರಣೆ

ಬೆಂಗಳೂರು: ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಶರಣರ ಜನ್ಮದಿನವಾದ ಏ.11 ರಂದು ಬೆಳಿಗ್ಗೆ 9 ಗಂಟೆಗೆ ಅರಮನೆ ಮೈದಾನದ ವೈಟ್ ಪೆಟಲ್ಸ್‌ನಲ್ಲಿ ‘ಸಮಾನತೆಯ ದಿನ’ ಹಮ್ಮಿಕೊಳ್ಳಲಾಗಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಚಿತ್ರದುರ್ಗದ ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮ ಸ್ವಾಮೀಜಿ, ‘ಶಿವಮೂರ್ತಿ ಶರಣರು ಆಡಂಬರಕ್ಕೆ ಅವಕಾಶ ನೀಡಿದವರಲ್ಲ. ಅವರ ಶಿಷ್ಯರು ಹಾಗೂ ಭಕ್ತರು ಸಮಾನತೆಯ ದಿನ ಹಮ್ಮಿಕೊಂಡಿದ್ದಾರೆ. ಅಂದು ಬೆಳಿಗ್ಗೆ 7 ಗಂಟೆಗೆ ಶಿವಮೂರ್ತಿ ಶರಣರು ಸಹಜ ಶಿವಯೋಗ ನಡೆಸಿಕೊಡುತ್ತಾರೆ. ನಾಡಿನ ಮಠಾಧೀಶರು, ಸಾಹಿತಿಗಳು, ಮುಖ್ಯಮಂತ್ರಿ ಹಾಗೂ ಸಚಿವರು ಭಾಗವಹಿಸಲಿದ್ದಾರೆ’ ಎಂದರು.

ಮಹದೇವಪುರ ಕಸಾಪ ಅಧ್ಯಕ್ಷ ಟಿ.ವೀರಭದ್ರಪ್ಪ

ಕೆ.ಆರ್.ಪುರ: ಕನ್ನಡ ಸಾಹಿತ್ಯ ಪರಿಷತ್ತಿನ ಮಹದೇವಪುರ ವಿಧಾನಸಭಾ ಕ್ಷೇತ್ರ ಘಟಕದ ಅಧ್ಯಕ್ಷರಾಗಿ ಟಿ.ವೀರಭದ್ರಪ್ಪ ನೇಮಕವಾಗಿದ್ದಾರೆ.

ಗೌರವ ಕಾರ್ಯದರ್ಶಿಗಳಾಗಿ ಮೋಸೆಸ್ ಕಿರಣ್, ಉಪೇಂದ್ರ ಕುಮಾರ್ ಎಂ.ಆರ್. ಗೌರವ ಕೋಶಾಧ್ಯಕ್ಷರಾಗಿ ಸೋ. ವೆಂ. ನಾಗರಾಜು ಅವರನ್ನು ನೇಮಿಸಲಾಗಿದೆ.

ಬೆಂಗಳೂರು ವಿ.ವಿ: ಇಬ್ಬರ ಸಿಂಡಿಕೇಟ್ ಸದಸ್ವತ್ವ ರದ್ದು

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಇಬ್ಬರ ಸಿಂಡಿಕೇಟ್ ಸದಸ್ಯತ್ವ ರದ್ದುಪಡಿಸಲಾಗಿದ್ದು, ಇವರ ಸ್ಥಾನಕ್ಕೆ ಹೊಸಬರನ್ನು ನೇಮಿಸಲಾಗಿದೆ.

ಪರಿಶಿಷ್ಟ ಜಾತಿ ಅಡಿಯಲ್ಲಿ ನಾಮನಿರ್ದೇಶಿತಗೊಂಡಿದ್ದ ಡಾ. ಗೋವಿಂದರಾಜು ಮತ್ತು ಧಾರ್ಮಿಕ ಅಲ್ಪಸಂಖ್ಯಾತ ಮೀಸಲಾತಿ ಅಡಿಯಲ್ಲಿ ನಾಮನಿರ್ದೇಶಿತಗೊಂಡಿದ್ದ ಪ್ರೇಮ್ ಸೋಹನ್‌ಲಾಲ್ ಅವರ ಸಿಂಡಿಕೇಟ್ ಸದಸ್ಯತ್ವವನ್ನು ರದ್ದುಪಡಿಸಲಾಗಿದೆ.

ಡಾ. ಅಂಬೇಡ್ಕರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಹಾಯಕ ಪ್ರಾಧ್ಯಾಪಕ ಡಾ.ಸಿ.ಆರ್. ಮಹೇಶ್ ಅವರನ್ನು ಪರಿಶಿಷ್ಟ ಜಾತಿ ಮೀಸಲಾತಿ ಅಡಿಯಲ್ಲಿ ಮತ್ತು ಡಾ. ಅನಿಲ್ ಕುಮಾರ್ ಈಸೋ ಅವರನ್ನು ಧಾರ್ಮಿಕ ಅಲ್ಪಸಂಖ್ಯಾತ ಮೀಸಲಾತಿ ಅಡಿಯಲ್ಲಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.

ಇದುವರೆಗೆ ಇದ್ದ ಸದಸ್ಯರ ಉಳಿದ ಅವಧಿಗೆ ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಇವರು ಸದಸ್ಯರಾಗಿರುತ್ತಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

Azadi Ka Amrit Mahotsav | Government of India

ಪಕ್ಕಾ ಮನೆ ಬಡವರಿಗೆ ಘನತೆಯನ್ನು ನೀಡುತ್ತದೆ
ಪಿಎಂ ಆವಾಸ್ ಯೋಜನೆಯು ಜೀವನವನ್ನು ಸುಲಭಗೊಳಿಸುತ್ತದೆ

ಪ್ರಧಾನಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)

- **2.25 ಕೋಟಿ** ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ.
- ಇದುವರೆಗೆ ಬಿಡುಗಡೆ ಮಾಡಲಾದ ಕೇಂದ್ರದ ನೆರವು **1.95 ಲಕ್ಷ ಕೋಟಿ ರೂ.ಗಳು**
- ಪ್ರಧಾನಮಂತ್ರಿ ಉಜ್ವಲ ಯೋಜನೆಯಡಿ ಪ್ರತಿ ಫಲಾನುಭವಿಗೆ ಅಡುಗೆ ಅನಿಲ ಸಂಪರ್ಕ

ಪ್ರಧಾನಮಂತ್ರಿ ಆವಾಸ್ ಯೋಜನೆ (ನಗರ)

- **58 ಲಕ್ಷ** ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ.
- ಇದುವರೆಗೆ ಬಿಡುಗಡೆಯಾದ ಕೇಂದ್ರದ ನೆರವು **1.18 ಲಕ್ಷ ಕೋಟಿ ರೂ.ಗಳು.**

ಪಿಎಂವೈ ವೈಶಿಷ್ಟ್ಯಗಳು:

- ಮಹಿಳಾ ಸದಸ್ಯೆಯ ಹೆಸರಿನಲ್ಲಿ ಮನೆಯ ಮಾಲಿಕತ್ವ ಅಥವಾ ಜಂಟಿ ಮಾಲೀಕತ್ವ
- ಪ್ರತಿ ಮನೆಯಲ್ಲೂ ಶೌಚಾಲಯ, ಅಡುಗೆಮನೆ, ವಿದ್ಯುತ್ ಮತ್ತು ನೀರಿನ ಸೌಲಭ್ಯ

davp 35101/13/0001/2223

“ಬಡವರಿಗೆ ಮನೆಗಳನ್ನು ನೀಡುವ ಅಭಿಯಾನವು ಸರ್ಕಾರದ ಯೋಜನೆ ಮಾತ್ರವಲ್ಲ, ಬಡವರು ಮತ್ತು ಹಳ್ಳಿಗಳಲ್ಲಿ ವಿಶ್ವಾಸವನ್ನು ನಿರ್ಮಿಸುವ ನಮ್ಮ ಬದ್ಧತೆಯಾಗಿದೆ.
ಇದು ಬಡವರನ್ನು ಬಡತನದಿಂದ ಮೇಲೆತ್ತುವ ಮೊದಲ ಹೆಜ್ಜೆಯಾಗಿದೆ. ಬಡವರಿಗೆ ಮನೆ ದೊರೆತಾಗ, ಅದು ಅವರ ಜೀವನದಲ್ಲಿ ಸ್ಥಿರತೆಯನ್ನು ತರುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ನಮ್ಮ ಸರ್ಕಾರವು ಪ್ರಧಾನಮಂತ್ರಿ ಆವಾಸ್ ಯೋಜನೆಗೆ ಆದ್ಯತೆ ನೀಡುತ್ತಿದೆ.”

– ನರೇಂದ್ರ ಮೋದಿ

ಪತಿ ಜೊತೆ ಬದುಕುವೆನೆಂದ ಯುವತಿ

ಹುಬ್ಬಳ್ಳಿ: ಮುಸ್ಲಿಂ ಯುವಕನನ್ನು ಪ್ರೀತಿಸಿ ಮದುವೆಯಾಗಿದ್ದ ಯುವತಿ, 'ನಾನು ಮತ್ತೆ ಮನೆಗೆ ವಾಪಸ್ ಹೋಗುವುದಿಲ್ಲ. ಪತಿ ಜೊತೆಯೇ ಬದುಕುತ್ತೇನೆ. ನನ್ನ ಪಾಡಿಗೆ ಬಿಟ್ಟುಬಿಡಿ' ಎಂದು, ತಮ್ಮ ಅಂತರ ಧರ್ಮೀಯ ಪ್ರೇಮ ವಿವಾಹದ ಸುತ್ತ ಎದ್ದಿದ್ದ 'ಲವ್ ಜಿಹಾದ್' ಆರೋಪಕ್ಕೆ ತೆರೆ ಎಳೆದರು.

ನಗರದ ಹಳೇ ಹುಬ್ಬಳ್ಳಿಯ ಮುಸ್ಲಿಂ ಯುವಕ ಇಬ್ರಾಹಿಂ ಸೈಯದ್ ಅವರನ್ನು ಉಣಕಲ್‌ನ ಹಿಂದೂ ಯುವತಿ ಸ್ನೇಹಾ ಧಮಾಮಫರ ಅವರು, ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಫೆ. 11ರಂದು ಮದುವೆಯಾಗಿದ್ದರು.

ವಿಷಯ ತಿಳಿದು ಕುಟುಂಬದವರು, ಸ್ಥಳೀಯ ಸೋಮವಂಶ ಸಹಸ್ರಾರ್ಜುನ ಕ್ಷತ್ರೀಯ (ಎಸ್‌ಎಸ್‌ಕೆ) ಸಮುದಾಯ, ವಿಶ್ವ ಹಿಂದೂ ಪರಿಷತ್, ಹಿಂದೂ ಪರಿಷತ್ ಸಂಘಟನೆಗಳ ಕಾರ್ಯಕರ್ತರು ಇಲ್ಲಿನ ಉಪನಗರ ಠಾಣೆ ಎದುರು ಬುಧವಾರ ಎಂಟು ತಾಸು ಪ್ರತಿಭಟನೆ ನಡೆಸಿದ್ದರು.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ
ಮಂಗಳೂರು ವಿಭಾಗ, ಮಂಗಳೂರು
ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(68ಇ):2021-22/2022-23:ಎಇ-2 ದಿನಾಂಕ: 07.04.2022
ಅಲ್ಪಾವಧಿ ಟೆಂಡರ್ ಪ್ರಕಟಣೆ / 3ನೇ ಕರೆ (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)
ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಸಾರ್ವಜನಿಕ ಇ-ಪ್ರೊಕ್ಯುರ್‌ಮೆಂಟ್ ಮೂಲಕ ಇಂಡೆಂಟ್ ನಂ. 149529 ಲೆಕ್ಕಶೀರ್ಷಿಕೆ: 3054 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣಾ ಕಾಮಗಾರಿ (ಮಳೆಹಾನಿ) ಕಾಮಗಾರಿಗೆ 3ನೇ ಕರೆಯಾಗಿ ಟೆಂಡರ್ ಕರೆಯಲಾಗಿದ್ದು, ಇ-ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 18.04.2022 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ.
ಈ ಪ್ರಕಟಣೆಗೆ ಸಂಬಂಧಿಸಿದಂತೆ ಮುಂದಿನ ವಿಸ್ತರಣೆ /ಕರೆ / ತಿದ್ದುಪಡಿ/ ಟೆಂಡರು ಮುಂದೂಡಿಕೆ ಪ್ರಕಟಣೆಯನ್ನು ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ನೋಡಿಕೊಳ್ಳುವುದು. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ https://eproc.karnataka.gov.inನ್ನು ಸಂಪರ್ಕಿಸಲು ಕೋರಲಾಗಿದೆ.
DIPR/MNG/MCA/22/22-23 dt.07.04.2022 ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್

ಕರ್ನಾಟಕ ಸರ್ಕಾರ
ಉಪವಿಭಾಗೀಯ ಆಸ್ಪತ್ರೆ ಸಾಗರ
ಸಂ: ಉ.ವಿ.ಆ.ಸಾ/ಹೊ.ಗು.ಸಿ/1789/2021-22 ದಿನಾಂಕ:07-04-2022
ನಾನ್ ಕ್ಲಿನಿಕಲ್ & ಗ್ರೂಪ್ ಡಿ ಸಿಬ್ಬಂದಿಗಳ ಹೊರಗುತ್ತಿಗೆ ಸೇವೆ ಪಡೆಯುವ ಕುರಿತು ಇ-ಟೆಂಡರ್ ಪ್ರಕಟಣೆ
ಉಪವಿಭಾಗೀಯ ಆಸ್ಪತ್ರೆ ಸಾಗರ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಸಾಗರ ಇಲ್ಲಿಗೆ ಸಿಬ್ಬಂದಿಗಳನ್ನು ಹೊರಗುತ್ತಿಗೆಯಿಂದ ಪಡೆಯಲು ಅರ್ಹ ಸಂಸ್ಥೆಗಳಿಂದ two tender document System ರಂತೆ EProcurement ಮುಖಾಂತರ ಟೆಂಡರ್ ಆಹ್ವಾನಿಸಿದ್ದು, ಆಸಕ್ತ ಅರ್ಹ ಟೆಂಡರ್‌ದಾರರು ದಿನಾಂಕ:8-04-2022 ರಿಂದ ದರಗಳನ್ನು upload ಮಾಡಬಹುದು ಹಾಗೂ ಈ ಕುರಿತು ಇಲಾಖಾ ವೆಬ್ ಸೈಟ್‌ಗೆ www.eproc.karnataka.gov.in ಲಾಗ್‌ಆನ್ ಮಾಡಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಈಪೋರ್ಟಲ್‌ನಲ್ಲಿ ಪಡೆಯತಕ್ಕದ್ದು.
ಸಹಿ/- ಮುಖ್ಯ ವೈದ್ಯಾಧಿಕಾರಿಗಳು, ಉಪವಿಭಾಗೀಯ ಆಸ್ಪತ್ರೆ, ಸಾಗರ
ವಾ.ಸಾ.ಸಂ.ಇ/ಎಂಸಿಎ/ಶಿ/33/04/22-23/39

ಕರ್ನಾಟಕ ಸರಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಬಂದರು ಮತ್ತು ಮೀನುಗಾರಿಕಾ ವಿಭಾಗ, 2ನೇ ಮಹಡಿ, ಶಾಮಿಲಿ ಹಾಲ್, ಅಂಬಲಪಾಡಿ, ಉಡುಪಿ-576103
ಫೋ/ಫ್ಯಾಕ್ಸ್: 0820-2532961, Email: pfdudupi@gmail.com
ನಂ:ಕಾನಿಇಂ:ಬಂಮೀವಿ:ಉಡುಪಿ ಎಇ:ಟೆಂಡರು ಪ್ರಕಟಣೆ:01:2022-23 ದಿ: 06.04.2022.
ಅಲ್ಪಾವಧಿ ಟೆಂಡರು ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ) (ದ್ವಿ ದಾಖಲೆ ಪದ್ಧತಿ)
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು www.eproc.karnataka.gov.in ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.
ಕಾಮಗಾರಿಯ ಹೆಸರು ಮತ್ತು ಟೆಂಡರ್ ನಂಬರ (1) ಚಿಕ್ಕಮಗಳೂರು ಜಿಲ್ಲೆ ತರಿಕೆರೆ ತಾಲೂಕು ಮೇಣಸಿನಹಳ್ಳಿ ಮೀನುಮರಿ ಉತ್ಪಾದನಾ ಕೇಂದ್ರದ ಅಭಿವೃದ್ಧಿ ಕಾಮಗಾರಿ. (ಇಂಡೆಂಟ್ ಸಂ. WORK_INDENT33), ಅಂದಾಜು ಮೊತ್ತ ರೂ. 1,73,10,060.88, ಇಎಂಡಿ ಮೊತ್ತ: Rs. 2.60 lakhs (Rs. 1.00 lakh e-payment + Rs.1.60 lakh as mentioned in bid document), ಟೆಂಡರ್ ಬಗ್ಗೆ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಹಾಗೂ ವೇಳೆ: 19.04.2022 ರಂದು 16.00 ಗಂಟೆಯವರೆಗೆ, ಟೆಂಡರ್ ಪಡೆಯುವ ದಿನಾಂಕ ಮತ್ತು ವೇಳೆ: 21.04.2022 ರಂದು 17.00 ಗಂಟೆಯವರೆಗೆ
ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ
ವಾಸಾಇ/ಸನಿಉ/ಎಂಸಿಎ/14/22-23 ದಿ: 06.04.2022

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಹರಪನಹಳ್ಳಿ
ಸಂಖ್ಯೆ: EE/RDWS&SD/HRP/e-tender/Tech/2022-23/31 ದಿನಾಂಕ: 06-04-2022
ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 01/2022-23
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮಿಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿರವರು 2021-22ನೇ ಸಾಲಿನ ಜೆ.ಜೆ.ಎಂ. ಯೋಜನೆಯಡಿ ಅನುಮೋದನೆಯಾದ ಹೂವಿನಹಡಗಲಿ, ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ ಮತ್ತು ಹೊಸಪೇಟೆ ತಾಲ್ಲೂಕಿನಲ್ಲಿ ಕಾರ್ಯಾತ್ಮಕ ನಳ ಸಂಪರ್ಕ ಕಲ್ಪಿಸಿ ನೀರು ಸರಬರಾಜು ಮಾಡುವ (ರೆಟ್ರೋಫಿಟ್ಟಿಂಗ್) ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಅವಧಿ ದಿನಾಂಕ: 06-04-2022 ರಿಂದ 20-04-2022ರ ಸಾಯಂಕಾಲ 5:00 ಗಂಟೆಯವರೆಗೆ ಮತ್ತು ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ತೆರೆಯುವ ದಿನಾಂಕ: 21-04-2022 ಸಾಯಂಕಾಲ 5:05 ಗಂಟೆಯ ನಂತರ ಹಾಗೂ ದಿನಾಂಕ: 13-04-2022 ರಂದು ಬೆಳಿಗ್ಗೆ 11:00 ಗಂಟೆಗೆ ಪೂರ್ವಭಾವಿ ಸಭೆಯನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಹರಪನಹಳ್ಳಿಯಲ್ಲಿ ಕರೆಯಲಾಗಿದೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (e-procurement portal) ವೆಬ್‌ಸೈಟ್‌ನಲ್ಲಿ ಪಡೆಯಬಹುದು. (www.eproc.karnataka.gov.in) ಈ ಬಗ್ಗೆ ಇನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹರಪನಹಳ್ಳಿರವರ ಕಚೇರಿಯ ವೇಳೆಯಲ್ಲಿ ಪಡೆಯಬಹುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್
ಗ್ರಾ.ಕು.ನೀ & ನೈ. ವಿಭಾಗ ಹರಪನಹಳ್ಳಿ

ಕರ್ನಾಟಕ ಸರ್ಕಾರದ
ಜಿಲ್ಲಾ ಪಂಚಾಯತ್ ದಾವಣಗೆರೆ
ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ದಾವಣಗೆರೆ ಜಿಲ್ಲೆ
#45, ಎ ಬ್ಲಾಕ್, 2ನೇ ಮಹಡಿ, ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ, ಕರೂರು ಕೈಗಾರಿಕ ಪ್ರದೇಶ, ದಾವಣಗೆರೆ.
ಫೋನ್: 08192-236546 ಇ-ಮೇಲ್: dtwodvg@gmail.com
ಇ-ಟೆಂಡರ್ ಪ್ರಕಟಣೆ
2022-23ನೇ ಸಾಲಿಗೆ ದಾವಣಗೆರೆ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಯ ಜಿಲ್ಲಾ/ತಾಲ್ಲೂಕು ಕಛೇರಿ, ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿ ನಿಯಲಗಳು, ಆಶ್ರಮ ಶಾಲೆಗಳು ಮತ್ತು ಕ್ರೈಸ್ ವಸತಿ ಶಾಲೆಗಳಲ್ಲಿ ಖಾಲಿ ಇರುವ ಪ್ರ.ದ.ಸ/ಡಾಟಾ ಎಂಟ್ರಿ ಆಪರೇಟರ್, ಸ್ಟಾಫ್‌ನರ್ಸ್, ಅಡುಗೆಯವರು, ಅಡುಗೆ ಸಹಾಯಕರು, ರಾತ್ರಿ ಕಾವಲುಗಾರರು, ಸ್ವಚ್ಛತಾ ಸಿಬ್ಬಂದಿ, ವಾಹನ ಚಾಲಕರು ಮತ್ತು ಗ್ರೂಪ್ ಡಿ ಸಿಬ್ಬಂದಿ ಹಾಗೂ ಇತರೆ ಸಿಬ್ಬಂದಿಯ ಸೇವೆಯನ್ನು ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯುವ ಬಗ್ಗೆ ಇ-ಟೆಂಡರ್ ಪ್ರಕಟಣೆ. ಸಂಖ್ಯೆ:
1) ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ E-TENDER/DTWO/MANPOWER/CR:01/2022-23 2) ಟೆಂಡರ್ ಗಿಟ್ಟ ಮೊತ್ತ: 2,41,49,400/- 3) ಟೆಂಡರ್ ಫಾರಂ ಅಪ್ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ:31-03-2022. 4) ಟೆಂಡರ್ ಫಾರಂ ಅಪ್ಲೋಡ್ ಮಾಡಲು ಕೊನೆಯ ದಿನಾಂಕ: 30-04-2022 ಸಂಜೆ 5.30 ಗಂಟೆಗೆ, ಸ್ಥಳ: ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ದಾವಣಗೆರೆ. 5) ಟೆಂಡರ್ ಬಗ್ಗೆ ವಿಚಾರಣೆ/ಸ್ಪಷ್ಟೀಕರಣ ಕೇಳುವ ಅಂತಿಮ ದಿನಾಂಕ:25-04-2022. 6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04-05-2022ರ ಬೆಳಿಗ್ಗೆ 11.00 ಗಂಟೆಗೆ, ಸ್ಥಳ: ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ದಾವಣಗೆರೆ. 7) ಹಣಕಾಸಿನ ಬಿಡ್ ತೆರೆಯುವ ದಿನಾಂಕ:18-05-2022ರ ಬೆಳಿಗ್ಗೆ 11.00 ಗಂಟೆಗೆ, ಸ್ಥಳ: ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ದಾವಣಗೆರೆ. 8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ: 12,07,470/- 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ: ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, #45, 'ಎ' ಬ್ಲಾಕ್, 2ನೇ ಮಹಡಿ, ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ, ಕರೂರು ಕೈಗಾರಿಕ ಪ್ರದೇಶ, ದಾವಣಗೆರೆ. ದೂರವಾಣಿ ಸಂಖ್ಯೆ:08192-236546.
ಇ-ಮೇಲ್: dtwodvg@gmail.com ಸಹಿ/-
ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ದಾವಣಗೆರೆ.
ವಾಸಾಸಂಇ/ದಾವಣಗೆರೆ/ಎಸ್‌ಎಸ್‌ಸಿ/19/2022-23

2ಎ ಮೀಸಲಾತಿ: ಸಿಎಂಗೆ ಏ.14 ಅಂತಿಮ ಗಡುವು

ವಿಜಯಪುರ: 'ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ನೀಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಏಪ್ರಿಲ್ 14 ಕೊನೆಯ ಗಡುವು ನೀಡಲಾಗಿದೆ' ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ನಗರದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೊನೆಯ ಗಡುವಿನೊಳಗೆ ಮೀಸಲಾತಿ ಘೋಷಿಸಿದರೆ ಏಪ್ರಿಲ್ 21ರಂದು ಕೂಡಲಸಂಗಮದಲ್ಲಿ ಮುಖ್ಯಮಂತ್ರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಿ, ರೇಷ್ಮೆ ರುಮಾಲು ಸುತ್ತಿ, ಕರದಂಟು ತಿನ್ನಿಸುತ್ತೇವೆ. ಇಲ್ಲವಾದರೆ ಅಂದೇ ಮರು ಹೋರಾಟ ಆರಂಭಿಸುತ್ತೇವೆ' ಎಂದು ಎಚ್ಚರಿಕೆ ನೀಡಿದರು.

ಮುಖ್ಯಮಂತ್ರಿ ಮೇಲೆ ಒತ್ತಡ ತರುವ ಉದ್ದೇಶದಿಂದ ಏಪ್ರಿಲ್ 10ರಂದು ವಿಜಯಪುರ ಜಿಲ್ಲೆ ಇಂಚಗೇರಿಯಲ್ಲಿ ಪಂಚಮಸಾಲಿಗಳ ಹಕ್ಕೊತ್ತಾಯ ಸಭೆ ಕೂಡ ನಡೆಯಲಿದೆ ಎಂದರು.

ಕಾನೂನು ಗೌರವಿಸಿ: 'ಹಿಜಾಬ್, ಹಲಾಲ್, ಆಜಾನ್ ವಿಷಯಕ್ಕೆ ಸಂಬಂಧಿಸಿದಂತೆ ಮುಸ್ಲಿಮರು ಕಾನೂನು ಗೌರವಿಸಿ, ಆ ಪ್ರಕಾರ ನಡೆದುಕೊಳ್ಳಬೇಕು' ಎಂದು ಶ್ರೀಗಳು ತಿಳಿ ಹೇಳಿದರು.

'ಧರ್ಮ ಭಾವನಾತ್ಮಕ ವಿಕಾಸಕ್ಕೆ, ಶಿಕ್ಷಣ ಬದುಕು ಕಟ್ಟಿಕೊಳ್ಳಲು ಎಂಬುದನ್ನು ಅರಿತು, ಮಕ್ಕಳ ಶಿಕ್ಷಣ ಮುಖ್ಯ ಎಂಬುದನ್ನು ತಿಳಿದುಕೊಳ್ಳಬೇಕು' ಎಂದು ಸ್ವಾಮೀಜಿ ಸಲಹೆ ನೀಡಿದರು.

'ಸರ್ಕಾರ ನಿದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಲಿ'

ಬೆಂಗಳೂರು: 'ನಿಷೇಧಿತ ಉಗ್ರಸಂಘಟನೆಯಾದ ಅಲ್‌ಖೈದಾದ ಯಾವುದೇ ಉಪದೇಶ ನಮಗೆ ಅಗತ್ಯ ಇಲ್ಲ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಹೇಳಿದ್ದಾರೆ.

ಸರಣಿ ಟ್ವೀಟ್ ಮಾಡಿರುವ ಅವರು, 'ನಾವು ನಮ್ಮ ದೇಶಕ್ಕಾಗಿ ಹಾಗೂ ದೇಶದ ಏಕತೆ, ಸಮಗ್ರತೆಗಾಗಿ ಒಗ್ಗಟ್ಟಾಗಿದ್ದೇವೆ. ಮಾನವೀಯತೆಯ ವಿರೋಧಿ ಅಲ್‌ಖೈದಾ ಸಂಘಟನೆಗೆ ಭಾರತದ ಆಂತರಿಕ ವಿಚಾರದಲ್ಲಿ ಮಾತನಾಡುವ ಯಾವುದೇ ನೈತಿಕ ಹಕ್ಕಿಲ್ಲ ಎಂದು ಹೇಳಿದ್ದಾರೆ.

ಬಿಸಿಯೂಟ: ಗೌರವಧನ ಹೆಚ್ಚಳ

ಬೆಂಗಳೂರು: ಮಧ್ಯಾಹ್ನ ಬಿಸಿಯೂಟ ಯೋಜನೆಯಡಿ ಕಾರ್ಯನಿರ್ವಹಿಸುವ ಮುಖ್ಯ ಅಡುಗೆಯವರು, ಸಹಾಯಕ ಅಡುಗೆಯವರಿಗೆ ಮಾಸಿಕ ಗೌರವ ಸಂಭಾವನೆಯನ್ನು ಪ್ರಸಕ್ತ ಸಾಲಿನಿಂದ (2022-23) ತಲಾ ₹ 1,000 ಹೆಚ್ಚಿಸಿ ಸರ್ಕಾರ ಆದೇಶ ಹೊರಡಿಸಿದೆ.

2018ರ ಜ.1 ರಿಂದ ಅನ್ವಯವಾಗುವಂತೆ ₹ 500 ಹೆಚ್ಚಿಸಿ, ಮುಖ್ಯ ಅಡುಗೆಯವರಿಗೆ ತಿಂಗಳಿಗೆ ₹ 2,700, ಸಹಾಯಕ ಅಡುಗೆಯವರಿಗೆ ₹ 2,600 ಗೌರವ ಸಂಭಾವನೆ ನೀಡಲಾಗುತ್ತಿದೆ. ಪರಿಷ್ಕೃತ ಆದೇಶದಿಂದ ಮುಖ್ಯ ಅಡುಗೆಯವರ ಸಂಭಾವನೆ ₹ 3,700, ಸಹಾಯಕ ಅಡುಗೆಯವರ ಸಂಭಾವನೆ ₹ 3,600ಕ್ಕೆ ಏರಿಕೆ ಆಗಲಿದೆ.

ಯೋಜನೆಯಲ್ಲಿ 47,250 ಮುಖ್ಯ ಅಡುಗೆಯವರು, 71,336 ಸಹಾಯಕ ಅಡುಗೆಯವರಿದ್ದು, ಒಟ್ಟು 1,18,586 ಸಿಬ್ಬಂದಿಗೆ ಗೌರವ ಸಂಭಾವನೆಯನ್ನು ₹ 1,000ದಂತೆ ಹೆಚ್ಚಿಸುವುದರಿಂದ ₹ 118.58 ಕೋಟಿ ಅನುದಾನ ಹೆಚ್ಚುವರಿಯಾಗಿ ಬೇಕಾಗಿದೆ.

ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ,
ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯಂ, ಬೆಂಗಳೂರು-02
ದೂರವಾಣಿ ಸಂಖ್ಯೆ: 080 - 26705415 ಇ-ಮೇಲ್: egovbangaloresouth@gmail.com
ಸಿ2/ಸಶಿಕ/DIRQ/ಕಂಪ್ಯೂಟರ್ ಲ್ಯಾಬ್ ಅನುಷ್ಠಾನ/27/2021-22 ದಿನಾಂಕ: 05.04.2022
ಟೆಂಡರ್ ಅಧಿಸೂಚನೆ
2021-22ನೇ ಸಾಲಿನಲ್ಲಿ ಐ.ಸಿ.ಟಿ ಮತ್ತು ಡಿಜಿಟಲ್ ಇನೋವೇಟಿವ್ ಚಟುವಟಿಕೆಯಡಿಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಆಯ್ದ 13 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಕಂಪ್ಯೂಟರ್ ಲ್ಯಾಬ್‌ಗಳನ್ನು ಸ್ಥಾಪಿಸುವ ಸಂಬಂಧ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಈ ಕೆಳಕಂಡ ಉಪಕರಣಗಳನ್ನು, ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆ ಮಾಡಲು ಇ-ಟೆಂಡರನ್ನು ಕರೆಯಲಾಗಿದೆ. ಉಪಕರಣಗಳನ್ನು ಸರಬರಾಜು ನೀಡಲು ಬಯಸುವ ಅರ್ಹ ಮತ್ತು ನೋಂದಾಯಿತ ಸಂಸ್ಥೆಗಳಿಂದ (ದ್ವಿ ಲಕೋಟೆ ಮೂಲಕ) ಇ-ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ ವಿಳಾಸ www.eproc.karnataka.gov.in ಹಾಗೂ ಪೂರ್ಣ ವಿವರಗಳು ಟೆಂಡರ್ ಡಾಕ್ಯುಮೆಂಟ್‌ನಲ್ಲಿ ದೊರೆಯುತ್ತವೆ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080 - 26705415 ಮತ್ತು ಮೊಬೈಲ್ ಸಂಖ್ಯೆ: +91 9448999327 / 9480052736ಗಳಿಗೆ ಸಂಪರ್ಕಿಸುವುದು.

ಕ್ರ.ಸಂ	ಪ್ರತಿ ಶಾಲೆಗೆ ಸರಬರಾಜು ಮತ್ತು ನಿರ್ವಹಣೆ ಮಾಡಬೇಕಾದ ಉಪಕರಣಗಳ ವಿವರ	ಇಎಂಡಿ ಮೊತ್ತ	ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸುವ ದಿನಾಂಕ	ಆನ್‌ಲೈನ್‌ನಲ್ಲಿ ಟೆಂಡರ್ ತೆರೆಯುವ ದಿನಾಂಕ
1	ಲ್ಯಾಪ್‌ಟಾಪ್-01, ಪ್ರೊಜೆಕ್ಟರ್-01 ಮತ್ತು ಸ್ಕ್ರೀನ್ -01	ರೂ.1,30,000.00	ದಿನಾಂಕ: 06.04.2022 ರಂದು ಪ್ರಾರಂಭವಾಗಿ ದಿನಾಂಕ: 06.05.2022 ರ ಸಂಜೆ 5.30 ಗಂಟೆಗೆ ಮುಕ್ತಾಯವಾಗುತ್ತದೆ.	ಪ್ರೀ ಬಿಡ್ ಸಭೆ ದಿನಾಂಕ: 18.04.2022 ಸಮಯ: 12.30 ಘಂಟೆ
2	ಕಂಪ್ಯೂಟರ್‌ಗಳು-10 (ಎಐಒ)			ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.05.2022 ಸಮಯ: 11.00 ಘಂಟೆ
3	2 ಕೆವಿ ಸಾಮರ್ಥ್ಯದ ಯು.ಪಿ.ಎಸ್ (ಬ್ಯಾಟರಿ ಸಹಿತ)	ರೂ.19,000.00		ಆರ್ಥಿಕ ಬಿಡ್ ತೆರೆಯುವ ದಿನಾಂಕ: 17.05.2022 ಸಮಯ: 12.00 ಘಂಟೆ

ಕ್ರಮ ಸಂಖ್ಯೆ: 01 ಮತ್ತು 02 ಸೇರಿ ಒಂದು ಅಧಿಸೂಚನೆ ಹೊರಡಿಸಿದ್ದು, ಅಧಿಸೂಚನೆ ಸಂಖ್ಯೆ: C2/ssk/DIRQ/Com lab/27/2021-22 Date: 05.04.2022 ಉಪಕರಣವಾರು ಪ್ರತ್ಯೇಕವಾಗಿ ಎಲ್-1 ಆಯ್ಕೆ ಮಾಡಲಾಗುವುದು. ಮತ್ತು ಕ್ರಮ ಸಂಖ್ಯೆ: 03ರ ಉಪಕರಣಕ್ಕೆ ಒಂದು ಪ್ರತ್ಯೇಕ ಅಧಿಸೂಚನೆ ಹೊರಡಿಸಿದ್ದು ಅಧಿಸೂಚನೆ ಸಂಖ್ಯೆ: C2/SSK/DIRQ/Com lab/UPS/27/2021-22 Date: 05.04.2022
ಸಹಿ/- ಉಪನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಶಿಕ್ಷಣ ಕರ್ನಾಟಕ, ಸಾ.ಶಿ.ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು
ವಾಸಾಸಂಇ/ವಾಪ್ರ/ಅಡ್ವಿಟ್/76/2022-23

ಗೊ.ರು.ಚ, ವೆಂಕಟಾಚಲ ಶಾಸ್ತ್ರೀ, ಭಾಷ್ಯಂ ಸ್ವಾಮಿ ಅವರಿಗೆ ಏ.12ರಂದು ಪ್ರದಾನ

ಮೂವರಿಗೆ ನಾಡೋಜ ಗೌರವ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಗೌರವ ಪದವಿಗೆ ಸಾಹಿತಿಗಳಾದ ಗೊ.ರು. ಚನ್ನಬಸಪ್ಪ, ಪ್ರೊ.ಟಿ.ವಿ. ವೆಂಕಟಾಚಲ ಶಾಸ್ತ್ರೀ ಹಾಗೂ ಭಾಷ್ಯಂ ಸ್ವಾಮಿ ಅವರನ್ನು ಆಯ್ಕೆ ಮಾಡಲಾಗಿದೆ.

'ಜಿ. ಕೃಷ್ಣಪ್ಪ, ಮಲೆಯೂರು ಗುರುಸ್ವಾಮಿ, ಡಾ. ಎಸ್.ಸಿ. ಶರ್ಮಾ, ಗುರುಲಿಂಗ ಕಾಪಸೆ, ಡಾ. ಶಿವಾನಂದ ನಾಯಕ, ರಮೇಶ ಎಂ.ಕೆ., ನಾಸೀರ್ ಅಹಮ್ಮದ್ ಸೇರಿದಂತೆ ಒಟ್ಟು ಹತ್ತು ಜನರ ಹೆಸರನ್ನು ನಾಡೋಜಕ್ಕೆ ಶಿಫಾರಸು ಮಾಡಲಾಗಿತ್ತು. ಅಂತಿಮವಾಗಿ ರಾಜ್ಯಪಾಲರು ಮೂವರ ಹೆಸರಿಗೆ ಅಂಕಿತ ಹಾಕಿದ್ದಾರೆ' ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಸ.ಚಿ.ರಮೇಶ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ಹಂಚಿಕೊಂಡರು.

ಗೊರುಚ

ವೆಂಕಟಾಚಲ ಶಾಸ್ತ್ರೀ


ಭಾಷ್ಯಂ ಸ್ವಾಮಿ

'ಚಿಕ್ಕಮಗಳೂರು ಜಿಲ್ಲೆ ಗೊಂಡೇದಹಳ್ಳಿಯ ಗೊ.ರು.ಚ. ಅವರು ಜಾನಪದ ಸಾಹಿತ್ಯದಲ್ಲಿ ಗಮನಾರ್ಹ ಕೆಲಸ ಮಾಡಿದ್ದರೆ, ಮಂಡ್ಯ ಜಿಲ್ಲೆ ಮೇಲುಕೋಟೆಯ ಭಾಷ್ಯಂ ಸ್ವಾಮಿ ಅವರು ಸಂಸ್ಕೃತ ಸಾಹಿತ್ಯದಲ್ಲಿ ಕೃಷಿ ಮಾಡಿದ್ದಾರೆ. ಮೈಸೂರಿನ ವೆಂಕಟಾಚಲಶಾಸ್ತ್ರೀ ಅವರು ಹಳಗನ್ನಡ ಮತ್ತು ಶಾಸ್ತ್ರ ಸಾಹಿತ್ಯಕ್ಕೆ ವಿಶೇಷ ಕೊಡುಗೆ ನೀಡಿದ್ದಾರೆ' ಎಂದು ವಿವರಿಸಿದರು.

'ಏ.12ರಂದು ಸಂಜೆ 5.30ಕ್ಕೆ ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯಲಿರುವ 'ನುಡಿಹಬ್ಬ'ದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಮೂವರಿಗೆ ನಾಡೋಜ ಪ್ರದಾನ ಮಾಡುವರು. ಚಿತ್ರದುರ್ಗದ ಮುರುಘಾ ಶರಣರು, ಹಿರಿಯ ಪತ್ರಕರ್ತ ಪದ್ಮರಾಜ ದಂಡಾವತಿ, ಕೆಂಪೇಗೌಡ ಅಧ್ಯಯನ ಕೇಂದ್ರದ ಮುಖ್ಯಸ್ಥ ಬಿ.ಎಸ್. ಪುಟ್ಟಸ್ವಾಮಿ ಹಾಗೂ ಪರಿಸರ ಹೋರಾಟಗಾರ ಕಲ್ಕುಳಿ ವಿಠ್ಠಲ ಹೆಗ್ಡೆ ಅವರಿಗೆ ಡಿ.ಲಿಟ್, 1,387 ವಿದ್ಯಾರ್ಥಿಗಳಿಗೆ ವಿವಿಧ ಪದವಿಯನ್ನು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ ಪ್ರದಾನ ಮಾಡುವರು. ಆಂಧ್ರ ಪ್ರದೇಶದ ಕೇಂದ್ರೀಯ ಬುಡಕಟ್ಟು ವಿವಿ ಕುಲಪತಿ ತೇಜಸ್ವಿ ವಿ. ಕಟ್ಟೀಮನಿ ಘಟಿಕೋತ್ಸವ ಭಾಷಣ ಮಾಡುವರು' ಎಂದರು.

ವಿಶ್ವವಿದ್ಯಾಲಯದ ಭ್ರಷ್ಟಾಚಾರದ ಆರೋಪ, ಸಿಬ್ಬಂದಿ ಆಡಳಿತದ ನಡುವಿನ ನಿರಂತರ ಸಂಘರ್ಷದ ಕುರಿತು ಪತ್ರಕರ್ತರ ಪ್ರಶ್ನೆಗಳಿಗೆ ಉತ್ತರಿಸಲು ಕುಲಪತಿ ನಿರಾಕರಿಸಿದರು. ಕುಲಸಚಿವ ಪ್ರೊ.ಎ. ಸುಬ್ಬಣ್ಣ ರೈ ಇದ್ದರು.

ರಾಜ್ಯದಲ್ಲಿ ಹೆಚ್ಚುತ್ತಿರುವ ಬಿಸಿಲ ಧಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ತಾಪಮಾನ ದಿನೇ ದಿನೇ ಏರುತ್ತಿದೆ. ಬೇಸಿಗೆಯ ಧಗೆಯೂ ಹೆಚ್ಚುತ್ತಿದೆ. ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ತಾಪಮಾನ 33 ರಿಂದ 36 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದೆ.

ಕಲಬುರಗಿಯಲ್ಲಿ ಗುರುವಾರ 40.4 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಬೆಂಗಳೂರಿನಲ್ಲಿ ಗರಿಷ್ಠ 35 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಕಳೆದ ವರ್ಷದ ಇದೇ ದಿನಕ್ಕೆ ಹೋಲಿಸಿದರೆ ಬೆಂಗಳೂರಿನಲ್ಲಿ ಎರಡು ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದೆ ಎಂದು ಹವಾಮಾನ ತಜ್ಞರು ವಿವರಿಸಿದ್ದಾರೆ.

ಬಳ್ಳಾರಿ 39.3, ರಾಯಚೂರು 39.2, ಗದಗ 37 ಮತ್ತು ಚಿತ್ರದುರ್ಗದಲ್ಲಿ 36 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

ಈ ವರ್ಷ ಕರ್ನಾಟಕದಲ್ಲಿ ವಾಡಿಕೆಗಿಂತ ತಾಪಮಾನ ಹೆಚ್ಚಾಗಿಲ್ಲ. ಸತತವಾಗಿ ವಾಡಿಕೆಗಿಂತ 5 ಡಿಗ್ರಿ ಸೆಲ್ಸಿಯಸ್ ಹೆಚ್ಚಾದರೆ ಮಾತ್ರ ಬಿಸಿ ಗಾಳಿ ಉಂಟಾಗುತ್ತದೆ. ಇನ್ನೂ ಅಂತಹ ಪರಿಸ್ಥಿತಿ ರಾಜ್ಯದಲ್ಲಿ ಸೃಷ್ಟಿಯಾಗಿಲ್ಲ ಎಂದು ಹವಾಮಾನ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ರಾಜ್ಯದ ಕರಾವಳಿ ಪ್ರದೇಶದಲ್ಲಿ ಶುಕ್ರವಾರ ಬಿರುಗಾಳಿ, ಗುಡುಗು, ಸಿಡಿಲಿನಿಂದ ಕೂಡಿದ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೆಳಗಾವಿ ಜಿಲ್ಲೆಯ ಬಿಜಗರ್ಣಿಯಲ್ಲಿ ಬುಧವಾರ ರಾತ್ರಿ 8.30 ರಿಂದ ಗುರುವಾರ ಬೆಳಿಗ್ಗೆ 8.30 ರವರೆಗಿನ 24 ಗಂಟೆ ಅವಧಿಯಲ್ಲಿ ಅತ್ಯಧಿಕ 36.5 ಮಿ.ಮೀ. ಮಳೆಯಾಗಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣಾ ಕೇಂದ್ರ ತಿಳಿಸಿದೆ.

ಬೆಂಗಳೂರಿನ ಮಲ್ಲೇಶ್ವರದ 'ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು' ಮುಂಭಾಗ ಗುರುವಾರ ವಿದ್ಯಾರ್ಥಿನಿಯರು ಬಿಸಿಲಿನ ಪ್ರಖರತೆಯಿಂದ ತಪ್ಪಿಸಿಕೊಳ್ಳಲು ತಲೆಮೇಲೆ ವೇಲ್ ಹಾಕಿಕೊಂಡು ಸಾಗಿದ್ದು ಹೀಗೆ
– ಪ್ರಜಾವಾಣಿ ಚಿತ್ರ/ ರಂಜು ಪಿ

'ಮುಸ್ಲಿಮರು ತಯಾರಿಸಿದ ಮೂರ್ತಿ ಪೂಜೆ ಬೇಡ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಮುಸ್ಲಿಮರು ಹಿಂದೂ ದೇವರ ಮೂರ್ತಿಗಳನ್ನು ಕೆತ್ತನೆ ಮಾಡಬಾರದು. ಅನ್ಯ ಧರ್ಮೀಯರು ತಯಾರಿಸಿದ ದೇವರ ಮೂರ್ತಿಗಳನ್ನು ಹಿಂದೂ ದೇವಾಲಯಗಳಲ್ಲಿ ಪ್ರತಿಷ್ಠಾಪನೆ ಮಾಡಬಾರದು. ಈ ಕುರಿತು ರಾಜ್ಯದಾದ್ಯಂತ ಅಭಿಯಾನ ನಡೆಸಲಾಗುವುದು' ಎಂದು ಮೇಲುಕೋಟೆ ಚೆಲುವನಾರಾಯಣಸ್ವಾಮಿ ದೇವಾಲಯದ ಸ್ಥಾನೀಕ ಶ್ರೀನಿವಾಸ ಗುರೂಜಿ ಗುರುವಾರ ತಿಳಿಸಿದರು.

ಸುದ್ದಿಗಾರರೊಡನೆ ಮಾತನಾಡಿರುವ ಅವರು 'ಹಿಂದೂ ದೇವರನ್ನು ಕೆತ್ತನೆ ಮಾಡಲು ನಿರ್ದಿಷ್ಟ ಪದ್ಧತಿ, ಸಂಪ್ರದಾಯವಿದೆ. ಅನ್ಯ ಧರ್ಮೀಯರು ಕೆತ್ತನೆ ಮಾಡಿದ ಮೂರ್ತಿಯ ಪ್ರತಿಷ್ಠಾನೆಯನ್ನು ಶಾಸ್ತ್ರ ಒಪ್ಪುವುದಿಲ್ಲ. ಶಾಸ್ತ್ರ ಅಧ್ಯಯನ ಮಾಡಿರುವ ವಿಶ್ವಕರ್ಮ ಸಮುದಾಯದ ಕುಶಲಕರ್ಮಿಗಳು ಮಾತ್ರ ದೇವರ ಮೂರ್ತಿ ತಯಾರಿಸುತ್ತಾರೆ. ಮುಸ್ಲಿಮರು ಹಿಂದೂ ದೇವರ ಮೂರ್ತಿ ಕೆತ್ತನೆ ಮಾಡುವುದೇ ಅಪರಾಧ' ಎಂದರು.

'ಇನ್ನು ಮುಂದೆ ರಾಜ್ಯದಾದ್ಯಂತ ಪ್ರವಾಸ ಮಾಡಿ, ಯಾವುದೇ ದೇವಾಲಯದಲ್ಲಿ ಮುಸ್ಲಿಮರು ತಯಾರಿಸಿದ ಮೂರ್ತಿಯನ್ನು ಪೂಜಿಸದಂತೆ ಜಾಗೃತಿ ಮೂಡಿಸಲಾಗುವುದು' ಎಂದು ಅವರು ತಿಳಿಸಿದರು.

ಮೂರ್ತಿ ಪ್ರತಿಷ್ಠಾಪನೆಯನ್ನೇ ನಿಲ್ಲಿಸಬೇಕಿತ್ತು: ಎಚ್‌ಡಿಕೆ

ಕೆ.ಆರ್.ಪೇಟೆ: 'ಮುಸ್ಲಿಮರು ಕೆತ್ತನೆ ಮಾಡಿದ ಮೂರ್ತಿಗಳಿಗೆ ಪೂಜೆ ಬೇಡ ಎಂದು ಈಗ ಹೇಳುತ್ತಿದ್ದೀರಿ. ಪ್ರತಿಷ್ಠಾಪನೆ ಸಂದರ್ಭದಲ್ಲೇ ನೀವು ಪ್ರತಿಭಟನೆ ಮಾಡಿ ಪೂಜೆ ನಿಲ್ಲಿಸಬೇಕಿತ್ತಲ್ಲವೇ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಗುರುವಾರ ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಒಂದು ಧರ್ಮದವರು ಇನ್ನೊಂದು ಧರ್ಮದವರನ್ನು ಕೊಂದು ಬದುಕಲು ಸಾಧ್ಯವಿಲ್ಲ. ಇಲ್ಲಿ ಎಲ್ಲಾ ಧರ್ಮಗಳೂ ಉಳಿಯಬೇಕು' ಎಂದರು.

'ಮುಸ್ಲಿಮರು ಕೆತ್ತಿದ ದೇವರ ಮೂರ್ತಿಗಳನ್ನು ಸಾವಿರಾರು ಹಳ್ಳಿಗಳ ದೇವಾಲಯಗಳಲ್ಲಿ ಸಂಪ್ರದಾಯದಂತೆ ಪೂಜಿಸಲಾಗುತ್ತಿದೆ. ಆದರೆ, ಈಗ ಪೂಜೆ ಬೇಡ ಎನ್ನುವ ಮೂಲಕ ಸಮಾಜದಲ್ಲಿ ಅಶಾಂತಿ ಸೃಷ್ಟಿಸಲು ಯತ್ನಿಸಲಾಗುತ್ತಿದೆ' ಎಂದು ಆರೋಪಿಸಿದರು.

ಅರ್ಜಿದಾರರು ಬಾಧಿತರೇ ಹೈಕೋರ್ಟ್ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಸ್ಲಿಮರ ಜೊತೆ ವ್ಯಾಪಾರ ನಡೆಸದಂತೆ ಹಿಂದೂಗಳನ್ನು ಪ್ರಚೋದಿಸಿ ಉದ್ದೇಶಪೂರ್ವಕವಾಗಿ ಅಸಹ್ಯಕರ, ದ್ವೇಷದ ಮಾತುಗಳನ್ನು ಆಡುತ್ತಿರುವ ಜನಪ್ರತಿನಿಧಿಗಳ ವಿರುದ್ಧ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು ಸೂಕ್ತ ಕ್ರಮ ಕೈಗೊಳ್ಳುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿರುವ ರಿಟ್ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಮುಂದೂಡಿದೆ.

ಈ ಕುರಿತಂತೆ ಮಂಡ್ಯ ಜಿಲ್ಲೆಯ ನಾಗಮಂಗಲದ ಮೊಹಮ್ಮದ್ ಖಲೀಮುಲ್ಲಾ ಸಲ್ಲಿಸಿರುವ ಅರ್ಜಿಯನ್ನು, ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲ ರಹಮತ್ ಉಲ್ಲಾ ಕೊತ್ವಾಲ್, 'ಅರ್ಜಿಯಲ್ಲಿ ಕಾಣಿಸಿರುವ ಜನಪ್ರತಿನಿಧಿಗಳು ಸಮಾಜದ ಕೋಮು ಸಾಮರಸ್ಯ ಕದಡುವ ಪ್ರಯತ್ನ ಮಾಡುತ್ತಿದ್ದು ಅವರ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ಸೂಕ್ತ ಕಾನೂನು ಕ್ರಮ ಜರುಗಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಈ ಪ್ರಕರಣದಲ್ಲಿ ಅರ್ಜಿದಾರರ ಹಿತಾಸಕ್ತಿ ಏನಿದೆ, ಇದರಿಂದ ಅರ್ಜಿದಾರರು ಯಾವ ರೀತಿ ತೊಂದರೆಗೆ ಒಳಗಾಗಿದ್ದಾರೆ ಎಂಬ ಸ್ಪಷ್ಟನೆ ಕೇಳಿ ರಿಟ್ ಅರ್ಜಿ ಕಚೇರಿ ವಿಭಾಗ ಆಕ್ಷೇಪಣೆ ಎತ್ತಿದೆ. ಅದನ್ನು ಪರಿಹರಿಸಿ, ಆಮೇಲೆ ನೋಡೋಣ' ಎಂದು ಕೊತ್ವಾಲ್ ಅವರಿಗೆ ಸೂಚಿಸಿ ವಿಚಾರಣೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: 'ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಂಸದರಾದ ಪ್ರತಾಪ ಸಿಂಹ, ತೇಜಸ್ವಿ ಸೂರ್ಯ, ರಾಜ್ಯದ ಸಚಿವ ಕೆ.ಎಸ್.ಈಶ್ವರಪ್ಪ, ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಸಿ.ಟಿ.ರವಿ, ಎಂ.ಪಿ. ರೇಣುಕಾಚಾರ್ಯ, ಹಿಂದೂಪರ ಸಂಘಟನೆಯ ಋಷಿಕುಮಾರ ಸ್ವಾಮೀಜಿ (ಕಾಳಿ ಸ್ವಾಮಿ), ಶ್ರೀರಾಮ ಸೇನೆಯ ಮುಖಂಡ ಪ್ರಮೋದ್ ಮುತಾಲಿಕ, ಯುವ ಬ್ರಿಗೇಡ್ ಸಂಘಟನೆ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಮತ್ತಿತರರು ವಿರುದ್ಧ ಅರ್ಜಿದಾರರು ಕ್ರಮಕ್ಕೆ ಕೋರಿದ್ದಾರೆ.

ನಿಧನ ವಾರ್ತೆ

ಡಾ.ಕೆ. ಗೋಪಾಲಕೃಷ್ಣ ಭಟ್

ಡಾ.ಕೆ.ಜಿ.ಭಟ್

ಉಡುಪಿ: ಪ್ರಸಿದ್ಧ ಸಸ್ಯ ವಿಜ್ಞಾನಿ ಹಾಗೂ ಪೂರ್ಣಪ್ರಜ್ಞ ಕಾಲೇಜು ನಿವೃತ್ತ ಪ್ರಾಧ್ಯಾಪಕ ಡಾ.ಕೆ. ಗೋಪಾಲಕೃಷ್ಣ ಭಟ್ (75) ಗುರುವಾರ ಬೆಳಿಗ್ಗೆ ಚಿಟ್ಪಾಡಿಯಲ್ಲಿರುವ ಸ್ವಗೃಹದಲ್ಲಿ ನಿಧನರಾದರು. ಮೃತರಿಗೆ ಪತ್ನಿ ಇದ್ದಾರೆ.

ಸಸ್ಯ ವರ್ಗೀಕರಣ ಶಾಸ್ತ್ರದಲ್ಲಿ ಅಪಾರ ಅಧ್ಯಯನ ನಡೆಸಿರುವ ಕೆ.ಜಿ. ಭಟ್ಟರು, 'ಫ್ಲೋರಾ ಆಫ್ ಉಡುಪಿ, ಫ್ಲೋರಾ ಆಫ್ ದಕ್ಷಿಣ ಕನ್ನಡ' ಎಂಬ ಬೃಹತ್ ಸಸ್ಯಶಾಸ್ತ್ರೀಯ ನಿಘಂಟು ಹಾಗೂ ಸಂಶೋಧನಾ ಗ್ರಂಥಗಳನ್ನು ರಚಿಸಿದ್ದಾರೆ. ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿರುವ ಸಸ್ಯಪ್ರಭೇದಗಳ ಮಾಹಿತಿಯನ್ನು ಜಗತ್ತಿಗೆ ಪರಿಚಯಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಮಣಿಪಾಲದ ಬಳಿ ಕೆ.ಜಿ. ಭಟ್ಟರು ಪತ್ತೆ ಹಚ್ಚಿದ ಸಸ್ಯಪ್ರಭೇದವೊಂದಕ್ಕೆ ಲಂಡನ್‌ನ ಪ್ರತಿಷ್ಠಿತ ಬಯೊಲಾಜಿಕಲ್ ಸೊಸೈಟಿಯು 'ಪ್ಯಾರಾಕೈಟ್ಲಿಯ ಭಟ್ಟಿಯೈ' ಎಂಬ ಹೆಸರನ್ನಿಟ್ಟು ಕೆ.ಜಿ. ಭಟ್ಟರಿಗೆ ಗೌರವ ಸೂಚಿಸಿತ್ತು. ಮೂಲತಃ ಕಾಸರಗೋಡಿನ ಕಾಕುಂಜೆಯವರಾಗಿದ್ದರೂ ಉಡುಪಿಯಲ್ಲಿ ನೆಲೆಸಿದ್ದರು.

ಇಂದಿನಿಂದ ಪ್ರಾರಂಭ

ಮಾಗಡಿ ರಸ್ತೆ ವೀರೇಶ್ 2 ಆಟ
ರಾಜಾಜಿನಗರ ನವರಂಗ್ 1 ಆಟ
ಜೆ.ಪಿ.ನಗರ ಸಿದ್ದೇಶ್ವರ 1 ಆಟ
ಕತ್ರಿಗುಪ್ಪೆ ಕಾಮಾಕ್ಯ 2 ಆಟ
ಜಾಲಹಳ್ಳಿ ಹೆಚ್.ಎಂ.ಟಿ 1 ಆಟ
ಉತ್ತರಹಳ್ಳಿ MUKTA CINEMAS 1 ಆಟ
ಯಶವಂತಪುರ ಗೋವರ್ಧನ್ 4ಆಟ
ತುಮಕೂರು ಕೃಷ್ಣ 4ಆಟ
ದೊಡ್ಡಬಳ್ಳಾಪುರ ರಾಜ್‌ಕಮಲ್ 4ಆಟ
ಶಿರಾ ಭಾಗ್ಯಲಕ್ಷ್ಮಿ 4ಆಟ
ಚಿಕ್ಕನಾಯಕನಹಳ್ಳಿ ಶ್ರೀನಿವಾಸ 4ಆಟ
PVR CINEMAS
FORUM
ORION MALL
VAISHNAVI
VEGA CITY
ARENA
SPRITE
VR MALL
MARKET CITY
REGALIYA

INOX LIVE THE MOVIE
MANTRI MALL
GARUDA MALL
SWAGATH MALL
CENTRAL MALL
RMZ MALL
LIDO MALL
BROOK FILED
VALUE MALL
Cinépolis
MEENAKSHI MALL
ETA MALL
FUN MALL
ORION EAST
GOPALAN CINEMAS
INNOVATION MALL
ARCH MALL
LEGESSY MALL
SIGNATURE MALL
GRAND MALL
GT WORLD (MAGADI ROAD)
THE CINEMA
ROCKLINE MALL
CARNIVAL
SEEGEHALLI
KINO CINEMAS
ಮೈಸೂರು ತಿಬ್ಬಾದೇವಿ 4ಆಟ
ಡಿ.ಆರ್.ಸಿ 1ಆಟ
PVR FORUM
PVR GARUDA
INOX
VISION CINEMAS
ಮಂಡ್ಯ ಮಹಾವೀರ 4ಆಟ

ನಾಗಮಂಗಲ ವೆಂಕಟೇಶ್ವರ 2ಆಟ
ದಾವಣಗೆರೆ ತ್ರಿನೇತ್ರ 1 ಆಟ
ಬಳ್ಳಾರಿ ನಟರಾಜಕಾಂಪ್ಲೇಕ್ಸ್ 4ಆಟ
ಹೊಸಪೇಟೆ ಲಕ್ಷ್ಮೀ 4ಆಟ
ಹುಬ್ಬಳ್ಳಿ ರೂಪಂ
PVR CINEMAS
Cinépolis 4ಆಟ
ದಾರವಾಡ ಶ್ರೀನಿಮಾಸ 4ಆಟ
ಬೆಳಗಾಂ ಸಂತೋಷ್ 4ಆಟ
ರಾಣಿಬೆನ್ನೂರು ಶಕ್ತಿ 4ಆಟ
ಮುಧೋಳ್ ಅಪ್ಪುಸೋನ 4ಆಟ
ಗೋಕಾಕ್ ಕರ್ನಾಟಕ 4ಆಟ
ಅಂಕಲಿ ಮಯೂರ 4ಆಟ
ಮುದ್ದೇಬಿಹಾಳ ಗಿರಿಜಾಶಂಕರ 4ಆಟ

ರಾಮದುರ್ಗ ವೆಂಕಟೇಶ್ವರ 4ಆಟ
ಅಮಿದಗಡ ಲಕ್ಷ್ಮಿ 4ಆಟ
ಚಡಚಣ ಸಂಗಮೇಶ್ವರ 4ಆಟ
ಚಮಗಂಡಿ ಶ್ರೀನಿವಾಸ 4ಆಟ
ಬಾಗಲಕೋಟೆ ಕೃಷ್ಣ 4ಆಟ
ಗದಗ ಮಹಾಲಕ್ಷ್ಮೀ 4ಆಟ
ಬನ್ನಹಟ್ಟಿ ಮಲ್ಲಿಕಾರ್ಜುನ 4ಆಟ
ಅಣ್ಣಿಗೆರೆ ಜನತಾ 4ಆಟ
ಚಿಕ್ಕೆರೂರ್ ಮಾಲತೇಶ 4ಆಟ
ಬೀದರ್ ಸ್ವಪ್ನಮಾಲ್ 4ಆಟ
ಕೊಪ್ಪಳ ಶಾರಧ 1 ಆಟ
ಶಿವಮೊಗ್ಗ ವೀರಭದ್ರೇಶ್ವರ 4ಆಟ
ಭದ್ರಾವತಿ ವೀರಭದ್ರೇಶ್ವರ 4ಆಟ
ಮಂಗಳೂರು ರಮಾಕಾಂತಿ 4ಆಟ
ಉಡುಪಿ ಕಲ್ಪನಾ 4ಆಟ
ಚನ್ನಗಿರಿ ವೀರಭದ್ರೇಶ್ವರ 4ಆಟ
ತೀರ್ಥಹಳ್ಳಿ ವಿನಾಯಕ 4ಆಟ
ಹಾಗೂರಾಜ್ಯಾದ್ಯಂತ

ಕೆ.ಜಿ.ಎಫ್-2
ಯಶ್

ಕೆ.ಜಿ.ಎಫ್... ಕರ್ನಾಟಕದ ಹೆಮ್ಮೆ

ಚಂದನವನದ ಛಾಪನ್ನು ಅಂತರರಾಷ್ಟ್ರೀಯಮಟ್ಟಕ್ಕೆ ಒಯ್ದು ಚಿತ್ರಜಗತ್ತು ಇತ್ತ ತಿರುಗಿ ನೋಡುವಂತೆ ಮಾಡಿದ ಚಿತ್ರ ಕೆಜಿಎಫ್. ಅಂತಹ ಚಿತ್ರದ ಚಾಪ್ಟರ್–2 ಬಿಡುಗಡೆಯ ಹೊಸ್ತಿನಲ್ಲಿರುವಾಗ 'ರಾಕಿಭಾಯ್' ಯಶ್ ಅವರು ಏನೆನ್ನುತ್ತಾರೆ ಎಂಬ ಕುತೂಹಲ ಅಭಿಮಾನಿಗಳದ್ದು. ಅವರ ಜತೆಗಿನ ಮಾತುಕತೆಯ ಝಲಕ್ ಇಲ್ಲಿದೆ.

ಶರತ್ ಹೆಗ್ಡೆ

• 8 ವರ್ಷಗಳ ಕೆಜಿಎಫ್ 'ಗಣಿಗಾರಿಕೆ' ಹೇಗಿತ್ತು?

ಈ ಪ್ರಯಾಣ ತುಂಬಾ ಚೆನ್ನಾಗಿತ್ತು. ಆ ಚಿತ್ರದ ಕುರಿತು ಖುಷಿಯಿದೆ. ಜನ ಸಹ ಮೆಚ್ಚಿಕೊಂಡಿದ್ದಾರೆ. ನಾವು ಮಾನಸಿಕವಾಗಿ ಹಾಗೂ ಎಲ್ಲಾ ರೀತಿಯಲ್ಲಿ ಬೆಳೆದಿದ್ದೇವೆ. ನೆನಪುಗಳೇ ಮನುಷ್ಯನ ಆಸ್ತಿ ಅಲ್ಲವೇ?

• 'ರಾಕಿ ಭಾಯ್' ಆಗಿ ಬದಲಾಗಲು ತಯಾರಿ ಹೇಗಿತ್ತು?

ತಯಾರಿ ಎಂದು ಏನೂ ಇಲ್ಲ. ಯಾವಾಗಲೂ ತಯಾರಾಗಿಯೇ ಇರುತ್ತೇವೆ. ಒಳ್ಳೆಯ ಕಥೆ, ನಿರ್ದೇಶಕರು ಸಿಗಬೇಕು ಅಷ್ಟೆ. ಈಗ ನನಗೆ ಸಿಕ್ಕಿದ್ದು ಪ್ರಶಾಂತ್ ನೀಲ್ ಅಂತಹ ಅದ್ಭುತ ನಿರ್ದೇಶಕ. ಮೊದಲ ಹಂತದಿಂದಲೂ ಒಟ್ಟಿಗೇ ಕೂತು ಕೆಲಸ ಮಾಡಬೇಕು. ಕಥೆಯ ಹಂತಗಳು, ಆಯಾಮಗಳು ಇವೆಲ್ಲವನ್ನೂ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಬೇಕು. ನಟನೆ ಅನ್ನುವುದು ಕೊನೆಗೆ ಬರುತ್ತದೆ. ಎಲ್ಲರ ಕೊಡುಗೆಯ ಫಲವೇ 'ರಾಕಿ ಭಾಯ್'. ಈ ಪಾತ್ರ ಹೇಗಿರಬೇಕು ಅನ್ನುವುದನ್ನು ನನ್ನ ಮತ್ತು ನಿರ್ದೇಶಕರ ಚಿಂತನೆಗಳು ಸೇರಿ ನಿರ್ಧರಿಸಿವೆ.

• ಕೆಜಿಎಫ್ 1 ಮತ್ತು 2 ಅವಧಿಯಲ್ಲಿ ತಾವೇಕೆ ಹೊಸ ಚಿತ್ರಗಳಲ್ಲಿ ಕಾಣಿಸಿಕೊಂಡಿಲ್ಲ?

ಒಂದು ಚಿತ್ರಕ್ಕೆ ಬದ್ಧನಾದ ಮೇಲೆ ಅದನ್ನು ಪೂರ್ಣಗೊಳಿಸುವವರೆಗೆ ಹೊಸ ಯೋಜನೆಯನ್ನು ಒಪ್ಪಿಕೊಂಡಿಲ್ಲ. ಏಕೆಂದರೆ ಗಮನ ಬದಲಾಗಬಾರದು. ಹಾಗೇನಾದರೂ ಮಾಡಿದರೆ ಅದು ಈ ಚಿತ್ರದ ಮೇಲೆ ಪರಿಣಾಮ ಬೀರುತ್ತದೆ.

• ಈ ಚಿತ್ರದಲ್ಲಿ ಬಾಲಿವುಡ್‌ನ ದಿಗ್ಗಜರ ಜೊತೆ ಅಭಿನಯಿಸಿದ್ದೀರಿ. ಆ ಒಡನಾಟ ಹೇಗಿತ್ತು?

ಅದ್ಭುತವಾದ ಅನುಭವ ಅದು. ಇಲ್ಲಿ ಯಾರೂ ಹೆಚ್ಚು ಅಥವಾ ಕಡಿಮೆ ಎಂದು ಇಲ್ಲ. ಆ ಪಾತ್ರ ಎಷ್ಟು ದೊಡ್ಡದು ಎಂಬುದಷ್ಟೇ ಮುಖ್ಯ. ಕಳೆದ ಬಾರಿ ರಾಮ್ ಅವರು ಗರುಡನ ಪಾತ್ರ ಮಾಡಿದ್ದರು. ಅವರು ನನ್ನ ಜೊತೆಯಲ್ಲಿದ್ದವರು. ಆದರೆ, ಆ ಪಾತ್ರದ ಜೊತೆ ನೋಡಿದಾಗ ಅದರ ಮೌಲ್ಯವೇ ಬೇರೆ. ದಿಗ್ಗಜ ನಟರಿಂದ ಶಿಸ್ತು, ಬದ್ಧತೆ ಕಲಿಯುವುದು ಬೇಕಾದಷ್ಟಿರುತ್ತದೆ. ಒಳ್ಳೆಯ ಕಲಾವಿದರ ಜೊತೆಗಿದ್ದಾಗ ನಮ್ಮ ಕೆಲಸಕ್ಕೂ ಉತ್ತೇಜನ ಸಿಕ್ಕಂತಾಗುತ್ತದೆ.

• ಕೆಜಿಎಫ್ ಚಾಪ್ಟರ್ –2 ಪ್ರಚಾರ ಉತ್ತರ ಭಾರತದತ್ತ ಹೆಚ್ಚು ಕೇಂದ್ರೀಕರಿಸುತ್ತಿದೆಯೇ?

ಹಾಗೇನಿಲ್ಲ. ಇದು ಆರಂಭವಾದದ್ದು ಕನ್ನಡದಲ್ಲೇ. ಉತ್ತರದತ್ತ ತಿರುಗಾಡಿದ್ದು ಒಂದು ಮಾರ್ಗ ಅಷ್ಟೆ. ಅಲ್ಲೆಲ್ಲಾ ಸುತ್ತಾಡಿ ಮತ್ತೆ ನಮ್ಮ ಮನೆಯಲ್ಲಿ ಕುಳಿತು ಮಾತನಾಡುತ್ತೇವೆ.

• ಕೆಜಿಎಫ್ ಚಿತ್ರರಂಗಕ್ಕೆ ತೂಕ ಕೊಟ್ಟಿರುವ ಹೊತ್ತಿನಲ್ಲಿ ಯಶ್ ಅವರಿಗೆ ಅನಿಸುವುದೇನು?

ಇದೊಂದು ಕನಸು. ಜನ ನನ್ನ ಪ್ರತಿಯೊಂದು ಸಿನಿಮಾವನ್ನು ಗೆಲ್ಲಿಸಿ ಗುರುತಿಸಿದ ಮೇಲೆ ನಾನು ಆ ಉದ್ಯಮದಲ್ಲಿದ್ದುಕೊಂಡು ಆ ಉದ್ಯಮಕ್ಕೆ ಬೆಲೆ ತರುವ ಕೆಲಸ ಮಾಡಲೇಬೇಕು. ಉದ್ಯಮ ಖುಷಿಯಾಗಿರುವುದು ನೋಡಿ ನನಗೂ ಒಂದು ಶಕ್ತಿ ಬರುತ್ತದೆ. ಈ ಚಿತ್ರವನ್ನು ನಾನು ಕರ್ನಾಟಕದ ಹೆಮ್ಮೆ ಎಂದೇ ಕರೆಯುತ್ತೇನೆ. ನಟನಾಗಿ ಮಾತ್ರವೇ ಅಲ್ಲ. ಒಬ್ಬ ಕನ್ನಡಿಗನಾಗಿ ನನಗೆ ಹೆಮ್ಮೆ ಇದೆ.

• ಕೆಜಿಎಫ್–2 ನಿಮ್ಮ ಬದುಕಿಗೆ ನೀಡಬಹುದಾದ ತಿರುವು ಏನು?

ಅಂಥದ್ದೇನೂ ಇಲ್ಲ. ನೀವು ಎಲ್ಲಿಗೆ ತಲುಪಬೇಕೋ ಅಲ್ಲಿಗೆ ಹೋಗಲು ಏನು ತಯಾರಿ ಮಾಡಿದ್ದೀರಿ? ಶ್ರಮಪಟ್ಟಿದ್ದೀರಿ ಎನ್ನುವುದು ಮುಖ್ಯ. ಇವೆಲ್ಲವೂ ಒಂದು ಇಂಧನ ಇದ್ದಂತೆ. ಹಾಗೆ ಹೋಗುತ್ತಿದ್ದಾಗ ಜನ ನಮಗೆ ದಾರಿ ತೋರಿಸುತ್ತಾರೆ.

• 'ರಾಕಿ ಭಾಯ್' ಒಬ್ಬರದೇ ಅಬ್ಬರವೇ ಅಥವಾ ನಾಯಕಿಗೂ ಜಾಗ ಇದೆಯೇ?

ಹಾಗೇನಿಲ್ಲ, ಕಥೆ ಏನನ್ನು ಹೇಳುತ್ತದೆ, ಯಾವ ವಿಷಯವನ್ನು ಕೇಂದ್ರೀಕರಿಸುತ್ತದೆ ಎನ್ನುವುದನ್ನು ನೋಡಿಕೊಂಡು ಅದರ ಪ್ರಕಾರವೇ ಎಲ್ಲ ಪಾತ್ರಗಳಿಗೆ ಆದ್ಯತೆ ಕೊಟ್ಟಿದ್ದೇವೆ. ಇಲ್ಲಿರುವುದು ರಾಕಿ ಎನ್ನುವ ವ್ಯಕ್ತಿಯ ಕಥೆ. ಇಲ್ಲಿ ರಾಕಿ ಮತ್ತು ಕೆಜಿಎಫ್ ಅನ್ನುವ ಜಾಗ ಎರಡೇ ಪಾತ್ರಗಳು ಇರುವುದು. ಮಹಾಭಾರತವನ್ನು ಯಾವುದೇ ಪಾತ್ರ ಕೇಂದ್ರೀಕರಿಸಿ ಹೇಳಬಹುದಲ್ವಾ ಹಾಗೆ.

• 'ಯಶೋಮಾರ್ಗ' ಹೇಗಿದೆ?

ಯಶೋಮಾರ್ಗ ಫೌಂಡೇಷನ್‌ನ ಕೆಲಸಗಳೂ ತುಂಬಾ ಚೆನ್ನಾಗಿ ಸಾಗಿವೆ. ಹಲವಾರು ಜನರಿಗೆ ಸ್ಫೂರ್ತಿ ಕೊಟ್ಟಿದೆ. ಮುನ್ನಡೆಸುತ್ತಿದ್ದೇವೆ.

• ಅಭಿಮಾನಿಗಳಿಗೆ ಏನು ಹೇಳುತ್ತೀರಿ?

ನಿಮ್ಮ ಜೀವನಕ್ಕೆ ಬೇಕಾದ ಹಾಗೆ ಸೂಪರ್ ಆಗಿ ಇರಿ. ಒಳ್ಳೆಯ ಗುರಿ ಇರಿಸಿಕೊಂಡು ಸಾಧಿಸುವ ರೀತಿ ಮುನ್ನಡೆಯಿರಿ. ನನ್ನ ಕಷ್ಟಸುಖದಲ್ಲಿ ಇರುವವರು ಅವರೇ. ನನ್ನ ಬಂಧುಗಳು ಎಂದರೆ ಅಭಿಮಾನಿಗಳೇ. ಸಿನಿಮಾ ನೋಡಿ. ಖುಷಿಪಡಿ, ಖುಷಿಯಾಗಿರಿ. ❖

• ನಿರ್ದೇಶಕ ಪ್ರಶಾಂತ್ ನೀಲ್ ಬಗ್ಗೆ?

ಪ್ರಶಾಂತ್ ನೀಲ್ ಅನ್ನುವ ಅದ್ಭುತ ನಿರ್ದೇಶಕರ ಕಾರಣಕ್ಕೆ ಕೆಜಿಎಫ್ ಆಯಿತು. ಅವರಿಗಿರುವ ಸಿನಿಮಾ ಜ್ಞಾನ, ತಾಂತ್ರಿಕತೆ, ಪ್ರಸ್ತುತಿ, ಆಲೋಚನೆ ಎಲ್ಲವೂ ಬೇರೆಯದ್ದೇ ಆಗಿವೆ. ನನಗೆ ಅವರ ಅಗಾಧವಾದ ಸಾಮರ್ಥ್ಯದ ಅರಿವು ಇದೆ. ನಾನು, ಪ್ರಶಾಂತ್, ನಿರ್ಮಾಪಕ ವಿಜಯ್ ಕಿರಗಂದೂರು ಒಟ್ಟಾಗಿ ಸೇರಿ ಚರ್ಚಿಸಿದಾಗ ನಮ್ಮ ಶಕ್ತಿಗಳು ಒಂದಕ್ಕೊಂದು ಹೊಂದಿಕೆಯಾದವು. ಪ್ರಶಾಂತ್ ಆಲೋಚನೆಯಲ್ಲಿರುವ ಒಂದು ಚಿಕ್ಕ ಭಾಗವೇ ಕೆಜಿಎಫ್. ಪ್ಯಾನ್ ಇಂಡಿಯಾ ಕಲ್ಪನೆಯನ್ನು ಮಾತ್ರ ಅವರಿಗೆ ಹೇಳಿದ್ದೆ. ನನಗೆ ವಿಶ್ವಾಸವಿತ್ತು. ಕೊನೆಗೆ ಪ್ರಶಾಂತ್ ಒಪ್ಪಿದರು. ಕೆಜಿಎಫ್‌ನಲ್ಲಿ ಪ್ರಶಾಂತ್ ನೀಲ್, ನಿರ್ಮಾಪಕರು, ಸಂಗೀತ ನಿರ್ದೇಶಕರು ಸೇರಿ ಎಲ್ಲರ ಕೊಡುಗೆಯೂ ಇದೆ.

ಜೂನ್‌ನಲ್ಲಿ 'ವೆಡ್ಡಿಂಗ್ ಗಿಫ್ಟ್'

ವಿಕ್ರಮ್ ಪ್ರಭು ನಿರ್ದೇಶನದ ಚೊಚ್ಚಲ ಚಿತ್ರ, ಡಾರ್ಕ್ ಥ್ರಿಲ್ಲರ್ ಕಥಾಹಂದರ ಹೊಂದಿರುವ 'ವೆಡ್ಡಿಂಗ್ ಗಿಫ್ಟ್' ಜೂನ್‌ನಲ್ಲಿ ತೆರೆಕಾಣಲಿದೆ. ಚಿತ್ರದ ಹಾಡುಗಳ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ಈ ಚಿತ್ರದ ಮುಖಾಂತರ ಖ್ಯಾತ ನಟಿ ಪ್ರೇಮ ಅವರು ಮತ್ತೆ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ.

'ಉಪೇಂದ್ರ ಮತ್ತೆ ಬಾ' ಸಿನಿಮಾ ನಂತರ ಸ್ಯಾಂಡಲ್‌ವುಡ್‌ನಿಂದ ಪ್ರೇಮ ಕೆಲ ವರ್ಷ ದೂರವೇ ಉಳಿದಿದ್ದರು. 'ಕೆಲವು ಹೆಣ್ಣು ಮಕ್ಕಳು ಕಾನೂನನ್ನು ಹೇಗೆ ದುರ್ಬಳಕೆ ಮಾಡಿಕೊಳ್ಳುತ್ತಾರೆ ಎಂಬುದೇ ಕಥಾಹಂದರ. ಪ್ರೇಮ ಅವರು ಲಾಯರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಿಶಾಂತ್, ಸೋನು ಗೌಡ, ಅಚ್ಯುತಕುಮಾರ್, ಪವಿತ್ರಾ ಲೋಕೇಶ್ ತಾರಾಬಳಗದಲ್ಲಿದ್ದಾರೆ. ಜೂನ್‌ನಲ್ಲಿ ಚಿತ್ರ ತೆರೆಗೆ ತರುತ್ತೇವೆ' ಎಂದರು ನಿರ್ಮಾಪಕ ಹಾಗೂ ನಿರ್ದೇಶಕ ವಿಕ್ರಮ್ ಪ್ರಭು.

'ನಾನು ದುಡ್ಡಿಗಾಗಿ ಸಿನಿಮಾ ಮಾಡುವವಳಲ್ಲ. ಉತ್ತಮ ಕಥೆ ಇದ್ದರೆ ಮಾತ್ರ ನಟಿಸುತ್ತೇನೆ. ಈ ಚಿತ್ರದ ಕಥೆ ಕೇಳಿದ ತಕ್ಷಣ ಪಾತ್ರ ಮಾಡಬೇಕೆನ್ನಿಸಿತು. ಚಿತ್ರ ಚೆನ್ನಾಗಿ ಮೂಡಿಬಂದಿದೆ. ನಾಯಕನ ಪರ ವಕಾಲತ್ತು ವಹಿಸುವ ವಕೀಲೆಯಾಗಿ ನಾನು ಕಾಣಿಸಿಕೊಂಡಿದ್ದೇನೆ' ಎಂದರು ಪ್ರೇಮ. ❖

ಪ್ರೇಮ

ಶುಕ್ರವಾರ • ಏಪ್ರಿಲ್ 8, 2022 ಪ್ರಜಾವಾಣಿ

ಕಾರ್ಮಿಕರ ಆಸ್ಪತ್ರೆ: ಕಾಯುವುದೇ ಕಾಯಕ

• ಸುಕೃತ ಎಸ್.

ಬೆಂಗಳೂರು: 'ಬೆಳಿಗ್ಗೆ ಬೇಗ ಬಂದರೂ ಸಿಕ್ಕಿದ ಟೋಕನ್ ಸಂಖ್ಯೆ 82. ಈಗ ಮಧ್ಯಾಹ್ನ 1.30 ಆಗಿದೆ. ನನ್ನ ಪಾಳಿ ಇನ್ನೂ ಬಂದಿಲ್ಲ. ಡಾಕ್ಟರ್ ಈಗ ಊಟಕ್ಕೆ ಹೋದರು'

ರಾಜಾಜಿನಗರದ ಇಎಸ್ಐ ಆಸ್ಪತ್ರೆಗೆ ಆರೋಗ್ಯ ತಪಾಸಣೆ ಸಲುವಾಗಿ ಬಂದ ಹೊರ ರೋಗಿ ಕೆ.ರಮೇಶ್‌ಕುಮಾರ್ ತಿಳಿಸಿದರು.



ಕೆ. ರಮೇಶ್ ಕುಮಾರ್

'ನನಗೆ ವಯಸ್ಸಾಗಿದೆ. ಪತ್ನಿ ಇಲ್ಲೇ 3–4 ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದಾಳೆ. ನನಗೆ ಮೂಳೆ ಸಮಸ್ಯೆ ಇತ್ತು. ಬೆಳಗ್ಗಿನಿಂದ ಕಾದರೂ ಇನ್ನೂ ನನ್ನ ಸರದಿ ಬಂದಿಲ್ಲ. ಫಲಕದಲ್ಲಿ ಐವರು ವೈದ್ಯರ ಹೆಸರುಗಳಿವೆ. ಆದರೆ, ರೋಗಿಗಳನ್ನು ಇಬ್ಬರು ವೈದ್ಯರು ಮಾತ್ರ ನೋಡುತ್ತಿದ್ದಾರೆ' ಎಂದು ಅವರು ದೂರಿದರು.

'ನಾನು ಬೆಳಿಗ್ಗೆ 9 ಗಂಟೆಗೆ ಬಂದೆ. ಕೊನೆಗೂ ಈಗ ಡಾಕ್ಟರ್ ಸಿಕ್ಕಿದರು. ಆಸ್ಪತ್ರೆಯಲ್ಲಿ ಒಳ್ಳೆಯ ಚಿಕಿತ್ಸೆ ಸಿಗುತ್ತದೆ. ಆದರೆ, ಬೆಳಿಗ್ಗೆಯಿಂದ ಕಾಯಬೇಕು ಎನ್ನುವುದೇ ಗೋಳು' ಎಂದು ದಾಸರಹಳ್ಳಿಯ ಲಕ್ಷ್ಮೀದೇವಮ್ಮ ತಿಳಿಸಿದರು.

'ಮಾತ್ರೆ ತೆಗೆದುಕೊಳ್ಳಬೇಕು ಎಂದರೆ ಆಸ್ಪತ್ರೆಯಿಂದ ಹೊರಗೆ ಹೋಗಬೇಕು. ಎಲ್ಲ ಮಾತ್ರೆಗಳು ಇಲ್ಲಿ ಸಿಗುವುದಿಲ್ಲ. ಬಿಸಿಲು ಬೇರೆ, ಅಷ್ಟು ದೂರ ನಡೆದು ಹೋಗುವುದೇ ತ್ರಾಸದಾಯಕ' ಎಂದು ಅವರು ಹಣೆ ಮೇಲಿನ ಬೆವರ ಹನಿಗಳನ್ನು ಒರೆಸಿಕೊಂಡರು.

ಇದು ಇವರಿಬ್ಬರ ಸಮಸ್ಯೆ ಅಷ್ಟೇ ಅಲ್ಲ. ಈ ಇಎಸ್ಐ ಆಸ್ಪತ್ರೆಗೆ ಆರೋಗ್ಯ ತಪಾಸಣೆಗಾಗಿ ಬಹುತೇಕ ರೋಗಿಗಳು ಎದುರಿಸುವ ಬವಣೆ ಇದು. ಈ ಕಾರ್ಮಿಕರ ಆಸ್ಪತ್ರೆಯಲ್ಲಿ ಕಾಯುವುದೇ ರೋಗಿಗಳ ಕಾಯಕವಾಗಿಬಿಟ್ಟಿದೆ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅನೇಕ ರೋಗಿಗಳು ಬೇಸರ ವ್ಯಕ್ತಪಡಿಸಿದರು.

'ಆಸ್ಪತ್ರೆ ಚೆನ್ನಾಗಿದೆ. ರೋಗಿಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಆದರೆ, ತುಂಬಾ ಹೊತ್ತು ಕಾಯಬೇಕು. ಏನು ಕೇಳಿದರೂ ವೈದ್ಯರು ಇಲ್ಲ ಎನ್ನುತ್ತಾರೆ. ಆಸ್ಪತ್ರೆಗೆ ತುಂಬಾ ಜನ ಬರುತ್ತಾರೆ. ನಿರ್ವಹಣೆ ಕೊರತೆಯೂ ಇದೆ' ಎಂದು ದೂರುತ್ತಾರೆ ಇಲ್ಲಿಗೆ ಚಿಕಿತ್ಸೆಗಾಗಿ ಬಂಧುವೊಬ್ಬರನ್ನು ಕರೆತಂದ ದೀಪಾಂಜಲಿನಗರದ ಆನಂದ್.

ವೈದ್ಯರನ್ನು ಭೇಟಿ ಮಾಡಲು ಬಂದ ರೋಗಿಗಳು ತಮ್ಮ ಸರದಿಗಾಗಿ ನೆಲದ ಮೇಲೆ ಕುಳಿತು ಕಾಯುತ್ತಿರುವುದು

ಬೆಂಗಳೂರಿನ ರಾಜಾಜಿನಗರದ ಇಎಸ್ಐ ಆಸ್ಪತ್ರೆಗೆ ರೋಗಿಯನ್ನು ಕರೆತಂದವರು ತಾವೇ ಸ್ಟ್ರೆಚರ್ ತಳ್ಳಿಕೊಂಡು ಹೋದರು – ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್‌.ಜಿ.

ಸರ್ಕಾರಿ ಆಸ್ಪತ್ರೆ ಹೀಗಿದೆ ವ್ಯವಸ್ಥೆ 2

'ನನ್ನ ಚಿಕ್ಕಪ್ಪನಿಗೆ ಕಾಲಿನ ಮೂಳೆಯಲ್ಲಿ ಸಮಸ್ಯೆ ಇತ್ತು. ಶಸ್ತ್ರಚಿಕಿತ್ಸೆ ಮಾಡಿಸಬೇಕು ಎಂದು ವೈದ್ಯರು ಸಲಹೆ ನೀಡಿದ್ದರು. ಈ ಆಸ್ಪತ್ರೆಗೆ ಅವರನ್ನು ದಾಖಲು ಮಾಡಿದೆವು. ಶಸ್ತ್ರಚಿಕಿತ್ಸೆ ಮಾಡಲು ಒಂದು ವಾರ ತೆಗೆದುಕೊಂಡರು. ಕಾರಣ ಕೇಳಿದರೆ, ಅಗತ್ಯ ಪರಿಕರಗಳು ಇಲ್ಲ. ವೈದ್ಯರೂ ಇಲ್ಲ ಎನ್ನುತ್ತಾರೆ' ಎಂದು ಅವರು ತಿಳಿಸಿದರು.

ಬಿಲ್ಲು–ಬವಣೆ: 'ಇಲ್ಲಿ ಚಿಕಿತ್ಸೆಗಾಗಿ ಬರುವವರೆಲ್ಲರೂ ಕಾರ್ಮಿಕರೇ. ಎಲ್ಲದಕ್ಕೂ ಬಿಲ್ಲುಗಳು ಬೇಕು. ಎಲ್ಲದಕ್ಕೂ ರೋಗಿಯ ಸಹಿ ಬೇಕು ಎನ್ನುತ್ತಾರೆ. ಆದರೆ, ಒಂದೇ ಬಾರಿಗೆ ಈ ಎಲ್ಲ ಕೆಲಸಗಳು ಆಗುವುದಿಲ್ಲ. ಚಿಕಿತ್ಸೆ ಏನೋ ನಡೆದುಹೋಗುತ್ತದೆ. ಆದರೆ, ದಾಖಲಾತಿ ಜೋಡಣೆಗೆ, ದುಡ್ಡು ಪಡೆಯುವುದಕ್ಕೇ 15 ದಿನಗಳಿಗೂ ಹೆಚ್ಚು ಸಮಯ ತಗಲುತ್ತದೆ. ಆ ಕಾರ್ಡ್ ಬೇಕು, ಈ ಕಾರ್ಡ್ ಬೇಕು ಎಂದು ಸತಾಯಿಸುತ್ತಾರೆ. ಅದರಲ್ಲೇ ದಿನ ಕಳೆದುಹೋಗುತ್ತದೆ' ಎಂದು ಕೆ. ರಮೇಶ್‌ಕುಮಾರ್ ಬೇಸರ ವ್ಯಕ್ತಪಡಿಸಿದರು.

ಚಿಕಿತ್ಸೆಗಾಗಿ ಬಂದಿದ್ದ ಮಹಿಳಾ ರೋಗಿಯೊಬ್ಬರಿಗೆ ನಡೆಯಲೂ ಆಗುತ್ತಿರಲಿಲ್ಲ. ಅವರನ್ನು ಕುಟುಂಬದವರೇ ಸ್ಟ್ರೆಚರ್‌ನಲ್ಲಿ ಮಲಗಿಸಿ, ಆಸ್ಪತ್ರೆಯ ಒಳಕ್ಕೆ ತಳ್ಳಿಕೊಂಡು ಹೋದರು. ಸ್ಕ್ಯಾನಿಂಗ್ ಮಾಡಿಸಿಕೊಂಡ ವೃದ್ಧೆಯೊಬ್ಬರನ್ನು ಅವರ ಮೊಮ್ಮಗನೇ ತಳ್ಳಿಕೊಂಡು ಹೊರಬಂದರು. ಆಸ್ಪತ್ರೆಯ ಆವರಣದಲ್ಲಿ ಗುರುವಾರ ಕಂಡ ದೃಶ್ಯಗಳು ಇಲ್ಲಿರುವ ಸಿಬ್ಬಂದಿ ಕೊರತೆಗೆ ಕನ್ನಡಿ ಹಿಡಿಯುವಂತಿದ್ದವು.

ಇಎಸ್ಐ ಸರ್ಕಾರಿ ಆಸ್ಪತ್ರೆ ಅಲ್ಲ: ಸಿಬ್ಬಂದಿ ವಾದ

'ಇದು ಸರ್ಕಾರಿ ಆಸ್ಪತ್ರೆ ಅಲ್ಲ. ಆರೋಗ್ಯ ಇಲಾಖೆ ಅಡಿ ಬರುವುದು ಸರ್ಕಾರಿ ಆಸ್ಪತ್ರೆ. ಇಲ್ಲಿಗೆ ಕಾರ್ಮಿಕರು ಮಾತ್ರ ಬರುತ್ತಾರೆ. ಇದು ಕಾರ್ಮಿಕ ಸಚಿವಾಲಯದ ಅಡಿ ಬರುತ್ತದೆ. ಆದ್ದರಿಂದ ಇದು ಸರ್ಕಾರಿ ಆಸ್ಪತ್ರೆ ಅಲ್ಲ' ಎನ್ನುವುದು ಆಸ್ಪತ್ರೆ ಭದ್ರತಾ ಸಿಬ್ಬಂದಿಯ ವಾದ.

ಆಸ್ಪತ್ರೆಯ ಸ್ಥಿತಿಗತಿಯ ವರದಿ ಮಾಡಲು ಹೋದ ವರದಿಗಾರರನ್ನು ಪಾರ್ಕಿಂಗ್ ಬಳಿಯೇ ತಡೆದ ಭದ್ರತಾ ಸಿಬ್ಬಂದಿ ಹೇಳಿದ ಮಾತಿದು. 'ಅನುಮತಿ ಇಲ್ಲದೆ ಆಸ್ಪತ್ರೆಯ ಆವರಣದ ಒಳಗೆ ಬರುವ ಹಾಗಿಲ್ಲ; ಯಾರನ್ನೂ ಮಾತಾಡಿಸುವಂತಿಲ್ಲ' ಎಂದರು.

'ವೈದ್ಯರ ಕೊರತೆ ಸಮಸ್ಯೆ ಇದೆ'

'ಆಸ್ಪತ್ರೆಗೆ ದಿನದಲ್ಲಿ ಸುಮಾರು 2 ಸಾವಿರ ಹೊರರೋಗಿಗಳು ಬರುತ್ತಾರೆ. ಈ ಸಂಖ್ಯೆಗೆ ಹೋಲಿಸಿದರೆ ವೈದ್ಯರ ಸಂಖ್ಯೆ ಕಡಿಮೆ ಇರುವುದು ನಿಜ. ಮೆಡಿಸಿನ್ ವಿಭಾಗದಲ್ಲಿ ಸಮಸ್ಯೆ ಇದೆ. ಹಲವರು ವರ್ಗಾವಣೆಗೊಂಡಿದ್ದಾರೆ. ಆದರೆ, ಆ ಜಾಗಕ್ಕೆ ಭರ್ತಿ ಆಗಿಲ್ಲ. ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ. ನೇಮಕಾತಿಯಾದರೆ ಆಸ್ಪತ್ರೆಯಲ್ಲಿ ಕಾಯುವ ಸಮಸ್ಯೆ ಬಗೆಹರಿಯುತ್ತದೆ' ಎಂದು ಆಸ್ಪತ್ರೆಯ ಹಿರಿಯ ವೈದ್ಯಾಧಿಕಾರಿಯಬ್ಬರು ಮಾಹಿತಿ ನೀಡಿದರು.

'ಆಸ್ಪತ್ರೆಯಲ್ಲಿ ಆನ್‌ಲೈನ್‌ನಲ್ಲಿ ನಿಭಾಯಿಸುವ ಕೆಲಸಗಳು ಬಹಳಷ್ಟಿವೆ. ಸರ್ವರ್ ಸಮಸ್ಯೆ ಇದೆ. ಇದರಿಂದಾಗಿಯೂ ರೋಗಿಗಳಿಗೆ ತೊಂದರೆ ಆಗುತ್ತಿರಬಹುದು. ಅಂತರ್ಜಾಲ ವ್ಯವಸ್ಥೆಯನ್ನು ಉನ್ನತೀಕರಿಸಬೇಕೆಂದು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಸದ್ಯದಲ್ಲಿ ಈ ಸಮಸ್ಯೆಯೂ ಬಗೆಹರಿಯಬಹುದು' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಾಹಿತಿ ನೀಡಲು ಕೇಂದ್ರದ ಅನುಮತಿ ಬೇಕು: ಡಾ.ರೇಣುಕಾ ರಾಮಯ್ಯ

'ಆಸ್ಪತ್ರೆ ಬಗ್ಗೆ ಮಾಹಿತಿ ನೀಡಬೇಕಾದರೆ ಅನುಮತಿಗಾಗಿ ಪತ್ರ ಬರೆಯಬೇಕು. ನಾವು ಅದನ್ನು ನವದೆಹಲಿಯ ಕೇಂದ್ರ ಕಚೇರಿಗೆ ಕಳುಹಿಸಬೇಕು. ಅವರು ಒಪ್ಪಿಗೆ ನೀಡಿದ ಬಳಿಕವೇ ಮಾಹಿತಿ ನೀಡಲಾಗುವುದು. ಎಷ್ಟು ಹಾಸಿಗೆ ಇದೆ, ವೈದ್ಯರು ಎಷ್ಟಿದ್ದಾರೆ ಮುಂತಾದ ಎಲ್ಲ ಮಾಹಿತಿಯನ್ನು ಕೇಂದ್ರ ಕಚೇರಿಯ ಒಪ್ಪಿಗೆ ಪಡೆದೇ ನೀಡಬೇಕು' ಎಂದು ಆಸ್ಪತ್ರೆಯ ಡೀನ್ ಡಾ.ರೇಣುಕಾ ರಾಮಯ್ಯ ಪ್ರತಿಕ್ರಿಯಿಸಿದರು.

ಸುದ್ದಿ 2 ನಿಮಿಷ

ಆಂಧ್ರಪ್ರದೇಶ: ಎಲ್ಲ 24 ಸಚಿವರಿಂದ ರಾಜೀನಾಮೆ

ಅಮರಾವತಿ (ಪಿಟಿಐ): ಆಂಧ್ರಪ್ರದೇಶ ಮುಖ್ಯಮಂತ್ರಿ ವೈ.ಎಸ್.ಜಗನ್‌ಮೋಹನ್ ರೆಡ್ಡಿ ಅವರು ಸಂಪುಟವನ್ನು ಪುನರ್‌ರಚಿಸಲು ಮುಂದಾಗಿರುವ ಬೆನ್ನಲ್ಲೆ, ಎಲ್ಲ 24 ಸಚಿವರು ತಮ್ಮ ಸ್ಥಾನಗಳಿಗೆ ಗುರುವಾರ ರಾಜೀನಾಮೆ ಸಲ್ಲಿಸಿದರು.

ಸಂಪುಟ ಸಭೆಯಲ್ಲಿ ಎಲ್ಲ ಸಚಿವರು ತಮ್ಮ ರಾಜೀನಾಮೆ ಪತ್ರಗಳನ್ನು ಮುಖ್ಯಮಂತ್ರಿ ಜಗನ್‌ಮೋಹನ್ ರೆಡ್ಡಿ ಅವರಿಗೆ ಸಲ್ಲಿಸಿದರು.

ಸಚಿವ ಸಂಪುಟವನ್ನು ಏಪ್ರಿಲ್ 11ರಂದು ಪುನರ್ ರಚಿಸಲಾಗುತ್ತಿದ್ದು, ಕೆಲ ಹೊಸ ಮುಖಗಳಿಗೆ ಸ್ಥಾನ ಕಲ್ಪಿಸಲಾಗುತ್ತದೆ ಎಂದು ಮೂಲಗಳು ಹೇಳಿವೆ.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವ ಪೆರ್ನಿ ವೆಂಕಟರಾಮಯ್ಯ, 'ಸರ್ಕಾರ ಮುನ್ನಡೆಸಲು ಅನುಕೂಲವಾಗುವ ಉದ್ದೇಶದಿಂದ ಕೆಲ ಹಿರಿಯ ಸಚಿವರಿಗೆ ಸಂಪುಟದಲ್ಲಿ ಮತ್ತೆ ಸ್ಥಾನ ನೀಡಲಾಗುತ್ತದೆ. ಇನ್ನೂ ಕೆಲವರಿಗೆ ಪಕ್ಷ ಸಂಘಟನೆ ಜವಾಬ್ದಾರಿ ನೀಡಲಾಗುತ್ತದೆ' ಎಂದು ಹೇಳಿದರು.

ಪ್ರೀತಿಸಿದ ಯುವತಿ ಖರ್ಚಿಗಾಗಿ ಕಳ್ಳತನ: ಆರೋಪಿ ಬಂಧನ

ಬೆಂಗಳೂರು: ಕೆ.ಪಿ. ಅಗ್ರಹಾರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ನವೀನ್‌ಕುಮಾರ್ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ನವೀನ್‌ಕುಮಾರ್, ಪರಿಚಯಸ್ಥರೇ ಆಗಿದ್ದ ಶಿವ ಶಂಕರಯ್ಯ ಹಾಗೂ ಚಂದ್ರಕಲಾ ದಂಪತಿ ಮನೆಯಲ್ಲಿ ಮಾರ್ಚ್ 11ರಂದು ಕಳ್ಳತನ ಮಾಡಿದ್ದರು. ಅವರನ್ನು ಬಂಧಿಸಿ, ₹ 4.90 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಜಯನಗರ ಕೆಫೆಯೊಂದರಲ್ಲಿ ನವೀನ್‌ಕುಮಾರ್ ಕೆಲಸ ಮಾಡುತ್ತಿದ್ದರು. ಕೆಲ ವರ್ಷಗಳಿಂದ ಯುವತಿಯೊಬ್ಬರನ್ನು ಪ್ರೀತಿಸುತ್ತಿದ್ದರು. ಯುವತಿ ಜೊತೆ ಸುತ್ತಾಡಲು ಹಾಗೂ ಉಡುಗೊರೆಗಳನ್ನು ಕೊಡಿಸಲು ವೇತನದ ಹಣ ಸಾಲುತ್ತಿರಲಿಲ್ಲ. ಹಣ ಖರ್ಚು ಮಾಡದಿದ್ದರೆ ಯುವತಿ ತಮ್ಮನ್ನು ಬಿಟ್ಟು ಹೋಗಬಹುದು ಎಂದುಕೊಂಡಿದ್ದ ಆರೋಪಿ, ಕಳ್ಳತನ ಮಾಡಿ ಹಣ ಹೊಂದಿಸಲು ಯೋಚಿಸಿದ್ದರು' ಎಂದೂ ತಿಳಿಸಿದರು.

ಆತ್ಮಹತ್ಯೆಗೆ ಯತ್ನಿಸಿದ್ದ ಚಂದ್ರಕಲಾ: 'ಚಿನ್ನಾಭರಣ ಕಳ್ಳತನವಾಗಿದ್ದರಿಂದ ನೊಂದಿದ್ದ ಚಂದ್ರಕಲಾ, ನಿದ್ದೆ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ಅವರನ್ನು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಲಾಗಿತ್ತು. ಅನುಮಾನದ ಮೇರೆಗೆ ನವೀನ್‌ನನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡರು' ಎಂದು ಪೊಲೀಸರು ಹೇಳಿದರು.

ಗೂಗಲ್ ಪೇ, ಫೋನ್ ಪೇನಲ್ಲಿ ಲಂಚ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ ತೆರಿಗೆ ತನಿಖಾ ಠಾಣೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿಗಳು ಮತ್ತು ಸಿಬ್ಬಂದಿ ಗೂಗಲ್ ಪೇ ಮತ್ತು ಫೋನ್ ಪೇ ತಂತ್ರಾಂಶಗಳ ಮೂಲಕ ಲಂಚದ ಹಣವನ್ನು ವರ್ಗಾವಣೆ ಮಾಡಿಸಿಕೊಂಡಿರುವುದನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಪತ್ತೆಮಾಡಿದೆ.

ಸರಕು ಸಾಗಣೆ ವಾಹನಗಳನ್ನು ತಡೆಹಿಡಿದು ಲಂಚಕ್ಕೆ ಬೇಡಿಕೆ ಇಡುತ್ತಿದ್ದ ಆರೋಪದ ಮೇಲೆ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಎಸಿಬಿ, ಬೆಂಗಳೂರಿನ ವಾಣಿಜ್ಯ ತೆರಿಗೆ ಅಧಿಕಾರಿ ಸೈಯದ್ ಮೊಹಮ್ಮದ್ ಮನೆ, ಅವರ ಕಾರು ಚಾಲಕ ಪಿ. ಕೃಷ್ಣಮೂರ್ತಿ ಮನೆ ಮತ್ತು ಮೈಸೂರಿನ ವಾಣಿಜ್ಯ ತೆರಿಗೆ ನಿರೀಕ್ಷಕ ಸಿ.ಎಂ. ಯಶವಂತ್ ಮನೆಗಳಲ್ಲಿ ಶೋಧ ನಡೆಸಿದೆ.

'ಈ ಮೂವರೂ ಗೂಗಲ್ ಪೇ ಮತ್ತು ಫೋನ್ ಪೇ ಮೂಲಕ ಸಾರ್ವಜನಿಕರಿಂದ ಹಣ ಪಡೆದಿರುವುದು ಕಂಡುಬಂದಿದೆ. ಹೆಚ್ಚಿನ ತನಿಖೆಗಾಗಿ ಮೂವರ ಮೊಬೈಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ' ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ದೇವನಹಳ್ಳಿ ಸೇರಿದಂತೆ ವಿವಿಧೆಡೆ ವಾಣಿಜ್ಯ ತೆರಿಗೆ ತನಿಖಾ ಠಾಣೆಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ತಪಾಸಣೆ ನೆಪದಲ್ಲಿ ದಿನಗಟ್ಟಲೆ ವಾಹನಗಳನ್ನು ಹಿಡಿದಿಟ್ಟುಕೊಳ್ಳುತ್ತಿದ್ದರು. ಸಕಾಲಕ್ಕೆ ಸರಕು ತಲುಪಿಸಲಾಗದೆ ನಷ್ಟ ಆಗುತ್ತಿತ್ತು. ಅದನ್ನು ತಪ್ಪಿಸಿಕೊಳ್ಳಲು ಲಂಚಕ್ಕೆ ಬೇಡಿಕೆ ಇಡುತ್ತಿದ್ದರು. ಈ ಕುರಿತು ಸರಕು ಸಾಗಣೆ ವಾಹನಗಳ ಮಾಲೀಕರು ನೀಡಿದ್ದ ದೂರನ್ನು ಆಧರಿಸಿ ವಾಣಿಜ್ಯ ತೆರಿಗೆ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಸೈಯದ್ ಮನೆಯಲ್ಲಿ ₹ 3.35 ಲಕ್ಷ ನಗದು, 384 ಗ್ರಾಂ. ಚಿನ್ನ, ಒಂದು ಕಾರು ಮತ್ತು ಒಂದು ದ್ವಿಚಕ್ರ ವಾಹನ ಪತ್ತೆಯಾಗಿವೆ. ಯಶವಂತ್ ಮನೆಯಲ್ಲಿ 50 ಗ್ರಾಂ. ಚಿನ್ನ, 1 ಕೆ.ಜಿ. ಬೆಳ್ಳಿ ಹಾಗೂ ಸ್ಥಿರಾಸ್ತಿ ದಾಖಲೆಗಳು ದೊರಕಿವೆ. ಕೃಷ್ಣಮೂರ್ತಿ ಮನೆಯಲ್ಲಿ ₹ 2,100 ನಗದು ಪತ್ತೆಯಾಗಿದೆ ಎಂದು ತನಿಖಾ ಸಂಸ್ಥೆ ಮಾಹಿತಿ ನೀಡಿದೆ.

ಗ್ರೀನ್‌ಕಾರ್ಡ್: ದೇಶವಾರು ಮಿತಿ ರದ್ದು ಮಸೂದೆಗೆ ಅಸ್ತು

ವಾಷಿಂಗ್ಟನ್ (ಪಿಟಿಐ): ಉದ್ಯೋಗ ಆಧಾರಿತ ವಲಸೆ ವೀಸಾದ ಮೇಲೆ ಅಮೆರಿಕಕ್ಕೆ ಬರುವವರಿಗೆ ನೀಡುವ ಗ್ರೀನ್‌ಕಾರ್ಡ್‌ಗೆ ಸಂಬಂಧಿಸಿದ ದೇಶವಾರು ಮಿತಿಯನ್ನು ತೆಗೆದುಹಾಕುವ ಮಸೂದೆಗೆ ಸಂಸದೀಯ ಸಮಿತಿ ಅಂಗೀಕಾರ ನೀಡಿದೆ.

ಕುಟುಂಬ ಆಧಾರಿತ ವಲಸೆ ವೀಸಾ ಹೊಂದಿದವರಿಗೆ ನೀಡಲಾಗುವ ಗ್ರೀನ್‌ಕಾರ್ಡ್‌ಗೆ ಸಂಬಂಧಿಸಿದ ದೇಶವಾರು ಮಿತಿಯನ್ನು ಶೇ 7ರಿಂದ ಶೇ 15ಕ್ಕೆ ಹೆಚ್ಚಿಸಲು ಸಹ ಈ ಸಮಿತಿ ಅಂಗೀಕಾರ ನೀಡಿದೆ.

ಇದು ಕಾಯ್ದೆ ರೂಪದಲ್ಲಿ ಜಾರಿಗೊಂಡರೆ, ಉದ್ಯೋಗ ಅರಸಿ ಅಮೆರಿಕ್ಕೆ ಬರುವ ಭಾರತ ಹಾಗೂ ಚೀನಾದವರಿಗೆ ಹೆಚ್ಚು ಅನುಕೂಲವಾಗಲಿದೆ ಎಂದು ಮೂಲಗಳು ಹೇಳಿವೆ.

ಬಿಎಂಸಿಆರ್‌ಐ: 'ಹೆಚ್ಚುವರಿ ಸಹಾಯಕರಿಂದ ಸಮಸ್ಯೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅಡಿ (ಬಿಎಂಸಿಆರ್‌ಐ) ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆಗಳಿಗೆ ದಿನಕ್ಕೆ 2,500ಕ್ಕೂ ಅಧಿಕ ಹೊರ ರೋಗಿಗಳು ಬರುತ್ತಾರೆ. ಅವರು ತಮ್ಮ ಸಹಾಯಕ್ಕೆ ಒಬ್ಬರನ್ನು ಮಾತ್ರ ಕರೆತಂದರೆ ಆಸ್ಪತ್ರೆಗಳ ಆವರಣದಲ್ಲಿ ಸಂಬಂಧಿಗಳು ಕಾಯುವುದು ತಪ್ಪಲಿದೆ' ಎಂದು ಬಿಎಂಸಿಆರ್‌ಐ ಡೀನ್ ಡಾ.ಕೆ. ರವಿ ತಿಳಿಸಿದರು.

ಬಿಎಂಸಿಆರ್‌ಐ ಅಡಿ ವಿಕ್ಟೋರಿಯಾ, ವಾಣಿವಿಲಾಸ, ಮಿಂಟೊ, ಟ್ರಾಮಾ ಕೇರ್ ಕೇಂದ್ರ, ನೆಫ್ರೊ–ಯೂರಾಲಜಿ ಸಂಸ್ಥೆ, ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿಎಂಎಸ್‌ಎಸ್‌ವೈ) ಆಸ್ಪತ್ರೆ ಹಾಗೂ ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೊಎಂಟ್ರಾಲಜಿ ಸೈನ್ಸಸ್ ಆ್ಯಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿವೆ. ಆಸ್ಪತ್ರೆಗಳ ಆವರಣದಲ್ಲಿ ರೋಗಿಗಳು ಹಾಗೂ ಅವರ ಸಂಬಂಧಿಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ 'ವಿಕ್ಟೋರಿಯಾ ಸಂಕೀರ್ಣ: ರಸ್ತೆಯಲ್ಲಿಯೇ ಆಕ್ರಂದನ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಗುರುವಾರ ವಿಸ್ತೃತವಾದ ವರದಿ ಪ್ರಕಟವಾಗಿತ್ತು.

ಈ ಬಗ್ಗೆ ಪ್ರತಿಕ್ರಿಯಿಸಿರುವ ಡಾ.ಕೆ. ರವಿ, 'ವಿಕ್ಟೋರಿಯಾ, ಪಿಎಂಎಸ್‌ಎಸ್‌ವೈ ಸೇರಿದಂತೆ ವಿವಿಧ ಆಸ್ಪತ್ರೆಗಳಲ್ಲಿ ಗುಣಮಟ್ಟದ ಚಿಕಿತ್ಸೆ ಒದಗಿಸಲಾಗುತ್ತಿದೆ. ಹೀಗಾಗಿ, ಪಶ್ಚಿಮ ಬಂಗಾಳ ಸೇರಿದಂತೆ ವಿವಿಧ ರಾಜ್ಯಗಳಿಂದಲೂ ರೋಗಿಗಳು ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಚಿಕಿತ್ಸೆಗೆ ಬರುತ್ತಿದ್ದಾರೆ. ರೋಗಿಗಳ ಜತೆಗೆ ಎರಡು ಮೂರು ಮಂದಿ ಆಸ್ಪತ್ರೆಗೆ ಹೋದಲ್ಲಿ ಜನದಟ್ಟಣೆ ಉಂಟಾಗಿ, ಚಿಕಿತ್ಸೆಗೆ ಸಮಸ್ಯೆ ಆಗುತ್ತದೆ. ಆದ್ದರಿಂದ ಎಲ್ಲರನ್ನೂ ಒಳಗೊಡೆ ಬಿಟ್ಟುಕೊಳ್ಳಲು ಸಾಧ್ಯವಿಲ್ಲ. ಒಬ್ಬರಿಗೆ ಮಾತ್ರ ಅವಕಾಶ ನೀಡಲಾಗುತ್ತದೆ. ಡಯಾಲಿಸಿಸ್ ಸೇರಿದಂತೆ ವಿವಿಧ ಚಿಕಿತ್ಸೆಗೆ ಬರುವವರಿಗೆ ವಿಶ್ರಾಂತಿ ಧಾಮದಲ್ಲಿ ಇರಲು ಅವಕಾಶ ನೀಡಲಾಗುತ್ತಿದೆ' ಎಂದು ಹೇಳಿದರು.

'ಸಾವಿರ ಹಾಸಿಗೆಗಳ 11 ಮಹಡಿಗಳ ಕಟ್ಟಡ ನಿರ್ಮಾಣ ಕಾಮಗಾರಿ ಕೋವಿಡ್‌ನಿಂದಾಗಿ ಸ್ವಲ್ಪ ವಿಳಂಬವಾಯಿತು. ಆದಷ್ಟು ಬೇಗ ಕಾಮಗಾರಿ ಪೂರ್ಣಗೊಳ್ಳಲಿದೆ' ಎಂದು ತಿಳಿಸಿದರು.

ರೈಲಿಗೆ ಸಿಲುಕಿ ರೌಡಿಶೀಟರ್ ಸಾವು

ರಾಮನಗರ: ಇಲ್ಲಿನ ಬಸವನಪುರ ಗೇಟ್ ಬಳಿ ಗುರುವಾರ ಸಂಜೆ ರೈಲು ಡಿಕ್ಕಿಯಾಗಿ ಬೆಂಗಳೂರಿನ ಸುಂಕದಕಟ್ಟೆ ನಿವಾಸಿ ದಿಲೀಪ್ (28) ಮೃತಪಟ್ಟರು.

ಮೃತ ದಿಲೀಪ್ ಮಾದನಾಯನಹಳ್ಳಿ ಠಾಣೆ ವ್ಯಾಪ್ತಿಯ ರೌಡಿಶೀಟರ್ ಎನ್ನಲಾಗಿದೆ. ಅವರು ತಮ್ಮ ಸ್ನೇಹಿತರೊಂದಿಗೆ ಎರಡು ಕಾರಿನಲ್ಲಿ ಬೆಂಗಳೂರಿನಿಂದ ಮೈಸೂರು ಕಡೆಗೆ ತೆರಳುತ್ತಿದ್ದ ವೇಳೆ ಪೊಲೀಸರು ವಾಹನ ತಪಾಸಣೆಗೆ ಅಡ್ಡಗಟ್ಟಿದ್ದರು. ಈ ವೇಳೆ ಯುವಕರು ಕಾರು ನಿಲ್ಲಿಸದೇ ಅಲ್ಲಿಂದ ಪರಾರಿ ಆಗಿದ್ದರು. ಹೈವೆ ಪೆಟ್ರೋಲಿಂಗ್ ವಾಹನ ಅವರನ್ನು ಬೆನ್ನು ಹತ್ತಿ ಕಾರು ಹಾಗೂ ಮೂವರನ್ನು ವಶಕ್ಕೆ ಪಡೆದಿತ್ತು. ಉಳಿದ ಇಬ್ಬರು ಅಲ್ಲಿಂದ ಪರಾಗಿ ಆಗಿದ್ದರು. ಹೀಗೆ ಪರಾರಿ ಆಗಿದ್ದವರು ಮತ್ತೆ ಹೆದ್ದಾರಿಗೆ ವಾಪಸ್ ಆಗುವ ವೇಳೆ ಕುಡಿದ ಮತ್ತಿನಲ್ಲಿ ರೈಲು ಹಳಿ ದಾಟಲು ಮುಂದಾಗಿದ್ದು, ಈ ಸಂದರ್ಭ ರೈಲು ಡಿಕ್ಕಿಯಾಗಿ ದಿಲೀಪ್ ಮೃತಪಟ್ಟರು ಎಂದು ಪೊಲೀಸರು ಮಾಹಿತಿ ನೀಡಿದರು. ಆದರೆ ಪೊಲೀಸರು ಬೆನ್ನು ಹತ್ತಿದ್ದ ವೇಳೆಯೇ ದಿಲೀಪ್ ಪರಾರಿ ಆಗಲು ಯತ್ನಿಸಿ ರೈಲಿಗೆ ಸಿಲುಕಿ ಮೃತಪಟ್ಟರು ಎನ್ನಲಾಗಿದೆ.

ರಾಮನಗರ ಎಸ್ಪಿ ಸಂತೋಷ್ ಬಾಬು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಸಿಸಿಬಿ ಪೊಲೀಸರ ಕಾರ್ಯಾಚರಣೆ • ಏಳು ಆರೋಪಿಗಳ ಬಂಧನ
ಕೆಲಸದ ಆಮಿಷ: 95 ಯುವತಿಯರ ಕಳ್ಳ ಸಾಗಣೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ದುಬೈನಲ್ಲಿ ಕೆಲಸ ಕೊಡಿಸುವ ಆಮಿಷವೊಡ್ಡಿ ಯುವತಿಯರನ್ನು ಕಳ್ಳ ಸಾಗಣೆ ಮಾಡುತ್ತಿದ್ದ ಜಾಲವನ್ನು ಸಿಸಿಬಿ ಪೊಲೀಸರು ಭೇದಿಸಿದ್ದು, ಜಾಲದ ರೂವಾರಿ ಸೇರಿ ಏಳು ಆರೋಪಿಗಳನ್ನು ಬಂಧಿಸಿದ್ದಾರೆ.

'ಕೊಪ್ಪಳ ತಾಲ್ಲೂಕಿನ ಅಳವಾಡಿ ಕಂಪಲಿ ಗ್ರಾಮದ ಬಸವರಾಜು ಶಂಕರಪ್ಪ ಕಳಸದ (47), ಮೈಸೂರಿನ ನಜರಬಾದ್‌ನ ಆದರ್ಶ್ ಅಲಿಯಾಸ್ ಆದಿ (27), ಬೆಂಗಳೂರು ಜೆ.ಪಿ.ನಗರದ ಆರ್.ಚಂದು (20), ತಮಿಳುನಾಡಿನ ರಾಜೇಂದ್ರ ನಾಚಿಮುತ್ತು (37), ಮಾರಿಯಪ್ಪನ್ (44), ಟಿ. ಅಶೋಕ್ (29) ಹಾಗೂ ಎಸ್. ರಾಜೀವ್‌ಗಾಂಧಿ (35) ಬಂಧಿತರು. ಇವರಿಂದ ₹ 1.06 ಲಕ್ಷ ನಗದು, 7 ಮೊಬೈಲ್‌ಗಳು ಹಾಗೂ ಲ್ಯಾಪ್‌ಟಾಪ್ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಬಹುತೇಕ ಆರೋಪಿಗಳು, ಸಿನಿಮಾಗಳಲ್ಲಿ ನಟಿಸಲು ಅಗತ್ಯವಿರುವ ಕಲಾವಿದರನ್ನು ಪೂರೈಸುವ ಏಜೆಂಟರು. ನಟನೆ ಅವಕಾಶ ಕೇಳಿಕೊಂಡು ಬರುವ ಯುವತಿಯರನ್ನು ದುಬೈಗೆ ಕಳ್ಳ ಸಾಗಣೆ ಮಾಡುತ್ತಿದ್ದರು. ದುಡ್ಡಿನ ಆಮಿಷವೊಡ್ಡಿ ಡ್ಯಾನ್ಸ್ ಬಾರ್‌ಗಳಲ್ಲಿ ನೃತ್ಯಗಾರ್ತಿಯಾಗಿ ಕೆಲಸ ಮಾಡಿಸುತ್ತಿದ್ದರು. ಈ ಬಗ್ಗೆ ಯುವತಿಯೊಬ್ಬರು ಹೆಣ್ಣೂರು ಠಾಣೆಗೆ ದೂರು ನೀಡಿದ್ದರು. ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು' ಎಂದೂ ತಿಳಿಸಿದರು.

2020ರಲ್ಲಿ ಜೈಲು ಸೇರಿದ್ದ ಆರೋಪಿ: 'ಜಾಲದ ಪ್ರಮುಖ ಆರೋಪಿ ಬಸವರಾಜು ಕಳಸದ, ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದ. ಯುವತಿಯರನ್ನು ಕಳ್ಳ ಸಾಗಣೆ ಮಾಡಿ, ಅದರಿಂದ ಕಮಿಷನ್ ಪಡೆಯುತ್ತಿದ್ದ. ಆತನ ವಿರುದ್ಧ 2020ರಲ್ಲೇ ನಂದಿನಿ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು' ಎಂದು ಪೊಲೀಸರು ಹೇಳಿದರು. 'ಜೈಲಿಗೆ ಹೋಗಿದ್ದ ಆರೋಪಿ, ಜಾಮೀನು ಮೇಲೆ ಹೊರಬಂದಿದ್ದ. ಪುನಃ ತಂಡ ಕಟ್ಟಿಕೊಂಡು ಕೃತ್ಯ ಮುಂದುವರಿಸಿದ್ದ' ಎಂದರು.

17 ಮಹಿಳೆಯರ ರಕ್ಷಣೆ: 'ಆರೋಪಿಗಳು ಇದುವರೆಗೂ 95 ಯುವತಿಯರನ್ನು ಭಾರತದಿಂದ ದುಬೈಗೆ ಕಳ್ಳ ಸಾಗಣೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ. ಕೆಲವರು ವಾಪಸು ಬಂದಿದ್ದಾರೆ. ಬಹುತೇಕರು ದುಬೈನಲ್ಲಿರುವ ಮಾಹಿತಿ ಇದೆ. ಸದ್ಯ 17 ಯುವತಿಯರನ್ನು ರಕ್ಷಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ತಿಳಿಸಿದರು.

'ದುಬೈನಲ್ಲಿ ಕೆಲಸ ಮಾಡಿದರೆ ಲಕ್ಷಾಂತರ ರೂಪಾಯಿ ಸಂಪಾದಿಸಬಹುದು' ಎಂಬುದಾಗಿ ಆರೋಪಿಗಳು ಯುವತಿಯರಿಗೆ ಹೇಳುತ್ತಿದ್ದರು. ದುಬೈಗೆ ಹೋಗಲು ಒಪ್ಪುತ್ತಿದ್ದವರಿಗೆ ₹ 50 ಸಾವಿರದಿಂದ ₹ 1 ಲಕ್ಷದವರೆಗೂ ಹಣ ನೀಡುತ್ತಿದ್ದರು. ಪಾಸ್‌ಪೋರ್ಟ್ ಮತ್ತು ವೀಸಾ ಸಹ ಮಾಡಿಸಿಕೊಡುತ್ತಿದ್ದರು' ಎಂದೂ ತಿಳಿಸಿದರು.

'ದುಬೈಗೆ ಹೋದ ನಂತರ, ಯುವತಿಯರು ತೊಂದರೆ ಅನುಭವಿಸುತ್ತಿದ್ದರು. ಡ್ಯಾನ್ಸ್ ಬಾರ್‌ನಲ್ಲಿ ನೃತ್ಯ, ಗ್ರಾಹಕರ ಜೊತೆ ಖಾಸಗಿ ಕ್ಷಣಗಳನ್ನು ಕಳೆಯುವಂತೆ ಮಾಲೀಕರು ಪೀಡಿಸುತ್ತಿದ್ದರು' ಎಂದೂ ಹೇಳಿದರು.

ನ್ಯಾಯಮೂರ್ತಿಯಾಗಿ ಕಪ್ಪುವರ್ಣೀಯ ಮಹಿಳೆ ನೇಮಕ

ವಾಷಿಂಗ್ಟನ್ (ರಾಯಿಟರ್ಸ್): ಅಮೆರಿಕದ ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ಕೆತಂಜಿ ಬ್ರೌನ್ ಜಾಕ್ಸನ್ ಅವರ ನೇಮಕವನ್ನು ಸೆನೆಟ್ ಗುರುವಾರ ದೃಢೀಕರಿಸಿದೆ.

ಕೆತಂಜಿ

ಇವರು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿರುವ ಮೊದಲ ಕಪ್ಪುವರ್ಣೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಕೆತಂಜಿ ಅವರನ್ನು ನ್ಯಾಯಮೂರ್ತಿ ಹುದ್ದೆಗೆ ಅಧ್ಯಕ್ಷ ಜೋ ಬೈಡನ್ ನಾಮನಿರ್ದೇಶನ ಮಾಡಿದ್ದರು. ಸೆನೆಟ್ ಸದಸ್ಯರು ಈ ನಾಮನಿರ್ದೇಶನದ ಪರ ಮತ ಚಲಾಯಿಸುವ ಮೂಲಕ ಕೆತಂಜಿ ಅವರ ನೇಮಕಾತಿಯನ್ನು ದೃಢೀಕರಿಸಿದರು.

'ಶಿವಕುಮಾರ ಶ್ರೀಗಳ ಸಾಮಾಜಿಕ ಸೇವೆ ಸ್ಮರಣೀಯ'

ಬೆಂಗಳೂರು: 'ಮಠ ಮಾನ್ಯಗಳು ಯಾವ ರೀತಿ ಸಾಮಾಜಿಕ ಚಟುವಟಿಕೆಗಳನ್ನು ಕೈಗೊಳ್ಳಬೇಕು ಎನ್ನುವುದನ್ನು ದೇಶಕ್ಕೆ ತಿಳಿಸಿಕೊಟ್ಟ ಶ್ರೇಯಸ್ಸು ಸಿದ್ಧಗಂಗಾದ ಡಾ.ಶಿವಕುಮಾರ ಸ್ವಾಮೀಜಿಗೆ ಸಲ್ಲುತ್ತದೆ' ಎಂದು ಸಚಿವ ಕೆ.ಗೋಪಾಲಯ್ಯ ಹೇಳಿದರು.

ಮಹಾಲಕ್ಷ್ಮಿ ಲೇ ಔಟ್ ವಿಧಾನಸಭಾ ಕ್ಷೇತ್ರದ ವೀರಶೈವ ಲಿಂಗಾಯತ ಸಂಘದಿಂದ ಗುರುವಾರ ಹಮ್ಮಿಕೊಂಡಿದ್ದ ಶಿವಕುಮಾರ ಸ್ವಾಮೀಜಿ ಅವರ 115ನೇ ಜನ್ಮ ದಿನೋತ್ಸವ ಕಾರ್ಯಕ್ರಮದಲ್ಲಿ ಶ್ರೀಗಳ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಮಹಾಲಕ್ಷ್ಮಿ ಲೇ ಔಟ್ ವಿಧಾನಸಭಾ ಕ್ಷೇತ್ರದಲ್ಲಿ ವಿಶ್ವಗುರು ಬಸವಣ್ಣ, ಬಾಲಗಂಗಾಧರನಾಥ ಸ್ವಾಮೀಜಿ, ಶಿವಕುಮಾರ ಶ್ರೀ ಗಳ ಸ್ಮರಣಾರ್ಥ ನಿರ್ಮಾಣ ಮಾಡಿರುವ ಪಾರ್ಕ್ ಮತ್ತು ಕಂಚಿನ ಪ್ರತಿಮೆಗಳನ್ನು ಶೀಘ್ರ ಉದ್ಘಾಟಿಸಲಾಗುವುದು ಎಂದರು.

ಕಂಚುಗಲ್ ಬಂಡೆಮಠದ ಬಸವಲಿಂಗ ಸ್ವಾಮೀಜಿ, ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ, ಬಿಜೆಪಿ ಮುಖಂಡ ಎಸ್. ಹರೀಶ್, ಶ್ರೀನಿವಾಸ್, ವೀರಶೈವ ಲಿಂಗಾಯತ ಸಂಘದ ಅಧ್ಯಕ್ಷ ಅವಿನ್ ಆರಾಧ್ಯ, ಪಿನಾಕ ಪಾಣಿ ಇದ್ದರು.

ನಗರದಲ್ಲಿ ವೀರಶೈವ ಲಿಂಗಾಯತ ಸಂಘ ಗುರುವಾರ ಹಮ್ಮಿಕೊಂಡಿದ್ದ ಶಿವಕುಮಾರ ಸ್ವಾಮೀಜಿ ಅವರ 115ನೇ ಜನ್ಮ ದಿನೋತ್ಸವ ಕಾರ್ಯಕ್ರಮದಲ್ಲಿ ಕಂಚುಗಲ್ ಬಂಡೆಮಠದ ಬಸವಲಿಂಗ ಸ್ವಾಮೀಜಿ,ಸಚಿವ ಕೆ.ಗೋಪಾಲಯ್ಯ, ಬಿಬಿಎಂಪಿ ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ, ಮಾಜಿ ಉಪ ಮಹಾಪೌರ ಎಸ್. ಹರೀಶ್ ಪಾಲ್ಗೊಂಡಿದ್ದರು

ನಿಧನ ವಾರ್ತೆ

ಅರುಣ್ ರಾಜ್

ಪೀಣ್ಯ ದಾಸರಹಳ್ಳಿ: ದಾಸರಹಳ್ಳಿಯ ನಿವಾಸಿ ಅರುಣ್ ರಾಜ್ (42) ಅನಾರೋಗ್ಯದಿಂದ ಗುರುವಾರ ನಿಧನರಾದರು.

ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ.

ಶಿವಮ್ಮ

ಬೆಂಗಳೂರು: ಪಟ್ಟಣಗೆರೆ ಮಾಜಿ ಚೇರ್ಮನ್, ನಾಯಂಡಹಳ್ಳಿಯ ಬಿ. ರೇವಣ್ಣ ಅವರ ಪತ್ನಿ ಶಿವಮ್ಮ (88) ಅವರು ಗುರುವಾರ ಬೆಳಿಗ್ಗೆ ನಿಧನರಾದರು.

ಅವರಿಗೆ ಐವರು ಪುತ್ರರು, ನಾಲ್ವರು ಪುತ್ರಿಯರು ಇದ್ದಾರೆ. ಗುರುವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು.

ಶಾಸಕರ ನೋಂದಣಿ ಫಲಕದಲ್ಲಿ ಬರಹ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಂತಾಮಣಿ ವಿಧಾನಸಭಾ ಕ್ಷೇತ್ರದ ಶಾಸಕ ಎಂ. ಕೃಷ್ಣಾರೆಡ್ಡಿ ಅವರ ಕಾರಿನ ನೋಂದಣಿ ಫಲಕದ ಮೇಲೆ ಮೋಟಾರು ವಾಹನ ನಿಯಮಗಳನ್ನು ಉಲ್ಲಂಘಿಸಿ, 'ಶಾಸಕರು, ಚಿಂತಾಮಣಿ ವಿಧಾನಸಭಾ ಕ್ಷೇತ್ರ' ಎಂದು ಬರೆಸಿರುವುದಕ್ಕೆ ಸಾರಿಗೆ ಇಲಾಖೆ ಅಧಿಕಾರಿಗಳು ಗುರುವಾರ ನೋಟಿಸ್ ಜಾರಿ ಮಾಡಿದ್ದಾರೆ.

ಗುರುವಾರ ಮಧ್ಯಾಹ್ನ ವಿಧಾನಸೌಧದ ಸಮೀಪ ಬೆಂಗಳೂರು ದಕ್ಷಿಣ ಪ್ರಾದೇಶಿಕ ಸಾರಿಗೆ ಕಚೇರಿಯ ಅಧಿಕಾರಿಗಳು ವಾಹನ ತಪಾಸಣೆ ನಡೆಸುತ್ತಿದ್ದರು. ಆಗ ಕೃಷ್ಣಾ ರೆಡ್ಡಿ ಅವರ ಕೆಎ–53 ಎಂಎಫ್–4569 ಸಂಖ್ಯೆಯ ಇನ್ನೋವಾ ಕ್ರಿಸ್ಟಾ ಕಾರು ಆ ಮಾರ್ಗವಾಗಿ ಬಂತು. ಕಾರಿನಲ್ಲಿ ಚಾಲಕ ಮಾತ್ರ ಇದ್ದರು. ತಪಾಸಣೆಗೆ ನಿಲ್ಲಿಸದೇ ವಿಧಾನಸೌಧದೊಳಕ್ಕೆ ಬಂದರು. ಬೆನ್ನಟ್ಟಿ ವಿಧಾನಸೌಧದ ಒಳಗೆ ಬಂದ ಸಾರಿಗೆ ಇಲಾಖೆ ಅಧಿಕಾರಿಗಳು, ಕಾರನ್ನು ತಡೆದು ನಿಲ್ಲಿಸಿದರು. ವಾಹನಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳು ಮತ್ತು ಚಾಲನಾ ಪರವಾನಗಿಯನ್ನು ಚಾಲಕ ಹಾಜರುಪಡಿಸಿದರು. ಕಾರಿನ ಮುಂದಿನ ಮತ್ತು ಹಿಂದಿನ ನೋಂದಣಿ ಫಲಕಗಳ ಮೇಲೆ 'ಶಾಸಕರು ಚಿಂತಾಮಣಿ ವಿಧಾನ ಸಭಾ ಕ್ಷೇತ್ರ' ಎಂದು ಬರೆದಿರುವುದು ಮೋಟಾರು ವಾಹನ ಕಾಯ್ದೆಯ ಉಲ್ಲಂಘನೆಯಾಗಿದೆ ಎಂದು ಅಧಿಕಾರಿಗಳು ನೋಟಿಸ್ ನೀಡಿದರು.

ಈ ಕುರಿತು ಪ್ರತಿಕ್ರಿಯಿಸಿದ ಕೃಷ್ಣಾ ರೆಡ್ಡಿ, 'ಕಾರು ನನ್ನದೇ. ಮಗಳು ವಕೀಲರಾಗಿದ್ದು, ಅವರನ್ನು ಹೈಕೋರ್ಟ್ ಬಿಟ್ಟು ಚಾಲಕ ಶಾಸಕರ ಭವನಕ್ಕೆ ಬರುತ್ತಿದ್ದರು. ಯಾವ ಕಾರಣಕ್ಕಾಗಿ ನೋಟಿಸ್ ನೀಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಪರಿಶೀಲಿಸುತ್ತೇನೆ' ಎಂದರು.

ಸಂಚು ರೂಪಿಸಿದ್ದ ಆಟೊ ಚಾಲಕ • ಬೆರಳಚ್ಚಿನಿಂದ ಸಿಕ್ಕಿಬಿದ್ದ ಆರೋಪಿಗಳು
ಮೂಟೆಯಲ್ಲಿ ₹ 2 ಕೋಟಿ: ಹಣ ಹಂಚಿಕೊಂಡು ಪ್ರವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಮಾರಸ್ವಾಮಿ ಲೇಔಟ್ ಠಾಣೆ ವ್ಯಾಪ್ತಿಯ ಉದ್ಯಮಿಯೊಬ್ಬರ ಮನೆಯೊಂದಕ್ಕೆ ನುಗ್ಗಿ ನಗದು ಹಾಗೂ ಚಿನ್ನಾಭರಣ ಕಳವು ಮಾಡಿದ್ದ ಆರೋಪದಡಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

'ಸುಬ್ರಹ್ಮಣ್ಯಪುರದ ಸುನೀಲ್ ಕುಮಾರ್ ಅಲಿಯಾಸ್ ತೊರೆ (35) ಮತ್ತು ಕೆಬ್ಬೆಹಳ್ಳಿಯ ದಿಲೀಪ್ (23) ಬಂಧಿತರು. ಇವರಿಬ್ಬರು ಆಟೊ ಚಾಲಕರು. ಇವರಿಂದ ₹ 1.88 ಕೋಟಿ ನಗದು ಹಾಗೂ ₹ 12 ಲಕ್ಷ ಮೌಲ್ಯದ 190 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ರಿಯಲ್ ಎಸ್ಟೇಟ್ ಉದ್ಯಮಿ ಸಂದೀಪ್ ಲಾಲ್ ಮನೆಯಲ್ಲಿ ಕಳ್ಳತನ ಆಗಿತ್ತು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು' ಎಂದೂ ತಿಳಿಸಿದರು.

ದೂರುದಾರರ ಮೇಲೆ ಅನುಮಾನ

'ಮನೆಯಲ್ಲಿ ಕಳ್ಳತನ ನಡೆದ ಬಗ್ಗೆ ದೂರು ನೀಡಿದ್ದ ಸಂದೀಪ್ ಲಾಲ್, ಹಣ ಹಾಗೂ ಚಿನ್ನಾಭರಣ ಮೌಲ್ಯ ತಿಳಿಸಿರಲಿಲ್ಲ. ಇದೀಗ ₹ 2 ಕೋಟಿ ಕಳ್ಳತನ ಆಗಿರುವುದು ಗೊತ್ತಾಗಿದೆ. ಮೊತ್ತದ ಮೂಲ ಯಾವುದು ? ಎಂಬ ಬಗ್ಗೆ ದೂರುದಾರರು ಮಾಹಿತಿ ನೀಡಿಲ್ಲ. ಹೀಗಾಗಿ, ಜಾರಿ ನಿರ್ದೇಶನಾಲಯ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ' ಎಂದು ಪೊಲೀಸರು ವಿವರಿಸಿದರು.

ಜೈಲಿನಲ್ಲಿ ಸ್ನೇಹ: 'ಆರೋಪಿ ಸುನೀಲ್ ಕುಮಾರ್, ಅಪರಾಧ ಹಿನ್ನೆಲೆಯುಳ್ಳವ. ಡ್ರಗ್ಸ್ ಮಾರಾಟ, ಕಳ್ಳತನ ಹಾಗೂ ಸುಲಿಗೆ ಪ್ರಕರಣಗಳಲ್ಲಿ ಜೈಲಿಗೆ ಹೋಗಿದ್ದ. ದಿಲೀಪ್ ಸಹ ಅಪರಾಧ ಪ್ರಕರಣವೊಂದರಲ್ಲಿ ಜೈಲು ಸೇರಿದ್ದ. ಅಲ್ಲಿಯೇ ಇಬ್ಬರಿಗೂ ಪರಿಚಯ ಆಗಿತ್ತು. ಇಬ್ಬರು ಇತ್ತೀಚೆಗೆ ಜಾಮೀನು ಮೇಲೆ ಹೊರಬಂದಿದ್ದರು' ಎಂದು ಪೊಲೀಸರು ಹೇಳಿದರು.

'ಪ್ರಯಾಣಿಕರನ್ನು ಬಿಡಲು ಸಂದೀಪ್ ಲಾಲ್ ಮನೆ ಬಳಿ ಆಟೊ ಚಾಲಕ ಸುನೀಲ್‌ಕುಮಾರ್ ಇತ್ತೀಚೆಗೆ ಹೋಗಿದ್ದರು. ಅದೇ ವೇಳೆ ಸಂದೀಪ್, ವ್ಯಕ್ತಿಯೊಬ್ಬರಿಗೆ ಹಣದ ಕಂತೆ ಕೊಡುತ್ತಿದ್ದರು. ಅದನ್ನು ನೋಡಿದ್ದ ಸುನೀಲ್, ಕಳ್ಳತನ ಮಾಡಲು ಸಂಚು ರೂಪಿಸಿದ್ದ. ಅದೇ ವಿಷಯವನ್ನು ದಿಲೀಪ್‌ಗೆ ಹೇಳಿ ಒಪ್ಪಿಸಿದ್ದ' ಎಂದೂ ತಿಳಿಸಿದರು.

ಮೂಟೆಯಲ್ಲಿದ್ದ ಹಣ, ಚಿನ್ನಾಭರಣ: 'ಸಂದೀಪ್ ಅವರು ಮಾರ್ಚ್ 28ರಂದು ತಮಿಳುನಾಡಿಗೆ ಹೋಗಿದ್ದರು. ಮನೆಗೆ ಬೀಗ ಹಾಕಲಾಗಿತ್ತು. ಅದನ್ನು ಗಮನಿಸಿದ್ದ ಆರೋಪಿಗಳು, ರಾತ್ರಿ ಮನೆ ಬೀಗ ಮುರಿದು ಒಳ ನುಗ್ಗಿದ್ದರು' ಎಂದು ಪೊಲೀಸರು ಹೇಳಿದರು.

'ಮನೆಯಲ್ಲೆಲ್ಲ ಎರಡ್ಮೂರು ಗಂಟೆ ಹುಡುಕಾಡಿದರೂ ಏನು ಸಿಕ್ಕಿರಲಿಲ್ಲ. ಆರೋಪಿಗಳು ವಾಪಸು ಹೋಗುವಾಗ ಬೀರುವಿನ ಪಕ್ಕದಲ್ಲಿ ಗೋಣಿ ಚೀಲ ನೋಡಿದ್ದರು. ಅದನ್ನು ತೆರೆದು ನೋಡಿದಾಗ ಹಣದ ಕಂತೆಗಳು ಹಾಗೂ ಚಿನ್ನಾಭರಣ ಕಂಡಿತ್ತು.'

'ಮೂಟೆ ಹೊತ್ತುಕೊಂಡು ಮನೆಯಿಂದ ಪರಾರಿಯಾಗಿದ್ದ ಆರೋಪಿಗಳು, ಸುಬ್ರಹ್ಮಣ್ಯಪುರದಲ್ಲಿರುವ ತಮ್ಮ ಮನೆಗೆ ಹೋಗಿದ್ದರು. ಅಲ್ಲಿಯೇ ಹಣ ಹಾಗೂ ಚಿನ್ನಾಭರಣ ಹಂಚಿಕೊಂಡಿದ್ದರು. ಮರುದಿನ, ತಾವು ಮಾಡಿಕೊಂಡಿದ್ದ ಸಾಲ ತೀರಿಸಿ ಗೋವಾಕ್ಕೆ ಪ್ರವಾಸಕ್ಕೆ ಹೋಗಿದ್ದರು. ನಂತರ, ಮಹದೇಶ್ವರ ಬೆಟ್ಟ ಹಾಗೂ ಇತರೆ ದೇವಸ್ಥಾನಗಳಿಗೆ ಹೋಗಿ ದೇಣಿಗೆ ನೀಡಿದ್ದರು' ಎಂದೂ ಪೊಲೀಸರು ತಿಳಿಸಿದರು.

'ಪ್ರಕರಣ ದಾಖಲಾಗುತ್ತಿದ್ದಂತೆ ಮನೆಯಲ್ಲಿ ಪರಿಶೀಲನೆ ನಡೆಸಿ, ಬೆರಳಚ್ಚು ಸಂಗ್ರಹಿಸಲಾಗಿತ್ತು. ಇದರಿಂದಲೇ ಆರೋಪಿಗಳ ಸುಳಿವು ಸಿಕ್ಕಿತ್ತು' ಎಂದೂ ಹೇಳಿದರು.

ಸ್ನೇಹಿತನ ಮದುವೆಗೆ ಬಂದಿದ್ದ ವ್ಯಕ್ತಿ ಸಾವು

ಉಡುಪಿ: ಸ್ನೇಹಿತನ ಮದುವೆಗೆ ಬೆಂಗಳೂರಿನಿಂದ ಬಂದಿದ್ದ ಸಾಮ್ರಾಟ್ ಮಂಜುಂದಾರ್ ಎಂಬಾತ ಮಲ್ಪೆ ಬೀಚ್‌ನಲ್ಲಿ ನೀರಿನ ಸೆಳೆತಕ್ಕೆ ಸಿಲುಕಿ ಮೃತಪಟ್ಟಿದ್ದಾರೆ.

ಜಾಲಹಳ್ಳಿಯ ನಿವಾಸಿ ಸಾಮ್ರಾಟ್ ಮಜುಂದಾರ್ ಸೋಮವಾರ ರಾತ್ರಿ ಸ್ನೇಹಿತರೊಂದಿಗೆ ಬಂದು ಮಲ್ಪೆಯಬ್ಲೂ ವೇವ್ಸ್ ಹೋಟೆಲ್‌ನಲ್ಲಿ ತಂಗಿದ್ದರು. ಮಂಗಳವಾರ ಬೆಳಿಗ್ಗೆ ಸ್ನೇಹಿತರೊಂದಿಗೆ ಈಜಾಡುವಾಗ ನೀರಿನ ಸೆಳೆತಕ್ಕೆ ಸಿಲುಕಿದ್ದಾರೆ. ಸಾಮ್ರಾಟ್ ಜತೆ ಸ್ನೇಹಿತ ಬಿನು ಮೋಹನ್ ನೀರಿನಲ್ಲಿ ಕೂಡ ಮುಳುಗಿದ್ದಾರೆ. ಮಲ್ಪೆಯ ಲೈಫ್‌ಗಾರ್ಡ್ ಚಂದ್ರು ಕೂಡಲೇ ನೆರವಿಗೆ ಧಾವಿಸಿ ಬಿನು ಮೋಹನ್ ಅವರನ್ನು ಪ್ರಾಣಾಪಾಯದಿಂದ ಪಾರು ಮಾಡಿದ್ದಾರೆ. ಆದರೆ ಸಾಮ್ರಾಟ್ ನೀರಿನಲ್ಲಿ ಮುಳುಗಿದ್ದಾರೆ. ತೀವ್ರ ಅಸ್ವಸ್ಥಗೊಂಡಿದ್ದ ಸಾಮ್ರಾಟ್ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಅಷ್ಟರಲ್ಲಿ ಮೃತಪಟ್ಟಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಆನ್‌ಲೈನ್ ಮೂಲಕವೇ ನೋಂದಣಿ ಪ್ರಕ್ರಿಯೆ ಆರಂಭಿಸಲು ಸಾರಿಗೆ ಇಲಾಖೆ ಸಜ್ಜು

ವಾಹನ ಖರೀದಿಸಿದ ಗಂಟೆಯಲ್ಲೇ ನೋಂದಣಿ ಸಂಖ್ಯೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವಾಹನಗಳ ನೋಂದಣಿಗೆ ಇನ್ನು ವಾರಗಟ್ಟಲೆ ಕಾಯಬೇಕಿಲ್ಲ. ಖರೀದಿಸಿದ ಒಂದೆರಡು ಗಂಟೆಗಳಲ್ಲೇ ತಾತ್ಕಾಲಿಕ ನೋಂದಣಿ ಸಂಖ್ಯೆ ದೊರೆಯುವ ವ್ಯವಸ್ಥೆಯನ್ನು ಸಾರಿಗೆ ಇಲಾಖೆ ಜಾರಿಗೊಳಿಸುತ್ತಿದ್ದು, ಮುಂದಿನ ವಾರದಿಂದಲೇ ಈ ವ್ಯವಸ್ಥೆ ಅನುಷ್ಠಾನಕ್ಕೆ ಬರಲಿದೆ.

ಹೊಸ ವಾಹನ ಖರೀದಿಸಿದರೂ ನೋಂದಣಿಗಾಗಿ ವಾರಗಟ್ಟಲೆ ಕಾಯಬೇಕಿತ್ತು. ವಾಹನ ಮತ್ತು ಅದಕ್ಕೆ ಸಂಬಂಧಿಸಿದ ದಾಖಲೆಗಳು, ವಾಹನ ಖರೀದಿಸುವವರ ಮಾಹಿತಿಯೊಂದಿಗೆ ಪ್ರಾದೇಶಿಕ ಸಾರಿಗೆ ಇಲಾಖೆ ಕಚೇರಿಗೇ ಖುದ್ದು ಹೋಗಿ ನೋಂದಣಿ ಪ್ರಕ್ರಿಯೆ ಮಾಡಿಸಬೇಕಿತ್ತು.

ಕಚೇರಿ ಅಲೆದಾಟ ಮತ್ತು ಕಾಗದ ಪತ್ರ ವ್ಯವಹಾರದ ಜೊತೆಗೆ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸುಧಾರಣೆ ಕ್ರಮಗಳನ್ನು ಸಾರಿಗೆ ಇಲಾಖೆ ಕೈಗೊಂಡಿದೆ. ಎಲ್ಲವೂ ಆನ್‌ಲೈನ್ ವ್ಯವಸ್ಥೆಯಾಗಿದ್ದು, ಕುಳಿತಲ್ಲೇ ವಾಹನ ನೋಂದಣಿ ಮಾಡಿಸಬಹುದಾಗಿದೆ.

ಶೋರೂಂಗೆ ಬರುವ ವಾಹನಗಳಿಗೆ ಸಂಬಂಧಿಸಿದ ಮಾಹಿತಿ 'ವಾಹನ್' ಪೋರ್ಟಲ್‌ನಲ್ಲಿ ಲಭ್ಯವಿರುತ್ತದೆ. ಅದನ್ನು ಲಿಂಕ್ ಮಾಡಿಕೊಂಡರೆ ರಾಜ್ಯ ಸರ್ಕಾರಕ್ಕೆ ಬರಬೇಕಿರುವ ತೆರಿಗೆಯ ವಿವರ ಸಿಗುತ್ತದೆ. ವಾಹನ ಖರೀದಿಸುವವರ ಪಿನ್‌ಕೋಡ್ ಸಹಿತ ವಿಳಾಸ ದಾಖಲಿಸಿ ಆನ್‌ಲೈನ್‌ನಲ್ಲೇ ತೆರಿಗೆ ಪಾವತಿ ಮಾಡಿದ ಕೂಡಲೇ ಆ ಮಾಹಿತಿ ಸಂಬಂಧಿಸಿದ ಪ್ರಾದೇಶಿಕ ತೆರಿಗೆ ಕಚೇರಿಗೆ ರವಾನೆಯಾಗುತ್ತದೆ.

'ಎಲ್ಲ ದಾಖಲೆಗಳು ಆನ್‌ಲೈನ್‌ನಲ್ಲೇ ಇರುವುದರಿಂದ ಕೂಡಲೇ ಅಧಿಕಾರಿಗಳು ಅನುಮೋದನೆ ನೀಡುತ್ತಾರೆ. ಕೆಲವೇ ಗಂಟೆಗಳಲ್ಲಿ ತಾತ್ಕಾಲಿಕ ನೋಂದಣಿ ಸಂಖ್ಯೆ ಲಭ್ಯವಾಗುತ್ತದೆ. ಅದನ್ನು ಶೋರೂಂಗಳಲ್ಲೇ ಮುದ್ರಿಸಿ ವಾಹನವನ್ನು ಅಂದೇ ಗ್ರಾಹಕರಿಗೆ ನೀಡಲು ಸಾಧ್ಯವಾಗುತ್ತದೆ' ಎಂದು ಸಾರಿಗೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ 'ಪ್ರಜಾವಾಣಿ'ಗೆ ವಿವರಿಸಿದರು.

'ಬಳಿಕ ಒಂದೆರಡು ದಿನಗಳಲ್ಲಿ ಶಾಶ್ವತ ನೋಂದಣಿ ಸಂಖ್ಯೆ ಸಹಿತ ಡಿಜಿಟಲ್ ಆರ್.ಸಿ(ರಿಜಿಸ್ಟ್ರೇಷನ್ ಸರ್ಟಿಫಿಕೇಟ್) ವಾಹನದ ಮಾಲೀಕರ ಮೊಬೈಲ್ ನಂಬರ್ ಮತ್ತು ಇ-ಮೇಲ್ ಐ.ಡಿಗೆ ರವಾನೆಯಾಗುತ್ತದೆ' ಎಂದು ಹೇಳಿದರು.

'ಪ್ರತಿವರ್ಷ ಸರಾಸರಿ 23 ಲಕ್ಷ ಹೊಸ ವಾಹನಗಳ ನೋಂದಣಿಯಾಗುತ್ತಿದೆ. ಫ್ಯಾನ್ಸಿ ನಂಬರ್ ಬೇಕಿದ್ದರೂ ಆನ್‌ಲೈನ್‌ನಲ್ಲೇ ಪರಿಶೀಲಿಸಬಹುದು. ಲಭ್ಯ ಇರುವ ನಂಬರ್‌ಗಳಿಗೆ ನಿಗದಿತ ಶುಲ್ಕವನ್ನು ಆನ್‌ಲೈನ್‌ನಲ್ಲೇ ಪಾವತಿಸಬೇಕಾಗುತ್ತದೆ. ವಾಹನ ಖರೀದಿಸಿದವರು ಮಧ್ಯವರ್ತಿಗಳನ್ನಾಗಲಿ, ಸಾರಿಗೆ ಇಲಾಖೆಯ ಅಧಿಕಾರಿಗಳನ್ನಾಗಲೀ ಭೇಟಿ ಮಾಡುವ ಅಗತ್ಯವೇ ಬರುವುದಿಲ್ಲ' ಎಂದು ಅವರು ತಿಳಿಸಿದರು.

'ಇದರಿಂದ ಭ್ರಷ್ಟಾಚಾರಕ್ಕೆ ಸಂಪೂರ್ಣ ಕಡಿವಾಣ ಬೀಳಲಿದೆ. ಕಾಗದ ಪತ್ರಗಳ ವ್ಯವಹಾರವೇ ಇರುವುದಿಲ್ಲ. ಅನಗತ್ಯವಾಗಿ ವಿಳಂಬ ಆಗುವುದೂ ತಪ್ಪಲಿದೆ. ಜನ ಕುಳಿತಲ್ಲೇ ವಾಹನ ನೋಂದಣಿ ಮಾಡಿಕೊಳ್ಳಬಹುದು' ಎಂದು ಹೇಳಿದರು.

'ಎಲ್ಲ ರೀತಿಯ ಸಿದ್ಧತೆಗಳೂ ಪೂರ್ಣಗೊಂಡಿದ್ದು, ಎರಡು- ಮೂರು ದಿನಗಳಲ್ಲಿ ಈ ಹೊಸ ವ್ಯವಸ್ಥೆಯನ್ನು ಲೋಕಾರ್ಪಣೆ ಮಾಡಲಾಗುವುದು. ವಾಹನಗಳ ನೋಂದಣಿ ಪ್ರಕ್ರಿಯೆಯನ್ನು ಮುಂದಿನ ದಿನಗಳಲ್ಲಿ ವಾಹನಗಳ ವಿತರಕರಿಗೇ ವಹಿಸುವ ಬಗ್ಗೆಯೂ ಪರಿಶೀಲನೆ ನಡೆಸಲಾಗುತ್ತಿದೆ' ಎಂದೂ ರಾಜೇಂದರ್ ಕುಮಾರ್ ಕಟಾರಿಯಾ ತಿಳಿಸಿದರು.

ಮನೆ ಬಾಗಿಲಿಗೇ ಡಿ.ಎಲ್, ಆರ್.ಸಿ

'ಚಾಲನಾ ಪರವಾನಗಿ (ಡಿ.ಎಲ್) ಮತ್ತು ಆರ್.ಸಿ ಕಾರ್ಡ್‌ಗಳನ್ನು ಮನೆ-ಮನೆಗೇ ತಲುಪಿಸುವ ವ್ಯವಸ್ಥೆ ಶೀಘ್ರವೇ ಜಾರಿಗೆ ಬರಲಿದೆ' ರಾಜೇಂದರ್ ಕುಮಾರ್ ಕಟಾರಿಯಾ ತಿಳಿಸಿದರು.

'ನೆಲಮಂಗಲದ ಬಳಿ ಕೇಂದ್ರೀಕೃತ ಪ್ರೊಸೆಸಿಂಗ್ ಕೇಂದ್ರ ತೆರೆಯಲಾಗುತ್ತಿದೆ. ಚಾಲನಾ ಪರವಾನಗಿ ಪಡೆಯಲು ಈಗಾಗಲೇ ಆನ್‌ಲೈನ್ ವ್ಯವಸ್ಥೆ ಜಾರಿಯಲ್ಲಿದೆ. ಆರ್.ಸಿ ಪಡೆಯುವ ವ್ಯವಸ್ಥೆಯೂ ಆನ್‌ಲೈನ್ ಆಗಲಿದೆ. ಸಾರಿಗೆ ಇಲಾಖೆ ಅಧಿಕಾರಿಗಳು ಆನ್‌ಲೈನ್‌ನಲ್ಲಿ ಅನುಮೋದನೆ ನೀಡಿದ ಕೂಡಲೇ ಮಾಹಿತಿ ಪ್ರೊಸೆಸಿಂಗ್ ಕೇಂದ್ರಕ್ಕೆ ರವಾನೆಯಾಗಲಿದೆ. ಅಲ್ಲಿ ಮುದ್ರಿತವಾಗುವ ಆರ್.ಸಿ ಮತ್ತು ಡಿ.ಎಲ್‌ಗಳನ್ನು ಪಾಸ್‌ಪೋರ್ಟ್ ಮಾದರಿಯಲ್ಲಿ ಅಂಚೆ ಮೂಲಕ ಮನೆ-ಮನೆಗೆ ತಲುಪಿಸಲಾಗುವುದು. ಅಂಚೆ ಇಲಾಖೆ ಜತೆಯೂ ಒಪ್ಪಂದ ನಡೆಸಲಾಗುತ್ತಿದೆ' ಎಂದು ವಿವರಿಸಿದರು.

'ಚಾಲನಾ ಪರವಾನಗಿ ನವೀಕರಣ ಅಥವಾ ನಕಲು ಪರವಾನಗಿ ಪಡೆಯಲು ಕೂಡ ಅನ್‌ಲೈನ್ ವ್ಯವಸ್ಥೆಯೇ ಜಾರಿಯಾಗುತ್ತಿದೆ. ಯಾರೊಬ್ಬರೂ ಸಾರಿಗೆ ಇಲಾಖೆ ಕಚೇರಿಗೆ ಹೋಗಿ ಅಲೆದಾಡಬಾರದು ಎಂಬುದು ನಮ್ಮ ಉದ್ದೇಶ' ಎಂದು ತಿಳಿಸಿದರು.

ಅನುದಾನಿತ ಪ್ರೌಢ ಶಾಲೆಗಳ ಶಿಕ್ಷಕರ ವರ್ಗಾವಣೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2022-23 ನೇ ಸಾಲಿನಲ್ಲಿ ಅನುದಾನಿತ ಪ್ರೌಢ ಶಾಲೆಗಳ ಬೋಧಕ, ಬೋಧಕೇತರ ಸಿಬ್ಬಂದಿಯ ವರ್ಗಾವಣೆಗೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದ್ದು, ಒಂದು ಆಡಳಿತ ಸಂಸ್ಥೆಯ ಅನುದಾನಿತ ಪ್ರೌಢಶಾಲೆಯಲ್ಲಿರುವ ಶಿಕ್ಷಕರನ್ನು ಅದೇ ಆಡಳಿತ ಮಂಡಳಿಯ ಇತರ ಅನುದಾನಿತ ಪ್ರೌಢ ಶಾಲೆಗಳಿಗೆ ಅಥವಾ ಇನ್ನೊಂದು ಆಡಳಿತ ಮಂಡಳಿಯ ಅನುದಾನಿತ ಪ್ರೌಢ ಶಾಲೆಗೆ ವರ್ಗಾವಣೆ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಒಂದೇ ಆಡಳಿತ ಮಂಡಳಿಯು ಹಲವು ಅನುದಾನಿತ ಪ್ರೌಢ ಶಾಲೆಗಳನ್ನು ನಡೆಸುತ್ತಿವೆ. ಇಂಥ ಪ್ರೌಢಶಾಲೆಗಳಲ್ಲಿ ನಿಗದಿತ ಕಾರ್ಯಭಾರ ಇಲ್ಲದ ಶಾಲೆಗಳನ್ನು ಗುರುತಿಸಿ, ಅಲ್ಲಿನ ಶಿಕ್ಷಕರನ್ನು ಅದೇ ಸಂಸ್ಥೆಯ ಕಾರ್ಯಭಾರ ಇರುವ ಶಾಲೆಗಳಿಗೆ ಮರು ಹೊಂದಾಣಿಕೆ ಮಾಡಿಕೊಳ್ಳಬಹುದು. ಒಂದು ಆಡಳಿತ ಮಂಡಳಿಯ ಶಾಲೆಯಿಂದ ಇನ್ನೊಂದು ಆಡಳಿತ ಮಂಡಳಿಯ ಶಾಲೆಗೆ ಶಿಕ್ಷಕರ ಕೋರಿಕೆಯ ಮೇರೆಗೆ ಮತ್ತು ಆಡಳಿತ ಮಂಡಳಿಗಳು ಪರಸ್ಪರ ಒಪ್ಪಿದರೆ ವರ್ಗಾವಣೆ ಮಾಡಬಹುದು. ಆದರೆ, ಅನುದಾನಿತ ಪ್ರೌಢಶಾಲೆಗಳಲ್ಲಿ ಮೂರು ವರ್ಷಕ್ಕೂ ಹೆಚ್ಚು ಸೇವೆ ಸಲ್ಲಿಸಿದ ಸಹ ಶಿಕ್ಷಕರು ಹಾಗೂ ನೇಮಕಾತಿ ಹೊಂದಿ ಅನುದಾನಕ್ಕೆ ಒಳಪಟ್ಟ ನಂತರ ಮೂರು ವರ್ಷ ದಾಟಿದ ಶಿಕ್ಷಕರು ಮಾತ್ರ ವರ್ಗಾವಣೆಗೆ ಅರ್ಹತೆ ಪಡೆಯಲಿದ್ದಾರೆ.

ಹೈದರಾಬಾದ್ - ಕರ್ನಾಟಕ ಪ್ರದೇಶದ ಸಿಬ್ಬಂದಿಗೆ ನೇಮಕಾತಿ ಹೊಂದಿದ ದಿನದಿಂದ ನಂತರದ 10 ವರ್ಷಗಳವರೆಗೆ ಹೈದರಾಬಾದ್-ಕರ್ನಾಟಕ ಪ್ರದೇಶ ಹೊರತುಪಡಿಸಿ, ಬೇರೆ ಸ್ಥಳಗಳಿಗೆ ವರ್ಗಾವಣೆಗೆ ಅವಕಾಶ ಇಲ್ಲ ಎಂದೂ ಸುತ್ತೋಲೆಯಲ್ಲಿ ಸ್ಪಷ್ಟಪಡಿಸಲಾಗಿದೆ.

'ಶಾಲಾ ಆಡಳಿತ ಮಂಡಳಿಯವರು ಶಿಕ್ಷಕರ ಮರು ಹೊಂದಾಣಿಕೆ ಮತ್ತು ವರ್ಗಾವಣೆ ಪ್ರಸ್ತಾವನೆಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸಲು ಏಪ್ರಿಲ್ 11 ಕೊನೆಯ ದಿನ. ಎಲ್ಲ ದಾಖಲೆಗಳನ್ನು ಪರಿಶೀಲಿಸಿದ ಬಳಿಕ ತಮ್ಮ ಅಭಿಪ್ರಾಯಗಳ ಸಹಿತ ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಿಲ್ಲಾ ಉಪ ನಿರ್ದೇಶಕರಿಗೆ ಸಲ್ಲಿಸಲು ಏ. 16 ಕೊನೆಯ ದಿನ. ವರ್ಗಾವಣೆಗೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಆಯುಕ್ತರು ಅಥವಾ ಹೆಚ್ಚುವರಿ ಆಯುಕ್ತರಿಗೆ ಜಿಲ್ಲಾ ಉಪ ನಿರ್ದೇಶಕರು ಸಲ್ಲಿಸಲು ಏ.26 ಕೊನೆಯ ದಿನ. ವರ್ಗಾವಣೆಗೆ ಮೇ 31ರ ಒಳಗೆ ಅನುಮೋದನೆ ನೀಡಲಾಗುವುದು' ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು (ಪ್ರೌಢ ಶಿಕ್ಷಣ) ತಿಳಿಸಿದ್ದಾರೆ.

ಮುದ್ದೇಬಿಹಾಳ: ವಿದ್ಯಾರ್ಥಿ ವಿರುದ್ಧ ಪ್ರಕರಣ, ಶಿಕ್ಷಕ ಅಮಾನತು

ಮುದ್ದೇಬಿಹಾಳ (ವಿಜಯಪುರ ಜಿಲ್ಲೆ): ತಾಲ್ಲೂಕಿನ ಢವಳಗಿ ಎಂ.ಬಿ.ಪಾಟೀಲ ಪ್ರೌಢಶಾಲೆಯಲ್ಲಿ ಬುಧವಾರ ಪರೀಕ್ಷೆ ಪ್ರಾರಂಭದ ನಂತರ ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಯನ್ನು ಡಿಬಾರ್ ಮಾಡಲಾಗಿದ್ದು, ಆತನ ವಿರುದ್ಧ ಗುರುವಾರ ಪ್ರಕರಣ ದಾಖಲಿಸಲಾಗಿದೆ.

ಆ ವಿದ್ಯಾರ್ಥಿಯ ಪ್ರಶ್ನೆಪತ್ರಿಕೆಯನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡ ಅನಾಮಧೇಯ ವ್ಯಕ್ತಿಯ ವಿರುದ್ಧವೂ ಬಿಇಒ ಎಚ್.ಜಿ.ಮಿರ್ಜಿ ದೂರು ದಾಖಲಿಸಿದ್ದಾರೆ.

ಪ್ರಶ್ನೆಪತ್ರಿಕೆ ಬಹಿರಂಗಗೊಂಡ ಕೊಠಡಿಯ ಮೇಲ್ವಿಚಾರಕರಾಗಿದ್ದ ಮಡಿಕೇಶ್ವರ ಗ್ರಾಮದ ಖಾಸಗಿ ಅನುದಾನಿತ ಶಾಲೆಯ ಶಿಕ್ಷಕ ಬಿ.ಎಸ್. ಪೊಲೇಶಿ ಅವರನ್ನು ಅಮಾನತು ಮಾಡಲಾಗಿದೆ.

ಹುಚ್ಚರಾಯಸ್ವಾಮಿ ಜಾತ್ರೆಯಲ್ಲಿ ಮಳಿಗೆ ಎಲ್ಲ ಧರ್ಮದವರಿಗೂ ಅವಕಾಶ

ಪ್ರಜಾವಾಣಿ ವಾರ್ತೆ

ಶಿಕಾರಿಪುರ: ಪಟ್ಟಣದ ಹುಚ್ಚರಾಯಸ್ವಾಮಿ ದೇವರ ಜಾತ್ರಾ ಮಹೋತ್ಸವ ಏಪ್ರಿಲ್ 15, 16ರಂದು ನಡೆಯಲಿದ್ದು, ಜಾತ್ರೆಯಲ್ಲಿ ಮಳಿಗೆ ಹಾಕಲು ಎಲ್ಲ ಧರ್ಮದವರಿಗೂ ಅವಕಾಶ ನೀಡಲಾಗಿದೆ. 'ದೇವಸ್ಥಾನ ಆವರಣದಿಂದ ದೂರದಲ್ಲಿ ವಾಣಿಜ್ಯ ಮಳಿಗೆ ಹಾಗೂ ಮಕ್ಕಳ ಆಟಿಕೆ ಯಂತ್ರಗಳನ್ನು ಹಾಕಲು ಅವಕಾಶ ನೀಡಲಾಗಿದ್ದು, ಯಾವುದೇ ಧರ್ಮದವರಿಗೆ ನಿರ್ಬಂಧ ಹೇರಿಲ್ಲ. ಎಲ್ಲ ಧರ್ಮದವರು ವ್ಯಾಪಾರ ವಹಿವಾಟು ನಡೆಸಬಹುದು' ಎಂದು ಜಾತ್ರಾ ಮಹೋತ್ಸವದ ಸಂಚಾಲಕ ಗುರುರಾಜ್ ರಾವ್ ಜಗತಾಪ್ ತಿಳಿಸಿದರು.

ಬೆಂಗಳೂರು ವಿ.ವಿ 29ಕ್ಕೆ ಘಟಿಕೋತ್ಸವ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ 56ನೇ ವಾರ್ಷಿಕ ಘಟಿಕೋತ್ಸವವು ಏಪ್ರಿಲ್ 29ರಂದು ನಡೆಯಲಿದೆ.

ಅಂದು ಬೆಳಿಗ್ಗೆ 11 ಗಂಟೆಗೆ ನಗರದ ಅರಮನೆ ರಸ್ತೆಯ ಸೆಂಟ್ರಲ್ ಕಾಲೇಜು ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ಘಟಿಕೋತ್ಸವ ನಡೆಯಲಿದೆ ಎಂದು ಕುಲಪತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ರಿಮಿನಲ್ ಕಾಯ್ದೆಗಳಿಗೆ ತಿದ್ದುಪಡಿ ತರುವ ಪ್ರಕ್ರಿಯೆಗೆ ಚಾಲನೆ –ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): ಜನಕೇಂದ್ರೀತವಾದ ಕಾನೂನು ವ್ಯವಸ್ಥೆಯನ್ನು ರೂಪಿಸಲು ಮತ್ತು ತ್ವರಿತ ನ್ಯಾಯದಾನಕ್ಕೆ ಪೂರಕವಾಗಿ ಕ್ರಿಮಿನಲ್ ಕಾಯ್ದೆಗಳಿಗೆ ತಿದ್ದುಪಡಿ ತರುವ ಪ್ರಕ್ರಿಯೆಗೆ ಸರ್ಕಾರ ಚಾಲನೆ ನೀಡಿದೆ ಎಂದು ಕೇಂದ್ರ ಸರ್ಕಾರ ರಾಜ್ಯಸಭೆಗೆ ತಿಳಿಸಿದೆ.

ಭಾರತೀಯ ದಂಡ ಸಂಹಿತೆ (ಐಪಿಸಿ), ಅಪರಾಧ ಪ್ರಕ್ರಿಯೆ ದಂಡಸಂಹಿತೆ (ಸಿಆರ್‌ಪಿಸಿ), ಭಾರತೀಯ ಸಾಕ್ಷ್ಯಾಧಾರ ಕಾಯ್ದೆಗೆ ತಿದ್ದುಪಡಿ ತರಲು ಸಂಬಂಧಿತ ಭಾಗಿದಾರರ ಜೊತೆಗೆ ಚರ್ಚೆ ನಡೆದಿದೆ ಎಂದು ಕಾನೂನು ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ.

ಈ ಕುರಿತು ಲಿಖಿತ ಉತ್ತರ ನೀಡಿರುವ ಅವರು, ಸಲಹೆಗಳನ್ನು ನೀಡುವಂತೆ ಕೋರಿ ಕೋರಿ ವಿವಿಧ ರಾಜ್ಯಗಳ ರಾಜ್ಯಪಾಲರು, ಮುಖ್ಯಮಂತ್ರಿಗಳು, ಲೆಫ್ಟಿನಂಟ್ ಗವರ್ನರ್‌ಗಳು, ಕೇಂದ್ರಾಡಳಿತ ಪ್ರದೇಶಗಳ ಆಡಳಿತಗಳು, ಸುಪ್ರೀಂ ಕೋರ್ಟ್‌ನ ವಕೀಲರ ಸಂಘ, ವಿವಿಧ ರಾಜ್ಯಗಳ ವಕೀಲರ ಸಂಘಗಳಿಗೆ ಪತ್ರ ಬರೆಯಲಾಗಿದೆ ಎಂದಿದ್ದಾರೆ.

ಅಲ್ಲದೆ, ಕ್ರಿಮಿನಲ್ ಕಾಯ್ದೆಗಳಲ್ಲಿ ಅಗತ್ಯ ಸುಧಾರಣೆ ಕುರಿತು ವರದಿ ನೀಡುವಂತೆ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ನೇತೃತ್ವದಲ್ಲಿ ನಾಲ್ವರು ಸದಸ್ಯರಿರುವ ಸಮಿತಿಯನ್ನು 2020ರ ಮಾರ್ಚ್ 2ರಂದು ರಚಿಸಲಾಗಿದೆ ಎಂದು ತಿಳಿಸಿದ್ದಾರೆ.

WEEKEND CORNER ಕ್ಲಾಸಿಫೈಡ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Agricultural Land

Nelamangala

AGRICULTURE LAND 2.21 acres rate one Cr (total) surappanahalli Nelemangala-hassan road 56 kms 9945080017

Flat

CV Raman Nagar

PRESTIGE RAPPERSWIL, Super luxury 3 bedroom + maids room in CV Raman Nagar, off Indiranagar available for sale, Starting Price Rs. 2.67 Cr, for details, call: 7259665390

Intl Airport Road

2 BHK Ready to Move, FLAT For SALE, Near Airport at DEVANAHALLI, Excellent Location. 9845915999.

Frazer Town

LUXURIOUS READY 3 Bed Apartment with Staff Quarter in Frazer Town. Gated complex with swimming pool and clubhouse. Price Rs. 3.45 Cr. For details contact -9945039194

Mahalakshmi Layout

READY TO Move, 3 BHK Flats, 1 KM from Iskcon Temple & Metro Station, 94 Lakhs. Few Flats Left. 9845014364/ 9513999423

Jalahalli

LUXURY FLAT for sale at Vaishnavi ARS Gardenia. Newly built 3 BHK flat in a posh locality with lots of greenery and all club house amenities. 200 meters from jalahalli Metro station. Call: 9964508500/ 9740713449/ 9880722522

Yelahanka

PRESTIGE MONTE CARLO, 3 BHK, Area-1535. sft, Semi furnished apartment for Resale. Contact: 6366971311.

Whitefield

PRESTIGE WHITE MEADOWS, Super luxury Penthouse in Whitefield with Private Gym, Spa and Indoor Swimming Pool. Price Rs. 15 Cr. Call: 9108577397

Sites

Abbigere

BBMP A Khata Sites For Sale In Abbigere, Behind Suvilas Apts, Luxury Developement With Bank Loans Call: 9090603050

Banashankari

BANASHANKARI 6TH Stage, 20x30, 30x40, 40x60, 50x80, BDA, A Khatha SITES BUYING/ SELLING. 9880002298, 9900587492.

Devanahalli

PRESTIGE PARK DRIVE, Located at Devanahalli, plots sizes available for sale ranging from 30*40, 30*50, 40*60 & larger plots up to 3389 sqft. Contact: 6366971311.

Hosur Road

5-ACRE-LAND-SALE Bank Seased With Rera Approval For 600 FLAT Construction Just Rs.24 Crore Market Rate Rs 38 Crore+ Only Genuine Investors /Builders Contact: 99009 76000

Mysore Road

30X60 EAST FACING BMRDA Site For Sale Near Dodda Aladamara Kenchanapura Village Karnataka Housing Co-operative Society Layout: 9972974335

Vishweshwariah Layout

BDA SITE Sale Vishweshwaraiah 30x40 1st Block North 9000, 30x40 4th Block North 5800 Negotiable. 50x80 6th Block 60ft Road:- 8892901567/ 9341733480

RENTAL PROPERTIES

Accommodation Available

Commercial

6000 SQUARE feet builtup space Near Teachers College, R.V. Main Road facing reserved 5 car parking with 6000 Sq.ft open compound 45kw Power reasonable rent. Contact Owner: 9342819739.

House

R.M.V. SECOND Three BHK Bungalow Site 3800Feet Corner for rent-9986033339, mundhralightings@ gmail.com

REAL ESTATE BUYING

General

General

FOR AGRICULTURE Land Conversion,Change of land use,Phodi, Approvals/ Sanctions, NOC's, RERA Project Registration, Property Documentation work. Call Verna Developers, MG-Road, Bengaluru. 9916310226/ 9620253180.

BUILDERS ESSENTIAL

Water Proofing

LEAKAGE... LEAKAGE... Old/New Building,Sump, Bathroom, Wallcrack, Skylight, Terrace Waterproofing done by NewTechnology-9880916988

JOB OPPORTUNITIES

Stores/ Purchase

REQUIRED WAREHOUSE In Charge at Electronic City, Bangalore for Pure Blue Automotive Solutions. 9900033060 'goldengrp.hr@gmail.com'

Accounts & Finance

WANTED CHARTERED ACCOUNTANTS Commerce Graduates, Auditors/ Accountants, CA (Inter/Final-Articles Completed) and STENOGRAPHER. Apply M-FOUR CONSULTING PVT LTD., 503 & 504, Brigade Towers, Brigade Road, Bengaluru. Contact-7676198089 or EMAIL: mfour.consulting@ gmail.com

Graphic Designers

WANTED DTP Operator/ Graphic Designer Corel Draw, Illustrator & Photoshop for a Pvt Limited Company in around Rajajinagar Contact: 23307910/ 9108458798

Walk-in

JOB ALERT!
For our Hubli Restaurant Team, We are Hiring !
Tandoor Chefs
Tandoor Chef Helpers
Indian Chefs
Indian Chef Helpers
Frying Section Chefs
Captains
Steward & Waiters
House Keeping Staff
Walk-in-Interview: on 8th & 9th April 2022 Between 3.30 pm to 5.30 pm
8928786988
8373996660

General

WANTED FOR Reputed Company, Graduates Age-30-70, Bangalore only, Earn: 30,000- 50,000. Contact: 9008305194/ 9880441530.

REQUIRED FEMALE PURCHASE EXECUTIVE (Minimum 4 years WORK EXPERIENCE) TO WORK FOR 'GOLDEN HATCHERIES; CV through whatsapp '9900033060' OR 'goldengrp.hr@gmail.com'. call; 08049222216

REQUIRED SUPERVISOR for reputed corporate travels to Manage Employee Transportation. 2 yrs Experience in same field. 7338585858, 7338595959

Marketing & Sales

WANTED SALES Promotors for Leading Oil Brand Qualification SSLC & Above with Smartphone Mandatory Pls Contact: 8317435038/ 7892325629 Email: ideeaz@gmail.com

Wanted

PRODUCTION No. 2
M/s. SEVENRAJ ARTS
UPCOMING HINDI / KANNADA / MALAYALAM / TAMIL / TELUGU MOVIES READY TO START LOOKING FOR HEROS / HEROINES WITH TOP STARS. SHOOTING STARTS SHORTLY LOOKING FOR PARTNERS OR CO-PRODUCERS. ALSO PERSONAL SECRETARY WITH COMPUTER KNOWLEDGE AND GOOD COMMUNICATION SKILL.
CONTACT : RED AND WHITE
MR. SEVENRAJ
98450 20007
98457 17777
sevenrajarts@gmail.com

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

EDUCATIONAL

Admission

DIRECT FINAL: LLB (Can Practice) B.Tech/M.Tech Diploma, MBA/MSc, BCA, BBA, BSc, B.Com, D.Pharm/ B.Pharm, PU/ SSLC. Recognised Govt /UGC. Asha Academy, Bangalore. Ph: 9448460103/ 08026699786

BUSINESS

Business Offers

Finance

HOUSING LOANS @ 6.5% Loan Against Property @ 7.5% Business Loans @ 10.5% & Balance Transfer. Call Srinidhi: 9739645566

WANTED BUSINESS Partner Non Veg Hotel 10 Lakhs Investment Monthly Income 2 Lakhs: 9606701007/ 8892501007

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PERSONAL

Change of Name

I, VIJAY AMRITHRAJ R, Resident of No 326, 2nd cross, Mahalakshmi Layout, Near Masjid E-zubeda Vittasandra Begur Bengaluru-560114 have changed my name to VIJAY AMIRTHARAJ R vide affidavit dated 07-04-2022 sworn to before Advocate and notary B.M. Chandrashekar Bangalore

I, APPAJI Gurav S/O, Tukaram R/o #4, 1st Floor, Near Yellamma Temple, Gottigere, Bannerghatta Road Bangalore 560083 have changed my name to Abhijeet Gurav vide Affidavit Dtd: 20/1/22 Bangalore.

EDUCATION
To Place your Classified Ads Contact:
9845114560

ದ್ವಿತೀಯ ಪಿಯುಸಿ ಪರೀಕ್ಷೆಗೂ ಸಮವಸ್ತ್ರ ಕಡ್ಡಾಯ

ಬೆಂಗಳೂರು: ಎಸ್ಸೆಸ್ಸೆಲ್ಸಿ ಪರೀಕ್ಷೆಯಂತೆ, ಈ ಬಾರಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಹಾಜರಾಗುವ ಎಲ್ಲ ವಿದ್ಯಾರ್ಥಿಗಳಿಗೆ ಸಮವಸ್ತ್ರ ಕಡ್ಡಾಯಗೊಳಿಸಲಾಗಿದೆ. ಪಿಯುಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿನಿಯರು ಕಡ್ಡಾಯವಾಗಿ ಸಮವಸ್ತ್ರವನ್ನೇ ಧರಿಸಬೇಕು. ಒಂದು ವೇಳೆ ಹಿಜಾಬ್ ಧರಿಸಿ ಪರೀಕ್ಷಾ ಕೊಠಡಿಗೆ ಬಂದರೆ ಅಂಥವರಿಗೆ ಪರೀಕ್ಷೆ ಬರೆಯಲು ಅವಕಾಶ ಸಿಗುವುದಿಲ್ಲ. ಸರ್ಕಾರಿ ಕಾಲೇಜುಗಳಲ್ಲಿ ಕಾಲೇಜು ಅಭಿವೃದ್ಧಿ ಸಮಿತಿ ನಿಗದಿಪಡಿಸಿದ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಆಯಾ ಆಡಳಿತ ಮಂಡಳಿ ನಿಗದಿಪಡಿಸಿರುವ ಸಮವಸ್ತ್ರ ಧರಿಸಬೇಕು ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಅಪಾಯ ಮೈಮೇಲೆ ಹಾಕಿಕೊಳ್ಳಲು ಬಯಸದ ಸಿ.ಎಂ ಮತ್ತು ವರಿಷ್ಠರು

ಸಂಪುಟ ವಿಸ್ತರಣೆ: ಕೇವಲ 'ಮೂಗಿಗೆ ತುಪ್ಪ'?

● ಎಸ್ ರವಿಪ್ರಕಾಶ್

ಬೆಂಗಳೂರು: ದೆಹಲಿಗೆ ಹೋಗಿ ಪಕ್ಷದ ವರಿಷ್ಠರನ್ನು ಭೇಟಿ ಮಾಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಪುಟ ವಿಸ್ತರಣೆ ಅಥವಾ ಪುನಾರಚನೆ ಕುರಿತು ಯಾವುದೇ ಸಂದೇಶವಿಲ್ಲದೆ ಬರಿಗೈಯಲ್ಲಿ ರಾಜ್ಯಕ್ಕೆ ಮರಳಿದ್ದಾರೆ. ಯುಗಾದಿ ಹಬ್ಬದ ಬಳಿಕ ಸಂಪುಟ ಸೇರುವ ನಿರೀಕ್ಷೆಯಲ್ಲಿದ್ದ ಆಕಾಂಕ್ಷಿಗಳಿಗೆ ಈ ಬೆಳವಣಿಗೆ ತೀವ್ರ ನಿರಾಶೆ ಮೂಡಿಸಿದೆ.

ವಿಧಾನಸಭಾ ಚುನಾವಣೆಗೆ ಇನ್ನು ಒಂದು ವರ್ಷ ಮಾತ್ರ ಬಾಕಿ ಉಳಿದಿದೆ. ಈಗಲೂ ಸಂಪುಟದಲ್ಲಿ ಸ್ಥಾನ ಸಿಗದೇ ಇದ್ದರೆ, ಮುಂದೆ ಸ್ಥಾನ ಸಿಗುವುದು ಕಷ್ಟ ಎಂಬ ಭಾವನೆ ಗಟ್ಟಿಗೊಳ್ಳುತ್ತಿದೆ. ಒತ್ತಡ ಹಾಕುವುದನ್ನು ಬಿಟ್ಟರೆ ಆಕಾಂಕ್ಷಿಗಳಿಗೆ ಈಗ ಬೇರೆ ದಾರಿ ಉಳಿದಿಲ್ಲ. ಈ ಮಧ್ಯೆ ವಿಸ್ತರಣೆ ಅಥವಾ ಪುನಾರಚನೆಯ

ಜೆ.ಪಿ.ನಡ್ಡಾ


ಬಸವರಾಜ ಬೊಮ್ಮಾಯಿ

ಸಾಧ್ಯತೆಯೇ ಕಡಿಮೆ ಎಂಬ ಮಾತು ಬಿಜೆಪಿಯ ಒಳಗಿನಿಂದ ಕೇಳಿಬರುತ್ತಿದೆ.

ಹಿಂದೆ ಐದು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆ ಇದ್ದ ಕಾರಣ ಆ ಸಂದರ್ಭದಲ್ಲಿ ವರಿಷ್ಠರು ಕರ್ನಾಟಕದ ಸಂಪುಟದ ವಿಚಾರಕ್ಕೆ ಕೈ ಹಾಕುವ ಸಾಧ್ಯತೆ ಇಲ್ಲ ಎಂದೇ ವ್ಯಾಖ್ಯಾನಿಸಲಾಗಿತ್ತು. ಸದ್ಯಕ್ಕೆ ಯಾವುದೇ ರಾಜ್ಯಗಳ ಚುನಾವಣೆ ಇಲ್ಲದಿದ್ದರೂ, ವರಿಷ್ಠರು ಹಸಿರು ನಿಶಾನೆ ನೀಡದೇ ಇರುವುದು ಸಚಿವ ಸ್ಥಾನದ ಆಕಾಂಕ್ಷಿಗಳಲ್ಲಿ ದಿಗಿಲು ಮೂಡಿಸಿದೆ.

ದೆಹಲಿಯಿಂದ ಹಿಂದಕ್ಕೆ ಮರಳಿದ ಬೊಮ್ಮಾಯಿ, 'ಸಂಪುಟ ವಿಸ್ತರಣೆಗೆ ಬಗ್ಗೆ ಸ್ಥೂಲವಾಗಿ ಚರ್ಚೆಯಾಗಿದೆ. ವರಿಷ್ಠರು ಎಲ್ಲಾ ಮಾಹಿತಿಯನ್ನು ಪಡೆದುಕೊಂಡಿದ್ದಾರೆ. ಕಾರ್ಯಕಾರಿಣಿ ಸಭೆಗೆ ಬಂದ ಸಂದರ್ಭದಲ್ಲಿ ಮತ್ತಷ್ಟು ವಿಚಾರಗಳನ್ನು ಮಾತನಾಡುತ್ತೇನೆ ಎಂದು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಭರವಸೆ ನೀಡಿದ್ದಾರೆ. 'ಇಲ್ಲಿಯ ವರಿಷ್ಠರು, ನಾಯಕರು, ಸಂಘಟನಾ ಕಾರ್ಯದರ್ಶಿಗಳೊಂದಿಗೆ ಚರ್ಚೆ ಮಾಡುವುದಾಗಿ ಹೇಳಿದ್ದಾರೆ' ಎಂದು ತಿಳಿಸಿದರು.

ಮುಂದೂಡುವ ತಂತ್ರ?: ಸಚಿವ ಸಂಪುಟ ವಿಸ್ತರಣೆ ಅಥವಾ ಪುನಾರಚನೆ ಕಸರತ್ತಿಗೆ ಕೈಹಾಕಿದರೆ ಜೇನುಗೂಡಿಗೆ ಕಲ್ಲು ಹೊಡೆದಂತೆ ಎಂಬುದು ಮುಖ್ಯಮಂತ್ರಿ ಬೊಮ್ಮಾಯಿ ಮತ್ತು ವರಿಷ್ಠರಿಗೆ ಮನದಟ್ಟಾಗಿದೆ. ಕೆಲವರನ್ನು ತೆಗೆದು, ಇನ್ನು ಕೆಲವರನ್ನು ಸೇರಿಸಿದರೆ ಸಮಸ್ಯೆ ತಪ್ಪಿದ್ದಲ್ಲ. ಒಂದು ಕಡೆ ಸಚಿವ ಸ್ಥಾನ ಕಳೆದುಕೊಂಡವರು, ಮತ್ತೊಂದೆಡೆ ಸಚಿವ ಸ್ಥಾನ ಸಿಗದವರು ಬಂಡಾಯ ಬಾವುಟ ಹಾರಿಸುವುದು ಖಚಿತ. ಇದನ್ನು ನಿಭಾಯಿಸುವುದೂ ಕಷ್ಟ. ಚುನಾವಣೆ ವೇಳೆ ಈ ಬೆಳವಣಿಗೆ ಪಕ್ಷವನ್ನು ಅಪಾಯದ ದವಡೆಗೆ ಸಿಲುಕಿಸಲಿದೆ ಎಂಬ ಚರ್ಚೆಯೂ ಬಿಜೆಪಿ ವಲಯದಲ್ಲಿ ನಡೆದಿದೆ.

ಈ ವಿಚಾರ ಮುಖ್ಯಮಂತ್ರಿ ಮತ್ತು ವರಿಷ್ಠರನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಹೀಗಾಗಿ ಆಕಾಂಕ್ಷಿಗಳ ಮೂಗಿಗೆ ತುಪ್ಪ ಸವರಿ ಅವಧಿ ಮುಗಿಸುವ ತಂತ್ರಕ್ಕೆ ಶರಣಾಗಬಹುದು. ಯಾವುದೇ 'ಅವಘಡ'ಕ್ಕೆ ಕೈಹಾಕದೇ ರಕ್ಷಣಾತ್ಮಕ ಆಟ ಆಡುವುದೇ ಒಳಿತು ಎಂಬ ನಿರ್ಧಾರಕ್ಕೆ ಬಂದಿರಬಹುದು ಎಂದು ಮೂಲಗಳು ಹೇಳಿವೆ.

ಒಂದು ವೇಳೆ ಸಂಪುಟ ವಿಸ್ತರಣೆಗೆ ಕೈಹಾಕಿದರೆ ಗೋಕಾಕ ಶಾಸಕ ರಮೇಶ ಜಾರಕಿಹೊಳಿ ಸುಮ್ಮನಿರುವುದಿಲ್ಲ. ತಮ್ಮನ್ನೂ ಸೇರಿಸಿಕೊಳ್ಳಬೇಕು ಎಂಬ ಒತ್ತಡ ಹಾಕುತ್ತಾರೆ. ಅವರನ್ನು ಮರಳಿ ಸಂಪುಟಕ್ಕೆ ತೆಗೆದುಕೊಳ್ಳುವುದು ಪಕ್ಷಕ್ಕೆ ಮುಜುಗರ ಉಂಟು ಮಾಡುವುದೂ ಅಲ್ಲದೇ, ಪ್ರತಿಪಕ್ಷಕ್ಕೆ ಅಸ್ತ್ರ ನೀಡಿದಂತಾಗುತ್ತದೆ. ಹಿರಿಯರನ್ನು ಸಂಪುಟದಿಂದ ಬಿಟ್ಟರೆ ಚುನಾವಣೆ ವೇಳೆಯಲ್ಲಿ ಅವರು ಮುನಿಸಿಕೊಂಡು ಕೂರುವ ಸಾಧ್ಯತೆ ಇದೆ. ಶಾಸಕರಲ್ಲದ ಬಿ.ವೈ.ವಿಜಯೇಂದ್ರ ಅವರನ್ನು ಸಂಪುಟಕ್ಕೆ ತೆಗೆದುಕೊಂಡರೂ ಅಸಮಾಧಾನ ಭುಗಿಲೇಳಬಹುದು. ಹೀಗಾಗಿ ಮುಖ್ಯಮಂತ್ರಿ ಮತ್ತು ವರಿಷ್ಠರು ಯಾವುದೇ ತೀರ್ಮಾನಕ್ಕೆ ಬರಲು ಸಾಧ್ಯವಾಗಿಲ್ಲ.

'ಇದೇ ತಿಂಗಳು ನಡೆಯುವ ಪಕ್ಷದ ಕಾರ್ಯಕಾರಿಣಿ ಸಭೆಯ ಬಳಿಕ ಸಂಪುಟ ವಿಸ್ತರಣೆ ವಿಷಯ ಮಾತನಾಡುವುದಾಗಿ ಹೇಳಿ ಬೊಮ್ಮಾಯಿ ಆಕಾಂಕ್ಷಿಗಳಿಗೆ ಮತ್ತೊಂದು 'ಮುಹೂರ್ತ' ನಿಗದಿ ಮಾಡಿದ್ದಾರೆ. ಅಲ್ಲಿಯವರೆಗೆ ಆಕಾಂಕ್ಷಿಗಳು ದಿನಗಣನೆ ಮಾಡುವುದು ಬಿಟ್ಟು ಬೇರೆ ದಾರಿ ಉಳಿದಿಲ್ಲ ಎಂದೂ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಶಿಗ್ಗಾವಿ: ಭಾರಿ ಮಳೆ, ಸಿಡಿಲು ಬಡಿದು ವಿದ್ಯಾರ್ಥಿ ಸಾವು

ಹುಬ್ಬಳ್ಳಿ: ಹುಬ್ಬಳ್ಳಿ–ಧಾರವಾಡ, ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ, ಬೆಳಗಾವಿ ಸೇರಿದಂತೆ ವಿವಿಧೆಡೆ ಗುರುವಾರ ಸಾಯಂಕಾಲ ಗುಡುಗು, ಸಿಡಿಲಿನೊಂದಿಗೆ ಕೆಲ ಸಮಯ ಧಾರಾಕಾರ ಮಳೆಯಾಗಿದ್ದು, ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕು ಚಂದಾಪುರದಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಮಾಲತೇಶ ಜೆಟ್ಟೆಪ್ಪನವರ (16) ಹೊಲಕ್ಕೆ ಹೋದಾಗ ಸಿಡಿಲು ಬಡಿದು ಮೃತಪಟ್ಟಿದ್ದಾನೆ.

ಹಾವೇರಿ ಜಿಲ್ಲೆ ಸವಣೂರಿನಲ್ಲಿ ಗಾಳಿ–ಮಳೆಗೆ ತಾಲ್ಲೂಕಿನ ಮಂತ್ರೋಡಿ ಗ್ರಾಮದಲ್ಲಿ ಸುಮಾರು 70ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದ್ದು, 50ಕ್ಕೂ ಹೆಚ್ಚು ಮರಗಳು ಉರುಳಿಬಿದ್ದಿವೆ. ಈ ಘಟನೆಯಲ್ಲಿ ಐವರು ಗಾಯಗೊಂಡಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ಪಟ್ಟಣ ಹಾಗೂ ತಾಲ್ಲೂಕಿನ ಕೆಲವು ಗ್ರಾಮೀಣ ಭಾಗಗಳಲ್ಲಿ ಗುಡುಗು, ಸಿಡಿಲಿನ ಆರ್ಭಟದೊಂದಿಗೆ ಬಿರುಸಿನ ಮಳೆಯಾಗಿದೆ. ಕೆಲವೆಡೆ ಆಲಿಕಲ್ಲು ಸಹಿತ ಮಳೆಯಾಗಿದೆ.

ಸಂಸದ ಪ್ರತಾಪ್ ಸಿಂಹ ರದ್ದಿ ಖರೀದಿಸಲಿ: ದಸಂಸ ಆಗ್ರಹ

ಮೈಸೂರು: 'ಮುಸ್ಲಿಂ ವ್ಯಾಪಾರಿಗಳನ್ನು ಬಹಿಷ್ಕರಿಸಬೇಕು ಎಂದು ಹೇಳಿಕೆ ನೀಡಿರುವ ಸಂಸದರು, ಹಳೇ ಪೇಪರ್, ಖಾಲಿಶೀಶೆ ಹಾಗೂ ರದ್ದಿ ಪದಾರ್ಥಗಳನ್ನು ಖರೀದಿಸಬೇಕು' ಎಂದು ಒತ್ತಾಯಿಸಿ ವಿಜಯನಗರ 4ನೇ ಹಂತದಲ್ಲಿರುವ ಅವರ ಮನೆಯತ್ತ ನುಗ್ಗಲು ಯತ್ನಿಸಿದ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರನ್ನು ಕನ್ನಡ ವೃತ್ತದ ಬಳಿ ಪೊಲೀಸರು ವಶಕ್ಕೆ ಪಡೆದು ಬಿಡುಗಡೆ ಮಾಡಿದರು.

ಅದಕ್ಕೂ ಮುನ್ನ ಮಾತನಾಡಿದ ಹೋರಾಟಗಾರ ಚೋರನಹಳ್ಳಿ ಶಿವಣ್ಣ, 'ಮುಸ್ಲಿಂ ವರ್ತಕರೊಂದಿಗೆ ವ್ಯಾಪಾರ ಮಾಡಬಾರದು ಎಂಬ ಹೇಳಿಕೆಯನ್ನು ಸಂಸದರು ಕೂಡಲೇ ವಾಪಸ್ ಪಡೆಯಬೇಕು. ಅಂಥ ಹೇಳಿಕೆಗಳಿಂದ ಸಮುದಾಯದ ವರ್ತಕರು ರದ್ದಿ ಖರೀದಿಸುವುದನ್ನು ನಿಲ್ಲಿಸಿದ್ದಾರೆ' ಎಂದು ದೂರಿದರು.'ಮುಸ್ಲಿಂ ಸಮುದಾಯವನ್ನು ಗುರಿಯಾಗಿಸಿಕೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಇತ್ತೀಚೆಗೆ ಹಿಜಾಬ್, ಹಲಾಲ್ ಹೆಸರಿನಲ್ಲಿ ವ್ಯಾಪಾರದಲ್ಲಿ ಹೆಸರಿನಲ್ಲಿ ಸಮಾಜ ಒಡೆಯುವ ಕೆಲಸ ಮಾಡುತ್ತಿದ್ದು, ಅದರಲ್ಲಿ ಸಂಸದರು ಪ್ರಮುಖ ಪಾತ್ರ ವಹಿಸಿದ್ದಾರೆ' ಎಂದು ಆರೋಪಿಸಿದರು.

ಆರಗ ಖಾತೆ ಬದಲಾವಣೆ: ಬಿಜೆಪಿಯೊಳಗೆ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರವನ್ನೇ ಮುಜುಗರಕ್ಕೆ ಸಿಲುಕಿಸುವಂತಹ ಹೇಳಿಕೆಗಳನ್ನು ನೀಡಿ ಪದೇ ಪದೇ ಎಡವಟ್ಟು ಮಾಡಿಕೊಳ್ಳುತ್ತಿರುವ ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಖಾತೆ ಬದಲಿಸಬೇಕೆಂಬ ಚರ್ಚೆ ಬಿಜೆಪಿಯಲ್ಲಿ ಆರಂಭವಾಗಿದೆ.

ಜ್ಞಾನೇಂದ್ರ ಅವರು ಗೃಹ ಸಚಿವರ ಹುದ್ದೆಯ ಸೂಕ್ಷ್ಮತೆ ಮರೆತು ಬಹಿರಂಗ ಹೇಳಿಕೆಗಳನ್ನು ನೀಡುತ್ತಿರುವ ಆರೋಪ ಅವರು ಸಂಪುಟ ಸೇರಿದ ದಿನದಿಂದಲೂ ಇದೆ. ಇದೇ ಕಾರಣಕ್ಕಾಗಿ ಅವರನ್ನು ಸಂಪುಟದಿಂದ ಕೈಬಿಡಬೇಕು ಅಥವಾ ಖಾತೆ ಬದಲಿಸಬೇಕು ಎಂದು ಪ್ರತಿಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ಹಲವು ಬಾರಿ ಆಗ್ರಹಿಸಿದ್ದವು.

ಜಗಜೀವನರಾಂ ನಗರದಲ್ಲಿ ಚಂದ್ರಶೇಖರ್ ಎಂಬ ಯುವಕನ ಕೊಲೆಗೆ ಸಂಬಂಧಿಸಿದಂತೆ ಮತೀಯ ಸಂಘರ್ಷದ ಬಣ್ಣ ನೀಡುವ ರೀತಿಯಲ್ಲಿ ಗೃಹ ಸಚಿವರೇ ಹೇಳಿಕೆ ನೀಡಿರುವುದು ಸಾರ್ವಜನಿಕ ವಲಯದಲ್ಲಿ ವ್ಯಾಪಕವಾಗಿ ಟೀಕೆಗೆ ಗುರಿಯಾಗಿದೆ. ಜ್ಞಾನೇಂದ್ರ ಗೃಹ ಸಚಿವರಾದ ಕೆಲವೇ ದಿನಗಳಲ್ಲಿ ಮೈಸೂರಿನಲ್ಲಿ ನಡೆದಿದ್ದ ಸಾಮೂಹಿಕ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿ 'ಕತ್ತಲೆ ಸಮಯದಲ್ಲಿ ಸಂತ್ರಸ್ತ ಯುವತಿ ಅಲ್ಲಿಗೇಕೆ ಹೋಗಬೇಕಿತ್ತು? ಈಗ ಕಾಂಗ್ರೆಸ್‌ನವರು ನನ್ನ ಮೇಲೆ ಅತ್ಯಾಚಾರ ಮಾಡುತ್ತಿದ್ದಾರೆ' ಎಂದು ಹೇಳಿದ್ದರು. ಬಳಿಕ ಹೇಳಿಕೆ ಹಿಂಪಡೆದು, ಕ್ಷಮೆ ಯಾಚಿಸಿದ್ದರು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ದನಗಳವು ಮಾಡುವವರ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳುತ್ತಿಲ್ಲ ಎಂದು ಬಿಜೆಪಿ ಕಾರ್ಯಕರ್ತರು ಗೃಹ ಸಚಿವರನ್ನು ಭೇಟಿಮಾಡಿ ದೂರು ನೀಡಿದ್ದರು. ಆ ಸ್ಥಳದಿಂದಲೇ ಪೊಲೀಸ್ ಅಧಿಕಾರಿಗೆ ಕರೆಮಾಡಿದ್ದ ಗೃಹ ಸಚಿವರು, 'ನೀವು ಪೊಲೀಸರು ಲಂಚ ತಿನ್ನುವ ನಾಯಿಗಳು...' ಎಂದು ಬೈದಿದ್ದರು.

ಜೆ.ಜೆ ನಗರದಲ್ಲಿ ಸೋಮವಾರ ತಡ ರಾತ್ರಿ ಬೈಕ್‌ಗಳ ನಡುವೆ ಡಿಕ್ಕಿ ಸಂಭವಿಸಿದ ಬಳಿಕ ನಡೆದ ಗಲಾಟೆಯಲ್ಲಿ ಚಂದ್ರಶೇಖರ್ ಕೊಲೆಯಾಗಿತ್ತು. 'ಉರ್ದುವಿನಲ್ಲಿ ಮಾತನಾಡಿಲ್ಲ ಎಂಬ ಕಾರಣಕ್ಕೆ ಚಂದ್ರಶೇಖರ್ ಅವರನ್ನು ಚುಚ್ಚಿ, ಚುಚ್ಚಿ ಕೊಲೆ ಮಾಡಲಾಗಿದೆ' ಎಂದು ಹೇಳಿದ್ದರು. ನಂತರ ಹೇಳಿಕೆ ವಾಪಸ್ ಪಡೆದು, 'ಬೈಕ್ ಡಿಕ್ಕಿ ನಂತರದ ಗಲಾಟೆಯೇ ಕೊಲೆಗೆ ಕಾರಣ' ಎಂದು ಸಮಜಾಯಿಷಿ ನೀಡಿದ್ದರು.

ಗೃಹ ಸಚಿವರ ಹೇಳಿಕೆ ಸಮಾಜದ ಶಾಂತಿಗೆ ಭಂಗ ತರುವಂತಹದ್ದು. ಅವರ ವಿರುದ್ಧ ಪ್ರಕರಣ ದಾಖಲಿಸುತ್ತೇವೆ. ಅವರು ರಾಜೀನಾಮೆ ನೀಡಿ ತೀರ್ಥಹಳ್ಳಿ ಕ್ಷೇತ್ರದ ಮರ್ಯಾದೆ ಉಳಿಸಬೇಕು

ಕಿಮ್ಮನೆ ರತ್ನಾಕರ, ಮಾಜಿ ಸಚಿವ

'ನಾನು ಯಾವುದೇ ಸ್ಥಾನದ ಆಕಾಂಕ್ಷಿ ಅಲ್ಲ'

ಬೆಂಗಳೂರು: 'ನಾನು ಯಾವುದೇ ಸ್ಥಾನದ ಆಕಾಂಕ್ಷಿ ಅಲ್ಲ. ಪಕ್ಷದ ಕಾರ್ಯಕರ್ತ. ಪಕ್ಷ ನೀಡುವ ಜವಾಬ್ದಾರಿ ನಿಭಾಯಿಸಲು ಬದ್ಧ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಹೆಸರು ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಬಿಜೆಪಿಯಲ್ಲಿ ಯಾವುದೂ ಶಾಶ್ವತ ಅಲ್ಲ. ಕಾಲಕಾಲಕ್ಕೆ ಬದಲಾವಣೆಗಳು ಆಗುತ್ತಿರುತ್ತವೆ' ಎಂದರು.

ಭಾಷೆಯೂ ಕೊಲೆಗೆ ಕಾರಣ: 'ಜೆಜೆ ನಗರದಲ್ಲಿ ಚಂದ್ರು ಎಂಬಾತನ ಕೊಲೆ ಘಟನೆಗೆ ಸಂಬಂಧಿಸಿದಂತೆ ಗೃಹ ಸಚಿವರು ನೀಡಿದ್ದ ಹೇಳಿಕೆಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ. ಆದರೆ, ಕೆಲವೊಮ್ಮೆ ಪೊಲೀಸರು ಸತ್ಯ ಸಂಗತಿ ಹೇಳುವುದಕ್ಕಿಂತಲೂ, ಮುಂದೆ ಆಗಬಹುದಾದ ಗಲಾಟೆ ತಡೆಯುವ ಪ್ರಯತ್ನ ಮಾಡುತ್ತಾರೆ. ಪೊಲೀಸರೇ ಸಚಿವರ ಬಾಯಿಂದ ಸುಳ್ಳು ಹೇಳಿಸಿರುತ್ತಾರೆ. ಮೃತನ ತಾಯಿ ಹೇಳಿಕೆ ಗಮನಿಸಿದರೆ, ಭಾಷೆ ಕೂಡ ಕೊಲೆಗೆ ಕಾರಣವಾಗಿದೆ' ಎಂದರು.

'ನಾನು ಕೋಮು ಕದಡುವ ಹೇಳಿಕೆ ನೀಡಿಲ್ಲ. ಮೃತ ಚಂದ್ರು ತಾಯಿಯ ಹೇಳಿಕೆ ಆಧರಿಸಿ ಮಾತನಾಡಿದ್ದೇನೆ. ಬೈಕ್ ಅಪಘಾತದಿಂದ ಹಾನಿ ಆಗಿಲ್ಲ, ಗಾಯ ಕೂಡ ಆಗಿಲ್ಲ. ಭಾಷೆಯೂ ಒಂದು ನೆಪವಾಗಿದೆ' ಎಂದು ಹೇಳಿದರು.

ಆರಗ ಜ್ಞಾನೇಂದ್ರ ಪರ ಈಶ್ವರಪ್ಪ ವಕಾಲತ್ತು

ಶಿವಮೊಗ್ಗ: 'ಚಂದ್ರಶೇಖರ್ ಕೊಲೆ ಪ್ರಕರಣದಲ್ಲಿ ಪ್ರಾಥಮಿಕ ಮಾಹಿತಿಯನ್ನು ಆಧರಿಸಿ ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿಕೆ ನೀಡಿದ್ದಾರೆ. ಅದು ತಪ್ಪು ಎಂದು ತಿಳಿದ ತಕ್ಷಣವೇ ಮತ್ತೆ ಪ್ರತಿಕ್ರಿಯೆ ನೀಡಿದ್ದಾರೆ. ಅದರಲ್ಲಿ ತಪ್ಪು ಏನಿದೆ' ಎಂದು ಸಚಿವ ಕೆ.ಎಸ್. ಈಶ್ವರಪ್ಪ ಪ್ರಶ್ನಿಸಿದರು. 'ಕಾಂಗ್ರೆಸ್, ಜೆಡಿಎಸ್ ನಾಯಕರು ಇಂತಹ ಎಷ್ಟು ಹೇಳಿಕೆ ಕೊಟ್ಟು, ನಂತರ ತಪ್ಪು ತಿದ್ದಿಕೊಂಡು ಮಾತನಾಡಿಲ್ಲ' ಎಂದು ಅವರು ಗೃಹ ಸಚಿವರನ್ನು ಸಮರ್ಥಿಸಿಕೊಂಡರು.

ಆರಗ ವಿರುದ್ಧ ಪೊಲೀಸ್ ಠಾಣೆಗೆ ದೂರು

ಶಿವಮೊಗ್ಗ: ಜಿಲ್ಲಾ ಕಾಂಗ್ರೆಸ್ ಮುಖಂಡರು ಜಯನಗರ ಠಾಣೆಯಲ್ಲಿ ಆರಗ ಜ್ಞಾನೇಂದ್ರ ವಿರುದ್ಧ ಜಾತಿ–ಧರ್ಮಗಳ ನಡುವೆ ವೈಷಮ್ಯಕ್ಕೆ ಕಾರಣವಾಗುವ ಹೇಳಿಕೆ ನೀಡಿದ್ದಕ್ಕೆ ದೂರು ಸಲ್ಲಿಸಿದ್ದಾರೆ. ಭದ್ರಾವತಿ ನಗರ ಮತ್ತು ಗ್ರಾಮಾಂತರ ಯುವ ಕಾಂಗ್ರೆಸ್ ಕಾರ್ಯಕರ್ತರು ಭದ್ರಾವತಿ ಹಳೆ ನಗರ ಠಾಣೆಗೆ ಇದೇ ವಿಚಾರವಾಗಿ ದೂರು ನೀಡಿದ್ದಾರೆ.

ಜ್ಞಾನೇಂದ್ರ ವಜಾ; ಡಿಕೆಶಿ ಆಗ್ರಹ

ಬೆಂಗಳೂರು: 'ಸಮಾಜದಲ್ಲಿ ಅಶಾಂತಿ, ಜಾತಿ, ಧರ್ಮಗಳ ಮಧ್ಯೆ ವೈಷಮ್ಯ ಪ್ರಚೋದಿಸುವಂಥ ಹೇಳಿಕೆ ನೀಡಿರುವ ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು ಸಂಪುಟದಿಂದ ವಜಾ ಮಾಡಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಗೃಹ ಸಚಿವರ ವಿರುದ್ಧ ಪೊಲೀಸ್ ಆಯುಕ್ತರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಬೇಕು. ಕೇಸ್ ದಾಖಲಿಸದಿದ್ದರೆ ಪಕ್ಷದ ವತಿಯಿಂದ ನಾವು ದೂರು ಸಲ್ಲಿಸುತ್ತೇವೆ. ಜನರ ಮುಂದೆ ಹೋಗುತ್ತೇವೆ' ಎಂದರು.

'ಗೃಹ ಸಚಿವರಿಗೆ ಸಾಮಾನ್ಯ ಪ್ರಜ್ಞೆ ಎಂಬುದೇ ಇಲ್ಲವಾಗಿದೆ. ಅವರು ಗೃಹ ಸಚಿವರಾಗಿ ಆ ಸ್ಥಾನದ ಪರವಾಗಿ ಮಾತನಾಡುತ್ತಿದ್ದಾರಾ, ಸರ್ಕಾರದ ಪರವಾಗಿ ಮಾತನಾಡುತ್ತಿದ್ದಾರಾ, ತಮ್ಮ ಪಕ್ಷ ಬಿಜೆಪಿ ಪರ ಮಾತನಾಡುತ್ತಿದ್ದಾರಾ ಎಂಬ ಪ್ರಶ್ನೆ ಮೂಡುತ್ತದೆ' ಎಂದರು.

'ಕೋಮು ವಿವಾದ ಬಿಜೆಪಿಗೆ ತಿರುಗುಬಾಣ'

ವಿಜಯಪುರ: 'ಮತಕ್ಕಾಗಿ ಹಿಜಾಬ್, ಹಲಾಲ್, ಆಜಾನ್ ಹಾಗೂ ಜಾತ್ರೆ ಮತ್ತು ದೇವಸ್ಥಾನಗಳ ಬಳಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧದಂತಹ ವಿವಾದಗಳು ಬಿಜೆಪಿಗೆ ತಿರುಗುಬಾಣವಾಗಲಿದೆ' ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ ಎಚ್ಚರಿಕೆ ನೀಡಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಿಜೆಪಿ, ಸಂಘ ಪರಿವಾರದ ಈ ಅತಿರೇಕಗಳು ರಾಜ್ಯದ ಅಭಿವೃದ್ಧಿಗೆ ಮಾರಕವಾಗಲಿವೆ. ಕೈಗಾರಿಕೆಗಳು, ಉದ್ಯಮಿಗಳು ರಾಜ್ಯಕ್ಕೆ ಬರಲು ಹಿಂಜರಿಯುತ್ತಾರೆ. ಇಂಥ ವಿವಾದಗಳ ಪರಿಣಾಮವಾಗಿ ಹೈದರಾಬಾದ್, ಬೆಳಗಾವಿಯಂತಹ ನಗರಗಳಿಗೆ ಇಂದಿಗೂ ಕೈಗಾರಿಕೆಗಳು ಹಾಗೂ ಉದ್ಯಮಿಗಳು ಬರುತ್ತಿಲ್ಲ' ಎಂದರು. 'ಬೆಂಗಳೂರಿನಲ್ಲಿ ಯುವಕನ ಹತ್ಯೆ ವಿಚಾರದಲ್ಲಿ ಗೃಹ ಸಚಿವರ ಅರಗ ಜ್ಞಾನೇಂದ್ರ ವಿವಾದಾತ್ಮಕ ಹಾಗೂ ಬೇಜವಾಬ್ದಾರಿ ಹೇಳಿಕೆ ನೀಡಿದ್ದಾರೆ. ಯಾರೋ ನೀಡಿದ ಹೇಳಿಕೆ ಆಧರಿಸಿ ಹೇಳಿದ್ದಾರೆ' ಎಂದು ಟೀಕಿಸಿದರು.

'ರಾಜ್ಯದಲ್ಲಿ ಕೋಮುಸೌಹಾರ್ದ ಕೆಡಿಸುವ ಕೆಲಸ ಮಾಡಲಾಗುತ್ತಿದೆ. ಬದುಕನ್ನು ಕಟ್ಟುವ ಕೆಲಸವಾಗಬೇಕು. ರಾಜ್ಯ ಸರ್ಕಾರದಿಂದ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ. ಸರ್ಕಾರದ ಬಳಿ ಹಣವಿಲ್ಲ. ಹಸಿದವರಿಗೆ ಅನ್ನ ಇಲ್ಲ. ಈ ಎಲ್ಲ ಸಮಸ್ಯೆಗಳನ್ನು ಮುಚ್ಚಿಹಾಕಲು ಭಾವನಾತ್ಮಕ ವಿಚಾರಗಳನ್ನು ಕೆದಕುತ್ತಿದೆ. ಯಾವುದೇ ಕಾರಣಕ್ಕೂ ಭಾರತ ಶ್ರೀಲಂಕಾ ಆಗಬಾರದು' ಎಂದರು.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ಸಿನಿಮಾತು
'ಕಬ್ಜ' ಕೋಟೆಗೆ ಶ್ರಿಯಾ ಎಂಟ್ರಿ
ನಾಳೆ
ಅಮೃತಧಾರೆ
ನಾಗತಿಹಳ್ಳಿ ಚಂದ್ರಶೇಖರ್ ಚಿತ್ರ ನಿರ್ದೇಶಕ
ಸೆಲೆಬ್ರಿಟಿ LIVE
ಬೆಳಿಗ್ಗೆ 11 ರಿಂದ 12

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 'ಇನ್ಫೊಸಿಸ್ ಬ್ಲಾಕ್' ಅನಾವರಣಗೊಳಿಸಿದರು. ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್‌.ಟಿ.ಸೋಮಶೇಖರ್, ಶಾಸಕರಾದ ಎಸ್‌.ಎ.ರಾಮದಾಸ್, ಎಲ್‌.ನಾಗೇಂದ್ರ, ನಟ ಶಿವರಾಜ್‌ಕುಮಾರ್, ಶಕ್ತಿಧಾಮದ ಉಪಾಧ್ಯಕ್ಷ ಕೆಂಪಯ್ಯ, ಅಧ್ಯಕ್ಷೆ ಗೀತಾ ಶಿವರಾಜ್‌ಕುಮಾರ್, ಟ್ರಸ್ಟಿ ಸುಮನಾ ಇದ್ದಾರೆ

'ಶಕ್ತಿಧಾಮಕ್ಕೆ ₹ 5 ಕೋಟಿ ಅನುದಾನ'

ಪ್ರಜಾವಾಣಿ ವಾರ್ತೆ

ಮೈಸೂರು: 'ಮಹಿಳೆಯರ ಪುನರ್ವಸತಿ ಮತ್ತು ಅಭಿವೃದ್ಧಿ ಕೇಂದ್ರ 'ಶಕ್ತಿಧಾಮ'ದಲ್ಲಿ ವಿದ್ಯಾಶಾಲೆ ಕಟ್ಟಡ ನಿರ್ಮಾಣಕ್ಕೆ ₹ 5 ಕೋಟಿ ಅನುದಾನ ನೀಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಇಲ್ಲಿ ಘೋಷಿಸಿದರು.

ಶಕ್ತಿಧಾಮದ ಆವರಣದಲ್ಲಿ ಇನ್ಫೊಸಿಸ್ ಪ್ರತಿಷ್ಠಾನವು ₹ 3 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ 'ಇನ್ಫೊಸಿಸ್ ಬ್ಲಾಕ್' ಅನಾವರಣ ಹಾಗೂ 'ಶಕ್ತಿಧಾಮ ವಿದ್ಯಾಶಾಲಾ' ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

'ನಾವೆಲ್ಲಾ ಅಂತಃಕರಣ ಕಳೆದುಕೊಂಡಾಗ ಬಹಳಷ್ಟು ಮಕ್ಕಳು ಅನಾಥರಾಗುತ್ತಾರೆ, ಶೋಷಣೆಗೆ ಒಳಗಾಗುತ್ತಾರೆ. ಅನಾಥ ಮಕ್ಕಳು ಎಂದು ಕರೆಯಬೇಡಿ. ಮಕ್ಕಳಲ್ಲೇ ದೇವರು ಇದ್ದಾನೆ. ಹೀಗಾಗಿ, ದೇವರ ಮಕ್ಕಳು ಎನ್ನೋಣ. ಶೋಷಿತರು, ಪೀಡಿತರು ಹಾಗೂ ದುರ್ಬಲ ವರ್ಗದವರನ್ನು ಸಮಾಜ ಹಾಗೂ ಸರ್ಕಾರವೇ ಕೈಹಿಡಿದು ನಡೆಸಬೇಕು. ದೊಡ್ಡ ಮಾತುಗಳನ್ನಾಡಿದರೆ ಸಾಲದು' ಎಂದರು.

ಶಕ್ತಿಧಾಮದ ಹೆಣ್ಣು ಮಕ್ಕಳಿಗಾಗಿ ವಿದ್ಯಾಶಾಲೆ ಆರಂಭಿಸಬೇಕೆಂಬ ನಟ ಪುನೀತ್ ರಾಜ್‌ಕುಮಾರ್ ಅವರ ಕನಸು ಈಗ ನೆರವೇರಿದೆ. 'ಇನ್ಫೊಸಿಸ್ ಬ್ಲಾಕ್'ನಲ್ಲಿ ಅಡುಗೆ ಕೋಣೆ, ಊಟದ ಹಾಲ್, ಯೋಗಾಸನ ಸಭಾಂಗಣ, ಗ್ರಂಥಾಲಯ ಹಾಗೂ ವಿವಿಧೋದ್ದೇಶಿತ ಸಭಾಂಗಣವಿದೆ.

ಶಕ್ತಿಧಾಮದ ಅಧ್ಯಕ್ಷೆ ಗೀತಾ ಶಿವರಾಜ್‌ಕುಮಾರ್, 'ಹೊಸ ಕಟ್ಟಡ ನಿರ್ಮಾಣವಾಗುವವರೆಗೆ ಇಲ್ಲಿನ ಕೌಶಲ ಕಟ್ಟಡದಲ್ಲಿ ಜೂನ್‌ನಿಂದ ತರಗತಿಗಳು ನಡೆಯಲಿವೆ' ಎಂದರು. 1ರಿಂದ 8ನೇ ತರಗತಿ ಆರಂಭಿಸಲು ಸರ್ಕಾರದಿಂದ ಈಚೆಗೆ ಅನುಮತಿ ದೊರೆತಿತ್ತು.

ಕಾಂಗ್ರೆಸ್ ಮುಖಂಡ ಮಧು ಬಂಗಾರಪ್ಪ ಆರೋಪ

ಜನರ ಕಷ್ಟಕ್ಕೆ ಹೋರಾಡದ ಆರ್‌ಎಸ್‌ಎಸ್

ಪ್ರಜಾವಾಣಿ ವಾರ್ತೆ

ಸೊರಬ: 'ಬಿಜೆಪಿಯ ಅಂಗ ಸಂಸ್ಥೆಗಳಾದ ಆರ್‌ಎಸ್‌ಎಸ್ ಹಾಗೂ ಬಜರಂಗದಳ ಈ ದೇಶದ ಜನರು ಕಷ್ಟದಲ್ಲಿದ್ದಾಗ ಹೋರಾಡಿದ ಉದಾಹರಣೆಗಳಿಲ್ಲ. ಆದರೆ, ದ್ವೇಷಕ್ಕಾಗಿ ಧಾರ್ಮಿಕ ಭಾವನೆ ಕೆರಳಿಸಿ ಬಿಜೆಪಿಗೆ ರಾಜಕೀಯ ಲಾಭ ಮಾಡಿಕೊಡಲು ಹೋರಾಟ ಮಾಡುತ್ತಿವೆ' ಎಂದು ಕಾಂಗ್ರೆಸ್ ಮುಖಂಡ ಮಧು ಬಂಗಾರಪ್ಪ ಆರೋಪಿಸಿದರು.

ಪಟ್ಟಣದಲ್ಲಿ ಗುರುವಾರ ನಡೆದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, 'ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನರ ಬದುಕು ದುಸ್ತರವಾಗಿದೆ. ಇಂತಹ ಸಂದರ್ಭದಲ್ಲಿ ಜನರ ಕಷ್ಟಕ್ಕೆ ಸ್ಪಂದಿಸುವುದನ್ನು ಬಿಟ್ಟು ಹಿಂದೂಪರ ಸಂಘಟನೆಗಳು ಕೋಮು ಸೌಹಾರ್ದ ಕದಡುವ ಕೆಲಸ ಮಾಡುತ್ತಿವೆ. ಆರ್‌ಎಸ್‌ಎಸ್ ಹಾಗೂ ಬಜರಂಗದಳ ಸೇರಿ ಬಿಜೆಪಿ ಪರಿವಾರದ ಸಂಸ್ಥೆಗಳು ಆ ಪಕ್ಷಕ್ಕೆ ಅಧಿಕಾರ ಕೊಡಿಸಲು ತೋರುವ ಬದ್ಧತೆಯನ್ನು ಮತದಾರರ ಬಗ್ಗೆ ತೋರುತ್ತಿಲ್ಲ' ಎಂದು ವಾಗ್ದಾಳಿ ನಡೆಸಿದರು.

ಮಧು ಬಂಗಾರಪ್ಪ

'ಜನರ ಪರವಾಗಿ ಹೋರಾಟ ಮಾಡುವುದಾರೆ ನಾನು ನಿಮ್ಮ ಜೊತೆ ಕೈಜೋಡಿಸುತ್ತೇನೆ. ಕೇವಲ ಅಧಿಕಾರಕ್ಕಾಗಿ ಧರ್ಮಕೇಂದ್ರಿತ ನಿಲುವುಗಳನ್ನು ಮುಂದಿಟ್ಟುಕೊಂಡು ಸಮಾಜದಲ್ಲಿ ಧರ್ಮ ಹಾಗೂ ಜಾತಿಗಳ ನಡುವೆ ವಿಷ ಬೀಜ ಬಿತ್ತಿ ಸಾಮರಸ್ಯ ಕದಡಲು ಹೊರಟರೆ ಕಾಂಗ್ರೆಸ್ ಸಹಿಸುವುದಿಲ್ಲ' ಎಂದು ಎಚ್ಚರಿಸಿದರು.

'ಕೇಸರೀಕರಣದಿಂದ ದೇಶದ ಅಭಿವೃದ್ಧಿ ಸಾಧ್ಯವಿಲ್ಲ ಎನ್ನುವ ವಾಸ್ತವ ಬಿಜೆಪಿಗೆ ಗೊತ್ತಾಗಬೇಕಿದೆ. ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಜನರ ವಿಶ್ವಾಸ ಕಳೆದುಕೊಂಡಿರುವುದನ್ನು ಮರೆಮಾಚಲು ಹಿಜಾಬ್, ಹಲಾಲ್ ಗಲಭೆ ಎಬ್ಬಿಸಿವೆ' ಎಂದು ದೂರಿದರು.

'ಮುಸ್ಲಿಮರ ಮತಕ್ಕಾಗಿ ಪೈಪೋಟಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ಅಲ್ಪಸಂಖ್ಯಾತರ ಧ್ವನಿ ನಾನಾ, ನೀನಾ ಎಂಬ ಕುರಿತು ಎಚ್‌.ಡಿ. ಕುಮಾರಸ್ವಾಮಿ ಮತ್ತು ಸಿದ್ದರಾಮಯ್ಯ ನಡುವೆ ಸ್ಪರ್ಧೆ ಏರ್ಪಟ್ಟಿದೆ. ಮತಗಳಿಕೆ ವ್ಯಾಪಾರದಲ್ಲಿ ಸಕ್ರಿಯರಾಗಿರುವುದರಿಂದ ಇಬ್ಬರೂ, ಬಿಜೆಪಿ ಸರ್ಕಾರದ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಟೀಕಿಸಿದರು.

ಗುರುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ವಿರೋಧ ಪಕ್ಷಗಳು ಟೀಕಿಸುವಂತೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೌನಿ ಅಲ್ಲ. ಎಲ್ಲ ವಿಚಾರಗಳಲ್ಲೂ ಅವರು ಸ್ಪಷ್ಟತೆಯಿಂದ ಮಾತನಾಡಬಲ್ಲರು' ಎಂದರು.

'ಮಂಡ್ಯದ ವಿದ್ಯಾರ್ಥಿನಿ ಬೇಬಿ ಮುಸ್ಕಾನ್ ಖಾನ್ ಅವರನ್ನು ಹೊಗಳಿ ಅಲ್‌ ಕೈದಾ ಮುಖ್ಯಸ್ಥ ನೀಡಿದ್ದ ಹೇಳಿಕೆಯನ್ನು ಸಿದ್ದರಾಮಯ್ಯ ಖಂಡಿಸದೇ, ಬಾಲಿಶ ಹೇಳಿಕೆ ನೀಡಿರುವುದು ಸರಿಯಲ್ಲ' ಎಂದು ಕಿಡಿಕಾರಿದರು.

ಸಂಬಂಧಿಸಿದವರು ಹೇಳುತ್ತಾರೆ (ಮದ್ದೂರು ವರದಿ): 'ನಿವೃತ್ತ ಐಪಿಎಸ್ ಅಧಿಕಾರಿ, ಎಎಪಿ ಮುಖಂಡ ಭಾಸ್ಕರ್ ರಾವ್ ಹೇಳಿಕೆಗೆ ನಾವು ಉತ್ತರ ಕೊಡಬಾರದು. ಸಂಬಂಧಿಸಿದವರು ಹೇಳಿಕೆ ಕೊಡುತ್ತಾರೆ' ಎಂದು ಸಚಿವರು ಪ್ರತಿಕ್ರಿಯಿಸಿದರು.

ಆರೋಪ ಕೈಬಿಡಲು ಸಿಬಿಐ ಅರ್ಜಿ

ಒಂದನೇ ಪುಟದಿಂದ

ಅಲ್ಲದೇ ಆ ಅಧಿಕಾರಿಯು ತನ್ನ ಅಧೀನ ಅಧಿಕಾರಿಯೊಂದಿಗೆ ಶಾಮೀಲಾಗಿ ಸಾಕ್ಷ್ಯಗಳನ್ನು ನಾಶ ಮಾಡಿದ್ದಾರೆ. ಈ ಕೃತ್ಯವು ಭಾರತೀಯ ದಂಡ ಸಂಹಿತೆ ಸೆಕ್ಷನ್ 201ರ ಪ್ರಕಾರ ಅಪರಾಧವಾಗುತ್ತದೆ. ಸಾಕ್ಷ್ಯ ನಾಶ ಮಾಡಿದವರು ಯಾರು? ಇದಕ್ಕೆ ಹೊಣೆ ಯಾರು ಎಂದು ಸರಿಯಾಗಿ ತನಿಖೆ ನಡೆಸಿಲ್ಲ. ತನಿಖಾಧಿಕಾರಿಯೂ ಈ ವಿಚಾರಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕತ್ತಲೆಯಲ್ಲಿರಿಸಿದ್ದಾರೆ' ಎಂಬ ಅಂಶವನ್ನೇ ಆದೇಶದಿಂದ ಕೈಬಿಡುವಂತೆ ಕೋರಲಾಗಿದೆ.

'ಕೇಂದ್ರೀಯ ವಿಧಿ ವಿಜ್ಞಾನ ಪ್ರಯೋಗಾಲಯದ (ಸಿಎಫ್‌ಎಸ್‌ಎಲ್) ವರದಿ ಇನ್ನೂ ಸಲ್ಲಿಕೆಯಾಗಿರಲಿಲ್ಲ. ಸಿಎಫ್‌ಎಸ್‌ಎಲ್ ವರದಿ ಕೈಸೇರುವ ಮುನ್ನವೇ ತರಾತುರಿಯಲ್ಲಿ 'ಬಿ' ವರದಿ ಸಲ್ಲಿಸಿದ್ದು, ಇದು ಕಾನೂನು ಸಮ್ಮತವಲ್ಲ. ತನಿಖಾಧಿಕಾರಿಯು ಸಮರ್ಪಕವಾಗಿ ತನಿಖೆ ನಡೆಸಿಲ್ಲ ಎಂಬುದನ್ನು ಇದು ತೋರಿಸುತ್ತದೆ' ಎಂಬ ಪ್ಯಾರಾವನ್ನೂ ಕೈಬಿಡಬೇಕೆಂಬ ಮನವಿ ಅರ್ಜಿಯಲ್ಲಿದೆ.

'ತನಿಖಾಧಿಕಾರಿ ಈ ಪ್ರಕರಣದಲ್ಲಿ ಕೆಲವು ಹಿರಿಯ ಅಧಿಕಾರಿಗಳಿಗೆ ಸಹಾಯ ಮಾಡಲು ಮತ್ತು ಅವರಿಂದ ಮೆಚ್ಚುಗೆ ಪಡೆಯುವುದಕ್ಕಾಗಿ ತನಿಖೆಯನ್ನೇ ನಡೆಸದೆ 'ಬಿ' ವರದಿ ಸಲ್ಲಿಸಿದ್ದಾರೆ' ಎಂಬ ಅಭಿಪ್ರಾಯವನ್ನೂ ಕೈಬಿಡುವಂತೆ ತನಿಖಾ ಸಂಸ್ಥೆ ಮನವಿ ಮಾಡಿದೆ.

'ವಿಚಾರಣಾ ನ್ಯಾಯಾಲಯವು ತನಿಖಾಧಿಕಾರಿಯು ಸಲ್ಲಿಸಿದ ವರದಿ ಮತ್ತು ಪೂರಕ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸದೇ ಈ ರೀತಿಯ ಅಭಿಪ್ರಾಯವನ್ನು ನೀಡಿದೆ. ತನಿಖಾಧಿಕಾರಿ ಅಥವಾ ತನಿಖಾ ಸಂಸ್ಥೆಗೆ ವರದಿಯಲ್ಲಿನ ವಿಚಾರಗಳಿಗೆ ಸಂಬಂಧಿಸಿದಂತೆ ವಿವರಣೆ ನೀಡುವ, ಸಮರ್ಥಿಸಿಕೊಳ್ಳುವ ಅವಕಾಶವನ್ನೇ ನೀಡದೆ ನ್ಯಾಯಾಧೀಶರು ತಪ್ಪು ಗ್ರಹಿಕೆಯಿಂದ ಹೀಗೇ ಉಲ್ಲೇಖಿಸಿದ್ದಾರೆ. ಈ ಅಭಿಪ್ರಾಯಗಳನ್ನು ಆದೇಶದಿಂದ ತೆಗೆದು ಹಾಕದಿದ್ದರೆ ಸಿಬಿಐ ವರ್ಚಸ್ಸಿಗೆ ಧಕ್ಕೆಯಾಗುತ್ತದೆ' ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಘಟನೆ

₹ 1.50 ಕೋಟಿ ವ್ಯತ್ಯಾಸ: ಬೆಂಕಿ ಹಚ್ಚಿ ಮಗನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಫ್ಯಾಬ್ರಿಕೇಷನ್ ಉದ್ಯಮದ ಲೆಕ್ಕದಲ್ಲಿ ₹ 1.50 ಕೋಟಿ ವ್ಯತ್ಯಾಸ ಆಯಿತು' ಎಂಬ ಕಾರಣಕ್ಕೆ ಅರ್ಪಿತ್ (25) ಎಂಬುವರನ್ನು ಬೆಂಕಿ ಹಚ್ಚಿ ಕೊಲೆ ಮಾಡಲಾಗಿದ್ದು, ಈ ಸಂಬಂಧ ಮೃತ ಯುವಕನ ತಂದೆ ಸುರೇಂದ್ರಕುಮಾರ್ ಅಲಿಯಾಸ್ ಬಾಬು (51) ಅವರನ್ನು ಚಾಮರಾಜಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಅರ್ಪಿತ್‌ಗೆ ಸುಟ್ಟ ಗಾಯಗಳಾಗಿದ್ದು, ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಗುರುವಾರ (ಏ.7) ಮೃತಪಟ್ಟಿದ್ದಾರೆ. ಕೊಲೆ ಆರೋಪದಡಿ ತಂದೆಯನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಆರೋಪಿಯು ತಪ್ಪೊಪ್ಪಿಗೆ ನೀಡಿದ್ದು, ಮಹಜರು ನಡೆಸಬೇಕಿದೆ. ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿ ಕೋರ್ಟ್‌ಗೆ ಹಾಜರುಪಡಿಸಲಾಗುವುದು. ಹೆಚ್ಚಿನ ವಿಚಾರಣೆಗಾಗಿ

ಸುರೇಂದ್ರ ಕುಮಾರ್

ಅರ್ಪಿತ್

ಕಸ್ಟಡಿಗೆ ನೀಡುವಂತೆ ಕೋರಲಾಗುವುದು' ಎಂದು ತಿಳಿಸಿದರು.

ಒಬ್ಬನೇ ಮಗ: 'ಫ್ಯಾಬ್ರಿಕೇಷನ್ ಉದ್ಯಮಿ ಸುರೇಂದ್ರಕುಮಾರ್ ಅವರಿಗೆ ಅರ್ಪಿತ್ ಒಬ್ಬನೇ ಮಗ. ಇನ್ನೊಬ್ಬ ಮಗಳಿದ್ದಾಳೆ. ಬಿ.ಕಾಂ ಪದವಿ ಮುಗಿಸಿದ್ದ ಅರ್ಪಿತ್, ಲೆಕ್ಕ ಪರಿಶೋಧಕ (ಸಿಎ) ಆಗಲು ಹಲವು ಬಾರಿ ಅರ್ಹತಾ ಪರೀಕ್ಷೆ ಬರೆದಿದ್ದರು. ಯಶಸ್ಸು ಸಾಧಿಸಿರಲಿಲ್ಲ. ಹೀಗಾಗಿ, ಅವರನ್ನು ಉದ್ಯಮದ ಲೆಕ್ಕಪತ್ರ ನೋಡಿಕೊಳ್ಳಲು ತಂದೆಯೇ ನಿಯೋಜಿಸಿದ್ದರು' ಎಂದು ವಿವರಿಸಿದರು.

'ಉದ್ಯಮದ ಲೆಕ್ಕದಲ್ಲಿ ₹ 1.50 ಕೋಟಿ ವ್ಯತ್ಯಾಸ ಬಂದಿತ್ತು. ಸಿಟ್ಟಾದ ತಂದೆ, ಮಗನನ್ನು ಪ್ರಶ್ನಿಸಿದ್ದರು. ಈ ಬಗ್ಗೆ ಹಲವು ಬಾರಿ ವಾಗ್ವಾದವಾಗಿತ್ತು. ಕೈ ಕೈ ಮಿಲಾಯಿಸುವ ಹಂತಕ್ಕೂ ತಲುಪಿತ್ತು' ಎಂದರು.'ಕೆಲ ದಿನಗಳ ಹಿಂದೆ ₹ 12 ಸಾವಿರ ಅನ್ನು ಅರ್ಪಿತ್ ಕಳೆದುಕೊಂಡಿದ್ದರು. ಇದೂ ತಂದೆಗೆ ಸಿಟ್ಟು ತರಿಸಿತ್ತು. ಏಪ್ರಿಲ್ 1ರ ಮಧ್ಯಾಹ್ನ ಲೆಕ್ಕದ ವ್ಯತ್ಯಾಸ ಹಾಗೂ ಹಣ ಕಳೆದುಕೊಂಡ ವಿಚಾರ ಪ್ರಸ್ತಾಪವಾಗಿ, ಜಗಳ ಆರಂಭವಾಗಿತ್ತು. ಮಗನ ಮೇಲೆ ಹಲ್ಲೆ ನಡೆಸಲು ಮುಂದಾಗಿದ್ದ ತಂದೆ, ಮನೆಯಿಂದ ಹೊರಗೆ ಎಳೆದು ತಂದಿದ್ದರು. ಮೈ ಮೇಲೆ ಥಿನ್ನರ್ ಎರಚಿ ಬೆಂಕಿ ಹಚ್ಚಿದ್ದರು.'

'ಮೈ ಮೇಲೆ ಬೆಂಕಿ ಉರಿಯುತ್ತಿದ್ದಾಗಲೇ ಅರ್ಪಿತ್ ಕಿರುಚಾಡುತ್ತ ರಸ್ತೆಯಲ್ಲೆಲ್ಲ ಓಡಾಡಿದ್ದರು. ರಕ್ಷಣೆಗೆ ಬಂದ ಸ್ಥಳೀಯರು, ಬೆಂಕಿ ನಂದಿಸಿದ್ದರು. ಸ್ಥಳೀಯರ ಸಹಾಯದಿಂದ ತಂದೆಯೇ ಅರ್ಪಿತ್ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದು ಸೇರಿಸಿದ್ದರು. ಜೊತೆಗೆ, ಆಸ್ಪತ್ರೆಯಲ್ಲೇ ಇದ್ದುಕೊಂಡು ಮಗನ ಆರೈಕೆ ಸಹ ಮಾಡುತ್ತಿದ್ದರು' ಎಂದೂ ತಿಳಿಸಿದರು.

'ತಂದೆ ರಕ್ಷಿಸಲು ಸುಳ್ಳು ಹೇಳಿಕೆ'

'ತಂದೆಯೇ ಬೆಂಕಿ ಹಚ್ಚಿದ್ದರೆಂಬ ಸಂಗತಿ ಗೊತ್ತಾದರೆ, ಅವರನ್ನು ಪೊಲೀಸರು ಬಂಧಿಸುತ್ತಾರೆ ಎಂದು ಅರ್ಪಿತ್ ಅಂದುಕೊಂಡಿದ್ದರು. ಅದೇ ಕಾರಣಕ್ಕೆ, ಸುಳ್ಳು ಹೇಳಿಕೆ ನೀಡಿದ್ದರು' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಆಸ್ಪತ್ರೆಯಲ್ಲಿ ಪೊಲೀಸರಿಗೆ ಅರ್ಪಿತ್, 'ಮನೆಯಲ್ಲಿ ಕೆಲಸ ಮಾಡುವಾಗ ಆಕಸ್ಮಿಕವಾಗಿ ಬೆಂಕಿ ತಗುಲಿತ್ತು' ಎಂದಿದ್ದರು. ಅರ್ಪಿತ್ ಸಾವಿನ ನಂತರ ಪ್ರತ್ಯಕ್ಷದರ್ಶಿಗಳು ಠಾಣೆಗೆ ಬಂದು ವಿಷಯ ತಿಳಿಸಿದರು' ಎಂದರು.

'ಪ್ರಾಥಮಿಕ ತನಿಖೆಯಲ್ಲಿ ಸಿಸಿಟಿವಿ ಕ್ಯಾಮೆರಾ ದೃಶ್ಯ ಪರಿಶೀಲಿಸಿದ್ದು, ಅದರಲ್ಲಿ ತಂದೆಯೇ ಬೆಂಕಿ ಹಚ್ಚುತ್ತಿರುವುದು ಸೆರೆಯಾಗಿತ್ತು. ಅದನ್ನೇ ಪುರಾವೆಯಾಗಿಸಿ ಪ್ರಕರಣ ದಾಖಲಿಸಲಾಗಿದೆ' ಎಂದರು.

'ಮೋದಿ ಸರ್ಕಾರದಿಂದ ದರೋಡೆ, ಸುಲಿಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಹಾಗೂ ಮೋದಿ ಸರ್ಕಾರ ನಿತ್ಯವೂ ಬೆಲೆ ಏರಿಕೆಯ ಲೂಟಿ, ದರೋಡೆ, ಸುಲಿಗೆಯ ಮೂಲಕ ದುಬಾರಿಯನ್ನು ಸಂಭ್ರಮಿಸಿ, ಜನರ ಜೀವನವನ್ನು ಅಣಕಿಸುತ್ತಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಅಜಯ್ ಮಾಕನ್ ಟೀಕಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಬಿಜೆಪಿಯಿಂದ ಜನಸಾಮಾನ್ಯರಿಗೆ 1,25,407 ಕೋಟಿ ಹೊರೆಯೇ ಉಡುಗೊರೆ ಸಿಕ್ಕಿದೆ. ದೇಶದಾದ್ಯಂತ ಪ್ರತಿಭಟಿಸಿದ ಕಾರಣಕ್ಕೆ ಮೋದಿ ಸರ್ಕಾರ ಅನ್ನದಾತನ ವಿರುದ್ಧ ಸೇಡು ತೀರಿಸಿಕೊಳ್ಳಲು ಮುಂದಾಗಿದೆ' ಎಂದರು.

'ರಸಗೊಬ್ಬರದ ಬೆಲೆ ಹೆಚ್ಚಿದ್ದರಿಂದ ರೈತರಿಗೆ ಹೆಚ್ಚುವರಿಯಾಗಿ ಹೊರೆ ಆಗಲಿದೆ. 12 ದಿನಗಳಲ್ಲಿ 10 ಬಾರಿ ಪೆಟ್ರೋಲ್, ಡೀಸೆಲ್ ಬೆಲೆ ಏರಿದೆ. ಎಂಟು ವರ್ಷದಲ್ಲಿ ಇಂಧನದ ಮೇಲಿನ ಅಬಕಾರಿ ಸುಂಕದಿಂದ ಮೋದಿ ಸರ್ಕಾರ ₹ 26 ಲಕ್ಷ ಕೋಟಿ ಸಂಗ್ರಹಿಸಿದೆ' ಎಂದರು.

'ಏಪ್ರಿಲ್ 1 ರಂದು ವಾಣಿಜ್ಯ, ಗೃಹಬಳಕೆ ಅಡುಗೆ ಅನಿಲ ಸಿಲಿಂಡರ್ ದರ ಏರಿಕೆಯಾಗಿದೆ. ಸಿಎನ್‌ಜಿ ಇಂಧನ ದರ ಒಂದು ತಿಂಗಳ ಅವಧಿಯಲ್ಲಿ ಆರು ಬಾರಿ ಏರಿದೆ. ಟೋಲ್ ತೆರಿಗೆ ಜನರ ಜೇಬು ಸುಡುತ್ತಿದೆ. ಕಟ್ಟಡ ನಿರ್ಮಾಣ ವೆಚ್ಚ ಏಪ್ರಿಲ್ ತಿಂಗಳಲ್ಲಿ ಸುಮಾರು ಶೇ 15ರಷ್ಟು ಏರಿಕೆಯಾಗಿದೆ. ನಿರ್ಮಾಣ ಪರಿಕರಗಳ ದರವು ಗಣನೀಯವಾಗಿ ಏರಿಕೆಯಾಗಿದೆ' ಎಂದು ಪಟ್ಟಿ ಮಾಡಿದರು.

'ಪಿಎಫ್ ಬಡ್ಡಿ ದರವನ್ನು ಶೇ 8.5 ರಿಂದ ಶೇ 8.1ಕ್ಕೆ ಕಡಿತ ಮಾಡಲಾಗಿದೆ. ಟಿ.ವಿ, ಫ್ರಿಡ್ಜ್, ಎಸಿ, ಎಲ್‌ಇಡಿ, ಮೊಬೈಲ್ ಕೂಡಾ ದುಬಾರಿಯಾಗಿದೆ. ಹೀಗೆ 'ದುಬಾರಿ'ಯಿಂದಾಗಿ ಪ್ರತಿ ಮನೆಯಲ್ಲಿ ಬದುಕು ದುಸ್ತರವಾಗಿದೆ' ಎಂದು ಟೀಕಿಸಿದರು.

'ಜನರ ಸಮಸ್ಯೆಗಳನ್ನು ಮುಂದಿಟ್ಟು ನಾವು ಹೋರಾಟ ಮಾಡುತ್ತೇವೆ. ಈ ಕಾರಣದಿಂದಲೇ ನಾನು ಬೆಲೆ ಏರಿಕೆ ವಿಚಾರವಾಗಿ ಮಾತನಾಡಲು ದೆಹಲಿಯಿಂದ ಬಂದಿದ್ದೇನೆ. ಜಿಲ್ಲಾ ಮಟ್ಟದಲ್ಲಿ ನಾವು ಹೋರಾಟ ಮಾಡುತ್ತಿದ್ದೇವೆ' ಎಂದರು.

'ಇಲ್ಲಿ ಬಿಜೆಪಿ, ಅಲ್ಲಿ ಅಲ್‌ಕೈದಾ ಬಲಪಂಥೀಯ ಸಂಘಟನೆ'

'ನಿಷೇಧಿತ ಉಗ್ರ ಸಂಘಟನೆ ಅಲ್‌ಕೈದಾಕ್ಕೆ ಭಾರತದ ಆಂತರಿಕ ವಿಚಾರದಲ್ಲಿ ಹಸ್ತಕ್ಷೇಪ ಮಾಡುವ ಹಕ್ಕಿಲ್ಲ' ಎಂದ ಅಜಯ್ ಮಾಕನ್, 'ಹಿಜಾಬ್ ವಿಚಾರದಲ್ಲಿ ಈ ಸಂಘಟನೆಯ ನಾಯಕರ ಹೇಳಿಕೆಯನ್ನು ನಾವು ಕಟುವಾಗಿ ಖಂಡಿಸುತ್ತೇವೆ' ಎಂದರು.

ಕಾಂಗ್ರೆಸ್ ಮತ್ತು ಅಲ್‌ಕೈದಾ ಸಂಘಟನೆ ಹಿಜಾಬ್ ವಿಚಾರವನ್ನು ಬೆಂಬಲಿಸುತ್ತಿವೆ ಎಂಬ ಬಿಜೆಪಿ ನಾಯಕರ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ಇಲ್ಲಿ ಬಿಜೆಪಿಯವರು ಬಲಪಂಥೀಯರಾದರೆ, ಅಲ್‌ಕೈದಾ ಆ ದೇಶದ ಬಲಪಂಥೀಯ ಸಂಘಟನೆ. ತಮ್ಮ ಹೇಳಿಕೆಗಳ ಮೂಲಕ ದೇಶದ ವಾತಾವರಣ ಕದಡುವ ಪ್ರಯತ್ನ ಮಾಡುತ್ತಿವೆ' ಎಂದು ಆರೋಪಿಸಿದರು.

'ಇಲ್ಲಿ ಇವರು ತಮ್ಮ ಧರ್ಮಕ್ಕೆ ಅತಿರೇಕದ ಹೆಜ್ಜೆ ಇಟ್ಟರೆ, ಅಲ್‌ಕೈದಾದವರು ಅಲ್ಲಿ ಧರ್ಮಕ್ಕಾಗಿ ಅತಿರೇಕದ ಹೆಜ್ಜೆ ಇಡುತ್ತಿದ್ದಾರೆ. ಹಾಗಾದರೆ ಇವರಿಬ್ಬರ ನಡುವೆ ವ್ಯತ್ಯಾಸ ಎಲ್ಲಿದೆ? ರಾಜ್ಯದ ಘನತೆ, ಭವಿಷ್ಯ ಉಳಿಸಲು ದಯಮಾಡಿ ಶಾಂತಿ ಕದಡುವ ಪ್ರಯತ್ನ ಮಾಡಬೇಡಿ. ಇದರಿಂದ ಹಣದುಬ್ಬರ, ನಿರುದ್ಯೋಗ ಸಮಸ್ಯೆ ಮತ್ತಷ್ಟು ಹೆಚ್ಚಲಿದೆ' ಎಂದರು.ಇನ್ನು ಹಲಾಲ್, ವ್ಯಾಪಾರ ನಿಷೇಧ, ಧ್ವನಿವರ್ಧಕ ನಿಷೇಧ ವಿಚಾರಗಳ ಬಗ್ಗೆ ಕೇಳಿದ ಪ್ರಶ್ನೆಗೆ, 'ಆಡಳಿತ ವೈಫಲ್ಯ, ಶೇ 40 ಕಮಿಷನ್ ಆರೋಪ, ಬೆಲೆ ಏರಿಕೆ ವಿಷಯದಿಂದ ಜನರ ಗಮನ ಬೇರೆಡೆ ಸೆಳೆಯಲು ರಾಜ್ಯ ಸರ್ಕಾರ ಈ ವಿಚಾರಗಳನ್ನು ಪ್ರಸ್ತಾಪಿಸುತ್ತಿದೆ. ಆದರೆ, ಕರ್ನಾಟಕ ಜನರು ಪ್ರಬುದ್ಧರಾಗಿದ್ದು, ಬಿಜೆಪಿ ಹಾಗೂ ಆರೆಸ್ಸೆಸ್ ಷಡ್ಯಂತ್ರಗಳಿಗೆ ಸಿಲುಕುವುದಿಲ್ಲ ಎಂಬ ವಿಶ್ವಾಸವಿದೆ' ಎಂದರು.

43ನೇ ದಿನದ ಬೆಳವಣಿಗೆಗಳು

- ಉಕ್ರೇನಿನ ಬುಕಾ ಉಪನಗರದಲ್ಲಿ ನಡೆದಿರುವ ನರಮೇಧವನ್ನು ತೀವ್ರವಾಗಿ ಖಂಡಿಸಿ, ಸ್ವತಂತ್ರ ತನಿಖೆಗೆ ಆಗ್ರಹಿಸಿರುವ ಭಾರತದ ನಿಲುವಿಗೆ ಅಮೆರಿಕದ ಸೆನೆಟ್ ಮೆಚ್ಚುಗೆ ವ್ಯಕ್ತಪಡಿಸಿದೆ
- ರಷ್ಯಾ ಆಕ್ರಮಣದಿಂದ ಮರಿಯುಪೋಲ್‌ನಲ್ಲಿ ಈವರೆಗೆ ಸತ್ತವರ ಸಂಖ್ಯೆ ಐದು ಸಾವಿರ ದಾಟಿದೆ–ಮೇಯರ್ ವಾಡಿಮ್ ಬಾಯ್ಚೆಂಕೊ
- ಉಕ್ರೇನ್‌ಗೆ ಅಮೆರಿಕ ಸೇರಿದಂತೆ ಪಾಶ್ಚಾತ್ಯ ರಾಷ್ಟ್ರಗಳು ನಿರಂತರ ಶಸ್ತ್ರಾಸ್ತ್ರಗಳನ್ನು ಪೂರೈಕೆ ಮಾಡುತ್ತಿರುವುದು ಶಾಂತಿ ಮಾತುಕತೆಗೆ ಪ್ರಮುಖ ಅಡ್ಡಿ– ರಷ್ಯಾ ಆರೋಪ
- ರಷ್ಯಾ ಸೇನೆಯ 121ನೇ ಬಾಂಬರ್ ಏವಿಯೇಷನ್ ರೆಜಿಮೆಂಟ್‌ಗೆ ‘ಗಾರ್ಡ್ಸ್’ ಎಂಬ ಬಿರುದನ್ನು ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನೀಡಿದ್ದಾರೆ.
- ಅಧ್ಯಕ್ಷ ಪುಟಿನ್ ಅವರ ಪುತ್ರಿಯರ ಮೇಲೆ ವಿಧಿಸಿರುವ ಹಣಕಾಸು ನಿರ್ಬಂಧಗಳು ದಿಗ್ಭ್ರಮೆ ಮೂಡಿಸಿವೆ. ರಷ್ಯಾ ವಿರುದ್ಧ ಪಾಶ್ಚಾತ್ಯ ರಾಷ್ಟ್ರಗಳ ಉನ್ಮಾದದ ನಿರ್ಬಂಧಗಳ ಮುಂದುವರಿಕೆಗೂ ರಷ್ಯಾ ತಕ್ಕ ಪ್ರತಿಕ್ರಿಯೆ ನೀಡಲಿದೆ – ಪುಟಿನ್ ವಕ್ತಾರ ಡೆಮಿಟ್ರಿ ಪೆಸ್ಕೊವ್
- ರಷ್ಯಾದ ನಾಯಕರು ಮತ್ತು ಇತರರು ಉಕ್ರೇನ್ ವಿರುದ್ಧ ವಂಚನೆ, ಹ್ಯಾಕಿಂಗ್ ಮತ್ತು ಸಂಘಟಿತ ಬೆದರಿಕೆಯ ಅಭಿಯಾನಕ್ಕೆ ಸಾಮಾಜಿಕ ಜಾಲತಾಣ ಬಳಸಲು ನಿರಂತರ ಪ್ರಯತ್ನಿಸುತ್ತಿದ್ದಾರೆ – ಫೇಸ್‌ಬುಕ್‌ನ ಮಾತೃ ಕಂಪನಿ ಮೆಟಾ
- ಉಕ್ರೇನ್‌ನಲ್ಲಿನ ಸೇನಾ ಕಾರ್ಯಾಚರಣೆಯ ಕುರಿತು ಅಮೆರಿಕದ ಇಂಟರ್ನೆಟ್ ದೈತ್ಯ ಗೂಗಲ್ ‘ನಕಲಿ ಸುದ್ದಿ’ಗಳನ್ನು ಯೂಟ್ಯೂಬ್‌ನಲ್ಲಿ ಹರಡುತ್ತಿದೆ. ಹಾಗಾಗಿ ಗೂಗಲ್ ಸೇವೆಗಳು ಮತ್ತು ಜಾಹೀರಾತುಗಳನ್ನು ದೇಶದಲ್ಲಿ ನಿಷೇಧಿಸಲಾಗಿದೆ– ರಷ್ಯಾದ ಸಂವಹನ ಕಾವಲು ಸಂಸ್ಥೆ
- ಜರ್ಮನಿಯ ಸರ್ಕಾರಿ ಬ್ಯಾಂಕ್ ಕೆಎಫ್‌ಡಬ್ಲ್ಯುನಿಂದ 163 ದಶಲಕ್ಷ ಡಾಲರ್ ಸಾಲ ಪಡೆಯುವ ಒಪ್ಪಂದಕ್ಕೆ ಉಕ್ರೇನ್ ಸಹಿ ಹಾಕಿದೆ
- ರಷ್ಯಾದ ಆಕ್ರಮಣದ ಪರಿಣಾಮ ಆಹಾರ ಬೆಲೆಗಳು ಹೆಚ್ಚಾಗುತ್ತಿವೆ. ಇದರಿಂದ ಮಧ್ಯಪ್ರಾಚ್ಯ ಮತ್ತು ಉತ್ತರ ಆಫ್ರಿಕಾದಲ್ಲಿ ಲಕ್ಷಾಂತರ ಮಕ್ಕಳ ಅಪೌಷ್ಟಿಕತೆಯಿಂದ ಬಳಲುವ ಅಪಾಯ ಹೆಚ್ಚಿಸಿದೆ– ಯೂನಿಸೆಫ್
- ಡೊನೆಟ್‌ಸ್ಕ್, ಲುಹಾನ್‌ಸ್ಕ್, ಝುಪೊರಿಝಿಯಾ ಪ್ರದೇಶಗಳಿಂದ ನಾಗರಿಕರ ಸ್ಥಳಾಂತರಕ್ಕೆ 10 ಮಾನವೀಯ ಕಾರಿಡಾರ್‌ಗಳನ್ನು ತೆರೆಯಲು ರಷ್ಯಾ ಪಡೆಗಳು ಒಪ್ಪಿವೆ– ಉಕ್ರೇನ್ ಉಪ ಪ್ರಧಾನಿ ಇರಿನಾ ವೆರೆಶ್‌ಚುಕ್
- ಪೂರ್ವ ಯುರೋಪಿನಲ್ಲಿನ ರಷ್ಯಾದ ಆಕ್ರಮಣವು ಉಕ್ರೇನ್ ಮತ್ತು ಅದರಾಚೆಗೆ ಅಗಾಧವಾದ ಆರ್ಥಿಕ ಪರಿಣಾಮಗಳನ್ನು ಉಂಟುಮಾಡಲಿದೆ– ಅಮೆರಿಕದ ಖಜಾನೆ ಕಾರ್ಯದರ್ಶಿ ಜನೆತ್ ಯೆಲೆನ್ ಹೌಸ್ ಪ್ಯಾನೆಲ್ ಎಚ್ಚರಿಸಿದ್ದಾರೆ
- ಅಮೆರಿಕದಲ್ಲಿ ನೆಲೆಗೊಳ್ಳಲು ನಿತ್ಯವೂ ನೂರಾರು ಸಂಖ್ಯೆಯಲ್ಲಿ ವಲಸೆ ಹೋಗುತ್ತಿರುವ ಉಕ್ರೇನ್ ನಿರಾಶ್ರಿತರು, ಮೆಕ್ಸಿಕೊ ಮಾರ್ಗದ ವಿಮಾನಗಳನ್ನು ಬಳಸುವಂತೆ ತಮ್ಮ ಕುಟುಂಬದ ಸದಸ್ಯರು, ಬಂಧು–ಬಾಂಧವರಿಗೆ ಸಂದೇಶ ರವಾನಿಸುತ್ತಿದ್ದಾರೆ
- ಝುಪ್ರೊರಿಝಿಯಾದಲ್ಲಿ ಬುಧವಾರ ತಡರಾತ್ರಿ ರಷ್ಯಾದ ಮೂರು ಕ್ರೂಸ್ ಕ್ಷಿಪಣಿಗಳನ್ನು ವಾಯು ರಕ್ಷಣಾ ವ್ಯವಸ್ಥೆ ಹೊಡೆದುರುಳಿಸಿದೆ– ಉಕ್ರೇನ್ ಸೇನೆ
- ಉಕ್ರೇನ್‌ನಲ್ಲಿ ‘ಯುದ್ಧ’ ಕೊನೆಗೊಳಿಸುವ ಶಾಂತಿ ಮಾತುಕತೆಗಳಲ್ಲಿ ಮಿನ್ಸ್ಕ್ ಒಪ್ಪಂದ ಸೇರಿಸಬೇಕು– ರಷ್ಯಾದ ಪ್ರಮುಖ ಮಿತ್ರರಾಷ್ಟ್ರ ಬೆಲರೂಸ್‌ನ ಅಧ್ಯಕ್ಷ ಲುಕಾ ಶೆಂಕಾ ಒತ್ತಾಯ
- ರಷ್ಯಾ ಜತೆಗಿನ ಎಲ್ಲ ಸಂಬಂಧ ಮತ್ತು ವ್ಯಾಪಾರ ಕಡಿತಗೊಳಿಸುವ ನಿರ್ಣಯಕ್ಕೆ ಅಮೆರಿಕದ ಸೆನೆಟ್ ಪಕ್ಷಾತೀತವಾಗಿ ಮತ ಚಲಾಯಿಸಿದೆ
- ಮರಿಯುಪೋಲ್ ಆಸ್ಪತ್ರೆಯಲ್ಲಿದ್ದ ರೋಗಿಗಳು ಮತ್ತು ವೈದ್ಯರು ಹಾಗೂ ಸಿಬ್ಬಂದಿ ಬಲವಂತವಾಗಿ ರಷ್ಯಾ ಕರೆದೊಯ್ದಿದೆ– ಉಕ್ರೇನ್ ಸೇನೆ ಆರೋಪ

ನ್ಯಾಟೊ, ಜಿ–7 ರಾಷ್ಟ್ರಗಳಿಗೆ ಉಕ್ರೇನ್ ಮೊರೆ ● ರಷ್ಯಾ ಕ್ಷಿಪಣಿ ದಾಳಿಗೆ ನಾಲ್ಕು ಇಂಧನ ಸಂಗ್ರಹಾಗಾರ ನಾಶ

‘ಬೇಗ ಶಸ್ತ್ರಾಸ್ತ್ರ ಕೊಡಿ, ಜನರ ಜೀವ ಉಳಿಸಿ’

ರಷ್ಯಾದ ಆಕ್ರಮಣ ವಿರೋಧಿಸಿ ಜರ್ಮನಿಯ ಬರ್ಲಿನ್‌ನಲ್ಲಿರುವ ರೀಚ್‌ಸ್ಟ್ಯಾಗ್ ಕಟ್ಟಡದ ಮುಂದೆ ಪ್ರತಿಭಟಿಸಿದ ನಾಗರಿಕರು, ಉಕ್ರೇನ್‌ನಲ್ಲಿನ ನರಹತ್ಯೆಯನ್ನು ಖಂಡಿಸಲು ನೆಲದ ಮೇಲೆ ಮಲಗಿ ಆಕ್ರೋಶ ವ್ಯಕ್ತಪಡಿಸಿದರು — ಎಪಿ/ಪಿಟಿಐ

ಕೀವ್ (ಎಪಿ): ರಾಜಧಾನಿ ಕೀವ್‌ನಿಂದ ನಿರ್ಗಮಿಸಿದ ನಂತರ ಮರು ಸಂಘಟಿತವಾಗಿರುವ ರಷ್ಯಾ ಪಡೆಗಳು, ಪೂರ್ವದಲ್ಲಿ ಭೀಕರ ದಾಳಿ ನಡೆಸುತ್ತಿವೆ. ರಷ್ಯಾ ಪಡೆಗಳನ್ನು ಹಿಮ್ಮೆಟ್ಟಿಸಲು ಪಾಶ್ಚಾತ್ಯ ಮತ್ತು ನ್ಯಾಟೊ ರಾಷ್ಟ್ರಗಳು ಅಗತ್ಯ ಶಸ್ತ್ರಾಸ್ತ್ರಗಳನ್ನು ಪೂರೈಸಬೇಕು ಎಂದು ಉಕ್ರೇನ್ ಗುರುವಾರ ಮನವಿ ಮಾಡಿದೆ.

ಉಕ್ರೇನ್‌ನ ಕೈಗಾರಿಕಾ ಪ್ರದೇಶದ ಹೃದಯಭಾಗದಲ್ಲಿ ದಾಳಿ ನಡೆಸುತ್ತಿರುವ ರಷ್ಯಾ ಪಡೆಗಳ ವಿರುದ್ಧ ಸಾಧ್ಯವಿರುವಷ್ಟು ಪ್ರತಿರೋಧ ತೋರಿಸಲು ಉಕ್ರೇನ್ ನಾಗರಿಕರಿಗೆ ಕರೆಕೊಟ್ಟಿದೆ.

ಕೀವ್ ತ್ವರಿತ ವಶಕ್ಕೆ ತೆಗೆದುಕೊಳ್ಳಲು ಮತ್ತು ಪಾಶ್ಚಾತ್ಯ ರಾಷ್ಟ್ರಗಳು ಹೇಳಿದಂತೆ ಉಕ್ರೇನ್ ಸರ್ಕಾರ ಕಿತ್ತೊಗೆಯುವ ಪುಟಿನ್ ಅವರ ಆರಂಭಿಕ ಗುರಿ ಸಾಧಿಸಲು ರಷ್ಯಾ ನಡೆಸಿದ ಆರು ವಾರಗಳ ಆಕ್ರಮಣ ವಿಫಲವಾಗಿದೆ. ರಷ್ಯಾದ ಗಮನವು ಈಗ ರಷ್ಯನ್ ಭಾಷಿಗರು ಹೆಚ್ಚಿರುವ ಡಾನ್‌ಬಾಸ್ ಪ್ರದೇಶದ ಮೇಲೆ ನೆಟ್ಟಿದೆ ಎಂದು ಉಕ್ರೇನ್ ಸೇನೆ ಹೇಳಿದೆ.

ಉಕ್ರೇನ್ ವಿದೇಶಾಂಗ ಸಚಿವ ಡಿಮಿಟ್ರಿ ಕುಲೆಬಾ ಗುರುವಾರ ಬ್ರಸೆಲ್ಸ್‌ನಲ್ಲಿರುವ ನ್ಯಾಟೊ ಕೇಂದ್ರ ಕಚೇರಿಗೆ ಭೇಟಿ ನೀಡಿ, ಶಸ್ತ್ರಾಸ್ತ್ರಗಳ ನೆರವು ನೀಡುವಂತೆ ನ್ಯಾಟೊ ರಾಷ್ಟ್ರಗಳು ಮತ್ತು ಜಿ –7 ರಾಷ್ಟ್ರಗಳ ವಿದೇಶಾಂಗ ಸಚಿವರೊಂದಿಗೆ ತುರ್ತು ಮಾತುಕತೆ ನಡೆಸಿದರು. ಹೆಚ್ಚಿನ ಶಸ್ತ್ರಾಸ್ತ್ರಗಳನ್ನು ಪೂರೈಸಲು ಮನವಿ ಮಾಡಿದರು.

‘ಯುದ್ಧ ವಿಮಾನಗಳು, ನೆಲದಿಂದ ಉಡಾಯಿಸುವ ಕ್ಷಿಪಣಿಗಳು, ಶಸ್ತ್ರ ಸಜ್ಜಿತ ವಾಹನಗಳು ಹಾಗೂ ವಾಯು ರಕ್ಷಣಾ ವ್ಯವಸ್ಥೆಯ ಅಗತ್ಯವಿದೆ. ನಿಮ್ಮ (ನ್ಯಾಟೊ) ಶಸ್ತ್ರಾಸ್ತ್ರಗಳು ಆದಷ್ಟು ಬೇಗ ಉಕ್ರೇನ್ ತಲುಪಿದರೆ, ಹೆಚ್ಚಿನ ಜೀವಗಳನ್ನು ಉಳಿಸಬಹುದು’ ಎಂದರು.

ನ್ಯಾಟೊದಲ್ಲಿನ ಕೆಲವು ರಾಷ್ಟ್ರಗಳು, ರಷ್ಯಾದ ಮುಂದಿನ ಗುರಿ ತಾವೇ ಆಗಿರಬಹುದು ಎಂಬ ಚಿಂತೆಯಲ್ಲಿವೆ. ಮೈತ್ರಿಕೂಟದ 30 ಸದಸ್ಯ ರಾಷ್ಟ್ರಗಳನ್ನು ಯುದ್ಧಕ್ಕೆ ಇಳಿಸಬೇಕಾದ ಸನ್ನಿವೇಶ

> **ಅಗತ್ಯ ಶಸ್ತ್ರಾಸ್ತ್ರಗಳನ್ನು ನಮಗೆ ಒದಗಿಸದಿದ್ದರೆ, ರಷ್ಯಾ ಅದನ್ನು ಆಕ್ರಮಣಕ್ಕೆ ಸಿಕ್ಕ ಅನುಮತಿ ಎಂದುಕೊಳ್ಳಲಿದೆ. ಡಾನ್‌ಬಾಸ್‌ನಲ್ಲಿ ರಕ್ತಪಾತಕ್ಕೂ ಅನುಮತಿಸಲಿದೆ**
> **ವೊಲೊಡಿಮಿರ್ ಝೆಲೆನ್‌ಸ್ಕಿ**
> ಉಕ್ರೇನ್ ಅಧ್ಯಕ್ಷ

ತಪ್ಪಿಸಲು ನ್ಯಾಟೊ ಯತ್ನಿಸುತ್ತಿದೆ.

ಈ ನಡುವೆಯೂ, ನ್ಯಾಟೊ ಮಹಾ ಪ್ರಧಾನ ಕಾರ್ಯದರ್ಶಿ ಜೆನ್ಸ್ ಸ್ಟೋಲ್ಟೆನ್‌ಬರ್ಗ್, ಉಕ್ರೇನ್‌ಗೆ ರಕ್ಷಣಾತ್ಮಕ ಶಸ್ತ್ರಾಸ್ತ್ರಗಳನ್ನಷ್ಟೇ ಅಲ್ಲದೇ, ಪ್ರತಿದಾಳಿಯ ಶಸ್ತ್ರಾಸ್ತ್ರಗಳನ್ನು ಕಳುಹಿಸುವಂತೆ ಸದಸ್ಯ ರಾಷ್ಟ್ರಗಳಿಗೆ ಒತ್ತಾಯಿಸಿದರು.

‘ಉಕ್ರೇನ್ ರಕ್ಷಣಾತ್ಮಕ ಯುದ್ಧ ನಡೆಸುತ್ತಿದೆ. ಹಾಗಾಗಿ, ಆಕ್ರಮಣಕಾರಿ ಮತ್ತು ರಕ್ಷಣಾತ್ಮಕ ಶಸ್ತ್ರಾಸ್ತ್ರಗಳನ್ನು ಪ್ರತ್ಯೇಕಿಸಿ, ಪೂರೈಸುವುದರಲ್ಲಿ ಯಾವುದೇ ನೈಜ ಅರ್ಥ ಇಲ್ಲ’ ಎಂದು ಅವರು ಹೇಳಿದರು.

‘ನ್ಯಾಟೊ ಉಕ್ರೇನ್ ಬೆಂಬಲಿಸಲು ಮತ್ತು ಸೇನೆಗೆ ಬಲ ತುಂಬಲು ಒಪ್ಪಿಕೊಂಡಿದೆ. ರಷ್ಯಾದ ದಾಳಿಗಳು ಮುಂದುವರಿದಂತೆ, ವಿವಿಧ ಶಸ್ತ್ರಾಸ್ತ್ರ ವ್ಯವಸ್ಥೆಗಳನ್ನು ಒದಗಿಸಲು ಸದಸ್ಯ ರಾಷ್ಟ್ರಗಳು ಒಪ್ಪಿವೆ’ ಎಂದು ಒಕ್ಕೂಟದ ವಿದೇಶಾಂಗ ಸಚಿವರ ಸಭೆಯ ನಂತರ, ಜೆನ್ಸ್ ಸ್ಟೋಲ್ಟೆನ್ ಬರ್ಗ್ ಮಾಧ್ಯಮಗಳಿಗೆ ತಿಳಿಸಿದರು.

‘ರಷ್ಯಾ ಪಡೆಗಳಿಂದ ಕ್ರೌರ್ಯ’: ರಷ್ಯಾ ಪಡೆಗಳು ಡಾನ್‌ಬಾಸ್ ಸಮೀಪದ ಹಾರ್ಕಿವ್‌ಗೆ ಮುತ್ತಿಗೆ ಹಾಕಿವೆ. ದಕ್ಷಿಣದ ಕೆರ್ಸಾನ್ ಪ್ರಾಂತ್ಯದಲ್ಲೂ ಕ್ರೌರ್ಯ ಮೆರೆಯುತ್ತಿವೆ ಎಂದು ಉಕ್ರೇನ್ ಸಶಸ್ತ್ರ ಪಡೆಗಳ ಜನರಲ್ ಸ್ಟಾಫ್‌ನ ವಕ್ತಾರ ಒಲೆಕ್ಸಾಂಡರ್ ಶ್ಟುಟನ್ ಗುರುವಾರ ತಿಳಿಸಿದರು.

ರಷ್ಯಾದಿಂದ ಕಲಿಬ್ ಕ್ಷಿಪಣಿ ದಾಳಿ

ಉಕ್ರೇನಿನ ಪೂರ್ವ ಮತ್ತು ಆಗ್ನೇಯ ಭಾಗ ಕೇಂದ್ರೀಕರಿಸಿ, ಎರಡನೇ ಹಂತದ ವಿಶೇಷ ಸೇನಾ ಕಾರ್ಯಾಚರಣೆ ಮುಂದುವರಿದಿದೆ. ಉಕ್ರೇನ್ ಸೇನೆಗೆ ಇಂಧನ ಪೂರೈಸುತ್ತಿದ್ದ ನಾಲ್ಕು ನಗರಗಳ ಮೇಲೆ ಕಲಿಬ್ ಕ್ಷಿಪಣಿ ದಾಳಿ ಮಾಡಲಾಗಿದೆ ಎಂದು ಗುರುವಾರ ರಷ್ಯಾ ಸೇನೆ ಹೇಳಿದೆ.

ಜಲಾಂತರ್ಗಾಮಿ ನೌಕೆಯಿಂದ ಉಡಾಯಿಸಿದ ನಾಲ್ಕು ಕಲಿಬ್ ಕ್ರೂಸ್ ಕ್ಷಿಪಣಿಗಳು, ಮೈಕೊಲೈವ್, ಹಾರ್ಕಿವ್, ಝುಪ್ರೊರಿಝಿಯಾ, ಚುಯುವ್‌ನಲ್ಲಿನ ಇಂಧನ ಸಂಗ್ರಹಾಗಾರಗಳನ್ನು ಧ್ವಂಸಗೊಳಿಸಿವೆ ಎಂದು ರಷ್ಯಾ ರಕ್ಷಣಾ ಸಚಿವಾಲಯದ ವಕ್ತಾರ ಐಗೊರ್ ಕೊನಶೆಂಕವ್ ತಿಳಿಸಿದ್ದಾರೆ.

ಎರಡು ಕಮಾಂಡ್ ಪೋಸ್ಟ್, ಒಂದು ರೆಡಾರ್, ಒಂದು ಎಸ್–300 ಕ್ಷಿಪಣಿ ವ್ಯವಸ್ಥೆ ಹಾಗೂ ಕ್ಷಿಪಣಿ, ಮದ್ದುಗುಂಡುಗಳಿದ್ದ ಒಂದು ಉಗ್ರಾಣ, ಹತ್ತು ಪ್ರಬಲ ನೆಲೆಗಳು ಸೇರಿ ಉಕ್ರೇನ್ ಮಿಲಿಟರಿಯ 29 ಸ್ವತ್ತುಗಳನ್ನು ನಾಶ ಮಾಡಲಾಗಿದೆ. ಆರು ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದರು.

ಕ್ಷಿಪಣಿಗಳು ಗುರಿ ಭೇದಿಸುವ ದೃಶ್ಯದ ವಿಡಿಯೊ ತುಣಕನ್ನು ರಷ್ಯಾ ಸೇನೆ ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆ ಮಾಡಿದೆ.

ಕೀವ್ ಬಳಿ ರಸ್ತೆಯಲ್ಲಿ ಹೋಗುತ್ತಿದ್ದ ರಷ್ಯಾದ ಮಿಲಿಟರಿ ವಾಹನಗಳನ್ನು ಉಕ್ರೇನ್ ಸೇನೆಯ ಏಕೈಕ ಟ್ಯಾಂಕ್‌ವೊಂದು ನಾಶಪಡಿಸುತ್ತಿರುವುದನ್ನು ಡ್ರೋನ್‌ನಲ್ಲಿ ಚಿತ್ರೀಕರಿಸಿರುವ ವಿಡಿಯೊ ದೃಶ್ಯದ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆಯಾಗಿದೆ.

ಉಕ್ರೇನ್ ವಿದ್ಯಾರ್ಥಿಗಳಿಗೆ ಎಂ.ಬಿ.ಪಾಟೀಲ ಸಹಾಯ ಹಸ್ತ

ವಿಜಯಪುರ: ಯುದ್ಧಪೀಡಿತ ಉಕ್ರೇನ್‌ನಿಂದ ವೈದ್ಯಕೀಯ ವಿದ್ಯಾಭ್ಯಾಸ ಮೊಟಕುಗೊಳಿಸಿ ಜಿಲ್ಲೆಗೆ ಮರಳಿರುವ ವಿದ್ಯಾರ್ಥಿಗಳ ನೆರವಿಗೆ ವಿಜಯಪುರ ನಗರದ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯ ಮುಂದಾಗಿದ್ದು, ಸರ್ಕಾರದ ಮುಂದಿನ ಆದೇಶದವರೆಗೆ ಈ ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಒದಗಿಸಿ ಅತಂತ್ರ ಸ್ಥಿತಿಯಲ್ಲಿರುವ ವಿದ್ಯಾರ್ಥಿಗಳ ನೆರವಿಗೆ ಮುಂದಾಗಿದೆ.

ಉಕ್ರೇನ್‌ನಿಂದ ಜಿಲ್ಲೆಗೆ ಮರಳಿರುವ 17 ವೈದ್ಯಕೀಯ ವಿದ್ಯಾರ್ಥಿಗಳು ತಮ್ಮ ಪಾಲಕರೊಂದಿಗೆ ಬಿ.ಎಲ್.ಡಿ.ಇ ಡೀಮ್ಡ್ ವಿವಿ ಕುಲಾಧಿಪತಿ, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷರೂ ಆಗಿರುವ ಶಾಸಕ ಎಂ.ಬಿ.ಪಾಟೀಲ ಅವರನ್ನು ಗುರುವಾರ ಭೇಟಿಯಾಗಿ ನೆರವು ಕೋರಿದರು.

ಉಕ್ರೇನ್ ಕರಡು ಸಮ್ಮತವಲ್ಲ: ರಷ್ಯಾ

ಮಾಸ್ಕೊ: ‘ಉಕ್ರೇನ್ ಬುಧವಾರ ಮಂಡಿಸಿರುವ ಒಪ್ಪಂದದ ಕರಡು ಇಸ್ತಾಂಬುಲ್‌ನಲ್ಲಿ ಮಾರ್ಚ್ 29ರಂದು ನಡೆದ ಶಾಂತಿ ಸಭೆಯ ನಿಬಂಧನೆಗಳಿಗೆ ವಿಮುಖವಾಗಿದೆ. ಉಕ್ರೇನ್ ಪೂರ್ವ ಷರತ್ತುಗಳನ್ನು ಮುಂದಿಡುತ್ತಲೇ ಇರುತ್ತದೆ. ಇದು ಸ್ವೀಕಾರಾರ್ಹವಲ್ಲ’ ಎಂದು ರಷ್ಯಾದ ವಿದೇಶಾಂಗ ಸಚಿವ ಸೆರ್ಗಿ ಲಾವ್ರೊವ್ ಹೇಳಿದ್ದಾರೆ.

‘ಉಕ್ರೇನ್ ಒಪ್ಪಂದದ ತನ್ನ ಕರಡು ಪ್ರತಿಯನ್ನು ಸಮಾಲೋಚನಾ ಗುಂಪಿನ ಮುಂದಿಟ್ಟಿದೆ. ಇಸ್ತಾಂಬುಲ್ ಸಭೆಯಲ್ಲಿ ಉಕ್ರೇನ್ ನಿಯೋಗದ ಮುಖ್ಯಸ್ಥ ಅರಾಖಮಿಯಾ ಒಪ್ಪಿ ಸಹಿ ಮಾಡಿರುವ ಕಡತದಲ್ಲಿನ ಪ್ರಮುಖ ನಿಬಂಧನೆಗಳಿಂದ ಹಿಂದೆ ಸರಿಯುವ ಸ್ಪಷ್ಟ ಸೂಚನೆ ಈ ಕರಡಿನಲ್ಲಿದೆ’ ಎಂದು ಲಾವ್ರೊವ್ ಹೇಳಿರುವುದಾಗಿ ರಷ್ಯಾದ ಸರ್ಕಾರಿ ಸುದ್ದಿಸಂಸ್ಥೆ ‘ಟಾಸ್’ ಗುರುವಾರ ವರದಿ ಮಾಡಿದೆ.

‘ರಷ್ಯಾ ಮತ್ತು ಉಕ್ರೇನ್ ಅಧ್ಯಕ್ಷರ ನಡುವಿನ ಸಭೆಯ ಕಾರ್ಯಸೂಚಿಯಲ್ಲಿ ಕ್ರಿಮಿಯಾ ಮತ್ತು ಡಾನ್‌ಬಾಸ್‌ನ ಸಮಸ್ಯೆಗಳನ್ನು ಸೇರಿಸಬೇಕೆಂಬ ಪ್ರಸ್ತಾಪವನ್ನು ಹೊಸದಾಗಿ ಸೇರಿದೆ. ಭದ್ರತಾ ಖಾತ್ರಿ ನೀಡುವ ರಷ್ಯಾ ಸೇರಿ ಎಲ್ಲ ದೇಶಗಳ ಒಪ್ಪಿಗೆಯೊಂದಿಗೆ ಮಾತ್ರ ವಿದೇಶಿ ರಾಷ್ಟ್ರಗಳ ಜತೆಗೆ ಸಮರಾಭ್ಯಾಸ ನಡೆಸಬೇಕು ಎಂದು ಇಸ್ತಾಂಬುಲ್ ಕಡತದಲ್ಲಿದೆ. ಆದರೆ, ಉಕ್ರೇನ್ ಕರಡಿನಲ್ಲಿ ರಷ್ಯಾದ ಉಲ್ಲೇಖವೇ ಇಲ್ಲ’ ಎಂದರು.

ಪ್ರಚೋದನೆಗಳ ಹೊರತಾಗಿಯೂ ರಷ್ಯಾ, ಉಕ್ರೇನ್ ಜತೆಗೆ ಮಾತುಕತೆಯನ್ನು ಮುಂದುವರಿಸಲಿದೆ ಎಂದು ಅವರು ಹೇಳಿದರು.

ಆರ್ಥಿಕ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳಲು ಅಧ್ಯಕ್ಷ ಗೊಟಬಯ ಪ್ರಯತ್ನ

ಶ್ರೀಲಂಕಾ: ಸಾಲ ಮರು ಹೊಂದಾಣಿಕೆಗೆ ಸಮಿತಿ

ಕೊಲಂಬೊ (ಎಎಫ್‌ಪಿ): ಶ್ರೀಲಂಕಾವನ್ನು ಆರ್ಥಿಕ ಬಿಕ್ಕಟ್ಟಿನಿಂದ ಹೊರಗೆ ತರುವುದಕ್ಕಾಗಿ ಸಾಲ ಮರುಹೊಂದಾಣಿಕೆಗೆ ಪರಿಣತರ ಸಮಿತಿಯೊಂದನ್ನು ಅಧ್ಯಕ್ಷ ಗೊಟಬಯ ರಾಜಪಕ್ಸ ಗುರುವಾರ ನೇಮಿಸಿದ್ದಾರೆ.

ಆಹಾರ, ಇಂಧನ ಮತ್ತು ಇತರ ಅಗತ್ಯ ವಸ್ತುಗಳ ಕೊರತೆ ತೀವ್ರವಾಗಿದೆ. ಹಣದುಬ್ಬರ ಇನ್ನಷ್ಟು ಏರಿಕೆಯಾಗಿದೆ, ವಿದ್ಯುತ್ ಪೂರೈಕೆ ವ್ಯತ್ಯಯವಾಗಿದೆ. ಜನರು ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ, ಸಾಲ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳಲು ಗೊಟಬಯ ಮುಂದಾಗಿದ್ದಾರೆ.

ಸುಸ್ಥಿರ ಮತ್ತು ಎಲ್ಲರನ್ನೂ ಒಳಗೊಂಡ ಪುನಶ್ಚೇತನ ಯೋಜನೆಗಾಗಿ ಮೂವರು ಪರಿಣತರ ಸಮಿತಿ ನೇಮಿಸಲಾಗಿದೆ ಎಂದು ಅಧ್ಯಕ್ಷ ಗೊಟಬಯ ಅವರ ಕಚೇರಿ ತಿಳಿಸಿದೆ. ಸರ್ಕಾರಿ ಸಾಲಪತ್ರ ಹೊಂದಿರುವವರು ಮತ್ತು ಇತರ ಸಾಲಗಾರರು ಸಾಲದ ಮೊತ್ತದಲ್ಲಿ ಸ್ವಲ್ಪ ಹಣವನ್ನು ಬಿಡುವುದಕ್ಕೆ ಸಾಧ್ಯವಾಗುವಂತಹ ಯೋಜನೆಯನ್ನು ಈ ಸಮಿತಿಯು ರೂಪಿಸಲಿದೆ ಎಂದು ಹಣಕಾಸು ಸಚಿವಾಲಯದ ಅಧಿಕಾರಿಗಳು ಹೇಳಿದ್ದಾರೆ. ಬಿಕ್ಕಟ್ಟಿನಿಂದ ಹೊರಬರಲು ನೆರವಿವಾಗಿ ಅಂತರ ರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಜತೆಗೂ ಮಾತುಕತೆ ನಡೆಯುತ್ತಿದೆ.

ಶ್ರೀಲಂಕಾವು ಒಟ್ಟು 5,100 ಕೋಟಿ ಡಾಲರ್ (₹3.87 ಲಕ್ಷ ಕೋಟಿ) ವಿದೇಶಿ ಸಾಲ ಹೊಂದಿದೆ. ರೇಟಿಂಗ್ ಸಂಸ್ಥೆಗಳು ದೇಶದ ಸಾಲ ಮರುಪಾವತಿ ಸಾಮರ್ಥ್ಯ ಕುಗ್ಗಿಸಿದ ಕಾರಣ ಹೆಚ್ಚಿನ ಸಾಲ ಪಡೆದುಕೊಳ್ಳುವುದು ದೇಶಕ್ಕೆ ಸಾಧ್ಯವಾಗಿಲ್ಲ.

‘ಮರುಪಾವತಿ ಬಿಕ್ಕಟ್ಟು ಸೃಷ್ಟಿಯಾಗದಂತೆ ನೋಡಿಕೊಳ್ಳುವುದು ನಮ್ಮ ಸದ್ಯದ ಆದ್ಯತೆ. ಸಾಲ ಮರು ಹೊಂದಾಣಿಕೆಯ ಮಾತುಕತೆಗೆ ಐಎಂಎಫ್ ನೆರವು ಪಡೆಯಲಾಗುವುದು’ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಹಸಿವಿನಿಂದ ಸಾವು: ಸ್ಪೀಕರ್ ಎಚ್ಚರಿಕೆ

ಆರ್ಥಿಕ ಬಿಕ್ಕಟ್ಟಿಗೆ ಒಂದು ವಾರದೊಳಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗದೇ ಇದ್ದರೆ ಜನರು ಹಸಿವಿನಿಂದ ಸಾಯುವ ಸ್ಥಿತಿ ನಿರ್ಮಾಣ ಆಗಬಹುದು ಎಂದು ಸಂಸತ್ತಿನ ಸ್ಪೀಕರ್ ಮಹಿಂದ ಯಪ ಅಭಯವರ್ಧನ ಎಚ್ಚರಿಸಿದ್ದಾರೆ.

‘ದೇಶವು ರಾಜಕೀಯ ಬಿಕ್ಕಟ್ಟಿನ ಅಂಚಿನಲ್ಲಿದೆ. ಜನರು ಇನ್ನಷ್ಟು ಕಷ್ಟ ಅನುಭವಿಸುವ ಸ್ಥಿತಿ ಸೃಷ್ಟಿ ಆಗಲಿದೆ. ಈಗಿನದ್ದು ಅತ್ಯಂತ ಕೆಟ್ಟ ಸ್ಥಿತಿ ಎಂದು ಹೇಳಲಾಗುತ್ತಿದೆ. ಆದರೆ, ಇದು ಆರಂಭ ಮಾತ್ರ ಎಂದು ನನ್ನ ಭಾವನೆ’ ಎಂದು ಆರ್ಥಿಕ ಬಿಕ್ಕಟ್ಟಿಗೆ ಸಂಬಂಧಿಸಿದ ಸಂವಾದದಲ್ಲಿ ಭಾಗವಹಿಸಿ ಅವರು ಹೇಳಿದ್ದಾರೆ.

ಹಣಕಾಸು ಸಚಿವರೇ ಇಲ್ಲ

ಶ್ರೀಲಂಕಾದ ಇಡೀ ಸಚಿವ ಸಂಪುಟವೇ ಇತ್ತೀಚೆಗೆ ರಾಜೀನಾಮೆ ನೀಡಿದೆ. ಅಧ್ಯಕ್ಷ ಗೊಟಬಯ ಅವರ ತಮ್ಮ, ಹಣಕಾಸು ಸಚಿವರಾಗಿದ್ದ ಬೇಸಿಲ್ ರಾಜಪಕ್ಸ ಅವರು ಕೂಡ ರಾಜೀನಾಮೆ ನೀಡಿದ್ದರು. ಹಿಂದೆ ಕಾನೂನು ಸಚಿವರಾಗಿದ್ದ ಅಲಿ ಸಾಬ್ರಿ ಅವರನ್ನು ಬೇಸಿಲ್ ಅವರ ಸ್ಥಾನಕ್ಕೆ ನಂತರ ನೇಮಿಸಲಾಗಿತ್ತು. ಆದರೆ, ನೇಮಕದ ಮರುದಿನವೇ ಅವರು ರಾಜೀನಾಮೆ ನೀಡಿದ್ದಾರೆ. ಹಾಗಾಗಿ, ಆರ್ಥಿಕ ಬಿಕ್ಕಟ್ಟಿನ ಈ ಸಂದರ್ಭದಲ್ಲಿ ದೇಶಕ್ಕೆ ಹಣಕಾಸು ಸಚಿವರೇ ಇಲ್ಲದಂತಾಗಿದೆ.

ಮಾಜಿ ಗವರ್ನರ್‌ಗೆ ಪ್ರಯಾಣ ನಿರ್ಬಂಧ

ಶ್ರೀಲಂಕಾದ ಕೇಂದ್ರೀಯ ಬ್ಯಾಂಕ್‌ನ ಗವರ್ನರ್ ಆಗಿದ್ದ ಅಜಿತ್ ಕಬ್ರಾಲ್ ಅವರ ಮೇಲೆ ಅಲ್ಲಿನ ನ್ಯಾಯಾಲಯವೊಂದು ಪ್ರಯಾಣ ನಿರ್ಬಂಧ ಹೇರಿದೆ. ದೇಶದ ಆರ್ಥಿಕ ಬಿಕ್ಕಟ್ಟಿಗೆ ಕಬ್ರಾಲ್ ಅವರೇ ಹೊಣೆಗಾರರು ಎಂಬ ಆರೋಪ ಇದೆ. ಇದೇ 18ರಂದು ನ್ಯಾಯಾಲಯಕ್ಕೆ ಹಾಜರಾಗಿ ಆರೋಪಗಳಿಗೆ ಉತ್ತರ ನೀಡಬೇಕು ಎಂದು ಕೊಲಂಬೊದ ನ್ಯಾಯಾಲಯವೊಂದು ಅವರಿಗೆ ಸೂಚಿಸಿದೆ. ಕಬ್ರಾಲ್ ಅವರು ಸೋಮವಾರ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ.

‘ವಿದ್ಯುತ್ ವ್ಯವಸ್ಥೆ ಮೇಲೆ ಚೀನಾ ಹ್ಯಾಕರ್‌ಗಳ ದಾಳಿ ಯತ್ನ ವಿಫಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಲಡಾಕ್‌ನ ಬಳಿಯ ವಿದ್ಯುತ್ ಪೂರೈಕೆ ಕೇಂದ್ರಗಳನ್ನು ಗುರಿಯಾಗಿಸಿಕೊಂಡು ಚೀನಾ ಹ್ಯಾಕರ್‌ಗಳು ಎರಡು ಬಾರಿ ಸೈಬರ್ ದಾಳಿ ನಡೆಸಲು ಪ್ರಯತ್ನಿಸಿದ್ದರು. ಆದರೆ ಈ ಪ್ರಯತ್ನಗಳು ವಿಫಲವಾಗಿವೆ. ಅಂಥ ಸೈಬರ್ ದಾಳಿಗಳಿಗೆ ಪ್ರತಿಯಾಗಿ ನಾವು ನಮ್ಮ ರಕ್ಷಣಾ ವ್ಯವಸ್ಥೆಯನ್ನು ಈಗಾಗಲೇ ಬಲಪಡಿಸಿದ್ದೇವೆ. ಪರಿಸ್ಥಿತಿಯನ್ನು ಆಗಿಂದಾಗ್ಗೆ ಪರಿಶೀಲಿಸಲಾಗುತ್ತಿದೆ’ ಎಂದು ಕೇಂದ್ರ ವಿದ್ಯುತ್ ಸಚಿವ ಆರ್.ಕೆ. ಸಿಂಗ್ ಗುರುವಾರ ಹೇಳಿದರು.

ವಿದ್ಯುತ್ ಪೂರೈಕೆ ವ್ಯವಸ್ಥೆ ಮೇಲೆ ಸೈಬರ್ ದಾಳಿ ವಿರುದ್ಧ ನಾವು 2018ರಲ್ಲೇ ಕ್ರಮ ಕೈಗೊಂಡಿದ್ದೇವೆ ಎಂದರು.

> **ಹ್ಯಾಕಿಂಗ್‌ಗೆ ಸಂಬಂಧಿಸಿದ ಸುದ್ದಿ ಇತ್ತೀಚಿನದ್ದಲ್ಲ. ನಮಗೆ ಈ ಹಿಂದೆಯೇ ವರದಿಗಳು ಬಂದಿದ್ದವು. ಸಂಬಂಧಪಟ್ಟ ರಾಜ್ಯಗಳ ಜೊತೆ ನಾವು ಆಗಲೇ ಸಭೆ ನಡೆಸಿದ್ದೇವೆ**
> **ಆರ್.ಕೆ. ಸಿಂಗ್,** ಕೇಂದ್ರ ವಿದ್ಯುತ್ ಸಚಿವ

ಯಾವುದೇ ರೀತಿಯ ಸೈಬರ್ ದಾಳಿಗಳ ವಿರುದ್ಧ ದೇಶವು ಪ್ರಬಲವಾದ ರಕ್ಷಣಾ ವ್ಯವಸ್ಥೆ ಹೊಂದಿದೆ ಎಂದು ಆರ್.ಕೆ. ಸಿಂಗ್ ಹೇಳಿದ್ದಾರೆ. ಲಡಾಖ್‌ನ ವಿದ್ಯುತ್ ಪೂರೈಕೆ ವ್ಯವಸ್ಥೆಯನ್ನು ಗುರಿಯಾಗಿಸಿಕೊಂಡು ಚೀನಾ ಹ್ಯಾಕರ್‌ಗಳು ದಾಳಿ ನಡೆಸಲು ಪ್ರಯತ್ನಿಸಿದ್ದಾರೆ ಎಂಬ ವರದಿಗಳು ಬಂದ ಬೆನ್ನಲ್ಲೇ ಅವರು ಈ ಹೇಳಿಕೆ ನೀಡಿದ್ದಾರೆ.

‘ಸೈಬರ್ ದಾಳಿಗಳ ವಿರುದ್ಧ ನಮ್ಮ ಪ್ರತಿರೋಧ ವ್ಯವಸ್ಥೆ ಪ್ರಬಲವಾಗಿದೆ. ನಾವು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ರಕ್ಷಣಾ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸುವ ಕೆಲಸ ಪ್ರತಿದಿನವೂ ನಡೆಯುತ್ತಿದೆ’ ಎಂದು ಆರ್.ಕೆ. ಸಿಂಗ್ ಅವರು ವಿದ್ಯುತ್ ಸಚಿವಾಲಯದ ಅಧಿಕಾರಿಗಳ ಸಭೆಯಲ್ಲಿ ಹೇಳಿದರು.

ಭಾರತ ಮತ್ತು ಚೀನಾ ಗಡಿ ಬಳಿಯ ಏಳು ರಾಜ್ಯಗಳ ವಿದ್ಯುತ್ ಪೂರೈಕೆ ಕೇಂದ್ರಗಳನ್ನು ಹ್ಯಾಕರ್‌ಗಳು ಗುರಿಯಾಗಿಸಿಕೊಂಡಿದ್ದರು ಎಂದು ವರದಿ ಆಗಿತ್ತು.

ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲು ಕೊರತೆಯ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಅಗತ್ಯವಿರುವಷ್ಟು ವಿದ್ಯುತ್ ಪೂರೈಕೆ ಆಗುತ್ತಿದೆ. ವಿದ್ಯುತ್ ಬೇಡಿಕೆ ಹೆಚ್ಚಾದರೆ ಅದನ್ನು ನಿರ್ವಹಿಸುವ ವಿಶ್ವಾಸ ಸರ್ಕಾರಕ್ಕೆ ಇದೆ ಎಂದರು.

ಸಿಎ ಸಂಸ್ಥೆ ಸುಧಾರಣೆ: ಸಂಸತ್ತಿನಲ್ಲಿ ಮಸೂದೆ ಅಂಗೀಕಾರ

ನವದೆಹಲಿ (ಪಿಟಿಐ): ಲೆಕ್ಕಪರಿಶೋಧಕರು, ಕಾಸ್ಟ್ ಅಕೌಂಟೆಂಟ್‌ಗಳು ಮತ್ತು ಕಂಪನಿ ಕಾರ್ಯದರ್ಶಿಗಳ ಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ ಸುಧಾರಣೆ ತರುವ ಮಸೂದೆಯನ್ನು ಸಂಸತ್ತು ಮಂಗಳವಾರ ಅಂಗೀಕರಿಸಿದೆ.

ಈ ಸಂಸ್ಥೆಗಳ ಸ್ವಾಯತ್ತತೆಯ ಮೇಲೆ ಮಸೂದೆ ಯಾವುದೇ ರೀತಿಯಲ್ಲಿ ಅಡ್ಡ ಪರಿಣಾಮ ಬೀರುವುದಿಲ್ಲ. ಇದು ಸಾಕಷ್ಟು ಬದಲಾವಣೆ ಮತ್ತು ಪಾರದರ್ಶಕತೆಯನ್ನು ತರಲಿದೆ ಎಂದು ಕೇಂದ್ರ ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್ ಪ್ರತಿಪಾದಿಸಿದರು.

ಲೆಕ್ಕಪರಿಶೋಧಕರು, ಕಾಸ್ಟ್ ಮತ್ತು ವರ್ಕ್ಸ್ ಅಕೌಂಟೆಂಟ್‌ಗಳು ಹಾಗೂ ಕಂಪನಿ ಕಾರ್ಯದರ್ಶಿಗಳ (ತಿದ್ದುಪಡಿ) ಮಸೂದೆ–2022 ಅನ್ನು ವಿರೋಧ ಪಕ್ಷಗಳ ವಿರೋಧದ ನಡುವೆಯೂ ರಾಜ್ಯಸಭೆಯಲ್ಲಿ ಧ್ವನಿಮತದಿಂದ ಅಂಗೀಕರಿಸಲಾಯಿತು. ಲೋಕಸಭೆಯು ಮಾರ್ಚ್ 30ರಂದು ಈ ಮಸೂದೆಯನ್ನು ಅಂಗೀಕರಿಸಿತ್ತು.

ರಾಜ್ಯಸಭೆಯಲ್ಲಿ ಚರ್ಚೆಗೆ ಉತ್ತರಿಸಿದ ನಿರ್ಮಲಾ, ‘ಹೊಸ ಶಾಸನವು ದೇಶದಲ್ಲಿ ಶೀಘ್ರದಲ್ಲೇ ವಿಶ್ವ ದರ್ಜೆಯ ಸ್ವದೇಶಿ ಸಂಸ್ಥೆಗಳ ಸ್ಥಾಪನೆಗೆ ಅನುಕೂಲ ಕಲ್ಪಿಸಲಿದೆ. ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಕ್ಷೇತ್ರಗಳಲ್ಲಿ ಜಾಗತಿಕ ಬೇಡಿಕೆಗಳನ್ನು ಪೂರೈಸುತ್ತದೆ’ ಎಂದು ಪ್ರತಿಪಾದಿಸಿದರು.

‘ರಕ್ಷಣಾ ಕ್ಷೇತ್ರ ಉತ್ಪಾದನೆಯಲ್ಲಿ ಸ್ವಾವಲಂಬನೆಯೇ ಗುರಿ’

ಆಮದು ನಿಷೇಧ: ಶಸ್ತ್ರಾಸ್ತ್ರಗಳ ಮೂರನೇ ಪಟ್ಟಿ ಬಿಡುಗಡೆ

ನವದೆಹಲಿ (ಪಿಟಿಐ): ದೇಶದ ಸೇನಾಪಡೆಗಳಿಗೆ ಅಗತ್ಯವಿರುವ ಶಸ್ತ್ರಾಸ್ತ್ರಗಳನ್ನು ದೇಶೀಯವಾಗಿಯೇ ಉತ್ಪಾದಿಸುವ ಉದ್ದೇಶದಿಂದ ಜಾರಿಗೊಳಿಸಿರುವ ಯೋಜನೆಯಡಿ, ಆಮದು ನಿಷೇಧಕ್ಕೆ ಒಳಪಟ್ಟಿರುವ ‘101 ಮಿಲಿಟರಿ ವ್ಯವಸ್ಥೆಗಳ’ ಮೂರನೇ ಪಟ್ಟಿಯನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಗುರುವಾರ ಬಿಡುಗಡೆ ಮಾಡಿದ್ದಾರೆ.

ಮುಂದಿನ ಐದು ವರ್ಷಗಳ ಅವಧಿಯಲ್ಲಿ ಈ ಶಸ್ತ್ರಾಸ್ತ್ರಗಳ ಆಮದನ್ನು ನಿಲ್ಲಿಸುವುದು ಹಾಗೂ ಅವುಗಳನ್ನು ದೇಶೀಯವಾಗಿಯೇ ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಲಾಗಿದೆ. ಕೇಂದ್ರ ಸರ್ಕಾರದ ಈ ನಡೆಯಿಂದ ಶಸ್ತ್ರಾಸ್ತ್ರಗಳ ಉತ್ಪಾದನೆ ಕ್ಷೇತ್ರದಲ್ಲಿರುವ ದೇಶೀಯ ಉದ್ದಿಮೆಗಳಿಗೆ ಮತ್ತಷ್ಟು ಉತ್ತೇಜನ ಸಿಗಲಿದೆ.

ಡಿಆರ್‌ಡಿಒ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಪಟ್ಟಿಯನ್ನು ಬಿಡುಗಡೆ ಮಾಡಿ ಮಾತನಾಡಿದ ಸಚಿವ ರಾಜನಾಥ್ ಸಿಂಗ್, ‘ಸೆನ್ಸರ್‌ಗಳು, ವಿವಿಧ ಆಯುಧಗಳು, ಮದ್ದುಗುಂಡುಗಳು, ನೌಕಾಪಡೆ ಬಳಸುವ ಹೆಲಿಕಾಪ್ಟರ್‌ಗಳು, ಗಸ್ತು ಹಡಗುಗಳು, ಯುದ್ಧನೌಕೆ ನಿರೋಧಕ ಕ್ಷಿಪಣಿಗಳು ಹಾಗೂ ವಿಕಿರಣ ನಿರೋಧಕ ಕ್ಷಿಪಣಿಗಳನ್ನು ಈ ಪಟ್ಟಿ ಒಳಗೊಂಡಿದೆ’ ಎಂದು ಹೇಳಿದರು.

‘ರಕ್ಷಣಾ ವಲಯದಲ್ಲಿ ಸ್ವಾವಲಂಬನೆ ಸಾಧಿಸುವುದು ಹಾಗೂ ಮಿಲಿಟರಿ ಸಾಧನಗಳ ರಫ್ತಿಗೆ ಉತ್ತೇಜನ ನೀಡಬೇಕು ಎಂಬುದೇ ನಮ್ಮ ಮುಖ್ಯ ಉದ್ದೇಶ. ಈ ಗುರಿ ಸಾಧನೆಯ ಪ್ರಯತ್ನದಲ್ಲಿ ಸಾರ್ವಜನಿಕರು ಹಾಗೂ ಖಾಸಗಿ ವಲಯದ ಪಾಲ್ಗೊಳ್ಳುವಿಕೆಗೆ ಇಂದು ಬಿಡುಗಡೆಯಾಗಿರುವ ಪಟ್ಟಿ ಪ್ರೋತ್ಸಾಹ ನೀಡಲಿದೆ’ ಎಂದೂ ಹೇಳಿದರು.

ನವದೆಹಲಿಯಲ್ಲಿ ಡಿಆರ್‌ಡಿಒ ಭವನದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ‘ದೇಶೀಯವಾಗಿ ತಯಾರಿಸಲಾಗುವ 101 ಮಿಲಿಟರಿ ವ್ಯವಸ್ಥೆಗಳ’ ಪಟ್ಟಿಯನ್ನು ಬಿಡುಗಡೆ ಮಾಡಿದರು. ರಕ್ಷಣಾ ಖಾತೆ ರಾಜ್ಯ ಸಚಿವ ಅಜಯ್ ಭಟ್ ಹಾಗೂ ರಕ್ಷಣಾ ಸಚಿವಾಲಯ ಕಾರ್ಯದರ್ಶಿ ಅಜಯ್ ಸಿಂಗ್ ಇದ್ದಾರೆ —ಪಿಟಿಐ ಚಿತ್ರ

ಪಾಕ್: ಮತ್ತೆ ಅವಿಶ್ವಾಸ ನಿರ್ಣಯಕ್ಕೆ ಆದೇಶ

ಒಂದನೇ ಪುಟದಿಂದ

ಅವಿಶ್ವಾಸ ನಿರ್ಣಯವನ್ನು ಉಪಸ್ಪೀಕರ್ ತಿರಸ್ಕರಿಸಿದ ಬಳಿಕ, ಸಂಸತ್ತನ್ನು ವಿಸರ್ಜಿಸುವಂತೆ ಇಮ್ರಾನ್ ಅವರು ಅಧ್ಯಕ್ಷ ಆರಿಫ್ ಅಲ್ವಿ ಅವರಿಗೆ ಶಿಫಾರಸು ಮಾಡಿದ್ದರು. ಅಲ್ವಿ ಅವರು ಸಂಸತ್ತನ್ನು ವಿಸರ್ಜಿಸಿ ಆದೇಶಿಸಿದ್ದರು. ಜತೆಗೆ, ಮೂರು ತಿಂಗಳಲ್ಲಿ ಚುನಾವಣೆ ನಡೆಸುವಂತೆ ಚುನಾವಣಾ ಆಯೋಗಕ್ಕೆ ಸೂಚನೆ ನೀಡಿದ್ದರು.

ಉಪ ಸ್ಪೀಕರ್ ಅವರ ನಿರ್ಧಾರ ಮತ್ತು ಸಂಸತ್ತು ವಿಸರ್ಜನೆ ಪ್ರಕರಣದ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಣೆಯಿಂದ ಕೈಗೆತ್ತಿಕೊಂಡಿತ್ತು. ಇಮ್ರಾನ್ ನೇತೃತ್ವದ ಮೈತ್ರಿಕೂಟದ ಕೆಲವು ಪಕ್ಷಗಳು ಮೈತ್ರಿಕೂಟ ತೊರೆದಿವೆ. ಹಾಗಾಗಿ, ಸರ್ಕಾರಕ್ಕೆ ಸಂಸತ್ತಿನಲ್ಲಿ ಬಹುಮತ ನಷ್ಟವಾಗಿದೆ. ಕಳೆದ ವಾರ ಮಂಡನೆಯಾಗಿದ್ದ ಅವಿಶ್ವಾಸ ನಿರ್ಣಯವನ್ನು ಮತಕ್ಕೆ ಹಾಕಿದ್ದರೆ ಇಮ್ರಾನ್ ಸೋಲುವುದು ನಿಚ್ಚಳ ಎನ್ನಲಾಗಿತ್ತು.

ಪ್ರತಿಕ್ರಿಯೆ ಇಲ್ಲ

ನವದೆಹಲಿ (ಪಿಟಿಐ): ಪಾಕಿಸ್ತಾನದ ಆಂತರಿಕ ವಿಚಾರಗಳ ಬಗ್ಗೆ ಭಾರತವು ಪ್ರತಿಕ್ರಿಯೆ ನೀಡುವುದಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಹೇಳಿದೆ.

‘ಪಾಕಿಸ್ತಾನದಲ್ಲಿ ಈಗಿನ ರಾಜಕೀಯ ಬೆಳವಣಿಗೆಗಳನ್ನು ಗಮನಿಸುತ್ತಿದ್ದೇವೆ. ಅದು ಅವರ ಆಂತರಿಕ ವಿಚಾರ. ಈ ಬಗ್ಗೆ ನಾವು ಪ್ರತಿಕ್ರಿಯೆ ನೀಡುವುದಿಲ್ಲ’ ಎಂದು ಸಚಿವಾಲಯವು ಹೇಳಿದೆ.

‘ಚುನಾವಣೆಗೆ ಏಳು ತಿಂಗಳು ಬೇಕು’

ಲಾಹೋರ್ ವರದಿ: ಪಾಕಿಸ್ತಾನದ ಅಧ್ಯಕ್ಷರ ಕೋರಿಕೆಯಂತೆ 90 ದಿನಗಳಲ್ಲಿ ಸಾರ್ವತ್ರಿಕ ಚುನಾವಣೆ ನಡೆಸಲು ಸಾಧ್ಯವಿಲ್ಲ ಎಂದು ಪಾಕಿಸ್ತಾನದ ಚುನಾವಣಾ ಆಯೋಗ ಗುರುವಾರ ತಿಳಿಸಿದೆ.

‘ಚುನಾವಣೆ ನಡೆಸಲು ಸಿದ್ಧ. ಆದರೆ ಇದಕ್ಕೆ ಹೆಚ್ಚುವರಿ ನಾಲ್ಕು ತಿಂಗಳು ಅಗತ್ಯ. ಅಕ್ಟೋಬರ್ ತಿಂಗಳ ಹೊತ್ತಿಗೆ ಚುನಾವಣೆ ಪ್ರಕ್ರಿಯೆ ಮುಗಿಸಬಹುದು’ ಎಂದು ಆಯೋಗ ತಿಳಿಸಿದೆ.

ಪ್ರಧಾನಿ ಇಮ್ರಾನ್ ಖಾನ್ ಅವರ ಕೋರಿಕೆಯಂತೆ ಪಾಕಿಸ್ತಾನ ಸಂಸತ್ತಿನ ಕೆಳಮನೆಯನ್ನು ವಿಸರ್ಜಿಸಲಾಗಿದೆ. 90 ದಿನಗಳ ಒಳಗೆ ಚುನಾವಣೆ ನಡೆಸುವಂತೆ ಪಾಕಿಸ್ತಾನದ ಅಧ್ಯಕ್ಷರು ಚುನಾವಣಾ ಆಯೋಗಕ್ಕೆ ಸೂಚನೆ ನೀಡಿದ್ದರು.

ಇ.ಡಿಯಿಂದ ಒಮರ್ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ/ಶ್ರೀನಗರ: ಸುಮಾರು ಹನ್ನೆರಡು ವರ್ಷಗಳ ಹಿಂದೆ ಜಮ್ಮು ಮತ್ತು ಕಾಶ್ಮೀರ ಬ್ಯಾಂಕ್ ಕಟ್ಟಡವನ್ನು ಖರೀದಿಸಿದ ಸಂಬಂಧ ಗುರುವಾರ ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಹಾಗೂ ಎನ್‌ಸಿ ಪಕ್ಷದ ಉಪಾಧ್ಯಕ್ಷ ಒಮರ್ ಅಬ್ದುಲ್ಲಾ ಅವರನ್ನು ಜಾರಿ ನಿರ್ದೇಶನಾಲಯವು ಪ್ರಶ್ನಿಸಿದೆ.

‘ನವದೆಹಲಿಯ ಜಾರಿ ನಿರ್ದೇಶನಾಲಯದ ಪ್ರಧಾನ ಕಚೇರಿಗೆ ಗುರುವಾರ ಬೆಳಿಗ್ಗೆ ಹಾಜರಾದ ಒಮರ್ ಅಬ್ದುಲ್ಲಾ ಅವರಿಂದ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು’ ಎಂದು ಅಧಿಕಾರಿಗಳು ತಿಳಿಸಿದರು.

ಈ ವರ್ಷದ ಆರಂಭದಲ್ಲಿ ಕಟ್ಟಡ ಖರೀದಿ ಸಂಬಂಧ ಜಾರಿ ನಿರ್ದೇಶನಾಲಯವು ಪ್ರಕರಣ ದಾಖಲಿಸಿಕೊಂಡಿತ್ತು.

ಎದುರಾಳಿ ಪಕ್ಷಗಳ ಮಟ್ಟಹಾಕಲು ಬಿಜೆಪಿ ಅಧಿಕಾರ ದುರ್ಬಳಕೆ: ಜಾರಿ ನಿರ್ದೇಶನಾಲಯದ ಕ್ರಮವನ್ನು ಖಂಡಿಸಿರುವ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು, ‘12 ವರ್ಷಗಳ ಹಿಂದಿನ ಕಟ್ಟಡ ಖರೀದಿ ಸಂಬಂಧ ಪಕ್ಷದ ನಾಯಕ ಒಮರ್ ಅಬ್ದುಲ್ಲಾ ಅವರನ್ನು ಪ್ರಶ್ನಿಸಿರುವ ಜಾರಿ ನಿರ್ದೇಶನಾಲಯದ ಕ್ರಮವು ಅನೈತಿಕ ಹಾಗೂ ದ್ವೇಷಪೂರಿತ. ಕೇಂದ್ರ ತನಿಖಾ ಸಂಸ್ಥೆಯ ಮುಂದುವರೆದ ದುರ್ಬಳಕೆ’ ಎಂದು ಟೀಕಿಸಿದೆ.

‘ಈ ಹಿಂದೆ ಚುನಾವಣಾ ಆಯೋಗವು ಚುನಾವಣೆಗಳನ್ನು ಘೋಷಿಸುವ ಸಂದರ್ಭವಿತ್ತು. ಆದರೆ ಈಗ ಜಾರಿ ನಿರ್ದೇಶನಾಲಯವು ಚುನಾವಣೆಗಳನ್ನು ಘೋಷಿಸಿದಂತಿದೆ’ ಎಂದು ಕೇಂದ್ರ ಸರ್ಕಾರದ ವಿರುದ್ಧ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ವಕ್ತಾರರು ವಾಗ್ದಾಳಿ ನಡೆಸಿದ್ದಾರೆ.

ಚಿತ್ರ ಸಾಹಿತಿ ಮಾಯಾ ಗೋವಿಂದ್ ನಿಧನ

ಮುಂಬೈ (ಪಿಟಿಐ): ಚಿತ್ರಸಾಹಿತಿ, ಕವಯತ್ರಿ ಮಾಯಾ ಗೋವಿಂದ್ (82) ಇಲ್ಲಿನ ತಮ್ಮ ನಿವಾಸದಲ್ಲಿ ಹೃದಯಾಘಾತದಿಂದ ಗುರುವಾರ ನಿಧನರಾದರು.

70ರ ದಶಕದಲ್ಲಿ ಬಾಲಿವುಡ್‌ನಲ್ಲಿ ಕೆಲಸ ಆರಂಭಿಸಿದ ಅವರು ವಿನೋದ್ ಖನ್ನಾ ನಟನೆಯ ‘ಆರೋಪ್’, ಹೇಮಮಾಲಿನಿ ನಟನೆಯ ‘ರಜಿಯಾ ಸುಲ್ತಾನ್’, ಶಾರುಖ್ ಖಾನ್ ನಟನೆಯ ‘ಚಾಹತ್’ ಸೇರಿದಂತೆ ಹಲವು ಚಿತ್ರಗಳಿಗೆ ಚಿತ್ರ ಸಾಹಿತ್ಯ ನೀಡಿದ್ದರು. 2014ರಲ್ಲಿ ತೆರೆಕಂಡ ‘ಬಜಾರ್ ಇ ಹುಸ್ನ್’ ಅವರು ಕೆಲಸ ಮಾಡಿದ ಕಡೆಯ ಚಿತ್ರ.

ಅವರ ಪುತ್ರ ಅಜಯ್ ಅವರ ಪ್ರಕಾರ, ಮಾಯಾ ಕಳೆದ ನಾಲ್ಕು ತಿಂಗಳಿಂದ ಅಸ್ವಸ್ಥರಾಗಿದ್ದರು. ಅವರ ಮೆದುಳಿನಲ್ಲಿ ರಕ್ತ ಹೆಪ್ಪುಗಟ್ಟಿದ್ದು, ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ಕಾರಣವಾಗಿತ್ತು.

1,033 ಹೊಸ ಕೋವಿಡ್ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಕಳೆದ 24 ಗಂಟೆಗಳಲ್ಲಿ 1,033 ಹೊಸ ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, ಸೋಂಕಿತರ ಒಟ್ಟು ಸಂಖ್ಯೆ 4,30,31,958ಕ್ಕೆ ಏರಿದೆ. ಸದ್ಯ 11,639 ಸಕ್ರಿಯ ಪ್ರಕರಣಗಳಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಶೇ 7.5 ಮೀಸಲಾತಿ: ಸಿಂಧುತ್ವ ಎತ್ತಿ ಹಿಡಿದ ಕೋರ್ಟ್

ಚೆನ್ನೈ: ‘ನೀಟ್’ನಲ್ಲಿ ಉತ್ತೀರ್ಣರಾದ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ವೈದ್ಯ ಹಾಗೂ ದಂತವೈದ್ಯ ಕಾಲೇಜುಗಳಿಗೆ ಪ್ರವೇಶದಲ್ಲಿ ಶೇ 7.5ರಷ್ಟು ಮೀಸಲಾತಿ ನೀಡುವ ಸಂಬಂಧ ಆಗಿನ ಎಐಎಡಿಎಂಕೆ ಸರ್ಕಾರ ಅಂಗೀಕರಿಸಿದ್ದ ಮಸೂದೆಯ ಸಾಂವಿಧಾನಿಕ ಸಿಂಧುತ್ವವನ್ನು ಮದ್ರಾಸ್ ಹೈಕೋರ್ಟ್ ಗುರುವಾರ ಎತ್ತಿ ಹಿಡಿದಿದೆ.

ಈ ಮೀಸಲಾತಿಯ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಖಾಸಗಿ ಶಾಲೆಗಳ ವಿದ್ಯಾರ್ಥಿಗಳು ಸಲ್ಲಿಸಿದ್ದ ಅರ್ಜಿಗಳನ್ನು ಮುಖ್ಯನ್ಯಾಯಮೂರ್ತಿ ಎಂ.ಎನ್. ಭಂಡಾರಿ ಹಾಗೂ ನ್ಯಾಯಮೂರ್ತಿ ಡಿ.ಭರತ ಚಕ್ರವರ್ತಿ ಅವರಿದ್ದ ನ್ಯಾಯಪೀಠ ವಜಾಗೊಳಿಸಿತು.

ಈ ಕಾಯ್ದೆಯಿಂದಾಗಿ, ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆದ ಕನಿಷ್ಠ 400 ವಿದ್ಯಾರ್ಥಿಗಳಿಗೆ ವೈದ್ಯ ಕಾಲೇಜುಗಳಲ್ಲಿ ಪ್ರತಿ ವರ್ಷ ಪ್ರವೇಶ ಪಡೆಯಲು ಸಾಧ್ಯವಾಗಲಿದೆ.

ಬಿರ್‌ಭೂಮ್ ಹತ್ಯೆ: ಸಿಬಿಐನಿಂದ ನಾಲ್ವರು ಆರೋಪಿಗಳ ಬಂಧನ

ರಾಮ್‌ಪುರಹಾಟ್, ಪಶ್ಚಿಮ ಬಂಗಾಳ (ಪಿಟಿಐ): ಬಿರ್‌ಭೂಮ್ ಜಿಲ್ಲೆಯ ಬೋಗ್‌ತುಇ ಗ್ರಾಮದಲ್ಲಿ ನಡೆದಿದ್ದ ಸಜೀವ ದಹನ ಪ್ರಕರಣದ ತನಿಖೆ ನಡೆಸುತ್ತಿರುವ ಸಿಬಿಐ, ನಾಲ್ವರು ಆರೋಪಿಗಳನ್ನು ಮುಂಬೈನಲ್ಲಿ ಗುರುವಾರ ಬಂಧಿಸಿದೆ.

ಪ್ರಕರಣ ಕುರಿತು ತನಿಖೆ ಕೈಗೆತ್ತಿಕೊಂಡ ನಂತರ ಸಿಬಿಐನಿಂದ ಮೊದಲ ಬಂಧನ ಇದಾಗಿದೆ.

‘ಬಂಧಿತ ಆರೋಪಿಗಳ ಪೈಕಿ ಇಬ್ಬರನ್ನು ಬಪ್ಪಾ ಹಾಗೂ ಶಾಬು ಶೇಖ್ ಎಂದು ಗುರುತಿಸಲಾಗಿದೆ. ಬಂಧಿತರನ್ನು ಮುಂಬೈನ ಕೋರ್ಟ್‌ಗೆ ಹಾಜರುಪಡಿಸಿ, ಅವರನ್ನು ಪಶ್ಚಿಮ ಬಂಗಾಳಕ್ಕೆ ಕರೆದೊಯ್ಯಲು ಅನುಮತಿ ನೀಡುವಂತೆ ಮನವಿ ಸಲ್ಲಿಸಲಾಗುವುದು’ ಎಂದು ಸಿಬಿಐ ಅಧಿಕಾರಿ ತಿಳಿಸಿದ್ದಾರೆ.

ಸಂಸತ್ ಕಲಾಪ ಅನಿರ್ದಿಷ್ಟಾವಧಿ ಮುಂದಕ್ಕೆ

ನವದೆಹಲಿ (ಪಿಟಿಐ): ಬೆಲೆ ಏರಿಕೆ ಮತ್ತು ಐಎನ್‌ಎಸ್ ವಿಕ್ರಾಂತ್ ವಿಮಾನವಾಹಕ ಯುದ್ಧ ನೌಕೆ ಉಳಿಸಲು ಸಂಗ್ರಹಿಸಿದ್ದ ಹಣದ ದುರುಪಯೋಗದ ಕುರಿತು ಚರ್ಚಿಸಲು ಅವಕಾಶ ನೀಡುವಂತೆ ಆಗ್ರಹಿಸಿ ಶಿವಸೇನಾ ಮತ್ತು ಇತರ ವಿರೋಧ ಪಕ್ಷಗಳು ಗದ್ದಲ ಎಬ್ಬಿಸಿದ ಪರಿಣಾಮ ರಾಜ್ಯಸಭೆ ಕಲಾಪವನ್ನು ಅನಿರ್ದಿಷ್ಟಾವಧಿಗೆ ಗುರುವಾರ ಮುಂದೂಡಲಾಯಿತು.

ಲೋಕಸಭೆಯಲ್ಲಿ ಸಹ ಕಲಾಪವನ್ನು ಗುರುವಾರ ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.

❦ ಸುಭಾಷಿತ ❦

ಜಗಳ ಮಾಡಲು ಬಂದವನ ಎದುರು ಮೌನ ವಹಿಸು. ಅದು ಜಗಳದ ಬಾಗಿಲನ್ನು ಮುಚ್ಚುತ್ತದೆ.

-ಎ.ಆರ್.ಕೃಷ್ಣಶಾಸ್ತ್ರಿ

ಗೃಹ ಸಚಿವರ ಸಂವೇದನಾರಹಿತ ಮಾತು ಖಂಡನಾರ್ಹ

ರಾಜ್ಯದ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಮತ್ತೆ ನಗೆಪಾಟಲಿಗೆ ಈಡಾಗಿದ್ದಾರೆ. ನಾಲಗೆಯನ್ನು ಬೇಕಾಬಿಟ್ಟಿಯಾಗಿ ಹರಿಯಬಿಟ್ಟು ಟೀಕೆಗೆ ಗುರಿಯಾಗಿದ್ದಾರೆ. ಬೆಂಗಳೂರಿನ ಜಗಜೀವನರಾಮ್ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಚಂದ್ರಶೇಖರ್ ಕೊಲೆಗೆ ಸಂಬಂಧಿಸಿದಂತೆ ಅಜ್ಞಾನದ ಮಾತುಗಳನ್ನು ಆಡಿ ಪೇಚಿಗೆ ಸಿಲುಕಿದ್ದಾರೆ. ಅವರ ಹೇಳಿಕೆಗೆ ವ್ಯಾಪಕ ಖಂಡನೆ ವ್ಯಕ್ತವಾದ ನಂತರ ತಪ್ಪು ಒಪ್ಪಿಕೊಂಡು ಮಾತು ಬದಲಿಸಿದ್ದಾರೆ. ಗೃಹ ಸಚಿವರ ಹೇಳಿಕೆ ವಿವೇಚನೆಯಿಂದ ಕೂಡಿದ್ದಲ್ಲ. ಜವಾಬ್ದಾರಿಯುತ ಸ್ಥಾನದಲ್ಲಿ ಇರುವ ವ್ಯಕ್ತಿ ಹೊಣೆ ಮರೆತು ಮಾತನಾಡುವುದು ತೀರಾ ವಿಷಾದಕರ. ಗೃಹ ಸಚಿವರು ಯಾವುದೇ ಮಾತು ಆಡುವಾಗ ಎಚ್ಚರಿಕೆಯಿಂದ ಇರಬೇಕು. ಎಚ್ಚರಿಕೆಯಿಂದ ಇರಬೇಕು ಎಂಬ ಮಾತನ್ನು ಬೇರೆಯವರಿಂದ ಹೇಳಿಸಿಕೊಳ್ಳುವ ಪರಿಸ್ಥಿತಿಯನ್ನು ಸೃಷ್ಟಿಸಿಕೊಳ್ಳಬಾರದು. ಅದರಲ್ಲೂ, ರಾಜ್ಯದಲ್ಲಿ ಈಗ ಕೋಮುಸೂಕ್ಷ್ಮ ಪರಿಸ್ಥಿತಿ ಇರುವುದು ಮೇಲ್ನೋಟಕ್ಕೇ ಗೊತ್ತಾಗುವಂತೆ ಇದೆ. ಇಂತಹ ಸಂದರ್ಭದಲ್ಲಿ, ಕೋಮು ಸೌಹಾರ್ದಕ್ಕೆ ಧಕ್ಕೆ ತರುವಂತಹ ಮತ್ತು ಸತ್ಯಕ್ಕೆ ದೂರವಾದ ಮಾತುಗಳನ್ನು ಗೃಹ ಸಚಿವರೇ ಆಡುವುದು ವಿಪರ್ಯಾಸ. ಕೋಮು ಸಾಮರಸ್ಯ ಕದಡುವಂತಹ ವಿದ್ಯಮಾನಗಳು ರಾಜ್ಯದಲ್ಲಿ ಒಂದರ ನಂತರ ಮತ್ತೊಂದು ಘಟಿಸುತ್ತಿವೆ. ಹಿಜಾಬ್ ವಿವಾದದಿಂದ ಆರಂಭವಾದ ಇಂತಹ ಬೆಳವಣಿಗೆಯು ಹಲಾಲ್, ಜಾತ್ರೆ-ಹಬ್ಬಗಳಲ್ಲಿ ಮುಸ್ಲಿಂ ವರ್ತಕರಿಗೆ ಬಹಿಷ್ಕಾರ, ಮಸೀದಿ ಧ್ವನಿವರ್ಧಕಗಳ ಬಳಕೆಗೆ ತಕರಾರು, ಮಾವಿನಹಣ್ಣು ಖರೀದಿ ಮುಂತಾದ ವಿಷಯಗಳ ಮೂಲಕ ಹೊಸ ಹೊಸ ರೂಪ ಪಡೆಯುತ್ತಿದೆ. ಇಂತಹ ಹೊತ್ತಿನಲ್ಲಿ ಗೃಹ ಸಚಿವರು ಕೋಮು ದ್ವೇಷಕ್ಕೆ ಕುಮ್ಮಕ್ಕು ಕೊಡುವ ರೀತಿಯಲ್ಲಿ ಮಾತನಾಡಿದ್ದು ಅಕ್ಷಮ್ಯ. ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆಗೆ ಸಂಬಂಧಿಸಿದಂತೆ ಯಾವುದೇ ಪ್ರಮುಖ ಘಟನೆ ನಡೆದರೂ ಗೃಹ ಸಚಿವರಿಗೆ ಅದರ ಸಂಪೂರ್ಣ ಮಾಹಿತಿ ಸಿಗುತ್ತದೆ. ಗೃಹ ಸಚಿವರು ಯಾವುದೇ ಮಾಹಿತಿಯನ್ನು ಪೊಲೀಸರಿಂದ ಪಡೆಯಬೇಕೇ ವಿನಾ ಬೇರೆ ಮೂಲಗಳಿಂದ ಅಲ್ಲ. ಬೇರೆ ಮೂಲಗಳಿಂದ ಮಾಹಿತಿ ಬಂದರೂ ಅದನ್ನು ಪೊಲೀಸರ ಜೊತೆ ಚರ್ಚಿಸಿ ನಿಜವಾದ ಮಾಹಿತಿಯನ್ನು ಪಡೆದುಕೊಂಡು ಪ್ರತಿಕ್ರಿಯೆ ನೀಡಬೇಕು. ಜವಾಬ್ದಾರಿಯುತ ಸಚಿವರ ಕರ್ತವ್ಯ ಇದು. ಆದರೆ ಆರಗ ಜ್ಞಾನೇಂದ್ರ ಅವರು ಹಾಗೆ ನಡೆದುಕೊಳ್ಳಲಿಲ್ಲ. ಇದು ರಾಜ್ಯದ ದೌರ್ಭಾಗ್ಯ. 'ಉರ್ದು ಮಾತನಾಡಲು ಬರಲ್ಲ ಎಂಬ ಕಾರಣಕ್ಕೆ ಚಂದ್ರು ಅವರನ್ನು ಚೂರಿಯಿಂದ ಚುಚ್ಚಿ ಚುಚ್ಚಿ ಕೊಲ್ಲಲಾಗಿದೆ' ಎಂದು ಹೇಳುವ ಮೂಲಕ ಕೋಮು ಸೌಹಾರ್ದ ಹದಗೆಡಿಸುವುದರ ಜೊತೆಗೆ ಭಾಷಾ ವಿವಾದಕ್ಕೂ ಕಾರಣವಾಗುವಂತಹ ಹೇಳಿಕೆಯನ್ನು ಸಚಿವರು ನೀಡಿದ್ದರು. ಬೆಂಗಳೂರು ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರು ಚಂದ್ರಶೇಖರ್ ಕೊಲೆಯ ಬಗ್ಗೆ ಸ್ಪಷ್ಟನೆ ನೀಡಿದ ನಂತರ ಗೃಹ ಸಚಿವರು ತಮ್ಮ ಹೇಳಿಕೆಯನ್ನು ಹಿಂಪಡೆದಿದ್ದಾರೆ.



ಸಂಪುಟ ಸಹೋದ್ಯೋಗಿಗಳ ಹದ್ದುಮೀರಿದ ಹೇಳಿಕೆಗಳನ್ನು ನಿಯಂತ್ರಿಸುವುದು ಮುಖ್ಯಮಂತ್ರಿಯವರ ಹೊಣೆ

ಜ್ಞಾನೇಂದ್ರ ಅವರು ಹೀಗೆ ಅಪ್ರಬುದ್ಧವಾಗಿ ನಾಲಗೆ ಹರಿಯಬಿಟ್ಟಿರುವುದು ಇದೇ ಮೊದಲು ಅಲ್ಲ. ಈ ಹಿಂದೆ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಲ್ಲಿ ಒಬ್ಬ ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆದ ಸಂದರ್ಭದಲ್ಲಿಯೂ ಗೃಹ ಸಚಿವರು ಇದೇ ರೀತಿ ಸಂವೇದನಾರಹಿತ ಹೇಳಿಕೆ ನೀಡಿದ್ದರು. ನಿರ್ಜನ ಪ್ರದೇಶಕ್ಕೆ ಯುವತಿ-ಯುವಕ ರಾತ್ರಿ 7.30ರ ಸಮಯದಲ್ಲಿ ಹೋಗಬಾರದಿತ್ತು ಎಂದು ಗೃಹ ಸಚಿವರು ಹೇಳಿದ್ದರು. ಅಪರಾಧ ಪ್ರಕರಣದಲ್ಲಿ ಭಾಗಿಯಾದ ಆರೋಪಿಗಳನ್ನು ಬಂಧಿಸುವುದನ್ನು ಬಿಟ್ಟು ಯುವತಿಯದ್ದೇ ತಪ್ಪು ಎಂಬರ್ಥದ ಮಾತುಗಳನ್ನು ಆಡಿದ್ದರು. ಆಗಲೂ ವ್ಯಾಪಕ ಟೀಕೆಗೆ ಗುರಿಯಾಗಿದ್ದರು. ಇಂತಹ ಎಡವಟ್ಟುಗಳನ್ನು ಗೃಹ ಸಚಿವರು ಪದೇ ಪದೇ ಮಾಡುತ್ತಿದ್ದರೂ ಅವುಗಳನ್ನು ಮುಖ್ಯಮಂತ್ರಿ ಹೇಗೆ ಸಹಿಸಿಕೊಂಡಿದ್ದಾರೆ? ಗೃಹ ಸಚಿವರ ಅಪ್ರಬುದ್ಧ ನಡೆಯ ಬಗ್ಗೆ ಮುಖ್ಯಮಂತ್ರಿ ಇನ್ನೂ ಪ್ರತಿಕ್ರಿಯೆ ನೀಡಿಲ್ಲ. ಬೇಜವಾಬ್ದಾರಿಯಿಂದ ನಡೆದುಕೊಂಡ ಸಚಿವರ ಕಿವಿ ಹಿಂಡಿ ಬುದ್ಧಿ ಹೇಳಬೇಕಾದ ಮುಖ್ಯಮಂತ್ರಿ ಸುಮ್ಮನಿರುವುದು ಸರಿಯಲ್ಲ. ಸಚಿವರ ನಡವಳಿಕೆಯನ್ನು ಆಡಳಿತಾರೂಢ ಬಿಜೆಪಿಯ ಕೆಲವು ಮುಖಂಡರು ಬೆಂಬಲಿಸುತ್ತಿರುವುದಂತೂ ಅಕ್ಷಮ್ಯ. ಪೊಲೀಸ್ ಕಮಿಷನರ್ ಸ್ಪಷ್ಟನೆ ನೀಡಿದ ನಂತರವೂ 'ಚಂದ್ರು ಹತ್ಯೆ ಉರ್ದು ಭಾಷೆ ಬಾರದಿರುವ ಕಾರಣಕ್ಕೇ ನಡೆದಿದೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದ್ದಾರೆ. ಪಕ್ಷದ ಮುಖಂಡರ ಮತ್ತು ಸಂಪುಟ ಸಹೋದ್ಯೋಗಿಗಳ ಹದ್ದುಮೀರಿದ ಹೇಳಿಕೆಗಳನ್ನು ಕೇಳಿಸಿಕೊಂಡು ಸುಮ್ಮನಿರುವುದು ಮುಖ್ಯಮಂತ್ರಿ ಅವರಿಗೆ ಶೋಭೆ ತರುವುದಿಲ್ಲ. ಬೇಕಾಬಿಟ್ಟಿ ಹೇಳಿಕೆ ನೀಡುವುದನ್ನು ನಿಯಂತ್ರಿಸುವುದು ಅವರ ಹೊಣೆ.

ದಿನದ ಟ್ವೀಟ್

ಇದೆಂಥಾ ಅಧಿವೇಶನ?

ನಾಲ್ಕು ವಾರಗಳ ಸಂಸತ್ ಅಧಿವೇಶನ ಇನ್ನೇನು ಕೊನೆಗೊಳ್ಳಲಿದೆ. ರಾಜ್ಯಸಭೆಯ ಅಧಿವೇಶನವನ್ನು ಎರಡು ದಿನ ಮುಂಚಿತವಾಗಿಯೇ ಅನಿರ್ದಿಷ್ಟ ಅವಧಿಗೆ ಮುಂದೂಡಲಾಗಿದೆ: ಬೆಲೆ ಏರಿಕೆ ಮತ್ತು ಹಣದುಬ್ಬರ ಅಥವಾ ಆರ್ಥಿಕ ಸವಾಲುಗಳಿಗೆ ಸಂಬಂಧಿಸಿದಂತೆ ಒಂದೇ ಒಂದು ಚರ್ಚೆಯೂ ನಡೆದಿಲ್ಲ. ಅಪರಾಧ ಪ್ರಕ್ರಿಯೆಗೆ ಸಂಬಂಧಿಸಿದ ಪ್ರಮುಖ ಮಸೂದೆಯನ್ನು ಸ್ಥಾಯಿ ಸಮಿತಿಯ ಪರಿಶೀಲನೆಗೆ ಕಳುಹಿಸದೆಯೇ ಅಂಗೀಕರಿಸಲಾಗಿದೆ. ರಬ್ಬರ್ ಸ್ಟ್ಯಾಂಪ್ ಸಂಸತ್ತು?

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ಸರ್ಕಾರ ಜನರ ಸಂಕಷ್ಟಕ್ಕೆ ಸ್ಪಂದಿಸಬೇಕೇ ಹೊರತು, ದ್ವೇಷ ಹುಟ್ಟುಹಾಕಿ ಸರ್ಕಾರವೇ ಸಮಸ್ಯೆಯಾಗಬಾರದು. ಚುನಾವಣೆಯಲ್ಲಿ ಹೆಚ್ಚು ಮತ ಗಳಿಸಲು ಈ ತಂತ್ರ ಹೂಡಿದರೆ, ಬರುವ ಮತಗಳೂ ಕಡಿಮೆಯಾಗುತ್ತವೆ. ಪಕ್ಷದ ಮಾನ, ಮರ್ಯಾದೆ ಕಡಿಮೆಯಾಗಿ, ಜನರು ನಿಮ್ಮನ್ನು ಕಸದ ಬುಟ್ಟಿಗೆ ಹಾಕುತ್ತಾರೆ.

ಕೋಡಿಹಳ್ಳಿ ಚಂದ್ರಶೇಖರ, ರೈತ ನಾಯಕ

25 ವರ್ಷಗಳ ಹಿಂದೆ

ಮಂಗಳವಾರ 8-4-1997

- **ಗೌಡರ ಪದತ್ಯಾಗ ನಂತರ ಕಾಂಗ್ರೆಸ್ ರಾಜಿ ಸೂತ್ರ**

ನವದೆಹಲಿ, ಏ. 7- ಪ್ರಧಾನಿ ಎಚ್.ಡಿ.ದೇವೇಗೌಡ ಅವರು ವಿಶ್ವಾಸಮತ ಪಡೆಯುವ ಮುನ್ನ ಪದತ್ಯಾಗ ಮಾಡಿದರೆ ಕಾಂಗ್ರೆಸ್ ಮುಂದಿನ ಪರ್ಯಾಯ ವ್ಯವಸ್ಥೆಯ ಬಗ್ಗೆ ಸಂಯುಕ್ತ ರಂಗದ ಜತೆ ಯಾವುದೇ ಷರತ್ತಿಲ್ಲದೆ ಮಾತುಕತೆ ನಡೆಸಲು ಬದ್ಧವಾಗಿರುವುದಾಗಿ ಕಾಂಗ್ರೆಸ್ ಕಾರ್ಯಕಾರಿಣಿ ಸದಸ್ಯ ಕೆ. ಕರುಣಾಕರನ್ ಅವರು ಪಕ್ಷದ ನಿಲುವನ್ನು ಸ್ಪಷ್ಟಪಡಿಸಿದ್ದಾರೆ.

ಕಳೆದ ಒಂದು ವಾರದಿಂದ ಸಂಯುಕ್ತ ರಂಗದ ನಾಯಕರ ಜತೆ ಅನೌಪಚಾರಿಕವಾಗಿ ಮಾತುಕತೆ ನಡೆಸುತ್ತಿರುವ ಕರುಣಾಕರನ್, ಇಂದು ವರದಿಗಾರರ ಜತೆ ಮಾತನಾಡುತ್ತ ಈ ರಾಜಿ ಸೂತ್ರವನ್ನು ಹೊರಗೆಡವಿದರು. ಈ ವಿಷಯವಾಗಿ ಶನಿವಾರ ಸಂಯುಕ್ತ ರಂಗದ ಚಾಲನಾ ಸಮಿತಿಯ ಸಂಚಾಲಕ ಮತ್ತು ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರ ಜತೆ ತಾವು ಮತ್ತು ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರು ಚರ್ಚಿಸಿರುವುದಾಗಿ ತಿಳಿಸಿದರು.

- **ಅಣ್ವಸ್ತ್ರ: ವಿಶೇಷ ಸಭೆಗೆ ಅಲಿಪ್ತರ ಆಗ್ರಹ**

ನವದೆಹಲಿ, ಏ. 7 (ಯುಎನ್ಐ)- ರಾಸಾಯನಿಕ ಅಸ್ತ್ರಗಳ ವಿನಾಶ ಒಪ್ಪಂದವನ್ನು ಅಮೆರಿಕ ಹಾಗೂ ರಷ್ಯಾ ಸ್ಥಿರೀಕರಿಸದಿರುವ ಬಗ್ಗೆ ಅಲಿಪ್ತ ರಾಷ್ಟ್ರಗಳು ಆತಂಕ ವ್ಯಕ್ತಪಡಿಸಿವೆ ಮತ್ತು ಅಣ್ವಸ್ತ್ರಗಳ ನಾಶಕ್ಕೆ ಕಾಲಬದ್ಧ ಕಾರ್ಯಕ್ರಮವೊಂದನ್ನು ರೂಪಿಸಲು ವಿಶ್ವಸಂಸ್ಥೆಯ ವಿಶೇಷ ಅಧಿವೇಶನ ಕರೆಯಬೇಕೆಂದು ಆಗ್ರಹಪಡಿಸಿವೆ.

ಇಂದು ಇಲ್ಲಿ ಆರಂಭವಾದ ಅಲಿಪ್ತ ರಾಷ್ಟ್ರಗಳ ವಿದೇಶಾಂಗ ಸಚಿವರುಗಳ 12ನೇ ಸಮಾವೇಶದಲ್ಲಿ ಸಿದ್ಧಪಡಿಸಿರುವ ಕರಡು ಘೋಷಣೆಯಲ್ಲಿ, ಜಾಗತಿಕ ನಿಶ್ಶಸ್ತ್ರೀಕರಣಕ್ಕೆ ಮನವಿ ಮಾಡಲಾಗಿದೆ.

50 ವರ್ಷಗಳ ಹಿಂದೆ

ಶನಿವಾರ, 8-4-1972

- **ಪೊಲೀಸ್ ವರ್ತನೆ ಹತೋಟಿ ಬಗ್ಗೆ ಸರ್ಕಾರದ ಭರವಸೆ**

ಬೆಂಗಳೂರು, ಏ. 7- ನಗರದ ಎನ್.ಜಿ.ಇ.ಎಫ್‌ನಲ್ಲಿ ಕಾರ್ಮಿಕರ ಎರಡು ಗುಂಪುಗಳ ನಡುವೆ ನಿನ್ನೆ ಮತ್ತು ಮೊನ್ನೆ ನಡೆದ ಘರ್ಷಣೆಗಳ ಸಂದರ್ಭದಲ್ಲಿ ಪೊಲೀಸರು ಹಠಾತ್ತನೆ ಅಶ್ರುವಾಯು ಹಾಗೂ ಲಾಠಿ ಪ್ರಯೋಗಿಸಿ ಕಾರ್ಮಿಕರನ್ನು ಸದೆಬಡಿದ ಸಂಬಂಧದಲ್ಲಿ, ವಿಧಾನಸಭೆಯಲ್ಲಿ ಇಂದು ಸರ್ಕಾರ ಬಿರುಸಿನ ವಾತಾವರಣವನ್ನು ಎದುರಿಸಿತು. ಇನ್ನು ಮುಂದೆ ಪೊಲೀಸರ ವರ್ತನೆಯ ಮೇಲೆ ಸಂಯಮದ ಬಿಗಿಹಾಕುವ ಭರವಸೆಯನ್ನು ಅದು ಶಾಸಕರಿಗೆ ನೀಡಿತು.

ಮುಂದೆ ವಿದ್ಯಾರ್ಥಿಗಳು ಮತ್ತು ಕಾರ್ಮಿಕರ ಮೇಲೆ ಬಲಪ್ರಯೋಗಿಸುವ ಪ್ರಸಂಗಗಳು ಬಂದಾಗ ದೀರ್ಘ ಆಲೋಚನೆ ಮಾಡದೇ ಈ ಕೆಲಸಕ್ಕೆ ಪೊಲೀಸರು ಕೈಹಾಕರು, ಇದು ಸರ್ಕಾರದ ನೀತಿಯಾಗಿದೆ ಎಂದು ಘಟನೆಗಳ ಬಗ್ಗೆ ಸದನದ ಕಳವಳವನ್ನು ಪ್ರತಿಧ್ವನಿಸಿದ ಕೈಗಾರಿಕಾ ಮಂತ್ರಿ ಎಸ್.ಎಂ. ಕೃಷ್ಣ ಅವರು ಹೇಳಿದರು.

ಎಂ.ಎಸ್. ಕೃಷ್ಣನ್, ಎಸ್. ಬಂಗಾರಪ್ಪ ಮತ್ತು ಟಿ.ಆರ್. ಶಾಮಣ್ಣ ಅವರು ಕಳುಹಿಸಿದ ಮೂರು ಪ್ರತ್ಯೇಕ ನಿಲುವಳಿ ಸೂಚನೆಗಳ ಅಂಗೀಕಾರದ ಸಂಬಂಧದಲ್ಲಿ ನಡೆದ ಸುಮಾರು 2 ಗಂಟೆಗಳ ಕಾಲದ ಚರ್ಚೆಯಲ್ಲಿ ಉದ್ರಿಕ್ತ ಸದಸ್ಯರೊಬ್ಬರಿಂದ ಸಭಾತ್ಯಾಗವೂ ನಡೆಯಿತು. ಪೊಲೀಸರ ವರ್ತನೆ ಬಗ್ಗೆ ರೋಷದಿಂದ ಮಾತನಾಡಿದ ಸದಸ್ಯರನ್ನು ಕೃಷ್ಣ ಸಮಾಧಾನಪಡಿಸಿದರು.

ನೆಹರೂ–ಗಾಂಧಿ ಕುಟುಂಬದವರಲ್ಲದವರಿಗೆ ಕಾಂಗ್ರೆಸ್ ಅಧ್ಯಕ್ಷ ಪಟ್ಟ ಏಕೆ ಅಗತ್ಯ?

'ಕೈ'ಚಳಕಕ್ಕಾಗಿ ಕಾದಿದೆ ಹಡಗು

ವಿಶ್ಲೇಷಣೆ

ಅರುಣ್ ಸಿನ್ಹಾ

ಕಾಂಗ್ರೆಸ್ ಪಕ್ಷವು ಮುಳುಗುವ ಹಡಗೇನಲ್ಲ. ಭಯಂಕರ ಬಿರುಗಾಳಿಗೆ ಸಿಲುಕಿರುವ ಹಡಗು ಅದು. ತೀವ್ರತರ ಹೊಡೆತಗಳನ್ನು ಅನುಭವಿಸುತ್ತಿದೆ. ಆದರೆ ಇನ್ನೂ ಛಿದ್ರವಾಗಿಲ್ಲ, ಕುಸಿದುಬೀಳುತ್ತಿಲ್ಲ. ಸಿಲುಕಿರುವ ಬಿರುಗಾಳಿಯಿಂದ ಕಾಪಾಡಿ ಮುಂದಕ್ಕೆ ಕೊಂಡೊಯ್ಯುವ ಒಬ್ಬ 'ಟಾಟಾ'ಗಾಗಿ ಕಾದಿರುವ ಜರ್ಜರಿತ 'ಏರ್ ಇಂಡಿಯಾ'ದಂತಾಗಿದೆ ಅದು.

ಹಡಗಿನ 'ಹೊಸ ಕ್ಯಾಪ್ಟನ್', ನೆಹರೂ- ಗಾಂಧಿ ಕುಟುಂಬದವರಲ್ಲದ ವ್ಯಕ್ತಿಯಾಗಬಹುದು ಅಥವಾ ರಾಹುಲ್ ಗಾಂಧಿಯವರದೇ ಪುನರುತ್ಥಾನವೂ ಆಗಬಹುದು. ಇದು ಸಾಧ್ಯವಾಗುತ್ತದೆ ಎಂದು ಭಾವಿಸಿದಲ್ಲಿ ಮತದಾರರು, ಪಕ್ಷದ ಸಂಘಟನೆ ಹಾಗೂ ಕಿರಿಯರು, ಹಿರಿಯರು ಎಂಬ ಭೇದವಿಲ್ಲದೆ ಪಕ್ಷದ ನಾಯಕರ ಜೊತೆಗೆ ಆಳವಾಗಿ, ವಿಸ್ತೃತವಾಗಿ ತೊಡಗಿಕೊಳ್ಳುವ ನೆಲೆಯ ಮರುಹುಟ್ಟಾಗಿರಬೇಕಾಗುತ್ತದೆ ಅದು. ಸದ್ಯದ ಸಂದರ್ಭದಲ್ಲಿ ಕಾಂಗ್ರೆಸ್‌ನ ಒಳ್ಳೆಯದಕ್ಕೆ ನೆಹರೂ- ಗಾಂಧಿ ಕುಟುಂಬದ ಹೊರಗಿನ ಕಾಂಗ್ರೆಸಿಗರೊಬ್ಬರು ನೇತೃತ್ವ ವಹಿಸಬೇಕು. ಅವರು ಕಿರಿಯ ಅಥವಾ ಹಿರಿಯ ವಯಸ್ಸಿನವರಾಗಿದ್ದಿರಬಹುದು. ವಯಸ್ಸಿನ ಕಾರಣದಿಂದಾಗಿ ನೇತಾರರನ್ನು ಮತದಾರರು ತಿರಸ್ಕರಿಸುವುದಿಲ್ಲ. ನರೇಂದ್ರ ಮೋದಿ ಅವರಿಗೆ 70ರ ವಯಸ್ಸು ಮೀರಿದೆ. ಅಧ್ಯಕ್ಷರನ್ನಾಗಿ ಜೋ ಬೈಡನ್ ಅವರನ್ನು ಅಮೆರಿಕನ್ನರು ಆಯ್ಕೆ ಮಾಡಿದಾಗ ಅವರ ವಯಸ್ಸು 78 ಆಗಿತ್ತು.

ಆಗಸ್ಟ್‌ಗೆ ನಿಗದಿಯಾಗಿರುವ ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯಲ್ಲಿ ರಾಹುಲ್ ಸ್ಪರ್ಧಿಸಬಾರದು. ವ್ಯಕ್ತಿಗಳಿಗಿಂತ ಪಕ್ಷವೇ ಮುಖ್ಯವೆಂದು ಭಾವಿಸುವುದರಿಂದ ಪಕ್ಷಕ್ಕಾಗಿ ತಾವು, ರಾಹುಲ್ ಹಾಗೂ ಪ್ರಿಯಾಂಕಾ ಯಾವುದೇ 'ತ್ಯಾಗ'ಕ್ಕೆ ಸಿದ್ಧರಿರುವುದಾಗಿ ಇತ್ತೀಚೆಗೆ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸೋನಿಯಾ ಗಾಂಧಿ ಹೇಳಿದ್ದಾರೆ. ಅವರ ಕುಟುಂಬವು ಈ ಮಾತಿಗೆ ತಕ್ಕಂತೆ ನಡೆದುಕೊಳ್ಳಬೇಕು. ಈ ಕುಟುಂಬದ ಹೊರಗಿನವರು ಅಧ್ಯಕ್ಷರಾದಲ್ಲಿ ಅವರು ಯಾವ ರೀತಿಯವರಾಗಿರಬಹುದು? ಅವರು ಪಕ್ಷದ ಪ್ರಧಾನಿ ಅಭ್ಯರ್ಥಿ ಆಗುವಂತಹವರೇ? ರಾಜ್ಯ, ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮ ಮಟ್ಟಗಳಲ್ಲಿ ಪಕ್ಷದ ಸಂಘಟನೆಯ ಪುನರುಜ್ಜೀವನದ ಕೆಲಸಕ್ಕೆ ಮಾತ್ರ ನಿಯೋಜಿತರಾದ, ಹೆಚ್ಚಿನ ಸಂಘಟನಾ ಸಾಮರ್ಥ್ಯ ಇರುವ ವ್ಯಕ್ತಿ ಮಾತ್ರ ಆಗಿರುವರೇ? ಇನ್ನೊಂದು ರೀತಿ ಹೇಳುವುದಾದಲ್ಲಿ, ಅವರು ನರೇಂದ್ರ ಮೋದಿಯಂತಹವರು ಆಗಿರುವರೇ? ಅಥವಾ ಅಮಿತ್ ಶಾ ಅಂತಹವರು? ಪಕ್ಷ ಮತ್ತು ನೆಹರೂ- ಗಾಂಧಿ ಕುಟುಂಬ ಪರಿಹರಿಸಿಕೊಳ್ಳಬೇಕಿರುವ ಅತ್ಯಂತ ಕ್ಲಿಷ್ಟ ಪ್ರಶ್ನೆ ಇದು.

ನೆಹರೂ- ಗಾಂಧಿ ಕುಟುಂಬವು ಹೊರಗಿನವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲು ಅವಕಾಶ ಕೊಟ್ಟರೂ ತಮಗೆ ನಿಷ್ಠರಾಗಿರುವ, ತಮ್ಮದೇ ಬದಲಿ ಪ್ರತಿನಿಧಿ ಎನಿಸಿಕೊಳ್ಳುವವರನ್ನು ಬಿಟ್ಟು ಪಕ್ಷವನ್ನು ತಮ್ಮ ಹಿಡಿತದಿಂದ ತಪ್ಪಿಸುವಂತಹವರನ್ನು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ ಎಂಬುದು ದೀರ್ಘಕಾಲದಿಂದ ಚಾಲ್ತಿಯಲ್ಲಿರುವ ಭಾವನೆ. ಇಂದಿರಾ ಗಾಂಧಿ ಮಾಡಿದ್ದೂ ಅದನ್ನೇ. ಮೋದಿ ಅವರೂ ತಮಗೆ ಪೂರ್ಣ ನಿಷ್ಠರಾದ ಅಮಿತ್ ಶಾ ಅವರನ್ನೇ ಪಕ್ಷದ ಅಧ್ಯಕ್ಷರನ್ನಾಗಿಸಿದ್ದರು. ಹೀಗಿದ್ದೂ ಇದು ಹೊಸದಲ್ಲ ಎಂದಾದರೂ ಪಕ್ಷಕ್ಕೀಗ ಇದು ಸೂಕ್ತವಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸ್‌ಗೆ, ನೆಹರೂ- ಗಾಂಧಿ ಕುಟುಂಬದವರದ್ದೇ ಬದಲಿ ಪ್ರತಿನಿಧಿಯಾಗಿರದಂತಹ, ಆ ಕುಟುಂಬಕ್ಕೆ ಸೇರಿರದ, ಅಸಾಧಾರಣ ಸಂಘಟನಾತ್ಮಕ ಸಾಮರ್ಥ್ಯವಿರುವ ನಾಯಕ ಅಥವಾ ನಾಯಕಿಯ ಅಗತ್ಯವಿದೆ. ಆ ವ್ಯಕ್ತಿ, ನಿರ್ಧಾರ ಕೈಗೊಳ್ಳುವ ಸಂದರ್ಭಗಳಲ್ಲಿ ನೆಹರೂ-ಗಾಂಧಿ ಕುಟುಂಬ ಹಾಗೂ ಪಕ್ಷದ ಹಿರಿಯರನ್ನು (ಜಿ-23 ಮತ್ತಿತರರು) ಸಮಾನ ನೆಲೆಯಲ್ಲಿ ತೊಡಗಿಸಿಕೊಳ್ಳುವ ಸಾಮರ್ಥ್ಯ ಹೊಂದಿರಬೇಕು. ಇಂತಹ ಭರವಸೆಯನ್ನು ಹುಟ್ಟಿಸುವ ವ್ಯಕ್ತಿಯನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದೇ ಆದಲ್ಲಿ ಅದು ಪಕ್ಷಕ್ಕೆ ಹೊಸ ತಿರುವು ನೀಡಬಲ್ಲದು.

ನೆಹರೂ- ಗಾಂಧಿ ಕುಟುಂಬವು ಅಧಿಕಾರ ಹಿಡಿದಿದ್ದಲ್ಲಿ, ಪಕ್ಷದ ಇತರ ನಾಯಕರು ಏನೂ ಅಲ್ಲವೆಂಬಂತೆ ಆಗಿಬಿಡುತ್ತಾರೆ. ಹೊರಗಿನವರು ಅಧ್ಯಕ್ಷರಾದಲ್ಲಿ, ನೆಹರೂ- ಗಾಂಧಿ ಕುಟುಂಬದವರು ಏನೂ ಅಲ್ಲವೆಂಬಂತೆ ಆಗಿಬಿಡುತ್ತಾರೆ. ಇದು ಯಾಕೆ ಹೀಗಾಗಬೇಕು? ಅಧ್ಯಕ್ಷ ಹುದ್ದೆ ಹೊಂದಿಲ್ಲದಾಗಲೂ ಪ್ರಭಾವಿ ಪಾತ್ರಗಳನ್ನು ನೆಹರೂ- ಗಾಂಧಿ ಕುಟುಂಬವು ನಿರ್ವಹಿಸಬಹುದು. ಇಂದು ಅಥವಾ ನಾಳೆ ಪ್ರಧಾನಿ ಅಭ್ಯರ್ಥಿಗಳಾಗಬಹುದಾದ ಹಲವು ನಾಯಕರ ಮಧ್ಯೆ ರಾಹುಲ್ ಗಾಂಧಿಯವರೂ ಒಬ್ಬರಾಗಿರುತ್ತಾರೆ.

ಕಾಂಗ್ರೆಸ್ ಪಕ್ಷಕ್ಕೆ ನೆಹರೂ- ಗಾಂಧಿ ಕುಟುಂಬ ಮುಖ್ಯ. ನೆಹರೂ ಕುಟುಂಬದ ಹಿಡಿತದಲ್ಲಿ ನಾಯಕತ್ವ ಇರುವ ಕಾರಣದಿಂದಾಗಿಯೇ ಹಲವು ದಶಕಗಳಿಂದ ಪಕ್ಷಕ್ಕೆ ಗಣನೀಯ ಪ್ರಮಾಣದ ಮತಗಳು ಲಭಿಸುತ್ತಿವೆ ಎಂಬುದು ನಿಜ. ಆಳ್ವಿಕೆ ನಡೆಸುವ ವಂಶವನ್ನು ಆರಾಧಿಸುವುದು ಊಳಿಗಮಾನ್ಯ ಯುಗದ ಮೌಲ್ಯವಾಗಿದ್ದು ನಮ್ಮ ಯುಗದಲ್ಲೂ ಉಳಿದುಕೊಂಡು ಬಂದಿದೆ. ಎಲ್ಲರೂ ಆ ರೀತಿ ಯೋಚಿಸುವುದಿಲ್ಲ, ಆದರೂ ರಾಜ್ಯಭಾರ ನಡೆಸುವುದು ರಾಜನ ಉತ್ತರಾಧಿಕಾರಿಗಳಿಗೆ ಮಾತ್ರ ತಿಳಿದಿರುತ್ತದೆ ಎಂದು ಬಹುಸಂಖ್ಯೆಯ ಜನರು ಈಗಲೂ ನಂಬುತ್ತಾರೆ. ಪಕ್ಷದ ಪರ ಪ್ರಚಾರದ ನೇತೃತ್ವ ವಹಿಸಿದ್ದ ರಾಹುಲ್ ಅವರಿಂದಾಗಿ, 2014 ಹಾಗೂ 2019ರ ಲೋಕಸಭೆ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಸುಮಾರು 11 ಕೋಟಿ ಮತಗಳನ್ನು ಗಳಿಸಿತ್ತು ಎಂಬುದನ್ನು ಕಡೆಗಣಿಸಲಾಗದು.

ವಂಶವೆಂಬುದು ಕಾಂಗ್ರೆಸ್‌ಗೆ ಆಸ್ತಿಯಾಗಿರುವಂತೆಯೇ ಹೊರೆಯೂ ಆಗಿದೆ. ನೆಹರೂ- ಗಾಂಧಿ ವಂಶಕ್ಕೆ ಸೇರದವರು ಅಧ್ಯಕ್ಷರಾಗಿ ಆಯ್ಕೆಯಾದರೆ ಆಸ್ತಿಯ ಆಯಾಮವನ್ನು ಉತ್ತಮವಾಗಿ ನಿರ್ವಹಿಸಬಹುದು. 'ಸಾಮುದಾಯಿಕ, ಎಲ್ಲರನ್ನೂ ಒಳಗೊಳ್ಳುವ ನಾಯಕತ್ವ' ಎಂಬಂಥ ಜಿ-23 ಗುಂಪಿನ ಸಲಹೆ ಸೂಕ್ತವಾದ ಮದ್ದು. ಪಕ್ಷದ ಹಿರಿಯ ನಾಯಕರುಗಳಿಲ್ಲದೆ ನೆಹರೂ- ಗಾಂಧಿ ಕುಟುಂಬವೂ ನಿರ್ವಹಿಸಲಾಗದು. ಹಾಗೆಯೇ ನೆಹರೂ-ಗಾಂಧಿ ಕುಟುಂಬವಿಲ್ಲದೆ ಪಕ್ಷದ ಹಿರಿಯ ನಾಯಕರೂ ನಿರ್ವಹಿಸಲಾಗದು. ಆದರೆ, ಕಾಂಗ್ರೆಸ್‌ನಲ್ಲಿರುವ ಬಿಕ್ಕಟ್ಟು ಬರೀ ನಾಯಕತ್ವಕ್ಕೆ ಸಂಬಂಧಿಸಿದ್ದಲ್ಲ. ಇದು ಸಿದ್ಧಾಂತ, ಸಾಮಾಜಿಕ ಎಂಜಿನಿಯರಿಂಗ್ ಹಾಗೂ ಸಂಘಟನೆಗೂ ಸಂಬಂಧಿಸಿದ್ದು. ನಾಯಕತ್ವ ವಿಸ್ತೃತ ನೆಲೆಯದ್ದಾಗಿದ್ದರೂ ನಾಯಕರು ಯಾವುದರ ಬಗ್ಗೆ ಮಾತನಾಡುತ್ತಾರೆ ಎಂಬುದು ಮುಖ್ಯ. 'ಕಾಂಗ್ರೆಸ್ ಆಡಳಿತದಲ್ಲಿ ನಿರಾಕರಿಸಲಾಗಿದ್ದ ನ್ಯಾಯ ಹಾಗೂ ವೈಭವವನ್ನು ಗಳಿಸಿಕೊಡುವುದರ' ಕುರಿತಾದ ಮಾತುಗಳು, ಕಾನೂನುಗಳು ಹಾಗೂ ಕ್ರಿಯೆಗಳಿಂದ ಬಿಜೆಪಿಯು ಸೆರೆ ಹಿಡಿದುಕೊಂಡಿರುವ ಭಾರಿ ಸಂಖ್ಯೆಯ ಹಿಂದೂಗಳ ಹೃದಯಗಳನ್ನು ಕಾಂಗ್ರೆಸ್ ಹೇಗೆ ಮರಳಿ ಗೆದ್ದುಕೊಳ್ಳುತ್ತದೆ?

ಇದನ್ನು ಬಿಜೆಪಿಯು ಮನಸ್ಸುಗಳ ಯುದ್ಧವನ್ನಾಗಿಸಿದೆ. ಮನಸ್ಸುಗಳೊಳಗಿನ ಈ ಯುದ್ಧವನ್ನು ಕಾಂಗ್ರೆಸ್ ಮಣಿಸದಿದ್ದಲ್ಲಿ, ಮತಗಳಿಗಾಗಿ ನಡೆಯುವ ಯುದ್ಧದಲ್ಲಿ ಮಣಿಸುವ ಭರವಸೆಯನ್ನು ಇಟ್ಟುಕೊಳ್ಳಲಾಗದು.

ಸಾಮಾಜಿಕ ಎಂಜಿನಿಯರಿಂಗ್‌ನಲ್ಲಿ ಕಾಂಗ್ರೆಸ್‌ನ ಬಿಕ್ಕಟ್ಟು ಅದರದ್ದೇ ಮತಬ್ಯಾಂಕ್ ಆಗಿದ್ದ ಬಡವರ ಮೇಲೆ ಬಿಜೆಪಿ ಸಾಧಿಸುತ್ತಿರುವ ಹಿಡಿತದಿಂದ ಸೃಷ್ಟಿಯಾಗುತ್ತದೆ. ಉದಾಹರಣೆಗೆ, ಉತ್ತರಪ್ರದೇಶದಲ್ಲಿ ಯಾದವೇತರ ಹಿಂದುಳಿದ ಜಾತಿಗಳು ಹಾಗೂ ಜಾಟವೇತರ ಪರಿಶಿಷ್ಟ ಜಾತಿಗಳ ಯಶಸ್ವಿ ಕೂಟವನ್ನು ಬಿಜೆಪಿಯು ಕಟ್ಟಿದೆ. ಪ್ರಬಲ ಹಿಂದುಳಿದ ಜಾತಿಯಾದ ಯಾದವರು ಆಕ್ರಮಿಸಿಕೊಂಡಿದ್ದ ಮಂಡಲ್ ಕೂಟವನ್ನು ಮಣಿಸುವುದಕ್ಕಾಗಿ ಕಟ್ಟಿದ 'ಮಂಡಲೋತ್ತರ ಕೂಟ' ಎಂದು ಇದನ್ನು ಕರೆಯಬಹುದು. ತನ್ನ ನಿಷ್ಠೆಯ ಮತದಾರರಾಗಿದ್ದ ಬಡ ಜಾತಿಗಳನ್ನು ಮರಳಿ ತನ್ನೆಡೆಗೆ ಸೆಳೆದುಕೊಳ್ಳಬೇಕಾದ ಭಾರಿ ಸವಾಲನ್ನು ಕಾಂಗ್ರೆಸ್ ಎದುರಿಸುತ್ತಿದೆ.

ಕಾಂಗ್ರೆಸ್ ಸಂಘಟನೆಯೊಳಗಿನ ಬಿಕ್ಕಟ್ಟು ಆಳವಾದುದು. ಬೇರುಮಟ್ಟದ ಜಾಲವನ್ನು ಕಟ್ಟಿ ತಂತ್ರಜ್ಞಾನವನ್ನು ವ್ಯಾಪಕವಾಗಿ ಬಳಸುತ್ತಾ ಆರ್‌ಎಸ್‌ಎಸ್ ಸಂಘಟನೆಯ ಬೆಂಬಲವನ್ನೂ ಹೊಂದಿರುವ ಬಿಜೆಪಿ ಜೊತೆಗಿನ ಹೋಲಿಕೆಯಲ್ಲಿ ಕಾಂಗ್ರೆಸ್ ಸಂಘಟನೆ ಎಲ್ಲೂ ನಿಲ್ಲದು. ಆದರೆ, ಸಂಘಟನೆಯನ್ನು ಕಟ್ಟುವುದೆಂದರೆ, ಭರವಸೆಯನ್ನು ಹುಟ್ಟಿಸುವ ವಿಸ್ತೃತ ನೆಲೆಯ ನಾಯಕತ್ವ ಹಾಗೂ ಪರ್ಯಾಯ ನೋಟದೊಂದಿಗೆ ಹಿಂದೂಗಳನ್ನು ಮರಳಿ ಗೆದ್ದುಕೊಳ್ಳುವ ರಾಜಕೀಯ ಸಿದ್ಧಾಂತವನ್ನು ಹೊಂದುವುದು. ಕಾಂಗ್ರೆಸ್ ನಾಯಕತ್ವ ಹಾಗೂ ಸಿದ್ಧಾಂತದಿಂದ ಜನ ಆಕರ್ಷಿತರಾದರೆ ಮಾತ್ರ, ಬೇರುಮಟ್ಟದಲ್ಲಿ ಸದಸ್ಯರು ಹಾಗೂ ಕಾರ್ಯಕರ್ತರನ್ನು ನಿಯೋಜಿಸಿಕೊಳ್ಳುವ ಭರವಸೆಯನ್ನು ಪಕ್ಷ ಹೊಂದಬಹುದು.

ಚುರುಮುರಿ

ತಟಸ್ಥ ನೀತಿ!

• ಬಿ.ಎನ್.ಮಲ್ಲೇಶ್

ಹರಟೆಕಟ್ಟೆಯಲ್ಲಿ ಗುಡ್ಡೆ, ದುಬ್ಬೀರನ ಕೋಳಿ ಜಗಳ ತಾರಕಕ್ಕೇರಿತ್ತು. 'ಲೇ ಬ್ಯಾಡ ನೋಡು, ನನ್ ಕೆಣಕಿದ್ರೆ ನಿನ್ನ ಉಕ್ರೇನ್ ತರ ದೂಳೀಪಟ ಮಾಡಿ ಬಿಸಾಕ್ತೀನಿ' ಎಂದ ಗುಡ್ಡೆ.

ದುಬ್ಬೀರ ಏನ್ ಕಮ್ಮಿ? 'ಲೇಯ್ ಯುದ್ಧ ಶುರುವಾಗಿ ತಿಂಗಳ ಮೇಲಾತು. ಉಕ್ರೇನ್‌ದು ಏನೂ ಕಿತ್ಕಳಕಾಗಿಲ್ಲ. ನಾನು ಒಂದ್ಸಲ ಎದ್ದೆ ಅಂದ್ರೆ ನಿನ್ ಕಥೆ ಮುಗೀತು ಅಷ್ಟೆ ಈಗ...' ಎಂದ.

ಕೊಟ್ರೇಶಿಗೆ ನಗು. 'ಲೇ ದುಬ್ಬೀರ, ನಿಂಗೆಲ್ಲಿ ಏಳೋಕಾಗ್ತತಲೆ, ಮಂಡಿ ನೋವು ಅಂತಿದ್ದೆ?' ಎಂದ.

'ಮತ್ ನೋಡಲೆ... ಪೆಟ್ರೋಲು, ಹಾಲು, ಕರೆಂಟು ಎಲ್ಲ ದುಬಾರಿಯಾಗಿದಾವೆ, ಜನ ಬದುಕೋದು ಹೆಂಗೆ ಅಂದ್ರೆ ಇವ್ರು ಹಿಜಾಬ್ ನೋಡು, ಹಲಾಲ್ ನೋಡು, ಮೈಕಿನ ಸೌಂಡ್ ನೋಡು ಅಂತಾನೆ. ಅದ್ಕೂ ಇದ್ಕೂ ಏನ್ ಸಂಬಂಧ?' ದುಬ್ಬೀರ ವಾದಿಸಿದ.

'ಅಂದ್ರೆ? ಮೊದ್ಲು ದೇಶ ಉಳೀಬೇಕಲೆ, ಪೆಟ್ರೋಲು ಐನೂರ್ ರೂಪಾಯಾಗ್ಲಿ ನಮ್ ಧರ್ಮ ಉಳೀಬೇಕು. ನಿಮ್ಮಂಥೋರಿಂದ್ಲೇ ಬ್ರಿಟೀಷರಿಗೆ ನಾವು ಗುಲಾಮರಾಗಿದ್ದು... ಕಚಡಾ ಫೆಲೋ' ಗುಡ್ಡೆ ಮತ್ತಷ್ಟು ರಾಂಗಾದ.

'ಕಚಡ ನೀನು, ತೊಟ್ಟಿ, ಗುಡ್ಡೆ ಮಾಂಸ ಮಾರೋ ಚೆಲ್ರೆ...' ದುಬ್ಬೀರ ಬಬ್ರುವಾಹನನ ಅವತಾರ ತಾಳಿದ.

ಇಬ್ಬರ ಜಗಳ ತಾರಕಕ್ಕೇರಿದ್ರೂ ತೆಪರೇಸಿ ಮಾತ್ರ ಪಿಟಕ್ಕನ್ನದೆ ಕುಳಿತಿದ್ದನ್ನು ಕಂಡ ಕೊಟ್ರೇಶಿ 'ಯಾಕೋ ತೆಪರ ಏನೂ ಮಾತಾಡ್ತಿಲ್ಲ?' ಎಂದ.

'ನಂದು ತಟಸ್ಥ ನೀತಿ ಕಣಲೆ' ಎಂದ ತೆಪರೇಸಿ.

'ತಟಸ್ಥ ನೀತಿನಾ? ಯಾಕೆ?'

'ನಾವು ತಟಸ್ಥರಾಗಿದ್ದಕ್ಕೇ ನಮಗೆ ರಷ್ಯಾದಿಂದ ಕಮ್ಮಿ ರೇಟಲ್ಲಿ ಎಣ್ಣೆ... ಐ ಮೀನ್ ಕಚ್ಚಾ ತೈಲ ಸಿಕ್ತು...'

'ಅದಕ್ಕೆ?'

'ಇವರ ಜಗಳದಲ್ಲೂ ನಾನು ತಟಸ್ಥನಾಗಿದ್ರೆ ಇಬ್ಬರತ್ರನೂ ಒಂದೊಂದ್ ದಿನ ಎಣ್ಣೆ... ಐ ಮೀನ್ ಬಾರ್ ಬಿಲ್ ಪೀಕಿಸ್ಬಹುದು ಅಂತ...'

'ಎಲಾ ಪಾಪಿ' ಎಂದ ಕೊಟ್ರೇಶಿ!

ಸಂಗತ

ಬನ್ನಿರೆಂದರೂ ಬಾರದ 'ಅತಿಥಿ'ಗಳು

ಲಾಕ್‌ಡೌನ್ ಸಂದರ್ಭದಲ್ಲಿ ತಮ್ಮ ರಾಜ್ಯಗಳಿಗೆ ವಾಪಸ್ ಹೋದ ವಲಸೆ ಕಾರ್ಮಿಕರಲ್ಲಿ ವಿಶ್ವಾಸ ಮೂಡಿಸಿ ಮರಳಿ ಕರೆತರುವ ಕೆಲಸ ತ್ವರಿತವಾಗಿ ನಡೆಯಬೇಕಾಗಿದೆ

• ಮಲ್ಲಿಕಾರ್ಜುನ ಹೆಗ್ಗಳಗಿ

ಕೋವಿಡ್ ಹಾಗೂ ಲಾಕ್‌ಡೌನ್ ಆತಂಕದ ಸಂದರ್ಭದಲ್ಲಿ ಕರ್ನಾಟಕದಿಂದ ವಲಸೆ ಕಾರ್ಮಿಕರು ತಮ್ಮ ತಮ್ಮ ರಾಜ್ಯಗಳಿಗೆ ತೆರಳಿದರು. ಅವರಲ್ಲಿ ಹೆಚ್ಚಿನವರು, ಗುತ್ತಿಗೆದಾರರು ತಮ್ಮನ್ನು ಸರಿಯಾಗಿ ನೋಡಿಕೊಂಡಿಲ್ಲ ಎಂದು ಮುನಿಸಿಕೊಂಡಿದ್ದು, ಮರಳಿ ನಮ್ಮ ರಾಜ್ಯಕ್ಕೆ ಬರಲು ಸಿದ್ಧರಿಲ್ಲ. ಇದರಿಂದಾಗಿ ರಾಜ್ಯದ ನಿರ್ಮಾಣ ಕಾಮಗಾರಿಗೆ ಬಾಧಕ ಉಂಟಾಗಿದೆ. ಇದು ನಿಜಕ್ಕೂ ಬಹು ಆತಂಕದ ಸಂಗತಿ.

ಗುತ್ತಿಗೆದಾರರು ತಮ್ಮಲ್ಲಿ ಹಗಲಿರುಳೂ ದುಡಿಯುವ ಅಸಂಖ್ಯಾತ ಕಾರ್ಮಿಕರನ್ನು ಶೋಷಣೆ ಮಾಡುತ್ತಾರೆ, ಅವರ ಮೇಲೆ ತೀವ್ರ ದಬ್ಬಾಳಿಕೆ ನಡೆಸುತ್ತಾರೆ, ಕಾರ್ಮಿಕ ಕಾನೂನುಗಳನ್ನು ಪಾಲಿಸುವುದಿಲ್ಲ ಎಂಬ ಗಂಭೀರ ಸ್ವರೂಪದ ಆರೋಪಗಳಿವೆ.

ಕೋವಿಡ್- 19 ಸಂದರ್ಭದಲ್ಲಿ ತಮ್ಮ ರಾಜ್ಯಗಳಿಗೆ ಹೋದ ವಲಸೆ ಕಾರ್ಮಿಕರಲ್ಲಿ ಶೇ 20ರಷ್ಟು ಕಾರ್ಮಿಕರು ಮಾತ್ರ ವಾಪಸ್ ಕರ್ನಾಟಕಕ್ಕೆ ಬಂದಿದ್ದಾರೆ. ವಲಸಿಗರ ಸೇವೆ ಇಲ್ಲದೆ ನಿರ್ಮಾಣ ಕಾರ್ಯ ಸಮರ್ಪಕವಾಗಿ ಮುಂದುವರಿಯಲಾರದು. ರಸ್ತೆ, ಕಟ್ಟಡದಂತಹ ನಿರ್ಮಾಣ ಸೇವಾ ವಲಯಗಳು ಕಾರ್ಮಿಕರ ಕೊರತೆಯಿಂದ ಮಂದಗತಿಯಲ್ಲಿ ಸಾಗುತ್ತಿವೆ.

ಕೃಷಿಯ ನಂತರ ನಿರ್ಮಾಣ ಕಾಮಗಾರಿಯಲ್ಲಿ ಅತಿ ಹೆಚ್ಚು ವಲಸೆ ಕಾರ್ಮಿಕರು ದುಡಿಯುತ್ತಿದ್ದಾರೆ. ಇವರೆಲ್ಲ ಬೇರೆ ಬೇರೆ ರಾಜ್ಯಗಳಿಂದ ಬಂದವರು. ಇವರು ಸಂಘಟನೆಗಳನ್ನು ಕಟ್ಟಿಕೊಂಡಿಲ್ಲ. ಉಳ್ಳವರಿಗೆ ನಿಶ್ಚಿಂತೆಯಿಂದ ಇರಲು ಮನೆ, ಮಹಲುಗಳನ್ನು ಬೆವರು ಸುರಿಸಿ ಕಟ್ಟಿಕೊಡುವವರು. ಆದರೆ ತಾವು ಮಾತ್ರ ಬೀದಿಯ ಬದಿಗಿನ ಸಣ್ಣ ಜೋಪಡಿಗಳಲ್ಲಿ ಬದುಕು ಸಾಗಿಸುತ್ತಾರೆ. ಪಟ್ಟಣ, ನಗರಗಳನ್ನು ಕಟ್ಟಿದವರು, ಹೆದ್ದಾರಿಗಳನ್ನು ನಿರ್ಮಿಸಿದವರು, ವಿದ್ಯುತ್ ಕಂಬ ನೆಟ್ಟವರು, ಮನೆಗೆ ನಳ ಜೋಡಿಸಿದವರು, ಕಾವಲಿಗೆ ನಿಂತವರು ಇದೇ ವಲಸೆ ಕಾರ್ಮಿಕರು.

'ಕೂಲಿಯವನ ಮೈಮೇಲಿನ ಬೆವರು ಆರುವುದಕ್ಕೆ ಮುಂಚೆ ಅವನ ಕೂಲಿಯನ್ನು ಕೊಟ್ಟುಬಿಡಬೇಕು' ಎಂದು ಕುರಾನ್ ಹೇಳುತ್ತದೆ. ಕೂಲಿಯವರ ಬಗ್ಗೆ ಇದಕ್ಕಿಂತ ಕಳಕಳಿಯ ಮಾತು ಇನ್ನೊಂದು ಇರಲಿಕ್ಕಿಲ್ಲ. ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ಬಹಳಷ್ಟು ಗುತ್ತಿಗೆದಾರರು ತಮ್ಮಲ್ಲಿ ದುಡಿಯುತ್ತಿದ್ದ ವಲಸೆ ಕಾರ್ಮಿಕರಿಗೆ ಸಂಬಳ ಕೊಡದೇ ಹೊರದಬ್ಬಿದ್ದು ನೋವಿನ ಸಂಗತಿ. ಆಗ ಅಸಹಾಯಕರಾಗಿ ಹೊರಟುಹೋದ ಕಾರ್ಮಿಕರಲ್ಲಿ ಹಲವರು ಮರಳಿ ರಾಜ್ಯಕ್ಕೆ ಬರಲು ಸಿದ್ಧರಿಲ್ಲ.

ವಲಸೆ ಕಾರ್ಮಿಕರ ರಕ್ಷಣೆಗೆ ಬಹಳಷ್ಟು ಕಾನೂನುಗಳು ಬಂದಿವೆ. ಕನಿಷ್ಠ ವೇತನ, ಉದ್ಯೋಗ ಭದ್ರತೆ, ವಾಸಕ್ಕೆ ನೆಲೆ, ಮಕ್ಕಳ ಶಿಕ್ಷಣ, ಆರೋಗ್ಯ ರಕ್ಷಣೆ, ರಜೆ, ಸಾಮಾಜಿಕ ಭದ್ರತೆ, ವಿಮಾ ಯೋಜನೆ, ಸುರಕ್ಷತೆ ಕುರಿತು ರಾಜ್ಯ ಸರ್ಕಾರ 1979ರಲ್ಲಿ ಕಾನೂನು ರೂಪಿಸಿದೆ. ಇದರಲ್ಲಿ ಬಹಳಷ್ಟು ಸುಧಾರಣೆಗಳನ್ನು ಮಾಡಿ ಹೊಸ ಕಾನೂನುಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರಚಿಸಿವೆ. ಆದರೆ ಗುತ್ತಿಗೆದಾರರು ಇವುಗಳ ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಳ್ಳುವುದಿಲ್ಲ ಎಂಬ ಕೊರಗು ವಲಸೆ ಕಾರ್ಮಿಕರ ಬಗ್ಗೆ ಕಳಕಳಿ ಹೊಂದಿರುವವರಲ್ಲಿ ಇದೆ.

ಬಿಹಾರ ಮೂಲದ ಸುರೇಶಕುಮಾರ್ ಎಂಬ ವಲಸೆ ಕಾರ್ಮಿಕ ಲಾಕ್‌ಡೌನ್ ಸಂದರ್ಭದಲ್ಲಿ ತನ್ನ ಮಾಲೀಕನ ಬಳಿ ಹೋಗಿ ಬಾಕಿ ಸಂಬಳ ಕೊಡಲು ವಿನಂತಿ ಮಾಡಿದ. ಕೆಲಸವೂ ಇಲ್ಲ, ಸಂಬಳವೂ ಇಲ್ಲ ನಡೆ ಆಚೆ ಎಂದು ಮಾಲೀಕ ಹೊರದಬ್ಬಿದ. ಇದನ್ನು ಕಣ್ಣಾರೆ ಕಂಡ ಅವನ ಪತ್ನಿ, ತನ್ನ ಮೈಮೇಲೆ ಇದ್ದ ಸ್ವಲ್ಪ ಚಿನ್ನ ಮಾರಲು ಬಿಚ್ಚಿಕೊಟ್ಟಳು. ಒಂದೆರಡು ದಿನಗಳ ನಂತರ ಸ್ವಯಂಸೇವಾ ಸಂಘಟನೆಯೊಂದರ ಸಹಾಯದಿಂದ ಈ ಕುಟುಂಬ ತಮ್ಮ ಊರಿಗೆ ಹೊರಟು ಹೋಯಿತು.

ಕಠಿಣಶ್ರಮದ ಕೆಲಸ ಮಾಡುವವರ ಸಂಖ್ಯೆ ಕುಸಿಯತೊಡಗಿದೆ. ವಲಸೆ ಕಾರ್ಮಿಕರು ಮಾತ್ರ ಕಠಿಣಶ್ರಮದ ಕೆಲಸ ಮಾಡುತ್ತಿದ್ದಾರೆ. ಹೊಲದಲ್ಲಿ ಬೆಳೆದ ಕಬ್ಬು ಕಟಾವು ಮಾಡಿ ಸಕ್ಕರೆ ಕಾರ್ಖಾನೆಗಳಿಗೆ ಸಾಗಿಸುವ ಕೆಲಸ ಮಾಡುವವರು ಮಹಾರಾಷ್ಟ್ರದ ವಲಸೆ ಕಾರ್ಮಿಕರು. ಗಂಡ ಕಬ್ಬಿನ ಹೊರೆ ಹೊತ್ತು ಟ್ರ್ಯಾಕ್ಟರ್‌ಗೆ ತುಂಬಿದರೆ, ಹೆಂಡತಿ ಬೆನ್ನಿಗೆ ಹಸುಗೂಸು ಕಟ್ಟಿಕೊಂಡು ಕಬ್ಬು ಕಡಿಯುತ್ತಿರುತ್ತಾಳೆ. ಇವರ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಈ ಕಾರ್ಮಿಕರ ಕಷ್ಟದ ಬದುಕು ನೋಡಿದರೆ ಸಕ್ಕರೆ ತಿನ್ನುವುದೇ ಬೇಡ ಎನ್ನಿಸುತ್ತದೆ.

ಕಷ್ಟಪಟ್ಟು ದುಡಿಯುವ ವಲಸೆ ಕಾರ್ಮಿಕರ ಬಗ್ಗೆ ಕಾಳಜಿ, ಮಾನವೀಯ ನಡೆ ಮತ್ತು ಅವರಿಗೆ ಸಂಬಂಧಿಸಿದಂತೆ ಕಡ್ಡಾಯವಾಗಿ ಕಾನೂನು ಪಾಲನೆಯ ಅವಶ್ಯಕತೆ ಇದೆ. ಭಾಷೆ, ಜಾತಿ, ಧರ್ಮದ ಗಡಿ ದಾಟಿ ಬಹುತ್ವದ ಭಾರತ ಕಟ್ಟುವವರು ಈ ವಲಸೆ ಕಾರ್ಮಿಕರು.

ಹೊರರಾಜ್ಯದಿಂದ ಬಂದು ನೆಲೆಸುವ ಕಾರ್ಮಿಕರು ಘನತೆಯಿಂದ ಬದುಕುವಂತೆ ನೋಡಿಕೊಳ್ಳುವುದು ನಾಗರಿಕ ಸಮಾಜದ ಜವಾಬ್ದಾರಿಯಾಗಿದೆ. ಅವರಿಗೆ ಮುಖ್ಯವಾಗಿ ಸುರಕ್ಷತೆ ಮತ್ತು ಕನಿಷ್ಠ ನಾಗರಿಕ ಸೌಲಭ್ಯಗಳು ದೊರಕಬೇಕು. ಲಾಕ್‌ಡೌನ್ ಸಂದರ್ಭದಲ್ಲಿ ತಮ್ಮ ರಾಜ್ಯಗಳಿಗೆ ವಾಪಸ್ ಹೋದ ಕಾರ್ಮಿಕರಲ್ಲಿ ವಿಶ್ವಾಸ ಮೂಡಿಸಿ ಅವರನ್ನು ಮರಳಿ ಕರೆತರುವ ಕೆಲಸ ತ್ವರಿತವಾಗಿ ನಡೆಯಬೇಕು. ಇದರೊಂದಿಗೆ, ಬಾಕಿ ಉಳಿಸಿಕೊಂಡ ಸಂಬಳ ಪಾವತಿ ಮಾಡಬೇಕು.

ವಾಚಕರ ವಾಣಿ

ಇರಲಿ ಬೆಲೆ ಏರಿಕೆಗೊಂದು ಕಾಲಂ!

ಕಳೆದ ಎರಡು ವಾರಗಳಿಂದ ಪ್ರತಿದಿನ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಾಗುತ್ತಲೇ ಇರುವುದರಿಂದ, ಎಷ್ಟು ದರ ಹೆಚ್ಚಾಗಿದೆಯೆಂದು ದಿನಬೆಳಗಾದರೆ ಪತ್ರಿಕೆಯ ಪುಟ ಪುಟ ಹುಡುಕಿ ನೋಡುವುದು ಮಾಮೂಲಿಯಾಗಿದೆ. ಹೀಗಾಗಿ, ದಿನಪತ್ರಿಕೆಗಳು ದಿನಭವಿಷ್ಯಕ್ಕೆ ಕಾಲಂ ನಿಗದಿ ಮಾಡಿರುವಂತೆ, ಈ ಬೆಲೆ ಏರಿಕೆಗೂ ಒಂದು ಕಾಲಂ ಶುರು ಮಾಡಿದರೆ ಒಳ್ಳೆಯದು.

ಜೆ.ಬಿ.ಮಂಜುನಾಥ, ಪಾಂಡವಪುರ

ಆವೇಶದಿಂದ ಮೂಲ ಆಶಯ ಮರೆಯಾಗದೇ?

'ವಿಧಾನಸೌಧಕ್ಕೆ ಬೆಂಕಿ ಹಚ್ಚಿ' ಎಂಬ ಶಾಸಕ ಪ್ರಿಯಾಂಕ್ ಖರ್ಗೆ ಅವರ ಆವೇಶಭರಿತ ಹೇಳಿಕೆ (ಪ್ರ.ವಾ., ಏ. 7) ಒಪ್ಪುವಂಥದ್ದಲ್ಲ. ಸರ್ಕಾರದ ನಡೆಯನ್ನು ಪ್ರಶ್ನಿಸುವ ಅವಸರದಲ್ಲಿ ಆವೇಶಭರಿತ ಮಾತುಗಳಿಂದ ಮೂಲ ಉದ್ದೇಶಗಳು ಮರೆಯಾಗಿ, ಇದರಿಂದ ಅನಗತ್ಯ ಚರ್ಚೆಗೆ ಅವಕಾಶ ಸೃಷ್ಟಿಯಾಗುವುದಿಲ್ಲವೇ? ಸರ್ಕಾರ ಜನಪರವಾಗಿಲ್ಲ ಎಂದು ಅನಿಸಿದರೆ ವಿರೋಧ ಪಕ್ಷಗಳು ಟೀಕಿಸುವುದು, ಅದಕ್ಕೆ ಆಡಳಿತ ಪಕ್ಷ ನೀಡುವ ಪ್ರತ್ಯುತ್ತರಗಳು ಸಮಾಜದಲ್ಲಿ ಆರೋಗ್ಯಯುತ ಚರ್ಚೆಗೆ ಗ್ರಾಸವಾಗುವಂಥ ಆಶಯವನ್ನು ಹೊಂದಿರಬೇಕು. ಅದುಬಿಟ್ಟು ಪರಸ್ಪರ ವೈಯಕ್ತಿಕ ದಾಳಿ ಮತ್ತು ಕ್ರೋಧದಿಂದ ಕೂಡಿರುವುದಲ್ಲ. ಇಂತಹ ಮಾತಿನಿಂದ ಸಾಧಿಸುವುದೇನಾದರೂ ಇದೆಯೇ?

ಡಾ. ಜಿ.ಬೈರೇಗೌಡ, ಬೆಂಗಳೂರು

ತುಟ್ಟಿಭತ್ಯೆ: ಸ್ವಾಗತಾರ್ಹ ನಿಲುವು

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದಿಂದ ಸಲ್ಲಿಸಲಾಗಿದ್ದ ತುಟ್ಟಿಭತ್ಯೆ ಹೆಚ್ಚಳದ ಮನವಿಯು ಸಾಕಾರಗೊಂಡಿದ್ದು, ಈ ವರ್ಷದ ಜನವರಿ ಒಂದರಿಂದ ಪೂರ್ವಾನ್ವಯವಾಗಿ ಜಾರಿಯಾಗಲಿರುವುದು ಸ್ವಾಗತಾರ್ಹವಾಗಿದೆ. ಇಂದಿನ ಬೆಲೆ ಏರಿಕೆಯ ದಿನಮಾನಗಳಲ್ಲಿ ಈ ಉಪಕ್ರಮವು ಅವಶ್ಯಕವಾಗಿತ್ತು. ದಿನದಿಂದ ದಿನಕ್ಕೆ ಏರುತ್ತಿರುವ ದಿನಸಿ ಪದಾರ್ಥ, ಔಷಧ ಹಾಗೂ ಇಂಧನಗಳ ಬೆಲೆಯು ಜನಸಾಮಾನ್ಯರ ಮೇಲೆ ಆರ್ಥಿಕ ದುಷ್ಪರಿಣಾಮ ಉಂಟುಮಾಡಿದೆ. ಅಲ್ಲದೆ ವರ್ಷಗಟ್ಟಲೇ ಕಾಡಿದ ಕೊರೊನಾ ಮಹಾಸೋಂಕಿನ ವಿರುದ್ಧ ಜನ ಹೋರಾಡಿ ರೋಸಿ ಹೋಗಿದ್ದಾರೆ. ಇಂತಹ ಕಾಲಮಾನದಲ್ಲಿ ಹಣಕಾಸಿನ ನೆರವು ಸಾಮಾನ್ಯರಿಗೆ ಅತ್ಯವಶ್ಯಕವಾಗಿದೆ.

ಅಶ್ವಿನಿ ಎಸ್. ಅಂಗಡಿ, ಬಾದಾಮಿ

ಪರಮಾರ್ಥ ಅರಿತ ರಾಜಕಾರಣಿ

ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷ, ಬಿಜೆಪಿ ಮುಖಂಡ ಬಿ.ಜೆ.ಪುಟ್ಟಸ್ವಾಮಿ ಅವರು ರಾಜಕೀಯ ತ್ಯಜಿಸಿ, ಗಾಣಿಗ ಸಮುದಾಯದ ಸ್ವಾಮೀಜಿಯಾಗಲು ನಿರ್ಧರಿಸಿರುವುದು ಅಚ್ಚರಿಯ ಸಂಗತಿಯಾಗಿದೆ. ಬಹುಶಃ ರಾಜಕಾರಣಿಯಾಗಿದ್ದವರು ಸ್ವಾಮೀಜಿಯಾಗುವುದು ದೇಶದಲ್ಲಿಯೇ ಅತ್ಯಂತ ವಿರಳ ಪ್ರಸಂಗವಿರಬಹುದು. ಬಿಜೆಪಿ ಪ್ರಮುಖ ಬಿ.ಎಸ್.ಯಡಿಯೂರಪ್ಪ ಅವರ ಕಟ್ಟಾ ಬೆಂಬಲಿಗರಾದ ಪುಟ್ಟಸ್ವಾಮಿ, ಯಡಿಯೂರಪ್ಪನವರ ವಿರುದ್ಧ ಹಗರಣಗಳ ಸರಮಾಲೆಯೇ ಕೇಳಿಬಂದಾಗ, ಶಾಸನಸಭೆಯ ಒಳಗೆ ಹಾಗೂ ಹೊರಗೆ ತಮ್ಮ ನಾಯಕನನ್ನು ಸಮರ್ಥಿಸಿಕೊಂಡಿದ್ದರು. ಅವರ ಸ್ವಾಮಿನಿಷ್ಠೆಗೆ ಮೆಚ್ಚಿ ಪುಟ್ಟಸ್ವಾಮಿ ಅವರನ್ನು ಯಡಿಯೂರಪ್ಪ ತಮ್ಮ ರಾಜಕೀಯ ಕಾರ್ಯದರ್ಶಿಯನ್ನಾಗಿ ನೇಮಿಸಿಕೊಂಡಿದ್ದರು. ಗಾಣಿಗ ಸಮುದಾಯದ ಪ್ರಭಾವಿ ನಾಯಕರಾದ ಪುಟ್ಟಸ್ವಾಮಿ ಅವರಿಗೆ ಈಗ 82 ವರ್ಷ. ಅವರ ದೇಹ ಬಾಗಿದೆ, ಮನಸ್ಸು ಮಾಗಿದೆ. ಬದುಕು ಇಷ್ಟೇನೆ ಎಂಬ ಪರಮಾರ್ಥವನ್ನು ಅರ್ಥಮಾಡಿಕೊಂಡು, ಸ್ವಾಮೀಜಿಯಾಗಲು ಹೊರಟಿರುವ ಅವರಿಗೆ ಶುಭಾಶಯ.

ಕೆ.ವಿ.ವಾಸು, ಮೈಸೂರು

ಪುಸ್ತಕ ಓದುವ ಆಸೆ, ಆದರೆ...

ಪುಸ್ತಕದ ಓದಿಗೆ ಸಂಬಂಧಿಸಿದಂತೆ ಸದಾಶಿವ್ ಸೊರಟೂರು ಅವರು ಬರೆದಿರುವ ಲೇಖನ (ಸಂಗತ, ಏ. 5) ವಾಸ್ತವಿಕ ನೆಲೆಯಲ್ಲಿದೆ. ಆದರೆ ಪುಸ್ತಕ ಓದುವ ಆಸೆ ಇರುವವರಿಗೆ ಇನ್ನೊಂದು ರೀತಿಯ ಸಂಕಟ. ಅದೇನೆಂದರೆ ಪುಸ್ತಕದ ದುಬಾರಿ ಬೆಲೆ ಹಾಗೂ ಗ್ರಂಥಾಲಯಗಳಲ್ಲಿ ಮೌಲಿಕ ಪುಸ್ತಕಗಳ ಕೊರತೆ. ನಾನು ಖಾಸಗಿ ಶಾಲೆಯ ಶಿಕ್ಷಕಿಯಾಗಿದ್ದು, ಮೌಲಿಕ ಸಾಹಿತ್ಯವನ್ನು ಓದುವುದು ನನ್ನ ನೆಚ್ಚಿನ ಹವ್ಯಾಸ. ಆದರೆ ನನಗೆ ಬರುವ ನಾಲ್ಕಂಕಿ ಸಂಬಳದಲ್ಲಿ ಎಷ್ಟೇ ಹೆಣಗಿದರೂ ತಿಂಗಳ ಕೊನೆಯಲ್ಲಿ ಮೂರಂಕಿಯ ಹಣವನ್ನು ಉಳಿಸಲು ಆಗುವುದಿಲ್ಲ. ಹೀಗಾಗಿ ನನ್ನ ಆಸೆಯ ಎಷ್ಟೋ ಪುಸ್ತಕಗಳನ್ನು ಕೊಂಡು ಓದುವ ಕನಸು ಕನಸಾಗಿಯೇ ಉಳಿದಿದೆ. ಆದ್ದರಿಂದ ನಾನು 'ಬೆಟ್ಟದ ಹೂವು' ಚಿತ್ರದ ರಾಮುವನ್ನು ನೆನೆದು ಸಮಾಧಾನ ಪಟ್ಟುಕೊಳ್ಳುತ್ತೇನೆ.

ಸುವರ್ಣ ಸಿ.ಡಿ., ತರೀಕೆರೆ

ಶಿಕ್ಷಕರ ವರ್ಗಾವಣೆ: ತಾರತಮ್ಯ ನಿವಾರಣೆಯಾಗಲಿ

ಸಾರ್ವಜನಿಕ ಶಿಕ್ಷಣ ಇಲಾಖೆಯು ವಿದ್ಯಾರ್ಥಿ- ಶಿಕ್ಷಕ ಅನುಪಾತದ ಆಧಾರದ ಮೇಲೆ, ಸರ್ಕಾರಿ ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೆಚ್ಚುವರಿ ಶಿಕ್ಷಕರ ಸ್ಥಳಾಂತರಕ್ಕೆ ಮುಂದಾಗಿದೆ. ಆದರೆ ಹೆಚ್ಚುವರಿ ಶಿಕ್ಷಕರನ್ನು ಪಟ್ಟಿ ಮಾಡುವಾಗ ಅನುಸರಿಸಿರುವ ಕ್ರಮ ಅವೈಜ್ಞಾನಿಕವಾಗಿದೆ. ಕೆಪಿಎಸ್ ಮಾದರಿ ಶಾಲೆಗೆ ವಿಭಾಗವಾರು ಹುದ್ದೆಗಳನ್ನು ಲೆಕ್ಕ ಹಾಕುವಾಗ 40 ವಿದ್ಯಾರ್ಥಿಗಳಿಗೆ 1 ಶಿಕ್ಷಕ ಹುದ್ದೆಯಂತೆ ತೋರಿಸಿ, ಉಳಿದ ಪ್ರೌಢಶಾಲೆಗಳಲ್ಲಿ 70 ವಿದ್ಯಾರ್ಥಿಗಳಿಗೆ 1ರಂತೆ ತೋರಿಸಿ ಹೆಚ್ಚುವರಿ ಹುದ್ದೆಗಳನ್ನು ಪಟ್ಟಿ ಮಾಡಲಾಗಿದೆ.

ರಾಜ್ಯದ ಹಲವು ಸರ್ಕಾರಿ ಪ್ರೌಢಶಾಲೆಗಳಲ್ಲಿ ಕನ್ನಡದ ಜೊತೆಗೆ ಇಂಗ್ಲಿಷ್ ಮಾಧ್ಯಮವನ್ನೂ ಆರಂಭಿಸಿ ವಿದ್ಯಾರ್ಥಿಗಳ ದಾಖಲಾತಿಯನ್ನು ಹೆಚ್ಚಿಸುವಲ್ಲಿ ಶಿಕ್ಷಕರು ಯಶಸ್ವಿಯಾಗಿದ್ದಾರೆ. ಇಂಥ ಕಡೆಗಳಲ್ಲಿ ಮಾಧ್ಯಮವಾರು ವಿಭಾಗ ಸೃಷ್ಟಿಸಿ ಶಿಕ್ಷಕರ ಸಂಖ್ಯೆಯನ್ನು ಲೆಕ್ಕ ಹಾಕದೆ ಎರಡೂ ಮಾಧ್ಯಮಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ಸಂಖ್ಯೆ ಒಗ್ಗೂಡಿಸಿ ಶಿಕ್ಷಕರ ಸಂಖ್ಯೆ ಲೆಕ್ಕ ಹಾಕಲಾಗಿದೆ. ಸದ್ಯದಲ್ಲೇ ಜಾರಿಯಾಗಲಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ (ಎನ್‌ಇಪಿ) ಹೇಳಿರುವ ವಿದ್ಯಾರ್ಥಿ- ಶಿಕ್ಷಕ ಅನುಪಾತವನ್ನು ಇಲ್ಲಿ ಅನುಸರಿಸಿಲ್ಲ. ಕಳೆದ ವರ್ಷದ ವರ್ಗಾವಣೆ ಪ್ರಕ್ರಿಯೆಯ ಮೂಲಕ ಸ್ಥಳ ಆಯ್ಕೆ ಮಾಡಿಕೊಂಡು ಮೂರು ತಿಂಗಳ ಹಿಂದಷ್ಟೇ ನೆಲೆ ಕಂಡುಕೊಂಡಿರುವ ಶಿಕ್ಷಕರ ಪಾಲಿಗಂತೂ ಈ ಕ್ರಮ ಶೋಚನೀಯ. ಎನ್‌ಇಪಿ ಅನುಷ್ಠಾನದ ನಂತರ ಇಲಾಖೆಯು ಈ ಕ್ರಮ ಕೈಗೊಳ್ಳಬಹುದಿತ್ತು. ಆದರೆ ಏಕಾಏಕಿ ಈ ರೀತಿ ಸ್ಥಳಾಂತರಕ್ಕೆ ಮುಂದಾಗಿರುವುದು ಶಿಕ್ಷಕರ ಮನೋಬಲವನ್ನು ಕುಗ್ಗಿಸುತ್ತದೆ. ಶಿಕ್ಷಣ ಸಚಿವರು ಹಾಗೂ ಶಿಕ್ಷಕರನ್ನು ಪ್ರತಿನಿಧಿಸುವ ವಿಧಾನಪರಿಷತ್ ಸದಸ್ಯರು ಈ ತಾರತಮ್ಯ ನಿವಾರಣೆಗೆ ಮುಂದಾಗುವರೇ?

ಪುಟ್ಟದಾಸು, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಶ್ರೀಲಂಕಾದಲ್ಲಿ ಸಂಕಷ್ಟಗಳ ಸರಮಾಲೆ

ಶ್ರೀಲಂಕಾವು ತನ್ನ ಇತಿಹಾಸದಲ್ಲಿ ಈವರೆಗೆ ಕಾಣದೇ ಇದ್ದಂತಹ ಆರ್ಥಿಕ ಸಂಕಷ್ಟಕ್ಕೆ ಗುರಿಯಾಗಿದೆ. ವಿದೇಶಗಳಿಂದ ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿ ಖರೀದಿಸಲಾಗಂತಹದ ಸ್ಥಿತಿಗೆ ದೇಶವು ತಲುಪಿದೆ. ವಿದೇಶಗಳಿಂದ ಈ ತೈಲೋತ್ಪನ್ನಗಳು ಬಾರದೇ ಇರುವ ಕಾರಣಕ್ಕೆ, ದೇಶದಾದ್ಯಂತ ಇಂಧನ ಕೊರತೆ ಉಂಟಾಗಿದೆ. ವಾಹನ ಮಾಲೀಕರು, ಟ್ಯಾಕ್ಸಿ, ಟ್ರಕ್ ಮತ್ತು ಆಟೊ ಚಾಲಕರು ತಮ್ಮ ವಾಹನಗಳಿಗೆ ಇಂಧನ ತುಂಬಿಸಿಕೊಳ್ಳಲು ಗಂಟೆಗಟ್ಟಲೆ ಸರದಿಯಲ್ಲಿ ನಿಲ್ಲಬೇಕಾಗಿದೆ. ಹೀಗೆ ನಿಂತರೂ ದೊರೆಯುವ ಇಂಧನ ಪ್ರಮಾಣ ಒಂದು ದಿನದ ಓಡಾಟಕ್ಕೂ ಸಾಲುವುದಿಲ್ಲ. ಏಕೆಂದರೆ ಪಡಿತರದ ರೀತಿಯಲ್ಲಿ ಇಂಧನವನ್ನು ನೀಡಲಾಗುತ್ತಿದೆ.

ಎಲ್‌ಪಿಜಿ ಸಿಲಿಂಡರ್ ಬಳಕೆದಾರರ ಸ್ಥಿತಿ ಇದಕ್ಕಿಂತ ಭಿನ್ನವಾಗೇನೂ ಇಲ್ಲ. ಖಾಲಿಯಾದ ಸಿಲಿಂಡರ್ ಅನ್ನು ಬದಲಿಸಿಕೊಳ್ಳಲು ದಿನಗಟ್ಟಲೆ ಕಾಯಬೇಕಾದ ಸ್ಥಿತಿ ಇದೆ. ಕೊರತೆ ತೀವ್ರವಾಗಿರುವ ಕಾರಣ ಈ ವಸ್ತುಗಳ ಬೆಲೆಯೂ ಗಗನಕ್ಕೇರಿದೆ. ಗೃಹ ಬಳಕೆಯ ಪ್ರತಿ ಸಿಲಿಂಡರ್‌ನ ಬೆಲೆ 4,500-5,000 ಶ್ರೀಲಂಕಾ ರೂಪಾಯಿಗೆ ತಲುಪಿದೆ. ಇಷ್ಟು ದುಡ್ಡು ಕೊಟ್ಟು ಸಿಲಿಂಡರ್ ಖರೀದಿಸಲಾಗದ ಮಧ್ಯಮವರ್ಗ ಮತ್ತು ಬಡ ಜನರು ಮರಳಿ ಸೌದೆ ಒಲೆಗಳ ಮೊರೆ ಹೋಗಿದ್ದಾರೆ.

ಅತ್ಯಗತ್ಯದ ವಸ್ತುಗಳಲ್ಲಿ ಒಂದಾದ ಔಷಧಗಳನ್ನು ತಯಾರಿಸಿಕೊಳ್ಳುವ ವ್ಯವಸ್ಥೆ ಶ್ರೀಲಂಕಾದಲ್ಲಿ ಇಲ್ಲ. ಎಲ್ಲಾ ಸ್ವರೂಪದ ಔಷಧಗಳಿಗೆ ಶ್ರೀಲಂಕಾವು ಭಾರತ, ಚೀನಾ ಮತ್ತು ಪಾಶ್ಚಿಮಾತ್ಯ ದೇಶಗಳನ್ನು ಅವಲಂಬಿಸಿದೆ. ವಿದೇಶಿ ವಿನಿಮಯ ನಿಧಿ ಕರಗಿರುವ ಕಾರಣ ಔಷಧಗಳನ್ನು ಖರೀದಿಸಲು ಸಾಧ್ಯವಿಲ್ಲದೇ ಇರುವಂತಹ ಚಿಂತಾಜನಕ

ಮಹಿಂದ ರಾಜಪಕ್ಸೆ ವಿರುದ್ಧ ಪ್ರತಿಭಟನೆಯ ವೈಖರಿ

ಸ್ಥಿತಿಗೆ ದೇಶ ತಲುಪಿದೆ. ಪರಿಣಾಮವಾಗಿ ರೋಗಿಗಳಿಗೆ ಸರಿಯಾದ ಚಿಕಿತ್ಸೆ ದೊರೆಯುತ್ತಿಲ್ಲ. ಏನೂ ಮಾಡಲಾಗದ ಸ್ಥಿತಿಯಲ್ಲಿರುವ ವೈದ್ಯರು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದಾರೆ.

ಪ್ರಯೋಗವನ್ನೇ ಮಾಡದೆ ಜಾರಿಗೆ ತಂದ ಸಂಪೂರ್ಣ ಸಾವಯವ ಎಂಬ ನೂತನ ಕೃಷಿ ನೀತಿ, ದೇಶದ ಕೃಷಿ ವಲಯದ ಕತ್ತು ಹಿಸುಕಿದೆ. ದೇಶದ ಜನರ ಆಹಾರದ ಅಗತ್ಯವನ್ನು ಪೂರೈಸಲಾಗದಷ್ಟು ಕೃಷಿ ವಲಯ ದುರ್ಬಲವಾಗಿದೆ. ಆಹಾರ ಪದಾರ್ಥಗಳಿಗಾಗಿ ವಿದೇಶಗಳತ್ತ ಕೈಚಾಚುವ ಸ್ಥಿತಿ ನಿರ್ಮಾಣವಾಗಿದೆ. ಹಣದುಬ್ಬರವು ಶೇ 17ಕ್ಕೂ ಹೆಚ್ಚು ಇರುವುದರಿಂದ ಜನರು ಆಹಾರ ಪದಾರ್ಥಗಳನ್ನು ಖರೀದಿಸಲಾಗಂತಹ ದಯನೀಯ ಸ್ಥಿತಿಗೆ ಬಂದಿದ್ದಾರೆ.

ಈ ಎಲ್ಲಾ ಸಂಕಷ್ಟಗಳಿಗೆ ಸರ್ಕಾರವೇ ಕಾರಣ ಎಂದು ಜನರು ಹೇಳುತ್ತಿದ್ದಾರೆ. ಅವರು ಬೀದಿಗಿಳಿದು ಪ್ರತಿಭಟಿಸುತ್ತಿದ್ದಾರೆ. ಅಧ್ಯಕ್ಷ ಗೊಟಬಯ ರಾಜಪಕ್ಸ ಅವರ ರಾಜೀನಾಮೆಗೆ ಒತ್ತಾಯಿಸುತ್ತಿದ್ದಾರೆ. ಆದರೆ ಗೊಟಬಯ ಅವರು ಮಾತ್ರ ಯಾವುದೇ ಕಾರಣಕ್ಕೂ ರಾಜೀನಾಮೆ ನೀಡುವುದಿಲ್ಲ ಎಂದಿದ್ದಾರೆ.

ಸ್ವಾತಂತ್ರ್ಯಾನಂತರ ಚಹಾ ಮತ್ತು ಮಸಾಲೆ ಪದಾರ್ಥಗಳ ರಫ್ತಿನಿಂದಲೇ ಶ್ರೀಲಂಕನ್ನರು ದೇಶವನ್ನು ಕಟ್ಟಿದ್ದರು. ಗೊಟಬಯ ಅವರು ಅಧ್ಯಕ್ಷರಾದ ನಂತರ ಆರ್ಥಿಕತೆಯ ಆದ್ಯತೆ ಬದಲಾಯಿತು. ಕೆಲವೇ ವರ್ಷಗಳಲ್ಲಿ ಗೊಟಬಯ ಅವರ ಅಣ್ಣ ಮಹಿಂದ ರಾಜಪಕ್ಸೆ ಅವರು ಪ್ರಧಾನಿಯಾದರು. ಸೋದರರ ಈ ಸರ್ಕಾರವು ದೇಶದ ಆರ್ಥಿಕ ನೀತಿಯನ್ನು ಬದಲಿಸಿತು.

ಚಹಾ ಮತ್ತು ಮಸಾಲೆ ಪದಾರ್ಥಗಳ ರಫ್ತೇ ಪ್ರಧಾನ ಆದಾಯವಾಗಿದ್ದ ಆರ್ಥಿಕತೆಯಲ್ಲಿ ಪ್ರವಾಸೋದ್ಯಮಕ್ಕೆ ಆದ್ಯತೆ ನೀಡಿದರು. ಪ್ರವಾಸಿಗರನ್ನು ಸೆಳೆಯಲು ಅಗತ್ಯವಿದ್ದ ಮೂಲಸೌಕರ್ಯಗಳ ನಿರ್ಮಾಣಕ್ಕೆ ಜಾಗತಿಕ ಹಣಕಾಸು ಸಂಸ್ಥೆಗಳಲ್ಲಿ ಭಾರಿ ಮೊತ್ತದ ಸಾಲ ತಂದರು. ಪ್ರವಾಸೋದ್ಯಮಕ್ಕೆ ಆದ್ಯತೆ ನೀಡುವ ಮಧ್ಯೆ ಕೃಷಿ ನಲುಗಿತು. ದೇಶದ ಒಟ್ಟು ದೇಶೀಯ ಉತ್ಪನ್ನದಲ್ಲಿ ಕೃಷಿಯ ಪಾಲು ಕುಸಿಯಿತು. ಪ್ರವಾಸೋದ್ಯಮ ಬೆಳೆದರೂ, ಸಾಲ ತೀರಿಸುವಿಕೆ ಮತ್ತು ಮತ್ತಷ್ಟು ಮೂಲಸೌಕರ್ಯ ಅಭಿವೃದ್ಧಿಗೆ ಭಾರಿ ಹಣ ವ್ಯಯ ಮಾಡಲಾಯಿತು. ಸರ್ಕಾರದ ಆದಾಯ ಕುಸಿಯಿತು. ಸರ್ಕಾರದ ಖಜಾನೆ ಬರಿದಾಯಿತು. ಜಾಗತಿಕ ಹಣಕಾಸು ಸಂಸ್ಥೆಗಳು ಸಾಲ ನೀಡಲು ನಿರಾಕರಿಸಿದವು. ಹೀಗಾಗಿ ಶ್ರೀಲಂಕಾ ಸರ್ಕಾರವು ಸಹಾಯಕ್ಕಾಗಿ ವಿದೇಶಗಳತ್ತ ಕೈಚಾಚಿದೆ.

ಚೀನಾ ಸಾಲದ ಬಲೆಗೆ ಬಿದ್ದ ಲಂಕಾ

ಮಧ್ಯಮ ಆದಾಯದ ದೇಶಗಳಿಗೆ ಭರಪೂರ ಸಾಲ ನೀಡುವ ಹಾಗೂ ಅಲ್ಲಿ ಹೂಡಿಕೆ ಮಾಡುವ ಚೀನಾದ ತಂತ್ರಗಾರಿಕೆಯು ದ್ವೀಪರಾಷ್ಟ್ರ ಶ್ರೀಲಂಕಾವನ್ನು ಆರ್ಥಿಕ ದುಃಸ್ಥಿತಿಗೆ ತಳ್ಳುವಂತೆ ಮಾಡಿದೆ. 2009ರಲ್ಲಿ ಆಂತರಿಕ ಯುದ್ಧ ಕೊನೆಯಾದ ಬಳಿಕ ಶ್ರೀಲಂಕಾ ಸರ್ಕಾರವು ಚೀನಾ ಸೇರಿದಂತೆ ವಿವಿಧ ದೇಶಗಳಿಂದ ಅಧಿಕ ನೆರವು ಕೇಳಿತ್ತು. 2021ರ ಮಾಹಿತಿ ಪ್ರಕಾರ, ಶ್ರೀಲಂಕಾ ಈವರೆಗೆ ₹3.87 ಲಕ್ಷ ಕೋಟಿ (5,100 ಕೋಟಿ ಡಾಲರ್) ಸಾಲ ಮಾಡಿದೆ. ಈ ಸಾಲದಲ್ಲಿ ಚೀನಾದ ಪಾಲೇ ಶೇ 10ರಷ್ಟಿದೆ.

ಸಾಲ ಮರುಪಾವತಿ ಮಾಡುವ ಸಾಮರ್ಥ್ಯವಿಲ್ಲದ ದೇಶಗಳಿಗೆ ಹೆಚ್ಚಿನ ಸಾಲ ನೀಡುವುದು ಹಾಗೂ ಆ ದೇಶಗಳ ರಾಷ್ಟ್ರೀಯ ಸೊತ್ತುಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ ಚೀನಾದ ಯುಕ್ತಿ ಇಲ್ಲಿಯೂ ಕೆಲಸ ಮಾಡಿದೆ. ದೇಶದ ಅತ್ಯಂತ ಪ್ರಮುಖ ಬಂದರು ಎನಿಸಿರುವ 'ಹಂಬನ್‌ತೋಟ' ಬಂದರು ಈಗ ಚೀನಾದ ತೆಕ್ಕೆಯಲ್ಲಿದೆ. ಈ ಬಂದರು ನಿರ್ಮಾಣಕ್ಕೆ ಚೀನಾ ಸುಮಾರು ₹9 ಸಾವಿರ ಕೋಟಿ (120 ಕೋಟಿ ಡಾಲರ್) ಹಣವನ್ನು ಸಾಲದ ರೂಪದಲ್ಲಿ ಹೂಡಿಕೆ ಮಾಡಿದೆ. ಸಾಲ ಮರುಪಾವತಿಗೆ ಪರದಾಡಿದ ಶ್ರೀಲಂಕಾ, 2017ರಲ್ಲಿ ಹಂಬನ್‌ತೋಟ ಬಂದರನ್ನು ಚೀನಾಕ್ಕೆ 99 ವರ್ಷಗಳ ಕಾಲ ಭೋಗ್ಯಕ್ಕೆ ನೀಡುವ ಒಪ್ಪಂದಕ್ಕೆ ಸಹಿ ಹಾಕಿತು. ಅಂತರರಾಷ್ಟ್ರೀಯ ಸಮುದ್ರಮಾರ್ಗದ ಸಮೀಪದಲ್ಲಿರುವ ಈ ಬಂದರಿನಲ್ಲಿ ಶೇ 70ರಷ್ಟು ಪಾಲು ಹೊಂದಿರುವ ಚೀನಾ, ಇಲ್ಲಿ ಬರುವ ಆದಾಯವನ್ನು ತನ್ನ ಬೊಕ್ಕಸಕ್ಕೆ ತುಂಬಿಸಿಕೊಳ್ಳುತ್ತಿದೆ.

ಮರುಪಾವತಿ ಸಾಧ್ಯವಾಗದ ಕಾರಣ, ಸಾಲವನ್ನು ಮರು ಹೊಂದಾಣಿಕೆ ಮಾಡುವಂತೆ ಶ್ರೀಲಂಕಾ ಮಾಡಿದ್ದ ಮನವಿಯನ್ನು ಚೀನಾ ತಿರಸ್ಕರಿಸಿದೆ. ಹೊಸದಾಗಿ ₹7,500 ಕೋಟಿ (100 ಕೋಟಿ ಡಾಲರ್) ಸಾಲ ನೀಡುವಂತೆ ಶ್ರೀಲಂಕಾ ಮಾಡಿರುವ ಮನವಿಯನ್ನು ಪರಿಶೀಲಿಸಲಾಗುತ್ತಿದೆ ಎಂದು ಶ್ರೀಲಂಕಾದಲ್ಲಿರುವ ಚೀನಾದ ರಾಯಭಾರಿ ಹೇಳಿದ್ದಾರೆ. ಸಾಲ ಮರುಹೊಂದಾಣಿಕೆಗೆ ಸಿದ್ಧವಿಲ್ಲದ ಚೀನಾ, ಹೊಸ ಸಾಲ ನೀಡಲು ಮುಂದಾಗಿದೆ. ಇದು ದೇಶವನ್ನು ಸಾಲದಕೂಪಕ್ಕೆ ತಳ್ಳುವ ಯತ್ನ ಎಂದು ವಿಶ್ಲೇಷಿಸಲಾಗಿದೆ. ಶ್ರೀಲಂಕಾ ತಾನು ಗಳಿಸಿದ ಎಲ್ಲ ಆದಾಯವನ್ನು ವಿದೇಶಗಳಿಂದ ಮಾಡಿದ್ದ ಸಾಲ ಮರುಪಾವತಿಗೆ ಬಳಕೆ ಮಾಡಿದ್ದರಿಂದ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿದೆ.

ತೆರಿಗೆ ಕಡಿತದ ಬರೆ!

ದೇಶದ ತೆರಿಗೆ ಸಂಗ್ರಹ ನೀತಿಯನ್ನು ಬದಲಿಸಿದ್ದು ಶ್ರೀಲಂಕಾದ ಆರ್ಥಿಕತೆಗೆ ಬಹುದೊಡ್ಡ ಹೊಡೆತ ನೀಡಿದೆ. ಪ್ರವಾಸೋದ್ಯಮವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಸರ್ಕಾರವು ಹಲವು ರೀತಿಯ ತೆರಿಗೆಗಳ ದರವನ್ನು ಕಡಿತ ಮಾಡಿತು ಮತ್ತು ಕೆಲವು ತೆರಿಗೆಗಳನ್ನು ರದ್ದು ಮಾಡಿತು. ಸಾವಿರಾರು ಕೋಟಿ ಬಂಡವಾಳದ ರೂಪದಲ್ಲಿ ಚೀನಾ ನೀಡಿದ್ದ ಸಾಲದ ಋಣವನ್ನು ತೀರಿಸುವ ಸಲುವಾಗಿ, ಚೀನಾದಿಂದ ಆಮದಾಗುವ ವಸ್ತುಗಳಿಗೆ ಸಂಪೂರ್ಣ ತೆರಿಗೆ ವಿನಾಯಿತಿ ನೀಡಲಾಯಿತು.

ಕಡಿಮೆ ಬೆಲೆಗೆ ಬಂದು ಬಿದ್ದ ಚೀನಾದ ವಸ್ತುಗಳು, ದೇಶೀಯ ಉದ್ಯಮಗಳ ಕತ್ತು ಹಿಸುಕಿದವು. ಈ ಪರಿಸ್ಥಿತಿ ಅರ್ಥವಾಗುವಷ್ಟರಲ್ಲಿ ದೇಶದ ತೆರಿಗೆ ಆದಾಯ ಸಂಪೂರ್ಣ ಕುಸಿದು ಹೋಗಿತ್ತು. ಜತೆಗೆ ಹಣದುಬ್ಬರವೂ ತೀವ್ರ ಪ್ರಮಾಣದಲ್ಲಿ ಏರಿಕೆಯಾಗಿತ್ತು. ಹಣದುಬ್ಬರವನ್ನು ನಿಯಂತ್ರಿಸುವ ಮತ್ತು ಜನರಲ್ಲಿ ಹಣ ಉಳಿಯುವಂತೆ ಮಾಡುವ ಉದ್ದೇಶದಿಂದ ಸರ್ಕಾರವು ಮತ್ತೆ ತೆರಿಗೆ ಕಡಿತ ಮಾಡಿತು. ಇದು ವ್ಯತಿರಿಕ್ತ ಪರಿಣಾಮ ಬೀರಿತು. ಸರ್ಕಾರದ ತೆರಿಗೆ ಆದಾಯ ಖೋತಾ ಆಯಿತು. ವಿದೇಶಿ ವಿನಿಮಯ ನಿಧಿ ಕರಗಿತು. ಅಗತ್ಯ ವಸ್ತುಗಳ ಕೊರತೆಯಿಂದಾಗಿ ಅವುಗಳ ಬೆಲೆ ಏರಿಕೆಯಾಯಿತು. ಪರಿಣಾಮವಾಗಿ ಜನರ ಬಳಿಯೂ ಹಣ ಉಳಿಯಲಿಲ್ಲ. ಸರ್ಕಾರವೂ ದಿವಾಳಿಯಾಯಿತು.

ಲಂಕೆಗೆ ಬೆಂಕಿ ಹಚ್ಚಿದ ಕೋವಿಡ್

2019ರಲ್ಲಿ ಜಗತ್ತಿಗೆ ಕಾಲಿಟ್ಟ ಕೊರೊನಾ ವೈರಸ್ ಶ್ರೀಲಂಕಾದಲ್ಲೂ ತನ್ನ ಪ್ರತಾಪ ತೋರಿಸಿತು. ಪುಟ್ಟ ರಾಷ್ಟ್ರದಲ್ಲಿ ಸಾಂಕ್ರಾಮಿಕದ ತೀವ್ರತೆಯನ್ನು ಸಮರ್ಥವಾಗಿ ಎದುರಿಸುವಷ್ಟು ಆರೋಗ್ಯ ಮೂಲಸೌಕರ್ಯಗಳು ಇರಲಿಲ್ಲ. ವಿಶ್ವಬ್ಯಾಂಕ್ ವರದಿ ಪ್ರಕಾರ, ಕೋವಿಡ್ ಬಳಿಕ ದೇಶದಲ್ಲಿ 5 ಲಕ್ಷ ಜನರು ಬಡತನಕ್ಕೆ ಒಳಗಾಗಿದ್ದಾರೆ. ಕೋವಿಡ್ ಕಾರಣದಿಂದ ಜನರು ಕೆಲಸ ಕಳೆದುಕೊಂಡರು. ಉದ್ಯಮಗಳು ನೆಲಕಚ್ಚಿದ್ದರಿಂದ ನಿರುದ್ಯೋಗ ತೀವ್ರವಾಗಿ ಕಾಡಿತು.

ಪ್ರವಾಸೋದ್ಯಮದ ಹೊಡೆತ: ದ್ವೀಪರಾಷ್ಟ್ರ ನೆಚ್ಚಿಕೊಂಡಿರುವ ಪ್ರವಾಸೋದ್ಯಮವು ಕೋವಿಡ್‌ನಿಂದ ತೀವ್ರ ಆಘಾತ ಎದುರಿಸಿತು. 2018ರಲ್ಲಿ ದೇಶಕ್ಕೆ 5 ಲಕ್ಷ ಪ್ರವಾಸಿಗರು ಭೇಟಿ ನೀಡಿದ್ದು ಈವರೆಗಿನ ದಾಖಲೆ. ಸಾಂಕ್ರಾಮಿಕಕ್ಕೂ ಮುನ್ನ ಶ್ರೀಲಂಕಾ ಪ್ರವಾಸೋದ್ಯಮವು ಸುಮಾರು ₹37 ಸಾವಿರ ಕೋಟಿ ವಿದೇಶಿ ವಿನಿಮಯ ಗಳಿಕೆ ದಾಖಲಿಸಿತ್ತು. ಆದರೆ, ಕೋವಿಡ್ ಕಾರಣ ಪ್ರವಾಸಿಗರ ಸಂಖ್ಯೆ ಕುಸಿಯಿತು. ತನ್ಮೂಲಕ, ಶ್ರೀಲಂಕಾದ ವಿದೇಶಿ ವಿನಿಮಯ ಗಳಿಕೆ ನಿಂತುಹೋಯಿತು.

ಸಾವಯವ ನೀತಿಯ ವೈಫಲ್ಯ

'ಶ್ರೀಲಂಕಾವನ್ನು ಜಗತ್ತಿನ ಮೊದಲ ಸಾವಯವ ದೇಶವನ್ನಾಗಿ ಮಾಡುತ್ತೇನೆ' ಎಂಬುದಾಗಿ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಗೊಟಬಯ ರಾಜಪಕ್ಸ ಅವರು ಚುನಾವಣೆಯಲ್ಲಿ ಗೆದ್ದ ಬಳಿಕ ಆ ದಿಸೆಯಲ್ಲಿ ಕ್ರಮ ಕೈಗೊಂಡರು. ಚುನಾವಣೆ ನಡೆದು ಕೆಲವು ತಿಂಗಳು ಕಳೆಯುವ ಹೊತ್ತಿಗೆ ಕೋವಿಡ್ ಕಾಲಿಟ್ಟಿತು. ಆದರೆ ಗೊಟಬಯ ಅವರು ತಮ್ಮ ದೇಶವನ್ನು ಸಾವಯವ ದೇಶವನ್ನಾಗಿ ಮಾಡುವ ಸಂಕಲ್ಪದಿಂದ ಹಿಂದೆ ಸರಿಯಲಿಲ್ಲ. ದೇಶದ ಸಂಕಷ್ಟದ ಸ್ಥಿತಿಗೆ ಗೊಟಬಯ ಅವರ ಸಾವಯವ ನೀತಿಯೂ ಕಾರಣ ಎಂದು ವಿಶ್ಲೇಷಿಸಲಾಗಿದೆ.

ಸುಮಾರು 20 ಲಕ್ಷ ರೈತರು ಇರುವ ಶ್ರೀಲಂಕಾದಲ್ಲಿ ರಾಸಾಯನಿಕ ರಸಗೊಬ್ಬರಗಳ ಬಳಕೆ ಮೇಲೆ ಸಂಪೂರ್ಣ ನಿಷೇಧ ಹೇರಿದ್ದರಿಂದ ಮೂರನೇ ಒಂದು ಭಾಗದಷ್ಟು ಕೃಷಿ ಜಮೀನು ಬರಡಾಯಿತು. ದೇಶಕ್ಕೆ ಅಗತ್ಯಕ್ಕೆ ತಕ್ಕಷ್ಟು ಅಕ್ಕಿಯನ್ನು ಪೂರೈಸುತ್ತಿದ್ದ ಅಕ್ಕಿ ಉದ್ಯಮವು, ರಸಗೊಬ್ಬರಗಳ ಮೇಲೆ ನಿಷೇಧ ಹೇರಿ ಆರು ತಿಂಗಳು ಕಳೆಯುವಷ್ಟರಲ್ಲಿ ಶೇ 20ರಷ್ಟು ಕುಸಿತ ದಾಖಲಿಸಿತು. ಉತ್ಪಾದನೆ ಕುಗ್ಗಿದ್ದರಿಂದ, ಸರ್ಕಾರವು ಅನಿವಾರ್ಯವಾಗಿ ಸುಮಾರು ₹3 ಸಾವಿರ ಕೋಟಿ ಮೌಲ್ಯದ ಅಕ್ಕಿಯನ್ನು ವಿದೇಶಗಳಿಂದ ಆಮದು ಮಾಡಿಕೊಂಡಿತು. ದೇಶದಲ್ಲಿ ಅಕ್ಕಿ ದರ ಶೇ 50ರಷ್ಟು ಹೆಚ್ಚಾಗಿ, ಜನರು ಅಕ್ಕಿ ಖರೀದಿಸಲು ಪರದಾಡಿದರು. ಬರಪೀಡಿತ ಹಾಗೂ ಬೆಳೆ ವೈಫಲ್ಯ ಎದುರಿಸಿದ ರೈತರ ಜಮೀನುಗಳಿಗೆ ಪರಿಹಾರವಾಗಿ ಸರ್ಕಾರವು ₹1,500 ಕೋಟಿ ಪಾವತಿಸುತ್ತಿದೆ. ನಷ್ಟ ಅನುಭವಿಸಿದ ಭತ್ತ ಬೆಳೆಗಾರರು ಹಾಗೂ ಆಹಾರ ಸಹಾಯಧನಕ್ಕಾಗಿ ಸರ್ಕಾರವು ಸುಮಾರು ₹1,110 ಕೋಟಿ ಪಾವತಿಸುತ್ತಿದೆ. ಕೃಷಿ ಪ್ರಧಾನ ದೇಶವಾಗಿದ್ದ ಶ್ರೀಲಂಕಾವು ಸಾವಯವ ನೀತಿ, ಬೆಳೆ ವೈಫಲ್ಯ, ಪರಿಹಾರ ಮೊದಲಾದ ಕಾರಣಗಳಿಂದ ನೆಲ ಕಚ್ಚುವ ಹಂತಕ್ಕೆ ತಲುಪಿದೆ.

ಬಾಂಬ್ ದಾಳಿಯ ಪರಿಣಾಮ

ರಾಜಕೀಯ ಅಸ್ಥಿರತೆ, ಸಾಲ, ವಿದೇಶಿ ಹೂಡಿಕೆ, ನಿರುದ್ಯೋಗ ಮೊದಲಾದ ಬಿಕ್ಕಟ್ಟುಗಳನ್ನು ಎದುರಿಸುತ್ತಿದ್ದ ಶ್ರೀಲಂಕಾದ ಆರ್ಥಿಕತೆಗೆ ಕೊಡಲಿ ಏಟು ನೀಡಿದ್ದು 2018ರಲ್ಲಿ ನಡೆದ ಆತ್ಮಾಹುತಿ ದಾಳಿ. ಈಸ್ಟರ್ ಹಬ್ಬದಂದು ನಡೆದ ಈ ದುರಂತದಲ್ಲಿ ಸುಮಾರು 250 ಜನರು ಮೃತಪಟ್ಟಿದ್ದರು. ಚೀನಾ, ಭಾರತ, ಅಮೆರಿಕ ಸೇರಿದಂತೆ ವಿದೇಶಗಳ 45 ಪ್ರವಾಸಿಗರೂ ಘಟನೆಯಲ್ಲಿ ಮೃತಪಟ್ಟಿದ್ದರು. ಚರ್ಚ್‌ಗಳು ಹಾಗೂ ಪಂಚತಾರಾ ಹೋಟೆಲ್‌ಗಳಲ್ಲಿ ಬಾಂಬ್ ಸ್ಫೋಟಿಸಲಾಗಿತ್ತು. ದೇಶಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಬಾಂಬ್ ಸ್ಫೋಟದ ಭೀತಿಯಿಂದ ಶೇ 70ರಷ್ಟು ಕುಸಿಯಿತು. ಹೋಟೆಲ್ ಹಾಗೂ ಸಾರಿಗೆ ಉದ್ಯಮಗಳನ್ನು ನೆಚ್ಚಿಕೊಂಡಿದ್ದ ಜನರು ಅಕ್ಷರಶಃ ಬೀದಿಗೆ ಬಿದ್ದರು. ವಿದೇಶಿ ನೇರ ಬಂಡವಾಳ ಹೂಡಿಕೆಯೂ ಕಡಿಮೆಯಾಯಿತು.

ಆಧಾರ: ಎಎಫ್‌ಪಿ, ಎಪಿ, ರಾಯಿಟರ್ಸ್, ಬಿಬಿಸಿ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 89

ಶಿವನಿಂದ ವೇದ ತಿಳಿದ ವಿಷ್ಣು

ರುದ್ರಸಂಹಿತೆಯ ಸೃಷ್ಟಿಖಂಡದಲ್ಲಿ ಶಿವತತ್ತ್ವವರ್ಣನ ಎಂಬ ಒಂಬತ್ತನೆಯ ಅಧ್ಯಾಯವಿದೆ. ಇದರಲ್ಲಿ ಬ್ರಹ್ಮ-ವಿಷ್ಣು ಮುಂದೆ ಶಿವ ತನ್ನ ಪತ್ನಿಯೊಂದಿಗೆ ಪ್ರತ್ಯಕ್ಷನಾಗಿ ವಿಷ್ಣುವಿಗೆ ವೇದಗಳನ್ನು ಉಪದೇಶಿಸಿದ ವಿವರವಿದೆ. ಅದನ್ನು ಬ್ರಹ್ಮ ಹೀಗೆ ವರ್ಣಿಸುತ್ತಾನೆ.

'ವಿಷ್ಣುವು ಮಾಡಿದ ಶಿವಸ್ತೋತ್ರವನ್ನು ಕೇಳಿ ಕರುಣಾಶಾಲಿಯಾದ ಮಹೇಶ್ವರನು ಸುಪ್ರಸನ್ನನಾಗಿ ಉಮೆಯೊಡನೆ ಪ್ರತ್ಯಕ್ಷನಾದ. ಆ ಪರಶಿವನ ವೈಭವವನ್ನೇನೆಂದು ಹೇಳಲಿ? ಆತನಿಗೆ ಐದು ಮುಖಗಳು. ಮೂರು ಕಣ್ಣುಗಳು. ಹಣೆಯ ಅಂಚಿನಲ್ಲಿ ಬಾಲಚಂದ್ರನ ಮೆರುಗು. ಶುಭ್ರವಾದ ಮೈಬಣ್ಣ. ದೊಡ್ಡ ದೊಡ್ಡ ಕಣ್ಣುಗಳು. ಮೈಎಲ್ಲಾ ಭಸ್ಮದಿಂದ ಉದ್ಧೂಲಿತ. ಹತ್ತು ಕೈಗಳು, ಕಪ್ಪಾದ ಕೊರಳು. ನಾನಾ ವಿಧವಾದ ಒಡವೆಗಳು ಅಲಂಕರಿಸಿದ್ದವು. ಆತನ ಸರ್ವಾಂಗಗಳೂ ಸೌಂದರ್ಯದಿಂದ ಉಜ್ವಲವಾಗಿದ್ದವು. ಅವನ ಪ್ರಶಸ್ತವಾದ ಲಲಾಟವು, ಅಡ್ಡಡ್ಡವಾಗಿರುವ ಮೂರು ಭಸ್ಮರೇಖೆಗಳಿಂದ ಸುಶೋಭಿತವಾಗಿತ್ತು.

'ತನ್ನ ಅರ್ಧಾಂಗಿಯೊಡನೆ, ಅದ್ಭುತರೂಪದಿಂದ ಆವಿರ್ಭವಿಸಿದ ದೇವದೇವನಾದ ಶಿವನನ್ನು ಕಂಡು ನಾನು ಮತ್ತು ವಿಷ್ಣು ಆತನನ್ನು ಸ್ತೋತ್ರಮಾಡಿದೆವು. ಕರುಣಾನಿಧಿಯಾದ ಆ ಮಹೇಶ್ವರನು ಪ್ರಸನ್ನವಾದ ಮನಸ್ಸುಳ್ಳವನಾಗಿ ವಿಷ್ಣುವಿಗೆ ವೇದಗಳನ್ನು ಮತ್ತು ರಹಸ್ಯವಾದ ತತ್ತ್ವಜ್ಞಾನವನ್ನು ಉಪದೇಶಿಸಿದ. ಅದನ್ನೆಲ್ಲಾ ವಿಷ್ಣು ಕೃಪೆ ಮಾಡಿ ನನಗೆ ಹೇಳಿದ. ವಿಷ್ಣು ಧನ್ಯನಾಗಿ, ಮುಕುಲಿತ ಹಸ್ತನಾಗಿ, ನನ್ನೊಡನೆ ಮಹೇಶ್ವರನನ್ನು ನಮಸ್ಕರಿಸಿದ.

'ನಂತರ ಶಿವನಲ್ಲಿ ವಿಷ್ಣು ಹೀಗೆ ಪ್ರಾರ್ಥಿಸಿದ: ಓ ಪ್ರಭುವೇ, ನೀನು ಸುಪ್ರೀತನಾಗುವ ಬಗೆ ಹೇಗೆ? ನಿನ್ನನ್ನು ನಾನು ಹೇಗೆ ಪೂಜಿಸಬೇಕು? ನ ಯಾವ ರೀತಿ ಧ್ಯಾನಿಸಬೇಕು? ನೀನು ಒಲಿಯುವ ರೀತಿಯಾದರೂ ಹೇಗೆ? ಮಹಾದೇವ! ನಿನ್ನ ಅಪ್ಪಣೆಯಂತೆ, ನಿನ್ನ ಪ್ರೀತಿಯನ್ನು ಅನವರತವೂ ಸಂಪಾದಿಸಲು, ನಾವೀರ್ವರೂ ಸದಾ ಏನನ್ನು ಆಚರಿಸಬೇಕು? ಆಜ್ಞಾಪಿಸು. ನಾವೀರ್ವರೂ ನಿನ್ನನ್ನೇ ಆಶ್ರಯಿಸಿರುವವರೆಂದು ತಿಳಿದು, ನಮ್ಮಲ್ಲಿ ಕೃಪೆಯಿಟ್ಟು, ಇವೆಲ್ಲವನ್ನೂ ತಿಳಿಸು' ಎಂದು ವಿಷ್ಣು ಕೋರಿದ.

ಆಗ ವಿಷ್ಣುವಿಗೆ ಶಿವ ಹೇಳಿದ್ದನ್ನು ಬ್ರಹ್ಮನು ನಾರದನಿಗೆ ಹೀಗೆ ವರ್ಣಿಸುತ್ತಾನೆ: 'ಕರುಣಾಶಾಲಿಯೂ ಸುಪ್ರಸನ್ನನೂ ಆದ ಶಿವನು ನಮ್ಮೀ ಮಾತನ್ನು ಕೇಳಿ, ಪ್ರಸನ್ನಚಿತ್ತನಾಗಿ, ಪ್ರೀತಿಯಿಂದ, ಓ ದೇವಶ್ರೇಷ್ಠರೇ, ನಿಮ್ಮೀರ್ವರ ಭಕ್ತಿಗೆ ನಾನು ಮೆಚ್ಚಿದೆ. ನಾನು ಸುಪ್ರೀತನಾಗಿದ್ದೇನೆ. ನಿಮ್ಮ ಭಯವೆಲ್ಲವನ್ನೂ ಬಿಟ್ಟುಬಿಡಿ. ಯಾವಾಗಲೂ ಈ ನನ್ನ ಲಿಂಗವನ್ನು ಪೂಜಿಸಬೇಕು. ಅದನ್ನು ಧ್ಯಾನಿಸಬೇಕು. ಹಾಗೆಯೇ ಅದನ್ನು ನಿರ್ಮಿಸಬೇಕು. ಲಿಂಗಸ್ವರೂಪದಿಂದ ನನ್ನನ್ನು ಅರ್ಚಿಸಿದರೆ ನಾನು ಒಲಿದು ನಾನಾ ವಿಧವಾದ ಫಲಗಳನ್ನೂ ಇಷ್ಟಾರ್ಥಗಳನ್ನೂ ಬಹುವಿಧವಾಗಿ ನೀಡುವೆನು.

'ಎಲೈ ಸುರಶ್ರೇಷ್ಠರೇ, ನಿಮ್ಮೀರ್ವರಿಗೆ ಒಂದು ವೇಳೆ ದುಃಖ ಬಂದಾಗ, ನನ್ನ ಲಿಂಗವನ್ನು ಪೂಜಿಸಿದರೆ ನಿಮ್ಮ ದುಃಖವೆಲ್ಲವೂ ಪರಿಹಾರವಾಗುವುದು. ನೀವೀರ್ವರೂ ನನ್ನ ಮಾಯೆಯ ದೆಸೆಯಿಂದಲೇ, ಸರ್ವೇಶ್ವರವಾದ ನನ್ನ ಎಡಬಲ ಭಾಗಗಳಿಂದ ಹುಟ್ಟಿರುವಿರಿ. ಪರಮಪುರುಷವಾದ ನನ್ನ ಬಲಪಾರ್ಶ್ವದಿಂದ ಮೂರು ಲೋಕಗಳಿಗೂ ಪಿತಾಮಹನೆನಿಸಿದ ಈ ಬ್ರಹ್ಮನೂ, ಎಡ ಪಾರ್ಶ್ವದಿಂದ ವಿಷ್ಣುವಾದ ನೀನೂ ಹುಟ್ಟಿದಿರಿ. ನಿಮ್ಮ ವಿಷಯದಲ್ಲಿ ನಾನು ಬಹಳ ಸುಪ್ರೀತನಾಗಿದ್ದೇನೆ. ನಿಮಗೆ ಇಷ್ಟವಾದ ವರಗಳನ್ನು ನೀಡುವೆನು. ನನ್ನ ಒಪ್ಪಿಗೆಯಂತೆ ನಿಮ್ಮೀರ್ವರಿಗೂ ನನ್ನಲ್ಲಿ ದೃಢವಾದ ಭಕ್ತಿಯು ನೆಲಸಲಿ.

'ಮಣ್ಣಿನಿಂದಲೇ ನನ್ನ ಮೂರ್ತಿಯನ್ನು ಮಾಡಿ. ಅದಕ್ಕೆ ನಾನಾವಿಧವಾದ ಸೇವೆಯನ್ನು ಸಲ್ಲಿಸಿರಿ. ನೀವು ಸುಖವನ್ನು ಹೊಂದುವಿರಿ. ಎಲೈ ಬ್ರಹ್ಮನೇ, ನೀನು ನನ್ನ ಅಪ್ಪಣೆಯನ್ನು ಪರಿಪಾಲಿಸುತ್ತಾ ಜಗತ್ತನ್ನು ಸೃಷ್ಟಿಸು. ಓ ವತ್ಸ ಹರಿ, ಹೀಗೆಯೇ ನೀನೂ, ಚರಾಚರಾತ್ಮಕವಾದ ಈ ಜಗತ್ತನ್ನು ನನ್ನ ಅಪ್ಪಣೆಯಂತೆ ಪಾಲಿಸುತ್ತಿರು' ಎಂದು ತಮಗೆ ಶಿವ ಸೂಚಿಸುತ್ತಾನೆ.

ಹೀಗೆ, ಯಾವ ವಿಧಿಯನ್ನು ಅನುಸರಿಸಿ ಪೂಜಿಸಿದರೆ, ಆ ಶಂಭುವು ನಾನಾ ಮುಖವಾಗಿ ಫಲಗಳನ್ನು ಕೊಡುವನೋ, ಅಂಥ ಶುಭಕರವಾದ ಪೂಜಾವಿಧಿಯನ್ನು ನಮಗೆ ತಿಳಿಸಿದನು ಎಂದು ಬ್ರಹ್ಮ ತನ್ನ ಮಗ ನಾರದನಿಗೆ ಹೇಳುತ್ತಾನೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ವ್ಯಕ್ತಿಯೊಬ್ಬ ಪೊಲೀಸ್ ಮೇಲೆ ಕೈಮಾಡುತ್ತಿರುವ ಚಿತ್ರವೊಂದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಈ ಘಟನೆ ರಾಜಸ್ಥಾನದಲ್ಲಿ ನಡೆದಿದೆ. ಅನುಚಿತವಾಗಿ ವರ್ತಿಸಿದ ವ್ಯಕ್ತಿ ಮುಸ್ಲಿಂ ಸಮುದಾಯಕ್ಕೆ ಸೇರಿದವನು ಎಂಬ ಮಾಹಿತಿಯೊಂದಿಗೆ ಈ ಚಿತ್ರ ಹರಿದಾಡುತ್ತಿದೆ. 'ಮುಸ್ಲಿಮರ ಜನಸಂಖ್ಯೆ ಶೇ 18ರಷ್ಟು ಇರುವಾಗಲೇ ಪರಿಸ್ಥಿತಿ ಹೀಗಿದೆ, ಇನ್ನು ಶೇ 30ರಷ್ಟು ಜನಸಂಖ್ಯೆ ಆದರೆ ಪರಿಸ್ಥಿತಿ ಹೇಗಿರಬಹುದು' ಎಂಬ ಅಡಿಬರಹವನ್ನು ಈ ಚಿತ್ರಕ್ಕೆ ನೀಡಲಾಗಿದೆ. ಆರೋಪಿ ಮಖ್ಲೂಮ್ ಅಹ್ಮದ್ ರಾಜಸ್ಥಾನದ ಕರೌಲಿ ಪ್ರದೇಶಕ್ಕೆ ಸೇರಿದವನು. ಆತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಸದಸ್ಯ ಎಂದು ಬಿಂಬಿಸಲಾಗಿದೆ.

✓ ಚಿತ್ರದ ಜೊತೆ ನೀಡಲಾಗಿರುವ ಮಾಹಿತಿ ಸುಳ್ಳು. ಈ ಘಟನೆ ನಡೆದಿರುವುದು ಜೋಧಪುರದಲ್ಲಿ ಎಂದು ಆಲ್ಟ್ ನ್ಯೂಸ್ ವೇದಿಕೆ ವರದಿ ಮಾಡಿದೆ. ಈ ಘಟನೆ ನಡೆದಿರುವುದು 2016ರಲ್ಲಿ. ಈ ಕುರಿತು ದೈನಿಕ್ ಭಾಸ್ಕರ್ ಪತ್ರಿಕೆ ಅಂದೇ ವರದಿ ಮಾಡಿತ್ತು. ಜೋಧಪುರದ ಘಂಟಗರ್ ಪ್ರದೇಶದಲ್ಲಿ ವಾಹನ ದಟ್ಟಣೆ ತಗ್ಗಿಸುವ ಸಲುವಾಗಿ ಬೀದಿ ಬದಿ ವ್ಯಾಪಾರಿಗಳನ್ನು ತೆರವುಗೊಳಿಸಲು ನಗರ ಪಾಲಿಕೆ ಆದೇಶ ನೀಡಿತ್ತು. ಆ ಕೆಲಸಕ್ಕಾಗಿ ನಿಯೋಜನೆ ಆಗಿದ್ದ ಪೊಲೀಸ್ ಕಾನ್‌ಸ್ಟೆಬಲ್ ಮೇಲೆ ಬೀದಿ ಬದಿ ವ್ಯಾಪಾರಿಯೊಬ್ಬನು ಹಲ್ಲೆಗೆ ಮುಂದಾಗಿದ್ದ. ಶಂಕಿತನ ಹೆಸರನ್ನು ಧರ್ಮೇಂದ್ರ ಎಂದು ಗುರುತಿಸಲಾಗಿತ್ತು. ಆತನನ್ನು ಬಂಧಿಸಲಾಗಿತ್ತು.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಸಂಸಾರಿಯಾದ ಬ್ರಹ್ಮ

ಮಾಯೆಯೆಂಬಳ ಸೃಜಿಸಿ, ತಾಯನಾಗಿಸಿ ಜಗಕೆ |
ಆಯಸಂಗೊಳುತ ಸಂಸಾರಿಯಾಗಿರುವಾ ||
ನಾಯಕ ಬ್ರಹ್ಮನ್ ಅನುಯಾಯಿಗಳು ನಾವೆಲ್ಲ |
ಹೇಯವದರೊಳಗೇನೊ – ಮಂಕುತಿಮ್ಮ || 602 ||

ಪದ-ಅರ್ಥ: ಮಾಯೆಯೆಂಬಳ = ಮಾಯೆ ಎಂಬುವಳನ್ನು, ಸೃಜಿಸಿ = ಸೃಷ್ಟಿಸಿ, ತಾಯನಾಗಿಸಿ = ತಾಯನು + ಆಗಿಸಿ, ಆಯಸಂಗೊಳುತ = ಆಯಾಸಪಡುತ್ತ ಅನುಯಾಯಿಗಳು = ಹಿಂಬಾಲಕರು, ಹೇಯವದರೊಳಗೇನೊ = ಹೇಯವು (ಕನಿಷ್ಠಾ, ಅಸಹ್ಯ) + ಅದರೊಳಗೆ + ಏನೊ,

ವಾಚ್ಯಾರ್ಥ: ಮಾಯೆ ಎನ್ನುವವಳನ್ನು ಸೃಷ್ಟಿ ಮಾಡಿ ಬ್ರಹ್ಮ, ಆಕೆಯನ್ನು ಜಗತ್ತಿಗೆ ತಾಯಿಯನ್ನಾಗಿಸಿದ್ದಾನೆ. ತಾನೇ ಆಯಾಸಪಡುತ್ತ ಸಂಸಾರಿಯಾಗಿದ್ದಾನೆ. ಅವನ ಹಿಂಬಾಲಕರು ನಾವು. ಇದು ನಾಯಕನ ಕೆಲಸವೇ ಆದ ಮೇಲೆ ಅಸಹ್ಯಪಟ್ಟುಕೊಳ್ಳುವುದು ಏನಿದೆ?

ವಿವರಣೆ: ನಮ್ಮ ಸುತ್ತಲೂ ಅಪಾರವಾದ ವಿಶ್ವ ಹರಡಿಕೊಂಡಿದೆ. ಅದೇನು ಪ್ರಾಣಿಪ್ರಪಂಚ! ಸಸ್ಯಪ್ರಪಂಚ! ವಸ್ತುಪ್ರಪಂಚ! ಪ್ರತಿಯೊಂದೂ ಬೆರಗು ಹುಟ್ಟಿಸುವಂಥವುಗಳು. ಆ ಸಾಗರಗಳು, ಆಕಾಶದೆತ್ತರಕ್ಕೆ ನೆಗೆದು ನಿಂತಿರುವ ಪರ್ವತಗಳು, ತಲೆಎತ್ತಿ ನೋಡಿದರೆ ಅನಂತ ಆಕಾಶ. ಆ ಆಕಾಶದಲ್ಲಿ ಆಕಾಶಕಾಯಗಳು, ಪ್ರಕಾಶಕಾಯಗಳು. ಏನು ಅದ್ಭುತ ಈ ಜಗತ್ತು? ಇದು ಹೇಗಾಯಿತು? ಯಾರು ಸೃಷ್ಟಿ ಮಾಡಿದರು? ಈ ಎಲ್ಲ ಪ್ರಶ್ನೆಗಳು ಮನುಷ್ಯ ಎಂಬ ಜೀವ ಈ ಜಗತ್ತಿನಲ್ಲಿ ಹುಟ್ಟಿ ಬಂದಾಗಿನಿಂದ ಕಾಡಿವೆ. ಅದು ಸಾಲದೆಂಬಂತೆ ಈ ಪ್ರಪಂಚ ಕ್ಷಣಕ್ಷಣಕ್ಕೆ ಬದಲಾಗುವ ಮಾಯಾ ವಿಶ್ವ. ಮನುಷ್ಯ ಬುದ್ಧಿಯಿಂದ ಪ್ರಪಂಚದ ರಹಸ್ಯವನ್ನು ಅರಿಯಲು ಪ್ರಯತ್ನ ಮಾಡಿ ಸೋತ. ನಮ್ಮ ಋಷಿಗಳು, ದ್ರಷ್ಟಾರರು ಸತ್ಯವನ್ನು ಹುಡುಕುವ ಬದಲು ಸತ್ಯದ ಅವತರಣಕ್ಕೆ ಮನ ಮಾಡಿದರು. ಇಂದ್ರಿಯಗಳ ಮೂಲಕ ಅದನ್ನು ತಿಳಿಯಲು ಅಸಾಧ್ಯವೆಂದು ಮನಗಂಡು ಬುದ್ಧಿಯನ್ನು ವಿಶ್ರಾಂತಿಯಲ್ಲಿಟ್ಟು, ಮೌನದ ಚಿಂತನೆಯಲ್ಲಿ ತೊಡಗಿದ.

ಆಗ ಅವನಿಗೆ ಅರ್ಥವಾದದ್ದು ಈ ಪ್ರಪಂಚ ನಾವು ತಿಳಿದಂತೆ ಇಲ್ಲ. ಇದು ಒಂದು ರೀತಿಯ ಮಾಯೆಯಲ್ಲಿದೆ. ಮಾಯೆ ಎನ್ನುವುದು ಭ್ರಮೆಯಲ್ಲ. ಅದಕ್ಕೆ ವಿಶಿಷ್ಟವಾದ ಆದರೆ ತಾತ್ಕಾಲಿವಾದ ವಾಸ್ತವಿಕತೆ ಇದೆ. ಎಲ್ಲಿಯವರೆಗೆ ಅದು ನಮಗೆ ಸತ್ಯವಾಗಿ ತೋರುತ್ತದೆಯೋ ಅಲ್ಲಿಯವರೆಗೆ ಅದನ್ನು ಸತ್ಯವೆಂದೇ ಭಾವಿಸಬೇಕು. ಕನಸು ಸತ್ಯವೇ ಎಂದು ಯಾರಾದರೂ ಕೇಳಿದರೆ ಅದಕ್ಕೆ ಉತ್ತರವೇನು? ಕನಸಿನ ಅನುಭವವಾದದ್ದು ಸತ್ಯ. ಆದರೆ ಅದರಲ್ಲಿಯ ವಸ್ತುಗಳು ನಿಜಪ್ರಪಂಚದಲ್ಲಿ ಇರಬೇಕಾಗಿಲ್ಲ. ಕನಸು ಎನ್ನುವುದು ಮನಸ್ಸಿನ ನಿರ್ಮಾಣ. ಇದನ್ನೇ ಮಾಯೆ ಎನ್ನುವುದು ಸಹಜಸ್ಥಿತಿಯಲ್ಲಿರುವ ಮನಸ್ಸು ಗ್ರಹಿಸಿದ ಹಾಗೆಯೇ ಪ್ರಪಂಚ ಇರಬೇಕಾದದ್ದಲ್ಲ. ಅದು ಪರಮಸತ್ಯವೂ ಅಲ್ಲ. ನಿಜಕ್ಕೂ ಇರುವುದು ಬ್ರಹ್ಮವೆಂಬ ಅವಿಭಾಜ್ಯ ಸತ್ಯ ಒಂದು ಮಾತ್ರವೇ. ಮಾಯೆಯು ಪ್ರಪಂಚವನ್ನು ಅತ್ಯಂತ ಆಕರ್ಷಕವಾಗಿ ಪ್ರದರ್ಶಿಸುವ ಮೂಲಕ ನಮ್ಮ ಮೇಲೆ ಮೋಡಿ ಹಾಕುತ್ತದೆ, ನಾವು ಅದರಲ್ಲಿ ಬಂದಿಯಾಗಿ ಉಳಿಯುವಂತೆ ಮಾಡುತ್ತದೆ.

ಕಗ್ಗ ಅದನ್ನು ಒಂದು ಪ್ರತಿಮೆಯನ್ನಾಗಿ ನೀಡುತ್ತದೆ. ಬ್ರಹ್ಮ ತಾನೊಬ್ಬನೆ ಇರದೆ ಮಾಯೆಯನ್ನು ಸೃಷ್ಟಿ ಮಾಡಿದ. ಆಕೆಯಿಂದ ಈ ಪ್ರಪಂಚವನ್ನು ಹುಟ್ಟಿಸಿದ. ಅದನ್ನು ನಿಭಾಯಿಸಲು ತಾನೇ ಸಂಸಾರಿಯಂತೆ ಒದ್ದಾಡಿದ. ಆ ಬ್ರಹ್ಮನೇ ನಮಗೆ ನಾಯಕ. ನಮ್ಮ ನಾಯಕನೇ ಹೀಗೆ ಸಂಸಾರಿಯಂತೆ ಜಗತ್ತಿನಲ್ಲಿ ಆಯಾಸಪಡುತ್ತಿದ್ದರೆ, ಅವನ ಹಿಂಬಾಲಕರೇ ಆದ ನಾವೇಕೆ ವ್ಯಥೆ ಪಡಬೇಕು? ನಾವು ಮಾಡುವ ಕೆಲಸ ಅರ್ಥಹೀನವಾದದ್ದು, ವ್ಯರ್ಥವಾದದ್ದು ಎಂದು ಬೇಸರಪಡಬೇಕು?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಏಪ್ರಿಲ್ 8, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು - ಮೀನ ಮಾಸದ 25 ನೇ ದಿನ ತಿಥಿ: (ಚೈತ್ರ ಶುದ್ಧ) ಸಪ್ತಮಿ ಗಂ. 23-06 ನಕ್ಷತ್ರ: ಆರ್ದ್ರಾ ಗಂ. 25-43 ಯೋಗ: ಶೋಭನ ಗಂ. 10-30, ಕರಣ: ಗರಜೆ ಗಂ. 09-50. ರಾಹುಕಾಲ: ಬೆಳಿಗ್ಗೆ 10:30–12:00 ಸೂರ್ಯೋದಯ: 06-26 ಸೂರ್ಯಾಸ್ತ : 06-39 ಮುಸ್ಲಿಂ ದಿನಾಂಕ : 06 ರಂಜಾನ್ ದಿನ ವಿಶೇಷ : ವಸಂತಿ ಪೂಜಾರಂಭ, ಓಳಿ ಪ್ರಾರಂಭ (ಜೈನ್) ಅದೃಷ್ಟ ಸಂಖ್ಯೆ: 8, 13

ಮೇಷ: ವ್ಯವಹಾರದಲ್ಲಿ ತಪ್ಪುಗಳಾಗದಂತೆ ಎಚ್ಚರದಿಂದಿರಿ. ಚಿಂತಾಕ್ರಾಂತರಾದಾಗ ನಿಮ್ಮ ಸುಖ-ದುಃಖಗಳನ್ನು ಹಂಚಿಕೊಳ್ಳುವ ಮಿತ್ರರನ್ನು ಹೊಂದುವಿರಿ. ಹಣಕಾಸಿನ ಸಮಸ್ಯೆಗೆ ತಾತ್ಕಾಲಿಕ ಪರಿಹಾರ ದೊರೆಯಲಿದೆ.

ವೃಷಭ: ದೈವಾನುಗ್ರಹ ಇರುವುದರಿಂದ ಸಕಲ ಅಭೀಷ್ಟವು ನೆರವೇರುವುದು. ನಿಮ್ಮದೇ ಆದ ಭಾವನಾ ಪ್ರಪಂಚ ಈ ದಿನ ನಿಮ್ಮನ್ನು ಮತ್ತೆ ಮತ್ತೆ ಸೆಳೆಯುತ್ತದೆ. ಹಳೆಯ ಜವಾಬ್ದಾರಿ, ಬದ್ಧತೆಗಳಿಂದ ಈ ದಿನ ಮುಕ್ತಿ ಹೊಂದಬಹುದು.

ಮಿಥುನ: ಹಲವು ದಿನಗಳಿಂದ ಇರುವ ಕಷ್ಟಕರ ಪರಿಸ್ಥಿತಿಯು ಆಹ್ಲಾದಕರ ರೀತಿಯಲ್ಲಿ ಮುಗಿದು ಹೋಗುವುದು. ಸಾಧು ಸಂತರ ದರ್ಶನ ಭಾಗ್ಯದಿಂದ ಇಂದಿನ ನಿಮ್ಮ ಎಲ್ಲಾ ಕೆಲಸಗಳು ಗುರಿ ತಲುಪಲಿವೆ.

ಕರ್ಕಾಟಕ: ಸಂಸಾರದ ಜೊತೆಯಲ್ಲಿ ಕಾಲಕಳೆಯುವ ಸಮಯ. ಅರೆ ಸರ್ಕಾರಿ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಇನ್ನಷ್ಟು ಹೆಚ್ಚಿನ ಅನುಕೂಲವಾಗುವ ಸಾಧ್ಯತೆ. ಸಂಜೆ ವೇಳೆಗೆ ತಲೆನೋವಿನಂಥ ಸಮಸ್ಯೆ ಎದುರಾಗಬಹುದು.

ಸಿಂಹ: ಸಾಧ್ಯವಾದಷ್ಟು ಸಮಾಧಾನ, ತಾಳ್ಮೆಯಿಂದ ಮುಂದುವರೆದಲ್ಲಿ ಮಾನಸಿಕ ನೆಮ್ಮದಿ. ನೌಕರಿಯಲ್ಲಿ ಭಡ್ತಿ ಹೊಂದುವ ಬಗ್ಗೆ ನಿಮ್ಮ ಪ್ರಯತ್ನವಿರಲಿ. ಹಿರಿಯ ಅಧಿಕಾರಿಗಳ ಅಥವಾ ಆಪ್ತರ ಸಹಾಯ ಸಿಗುವುದು.

ಕನ್ಯಾ: ಗುರಿ ಸಾಧನೆಯತ್ತ ಲಕ್ಷ್ಯವಿರಿಸಲು ಮಕ್ಕಳಿಗೆ ತಿಳಿ ಹೇಳಿ. ರಾಜಕೀಯ ಭವಿಷ್ಯದಲ್ಲಿ ಜನಪ್ರಿಯತೆ ಹೆಚ್ಚಿಸಿಕೊಳ್ಳಲು ಪ್ರಯತ್ನ. ಸಾಧಿಸಲೇಬೇಕೆಂಬ ಛಲವಿರುವ ನಿಮಗೆ ಕಾರ್ಯಗಳೆಲ್ಲವೂ ಕಷ್ಟಕರವಾಗಿ ಸಿದ್ಧಿಸಲಿದೆ.

ತುಲಾ: ಅಪವಾದದ ಭೀತಿಗೆ ಒಳಗಾಗದಿರಿ. ಮುಖ್ಯವಾಗಿ ನಿಮ್ಮದಲ್ಲದ ವಸ್ತು, ವಿಚಾರಗಳನ್ನು ನೀವು ಅಪೇಕ್ಷಿಸುವುದು ಸಣ್ಣತನವಾಗುವುದು. ಆಂಜನೇಯನ ಸೇವೆ ಮಾಡುವುದರಿಂದ ಗೊಂದಲ ನಿವಾರಣೆಯಾಗುತ್ತದೆ.

ವೃಶ್ಚಿಕ: ಮಗನಿಗೆ ಉದ್ಯೋಗ ದೊರೆತು ಸಂತೋಷವಾಗುತ್ತದೆ. ಹಣದ ಅಡಚಣೆ ಇರುವುದಿಲ್ಲ. ಒಂಟಿತನ ಹೋಗಲಾಡಿಸಿಕೊಳ್ಳಲು ಕೆಲಸಗಳತ್ತ ಮನಸ್ಸು ಹರಿಸುವಿರಿ. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಅಧ್ಯಯನ ಅಗತ್ಯ.

ಧನು: ಅಕ್ಕಪಕ್ಕದವರನ್ನು ತಾತ್ಸಾರವಾಗಿ ಭಾವಿಸಬೇಡಿ, ಮುಂದೊಂದು ದಿನ ಅವರ ಸಹಾಯ ಬೇಕಾಗಬಹುದು. ಆತ್ಮಗೌರವ ಹೆಚ್ಚಿಸಲು ಒಡಹುಟ್ಟಿದವರ ಸಹಾಯ ದೊರೆಯಲಿದೆ. ಯೋಗಾಭ್ಯಾಸ ಮನೋಲ್ಲಾಸವನ್ನು ಹೆಚ್ಚಿಸುತ್ತದೆ.

ಮಕರ: ಈ ದಿನ ಕೆಲಸದ ಒತ್ತಡದಿಂದ ದೂರಾಗಿ ಮಿತ್ರರೊಡನೆ ಉಲ್ಲಾಸದಿಂದ ಕಾಲ ಕಳೆಯುವಿರಿ. ನಿಮ್ಮ ಸ್ವಕಾರ್ಯ ಹಾಗೂ ಸ್ವಪ್ರತಿಭೆಯಿಂದಲೇ ಪ್ರಭಾವಿತರಾಗುವಂತಾಗಲಿದೆ. ಸಂತಾನ ಅಪೇಕ್ಷಿಗಳಿಗೆ ಸತ್ಫಲ.

ಕುಂಭ: ಕುಟುಂಬ ನಿರ್ವಹಣೆಗೆ ಒಡಹುಟ್ಟಿದವರಿಂದ ಕೊಡುಗೆ ಅಪಾರವಾಗಿರಲಿದೆ. ಖಾಸಗಿ ಸಂಸ್ಥೆಗಳ ಆಡಳಿತಾಧಿಕಾರಿಗಳೊಡನೆ ಫಲಪ್ರದ ಮಾತುಕತೆ. ಉಲ್ಲಾಸ ಹಾಗೂ ಕಾರ್ಯಪ್ರವೃತ್ತಿಯನ್ನು ಹೊಂದುತ್ತೀರಿ.

ಮೀನ: ವಿದ್ಯಾಭ್ಯಾಸದಲ್ಲಿನ ಪ್ರಗತಿಯ ಫಲವಾಗಿ ವಿದ್ಯಾಸಂಸ್ಥೆಗಳಿಂದ ಮನ್ನಣೆ ಪಡೆಯುವಿರಿ. ದುಡುಕುತನದಿಂದ ಕಾರ್ಯಹಾನಿಯಾಗುವ ಸಂಭವ. ಆದ್ದರಿಂದ ತಾಳ್ಮೆ ಅತ್ಯವಶ್ಯ. ಷೇರು ವ್ಯವಹಾರದಲ್ಲಿ ನಷ್ಟವಾಗಬಹುದು.

ಪದಬಂಧ 4921 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸ್ವದೇಶಿ ಔಷಧವಿದು (4)
3.ತತ್ವಗಳನ್ನು ಬಲ್ಲವನು (4)
5.ಎರಡಾಗಿ ಸೀಳಿದುದು (3)
7.ಈತ ನಿರುಪಯುಕ್ತನಾದವನು (4)
9.ನುಡಿಸುವ ಸಾಧನವಿಲ್ಲಿ ಉಲ್ಟಾ ಕಾಣುತ್ತಿದೆ (2)
10.ತಲೆಯಿಂದ ತಲೆಯನ್ನು ತಾಕಿಸುವಿಕೆ (2)
11.ಈಕೆ ಒಡಹುಟ್ಟಿದವಳು (4)
13.ಅಡಿಗೆಗೆ ಬೇಕಾದ ಮಣ್ಣಿನ ಪಾತ್ರೆ (3)
16.ಮೂರು ಮೈಲುಗಳ ಒಂದು ಅಳತೆ (4)
17.ಈಕೆ ವಿದ್ಯಾಧಿದೇವತೆ (4)

ಮೇಲಿಂದ ಕೆಳಕ್ಕೆ
1.ನಾಸ್ತಿಕನ ಮೂಗು! (3)
2.ಮಜವಾಗಿ ಕಾಣುತ್ತಿರುವ ಹಂತ! (3)
3.ತಬ್ಬಿಬ್ಬು ಎಂದು ಹೀಗೆನ್ನಿ (4)
4.ಹುದುಗಿಟ್ಟ ಧನ (2)
6.ಕಾಡಿನಲ್ಲಿ ವಾಸಿಸುವಿಕೆ (4)
7.ಈ ಪರಿಯಲ್ಲಿ ತಪ್ಪಿಸಿಕೊಳ್ಳುವಿಕೆ! (3)
8.ಮಿಡಿ ಹಿಡಿದುಕೊಂಡು ತೋರಿದ ಸಿಟ್ಟು! (4)
12.ಗಿರಿಯ ಕೊನೆಗೆ ಸೆರೆ ಹಿಡಿಯುವುದು (4)
13.ಟಾರ್ ರಸ್ತೆ ಹತ್ತಿರವಿರುವ ಮೋರಿ (3)
14.ಗೆಳೆಯನೊಡನಿರುವ ಸ್ನೇಹಿತೆ (3)
15.ದಂತವಿಲ್ಲಿ ಉಲ್ಟಾಪಲ್ಟಾ ಕಾಣುತ್ತಿದೆಯಲ್ಲಾ? (2)



4920ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉದ್ಘೋಷ
2.ಮನೋಹರ 4.ಹಸಕ್ಷೇಪ
6.ಉಂಬಳಿ 7.ಣೆಜಾ
9.ವಿರಸ 11.ಹದಾ
13.ಮನುಜ 14.ಅಗ್ರಗಣ್ಯ
16.ಭರವಸೆ 17.ಕುಂಬಾರ

ಮೇಲಿಂದ ಕೆಳಕ್ಕೆ:
1.ಉದಾಹರಣೆ 2.ಮತ್ಸ್ಯ
3.ಹಣೆಬರಹ 5.ಪಲ್ಲವಿ
8.ಜಾಮೀನುದಾರ 10.ಸರಳ
12.ದಾಕ್ಷಿಣ್ಯಪರ 15.ಹಸೆ

ಸುಡೊಕು 5307

4		6			8	5		1
	5		2	1			7	
1		2			5	3		8
6		9		2		8		
			5		6			
3		5				2		7
		4				1		2
			1	5				9
9		1			2	7		

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5306 ಸುಡೊಕು

8	3	7	1	9	2	5	6	4
6	1	5	7	3	4	8	2	9
2	9	4	5	6	8	1	3	7
7	6	8	9	5	3	2	4	1
5	2	3	6	4	1	7	9	8
9	4	1	8	2	7	3	5	6
3	7	2	4	8	6	9	1	5
1	5	6	2	7	9	4	8	3
4	8	9	3	1	5	6	7	2

ಷೇರುಪೇಟೆ ವಹಿವಾಟು 575

ಇಂದಿನ ಅಂತ್ಯ	59,035
ಹಿಂದಿನ ಅಂತ್ಯ	59,610

(59800, 59600, 59400, 59200, 59000, 58800; 10:00, 12:00, 14:00, 16:00)

ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	17,807
ಇಂದಿನ ಅಂತ್ಯ	17,639
▼	168
ದಿನದ ಕನಿಷ್ಠ	17,623

ವಿನಿಮಯ ದರ

$ ಡಾಲರ್	75.95
£ ಪೌಂಡ್	99.37
€ ಯುರೊ	82.68
¥ ಯೆನ್ (100ಕ್ಕೆ)	61

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹425
12 ಮೊಟ್ಟೆಗೆ	₹56
ಮೈಸೂರು	
100 ಮೊಟ್ಟೆಗೆ	₹430

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1600 (1610)
ಸೋಯಾ (ರಿಫೈನ್ಡ್)	₹1495 (1500)
ಸೂರ್ಯಕಾಂತಿ (ರಿಫೈನ್ಡ್)	₹1680 (1680)
ಪಾಮೋಲಿನ್	₹1450 (1460)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1200-1400
ಮಧ್ಯಮ	₹800-1200
ಸಣ್ಣ	₹400-800

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹10000-15000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್ಎಸ್ಎಸ್-4	₹169.50
ಆರ್ಎಸ್ಎಸ್-5	₹163.50
ಗುಡ್ ಲಾಟ್	₹159.50

ಬ್ಯಾಂಕಿಂಗ್ ವಂಚನೆ: ಸಿಬಿಐ ತನಿಖೆಗೆ 5 ರಾಜ್ಯಗಳ ಹಿಂದೇಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರತಿಪಕ್ಷಗಳ ಆಡಳಿತ ಇರುವ ಐದು ರಾಜ್ಯಗಳು ಒಟ್ಟು ₹ 21,074 ಕೋಟಿ ಮೊತ್ತದ ಬ್ಯಾಂಕಿಂಗ್ ವಂಚನೆ ಪ್ರಕರಣಗಳ ತನಿಖೆ ನಡೆಸಲು ಸಿಬಿಐಗೆ ಒಪ್ಪಿಗೆ ನೀಡಿಲ್ಲ. ಹೀಗಾಗಿ ಪ್ರಕರಣಗಳ ತನಿಖೆ ಮೂರು ವರ್ಷಗಳಿಂದ ಮುಂದಕ್ಕೆ ಸಾಗಿಲ್ಲ.

ಮಹಾರಾಷ್ಟ್ರ, ಪಂಜಾಬ್, ಪಶ್ಚಿಮ ಬಂಗಾಳ, ಛತ್ತೀಸಗಡ ಮತ್ತು ರಾಜಸ್ಥಾನ ರಾಜ್ಯಗಳು ಪ್ರಕರಣಗಳ ಬಗ್ಗೆ ಸಿಬಿಐ ತನಿಖೆ ನಡೆಸಲು ಒಪ್ಪಿಗೆ ನೀಡಿಲ್ಲ.

ತನಿಖೆಗೆ ಒಪ್ಪಿಗೆ ನೀಡುವಂತೆ ಕೋರಿ 2019ರಿಂದ 2022ರ ಫೆಬ್ರುವರಿ 28ರವರೆಗೆ ಐದು ರಾಜ್ಯಗಳಿಗೆ ಸಿಬಿಐ ಒಟ್ಟು 128 ಮನವಿಗಳನ್ನು ಸಲ್ಲಿಸಿದೆ. ಅವುಗಳಿಗೆ ರಾಜ್ಯಗಳಿಂದ ಒಪ್ಪಿಗೆ ದೊರೆತಿಲ್ಲ ಎಂದು ಸಿಬ್ಬಂದಿ, ಸಾರ್ವಜನಿಕ ವ್ಯಾಜ್ಯ ಮತ್ತು ಪಿಂಚಣಿಗಳ ಸಚಿವಾಲಯವು ಈಚೆಗೆ ರಾಜ್ಯಸಭೆಗೆ ಮಾಹಿತಿ ನೀಡಿದೆ.

ಮಿಜೋರಾಂ, ಕೇರಳ, ಜಾರ್ಖಂಡ್ ಮತ್ತು ಮೇಘಾಲಯ ರಾಜ್ಯಗಳು ಸಹ ಪ್ರಕರಣಗಳನ್ನು ಸಿಬಿಐನಿಂದ ತನಿಖೆ ನಡೆಸುವ ಸಂಬಂಧ ನೀಡಿದ್ದ ಮುಕ್ತ ಅನುಮತಿಯನ್ನು ಹಿಂಪಡೆದಿವೆ. ರಾಜಕೀಯ ಲಾಭಕ್ಕಾಗಿ ಕೇಂದ್ರ ಸರ್ಕಾರವು ತನಿಖಾ ಸಂಸ್ಥೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಈ ರಾಜ್ಯಗಳು ಆರೋಪಿಸಿವೆ.

ಈ ರಾಜ್ಯಗಳಲ್ಲಿ ಪ್ರಕರಣದ ತನಿಖೆ ನಡೆಸಲು ಸಿಬಿಐ ಪ್ರತ್ಯೇಕವಾಗಿ ಅನುಮತಿ ಪಡೆಯುವಂತಾಗಿದೆ.

ಬ್ಯಾಂಕಿಂಗ್ ವಂಚನೆ ಪ್ರಕರಣಗಳಿಗೆ ಸಂಬಂಧಿಸಿದಂತೆ, ತನಿಖೆಗೆ ಅನುಮತಿ ನೀಡುವಂತೆ ಸಿಬಿಐ ಅತಿ ಹೆಚ್ಚಿನ ಮನವಿ ಸಲ್ಲಿಸಿರುವ ರಾಜ್ಯಗಳಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದೆ. ₹ 20,312 ಕೋಟಿ ಮೊತ್ತದ ವಂಚನೆ ಪ್ರಕರಣದ ತನಿಖೆಗೆ ಒಪ್ಪಿಗೆ ನೀಡುವಂತೆ ಸಿಬಿಐ 101 ಮನವಿಗಳನ್ನು ಮಹಾರಾಷ್ಟ್ರ ಸರ್ಕಾರಕ್ಕೆ ಸಲ್ಲಿಸಿದೆ.

ಎಟಿಎಸ್ ಮೂಲಕ ವಾಹನ ದೃಢತೆ ಪರೀಕ್ಷೆ ಮುಂದಿನ ವರ್ಷದಿಂದ ಜಾರಿ

ನವದೆಹಲಿ (ಪಿಟಿಐ): ವಾಹನಗಳ ದೃಢತೆಯನ್ನು ಸ್ವಯಂಚಾಲಿತ ಪರೀಕ್ಷಾ ಕೇಂದ್ರಗಳ (ಎಟಿಎಸ್) ಮೂಲಕ ಪರೀಕ್ಷಿಸಿಕೊಳ್ಳುವುದನ್ನು ಕೇಂದ್ರ ಸರ್ಕಾರವು ಹಂತ ಹಂತವಾಗಿ ಕಡ್ಡಾಯ ಮಾಡಲಿದ್ದು, ಮೊದಲ ಹಂತವು ಮುಂದಿನ ವರ್ಷದ ಏಪ್ರಿಲ್‌ನಿಂದ ಜಾರಿಗೆ ಬರಲಿದೆ.

ಟ್ರಕ್‌ಗಳು ಮತ್ತು ಬಸ್ಸುಗಳ ದೃಢತೆಯನ್ನು ಎಟಿಎಸ್ ಮೂಲಕ ಪರೀಕ್ಷಿಸುವುದು 2023ರ ಏಪ್ರಿಲ್ 1ರಿಂದ ಕಡ್ಡಾಯವಾಗಲಿದೆ. ಮಧ್ಯಮ ಗಾತ್ರದ ಸರಕು ಸಾಗಣೆ ವಾಹನ, ಮಧ್ಯಮ ಗಾತ್ರದ ಪ್ರಯಾಣಿಕ ವಾಹನ (ಮಿನಿ ಬಸ್) ಮತ್ತು ಲಘು ಮೋಟಾರು ವಾಹನಗಳು (ಟ್ಯಾಕ್ಸಿ, ಕ್ಯಾಬ್) 2024ರ ಜೂನ್ 1ರಿಂದ ಎಟಿಎಸ್ ಮೂಲಕ ದೃಢತೆ ಪರೀಕ್ಷಿಸಿಕೊಳ್ಳುವುದು ಕಡ್ಡಾಯವಾಗಲಿದೆ. ವೈಯಕ್ತಿಕ ಬಳಕೆಯ ವಾಹನಗಳ ದೃಢತೆಯನ್ನು ಅವುಗಳಿಗೆ ಹದಿನೈದು ವರ್ಷ ಪೂರ್ಣಗೊಂಡ ನಂತರದಲ್ಲಿ ದೃಢತೆ ಪ್ರಮಾಣಪತ್ರ ನವೀಕರಿಸುವ ಸಂದರ್ಭದಲ್ಲಿ ಎಟಿಎಸ್ ಮೂಲಕ ಪರೀಕ್ಷಿಸಲಾಗುತ್ತದೆ.

ಫೋರ್ಬ್ಸ್ ಪತ್ರಿಕೆಯ ವರದಿ: ಅದಾನಿಗೆ ಎರಡನೇ ಸ್ಥಾನ

ಶ್ರೀಮಂತರ ಪಟ್ಟಿ: ಅಂಬಾನಿ ನಂಬರ್ 1

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೋರ್ಬ್ಸ್ ಪತ್ರಿಕೆಯು ದೇಶದ ಅತ್ಯಂತ ಶ್ರೀಮಂತ ವ್ಯಕ್ತಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಅಧ್ಯಕ್ಷ ಮುಕೇಶ್ ಅಂಬಾನಿ ಅವರು ಮೊದಲ ಸ್ಥಾನದಲ್ಲಿ ಇದ್ದಾರೆ. ಎರಡನೆಯ ಸ್ಥಾನದಲ್ಲಿ ಅದಾನಿ ಸಮೂಹದ ಮುಖ್ಯಸ್ಥ ಗೌತಮ್ ಅದಾನಿ ಇದ್ದಾರೆ.

ಹಿಂದಿನ ವರ್ಷದಲ್ಲಿ ಭಾರತದಲ್ಲಿನ ಶತಕೋಟ್ಯಧೀಶರ ಸಂಖ್ಯೆಯು 140 ಆಗಿತ್ತು. ಈಗ ಅದು 166ಕ್ಕೆ ಏರಿಕೆ ಆಗಿದೆ. ದೇಶದ ಐ.ಟಿ. ವಲಯದ ಆದಾಯವು ದಾಖಲೆಯ ಮಟ್ಟಕ್ಕೆ ಏರಿಕೆ ಆದ ಹೊತ್ತಿನಲ್ಲಿಯೇ ಐ.ಟಿ. ಉದ್ಯಮಿ ಶಿವ ನಾಡಾರ್ ಅವರ ಸಂಪತ್ತು ಮೌಲ್ಯವು ಶೇ 22ರಷ್ಟು ಹೆಚ್ಚಳ ಕಂಡಿದೆ ಎಂದು ಫೋರ್ಬ್ಸ್ ವರದಿ ಹೇಳಿದೆ.

ಸೈರಸ್ ಪೂನಾವಾಲಾ ಮಾಲೀಕತ್ವದ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ದಾಖಲೆಯ ಆದಾಯ ಕಂಡಿದೆ. ಇದರಿಂದಾಗಿ ಪೂನಾವಾಲಾ ಅವರ ಸಂಪತ್ತು ಮೌಲ್ಯವು ಸರಿಸುಮಾರು ಎರಡು ಪಟ್ಟು ಹೆಚ್ಚಾಗಿದ್ದು, ಶ್ರೀಮಂತರ ಪಟ್ಟಿಯಲ್ಲಿ ಅವರು ನಾಲ್ಕು ಸ್ಥಾನಕ್ಕೆ ಮೇಲಕ್ಕೆ ಬಂದಿದ್ದಾರೆ. ಈ ಬಾರಿಯ ಟಾಪ್ 10 ಶ್ರೀಮಂತರ ಪಟ್ಟಿಯಲ್ಲಿ ಸಾವಿತ್ರಿ ಜಿಂದಾಲ್ ಅವರು ಸ್ಥಾನ ಪಡೆದಿದ್ದಾರೆ ಎಂದು ಫೋರ್ಬ್ಸ್ ವರದಿ ಹೇಳಿದೆ.

ದೇಶದ ಟಾಪ್ ಹತ್ತು ಶ್ರೀಮಂತರ ಸಂಪತ್ತಿನ ಮೌಲ್ಯ (₹ ಲಕ್ಷ ಕೋಟಿಗಳಲ್ಲಿ)

	ಹೆಸರು	₹ ಲಕ್ಷ ಕೋಟಿ
1	ಮುಕೇಶ್ ಅಂಬಾನಿ	₹6.89
2	ಗೌತಮ್ ಅದಾನಿ	₹6.83
3	ಶಿವ ನಾಡಾರ್	₹2.18
4	ಸೈರಸ್ ಪೂನಾವಾಲಾ	₹1.84
5	ರಾಧಾಕಿಷನ್ ದಮಾನಿ	₹1.51
6	ಲಕ್ಷ್ಮಿ ಮಿತ್ತಲ್	₹1.35
7	ಸಾವಿತ್ರಿ ಜಿಂದಾಲ್	₹1.34
8	ಕುಮಾರ್ ಬಿರ್ಲಾ	₹1.25
9	ದಿಲೀಪ್ ಶಂಘ್ವಿ	₹1.18
10	ಉದಯ್ ಕೋಟಕ್	₹1.08

ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಸೂಪರ್ ಆ್ಯಪ್ 'ನಿಯು'ಗೆ ಚಾಲನೆ ನೀಡಿದ ಟಾಟಾ

ನವದೆಹಲಿ (ಪಿಟಿಐ): ದಿನಸಿ ಖರೀದಿ, ವಿಮಾನ ಟಿಕೆಟ್ ಕಾಯ್ದಿರಿಸುವಿಕೆ, ಔಷಧ ಖರೀದಿ ಸೇರಿದಂತೆ ಹತ್ತು ಹಲವು ಸೇವೆಗಳನ್ನು ಒಂದೇ ಕಡೆ ಒದಗಿಸುವ ಸೂಪರ್ ಆ್ಯಪ್ 'ನಿಯು'ಗೆ ಟಾಟಾ ಸಮೂಹ ಗುರುವಾರ ಚಾಲನೆ ನೀಡಿದೆ. ಈ ಮೂಲಕ ಅಮೆಜಾನ್, ಫ್ಲಿಪ್‌ಕಾರ್ಟ್ ಕಂಪನಿಗಳು ನೀಡುತ್ತಿರುವ ಇದೇ ಬಗೆಯ ಸೇವೆಗಳಿಗೆ ಸ್ಪರ್ಧೆ ಒಡ್ಡಿದೆ.

ಗ್ರಾಹಕರೇ ಮೊದಲು ಎಂಬ ಧ್ಯೇಯ ಹಾಗೂ ತಂತ್ರಜ್ಞಾನದ ಆಧುನಿಕ ಮೌಲ್ಯಗಳನ್ನು ಈ ಆ್ಯಪ್ ಒಳಗೊಂಡಿದೆ ಎಂದು ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್ ಸಾಮಾಜಿಕ ಜಾಲತಾಣಗಳ ಮೂಲಕ ಅನಿಸಿಕೆ ಹಂಚಿಕೊಂಡಿದ್ದಾರೆ.

ಟಾಟಾ ಸಮೂಹಕ್ಕೆ ಸೇರಿದ ಬಿಗ್‌ಬಾಸ್ಕೆಟ್, 1ಎಂಜಿ, ಏರ್ ಇಂಡಿಯಾ ಆ್ಯಪ್‌ಗಳನ್ನು ಈಗಾಗಲೇ ಬಳಸುತ್ತಿರುವವರು, ಅವುಗಳನ್ನು ತಮ್ಮ ಸ್ಮಾರ್ಟ್‌ಫೋನ್‌ನಿಂದ ಅನ್‌ಇನ್‌ಸ್ಟಾಲ್ ಮಾಡಿ, ನಿಯು ಆ್ಯಪ್ ಇನ್‌ಸ್ಟಾಲ್ ಮಾಡಿಕೊಳ್ಳಬೇಕೇ ಅಥವಾ ಈ ಆ್ಯಪ್‌ಗಳು ಹೊಸ ನಿಯು ಜೊತೆ ಸ್ವಯಂ-ಚಾಲಿತವಾಗಿ ವಿಲೀನ ಆಗುತ್ತವೆಯೇ ಎಂಬುದು ಖಚಿತವಾಗಿಲ್ಲ.

ಇ-ವಾಣಿಜ್ಯ ವಲಯದಲ್ಲಿ ದೊಡ್ಡ ಪಾಲು ಹೊಂದುವ ಉದ್ದೇಶ ಇರಿಸಿಕೊಂಡಿರುವ ಟಾಟಾ ಸಮೂಹವು ನಿಯು ಆ್ಯಪ್‌ಅನ್ನು ಒಂದು ವರ್ಷದಿಂದ ಪರೀಕ್ಷೆಗೆ ಒಳಪಡಿಸಿತ್ತು. 'ಭಾರತದ ಗ್ರಾಹಕರ ಜೀವನವನ್ನು ಇನ್ನಷ್ಟು ಸರಳ-ವಾಗಿಸುವುದು ಹಾಗೂ ಸುಲಭವಾಗಿಸು-ವುದು ನಮ್ಮ ಉದ್ದೇಶ' ಎಂದು ಕೂಡ ಚಂದ್ರಶೇಖರನ್ ಹೇಳಿದ್ದಾರೆ.

ಷೇರುಪೇಟೆಯಲ್ಲಿ ಮೂರನೇ ದಿನವೂ ಕರಡಿ ಕುಣಿತ

ಮುಂಬೈ (ಪಿಟಿಐ): ಜಾಗತಿಕ ಮಾರು-ಕಟ್ಟೆಗಳಲ್ಲಿ ಕಂಡುಬಂದ ಮಾರಾಟದ ಒತ್ತಡದಿಂದಾಗಿ ದೇಶಿ ಷೇರುಪೇಟೆಗಳ ಗುರುವಾರದ ವಹಿವಾಟು ಇಳಿಕೆ ಕಾಣುವಂತಾಯಿತು.

ಎಚ್‌ಡಿಎಫ್‌ಸಿ ಬ್ಯಾಂಕ್, ಎಚ್‌ಡಿಎಫ್‌ಸಿ ಲಿಮಿಟೆಡ್, ಟಿಸಿಎಸ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಗಳ ಷೇರುಗಳು ಲಾಭಗಳಿಕೆಯ ವಹಿವಾಟಿಗೆ ಒಳಗಾದವು. ಇದರಿಂದಾಗಿ ಸತತ ಮೂರನೇ ದಿನವೂ ನಕಾರಾತ್ಮಕ ವಹಿವಾಟು ನಡೆಯಿತು.

ಹಣದುಬ್ಬರ ಮತ್ತು ಕಚ್ಚಾ ತೈಲ ದರ ಏರಿಕೆ ನಿಯಂತ್ರಿಸಲು ಅಮೆರಿಕದ ಕೇಂದ್ರೀಯ ಬ್ಯಾಂಕ್ ಅತ್ಯಂತ ತ್ವರಿತ-ಗತಿಯಲ್ಲಿ ಬಡ್ಡಿದರ ಏರಿಕೆ ಮಾಡುವ ಸೂಚನೆ ನೀಡಿದೆ. ಇದು ವಹಿವಾಟಿನ ಮೇಲೆ ಪರಿಣಾಮ ಉಂಟುಮಾಡಿದೆ ಎಂದು ವರ್ತಕರು ಹೇಳಿದ್ದಾರೆ.

ಆರ್‌ಬಿಐ ಹಣಕಾಸು ನೀತಿ ಸಮಿತಿಯ ನಿರ್ಧಾರಗಳು ಶುಕ್ರವಾರ ಹೊರಬೀಳಲಿದ್ದು, ಹೂಡಿಕೆದಾರರು ಈ ಬಗ್ಗೆ ಹೆಚ್ಚು ಗಮನ ಹರಿಸಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 575 ಅಂಶ ಇಳಿಕೆಯಾಗಿ 59,035 ಅಂಶಗಳಲ್ಲಿ ವಹಿವಾಟು ಅಂತ್ಯವಾಗಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 168 ಅಂಶ ಇಳಿಕೆ ಕಂಡು 17,639 ಅಂಶಗಳಿಗೆ ತಲುಪಿತು.

'ಅಮೆರಿಕದ ಕೇಂದ್ರೀಯ ಬ್ಯಾಂಕ್‌ನ ನಿರ್ಧಾರ ಮತ್ತು ಆರ್‌ಬಿಐನ ಹಣಕಾಸು ನೀತಿಯ ಕುರಿತು ಹೂಡಿಕೆದಾರರು ಹೆಚ್ಚು ಗಮನ ಹರಿಸಿದ್ದಾರೆ. ಇದರಿಂದಾಗಿ ಸತತ ಮೂರನೇ ದಿನವೂ ವಹಿವಾಟು ಇಳಿಕೆ ಕಂಡಿತು' ಎಂದು ಕೋಟಕ್ ಸೆಕ್ಯುರಿಟೀಸ್ ಲಿಮಿಟೆಡ್‌ನ ಈಕ್ವಿಟಿ ರಿಸರ್ಚ್‌ನ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರು-ಕಟ್ಟೆಯಲ್ಲಿ ಬ್ರೆಂಟ್ ಕಚ್ಚಾತೈಲ ದರ ಶೇ 0.93ರಷ್ಟು ಏರಿಕೆ ಕಂಡು ಬ್ಯಾರಲ್‌ಗೆ 102 ಡಾಲರ್‌ಗಳಿಗೆ ತಲುಪಿತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	530
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಚಿತ್ರದುರ್ಗ	
ಆಪಿ	47119-47529
ಬೆಟ್ಟೆ	36159-37579
ಕೆಂಪುಗೋಟು	31600-32000
ರಾಶಿ	46639-47069
ಕಾರ್ಕಳ	
ಹೊಸತು	38000-45000
ಹಳತು	46000-53000
ಪುತ್ತೂರು	
ಕೋಕ	11000-26000
ಹೊಸತು	27500-45000
ಕುಮಟ	
ಚಿಪ್ಪು	24286-30519
ಕೋಕ	14109-29289
ಹಳೆಚಾಲಿ	49299-49609
ಹೊಸಚಾಲಿ	37299-40199
ಸಾಗರ	
ಬಿಳಿಗೋಟು	15319-31299
ಚಾಲಿ	34499-38649
ಕೋಕ	20909-34699
ಕೆಂಪುಗೋಟು	21100-37199
ರಾಶಿ	37199-47499
ಸಿಪ್ಪೆಗೋಟು	4029-22599
ಶಿವಮೊಗ್ಗ	
ಬೆಟ್ಟೆ	47329-50810
ಗೊರಬಲು	18009-34950
ರಾಶಿ	43109-48099
ಸರಕು	52009-75196
ಸಿದ್ದಾಪುರ	
ಬಿಳಿಗೋಟು	23899-31699
ಕೋಕ	22299-29311
ಚಾಲಿ	35509-41199
ಕೆಂಪುಗೋಟು	29689-31269
ರಾಶಿ	42899-47489
ತಟ್ಟಿಬೆಟ್ಟೆ	37609-46609
ಶಿರಸಿ	
ಬೆಟ್ಟೆ	19899-46389
ಬಿಳಿಗೋಟು	19099-33299
ಚಾಲಿ	32399-40928
ರಾಶಿ	38419-48699
ಯಲ್ಲಾಪುರ	
ಬಿಳಿಗೋಟು	26899-32699
ಚಾಲಿ	36099-40799
ಕೋಕ	18899-30969
ಕೆಂಪುಗೋಟು	32869-36209
ರಾಶಿ	47119-52829
ತಟ್ಟಿಬೆಟ್ಟೆ	38969-46800
ರಾಮನಗರ ರೇಷ್ಮೆಗೂಡು	
ಮಿಶ್ರತಳಿ	335-745
ದ್ವಿತಳಿ	360-859

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15900	15700	15800	227.60 ಸೆಂಟ್ಸ್
ಎಸಿ	8260	8000	8400	
ಆರ್‌ಪಿ	9000	9000	9150	ಲಂಡನ್
ಆರ್‌ಸಿ	4120	4000	4125	2093 ಡಾಲರ್ಸ್

ಸಿಎನ್‌ಜಿ ದರ ಹೆಚ್ಚಳ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಸಿಎನ್‌ಜಿ ದರವನ್ನು ಗುರುವಾರ ಪ್ರತಿ ಕೆ.ಜಿ.ಗೆ ₹ 2.50ರಷ್ಟು ಹೆಚ್ಚಿಸಲಾಗಿದೆ. ಇಂದ್ರಪ್ರಸ್ಥ ಗ್ಯಾಸ್ ಲಿಮಿಟೆಡ್‌ನ ಜಾಲತಾಣದಲ್ಲಿ ಇರುವ ಮಾಹಿತಿ ಪ್ರಕಾರ, ಗುರುವಾರದ ದರ ಏರಿಕೆಯಿಂದಾಗಿ ದೆಹಲಿಯಲ್ಲಿ ಸಿಎನ್‌ಜಿ ದರವು ಕೆ.ಜಿ.ಗೆ ₹ 69.11ಕ್ಕೆ ಏರಿಕೆ ಆಗಿದೆ.

ಮುಂಬೈನಲ್ಲಿ ಕೆ.ಜಿ.ಗೆ ₹ 7ರಷ್ಟು ಹೆಚ್ಚಾಗಿ, ₹ 67ಕ್ಕೆ, ಗುಜರಾತ್‌ನಲ್ಲಿ ₹ 6.50ರಷ್ಟು ಹೆಚ್ಚಾಗಿ ₹ 76.98ಕ್ಕೆ ಏರಿಕೆ ಆಗಿದೆ.

ಏರಿಕೆ ಇಲ್ಲ: ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಗುರುವಾರ ಪೆಟ್ರೋಲ್ ಹಾಗೂ ಡೀಸೆಲ್ ದರ ಏರಿಕೆ ಮಾಡಿಲ್ಲ. ಈಚಿನ ದಿನಗಳಲ್ಲಿ ಈ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಪ್ರತಿದಿನವೂ ಹೆಚ್ಚಿಸುತ್ತಿವೆ.

ಇನ್ಫೊಸಿಸ್ ಸಹಭಾಗಿತ್ವದ ಕೇಂದ್ರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐ.ಟಿ. ಸೇವಾ ಕಂಪನಿ ಇನ್ಫೊಸಿಸ್ ಮತ್ತು ರೋಲ್ಸ್ ರಾಯ್ಸ್ ಕಂಪನಿ ಜಂಟಿಯಾಗಿ ನಗರದಲ್ಲಿ ಅಭಿವೃದ್ಧಿಪಡಿಸಿರುವ 'ವೈಮಾಂತರಿಕ್ಷ ಎಂಜಿನಿಯರಿಂಗ್ ಮತ್ತು ಡಿಜಿಟಲ್ ಇನ್ನೊವೇಷನ್ ಕೇಂದ್ರ'ವನ್ನು ಗುರುವಾರ ಚಾಲನೆ ನೀಡಲಾಯಿತು.

ರೋಲ್ಸ್ ರಾಯ್ಸ್ ಕಂಪನಿಗೆ ಸಂಶೋಧನೆ ಮತ್ತು ಅಭಿವೃದ್ಧಿ ಸೇವೆಗಳನ್ನು ಒದಗಿಸಲು ಈ ಕೇಂದ್ರವನ್ನು ಸ್ಥಾಪಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

7-4-2022

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	10000-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1620)
ಒಂದು ವಾರದ ಡೆಲಿವರಿ	1605 (1615)
ಸೋಯಾ ಕಚ್ಚಾ	1440 (1450)
ಪಾಮ್ ವಾರದ ಡೆಲಿವರಿ	1448 (1458)
ಸೂರ್ಯಕಾಂತಿ ಎಣ್ಣೆ ಕಚ್ಚಾ	1600 (1600)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,550 (51,400)
ಬೆಳ್ಳಿ ಕೆ.ಜಿ 66,000 (66,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಉದ್ಯೋಗಾವಕಾಶ

Drivers

HAEID REQUIRES Experienced Educated 4WH Automatic car Driver at Rajajinagar Bangalore. Attractive package & immediate placement Contact 916366443134.

ಕಾರ್ ರೆಂಟಲ್ಸ್ ಕಂಪೆನಿಗೆ ನುರಿತ ವಾಹನ ಚಾಲಕರು ಬೇಕಾಗಿದ್ದಾರೆ. 9008027672 , 9035722476 .

General

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

✓ TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

✓ ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ 10ನೇ,ಪಿಯುಸಿ, ಡಿಗ್ರಿ, ಡಿಪ್ಲೋಮಾದವರು 18,000-56,000/- (ತಕ್ಷಣ ಬೇಕಾಗಿದ್ದಾರೆ) ವಸತಿಯೂಟದೊಂದಿಗೆ 8197650569, 7204396011

✓ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000/-. 9538811223, 9538811104.

REQUIRED URGENTLY BABY SITTERS, HOUSE MADE/HOME NURSE Male/ Female, 24/12 Hours Duty. Contact: 6366883838, 6364557575

Cook

ಹೋಟೆಲಿಗೆ ಸಸ್ಯಾಹಾರ, ಮಾಂಸಾಹಾರ ಅಡುಗೆ ಮಾಡುವರು ಬೇಕಾಗಿದ್ದಾರೆ ಸಂಬಳ 20000/ to 25000K Contact: 9606701007/ 8892501007

Multiple Vacancy

WANTED
1) M.Sc. Hydrogeology with MIS & GIS with 3 years Experience - 15 Nos.
2) BE Civil with MIS & GIS 3 years Experience-15 Nos.
3) MSW with 3 yrs. Exp-15 Nos.
4) MA in Mass communication with 2 years Exp.- 15 Nos
5) M.Sc. Agri. / B.Sc. Agri. / B.Sc. Sericulture, 3 years exp. - 10 Nos.
6) Accountant cum Data Entry Operator -B.Com./ Any degree with 2 years Exp. - 2 Nos.
7) FIELD STAFF - ITI/ Diploma/ PUC/BA, Computer knowledge with 2 Wheeler - 15 Nos.
Send Your CV with all Marks card & convocation certificate to the below mail ID. Place of Work : Devanahalli, Hoskote, Bangalore Dist. and Nelamangala, Project under Minor Irrigation Department.
Interview held on : 9th to 18th April 2022 @ 2:00 pm to 5:00 pm
Mahathma Gandhi Trust (R)
mahatmagandhitrust@gmail.com
0821-2420374
93438 28203
www.mahatmagandhitrust.com

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

✓ ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೆ ಅಣಬೆ ಬೇಸಾಯ, ಕಡಿಮೆ ಜಾಗ ಹಾಗೂ ಕಡಿಮೆ ಖರ್ಚಿನಲ್ಲಿಯೇ ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ. 8431781442/ 8095555516

ವ್ಯಾಪಾರ

Business Offers

Business For Sale

ಮಿನಿ ಆಪಸೆಟ್ ಪ್ರಿಂಟಿಂಗ್‌ಪ್ರೆಸ್ ಮಾರಾಟಕ್ಕಿದೆ ರಯೋಬಿ 3200 MCD ಪ್ರಿಂಟಿಂಗ್ ಮೆಷಿನ್, 32 ಇಂಚಿನ ಕಟಿಂಗ್ ಮೆಷನ್, 13x19 ಲೆಟರ್‌ಪ್ರೆಸ್, DTP ಯುನಿಟ್ -A3 ಪ್ರಿಂಟರ್, ಹಾರ್ಡ್ವೇರ್ಸ್, ಪರ್ಫರೇಷನ್ ಮಾರಾಟಕ್ಕಿದೆ. ಮಹೇಶ್ವರಸ್ವಾಮಿ: 9448839759

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ
ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಶ್ರೀಮತಿ ಜ್ಞಾನಮಲರ್ ನಾಗಮೀನ ರಾಧಾಕೃಷ್ಣನ್ ಕೋಂ ರಾಜಲಿಂಗಂ ವಾಸ: 23/35 ಶ್ರೀ ಲಕ್ಷ್ಮೀ ನಿಲಯ 9ನೇ ಅಡ್ಡ ರಸ್ತೆ, ಕೃಷ್ಣಾಲೇಔಟ್, ಹುಳಿಮಾವು, ಬೆಂಗಳೂರು-560076 ರಲ್ಲಿ ವಾಸವಾಗಿದ್ದು, ಸದರಿಯವರು ಅನುಸೂಚಿಯಲ್ಲಿ ಹೇಳಲಾದ ಸ್ವತ್ತನ್ನು ಅದರ ಹಿಂದಿನ ಮಾಲೀಕರಾದ ಶ್ರೀಮತಿ ಮಾಲಿನಿ ಎಂ., ಕೋಂ ಅಶ್ವತ್ಥರೆಡ್ಡಿ ಕೆ. ಎಸ್ ರವರಿಂದ ದಿನಾಂಕ 14-03-2006 ರಲ್ಲಿ ಖರೀದಿತ ನೋಂದಣಿ ಕ್ರಯ ಪತ್ರ ಸಂಖ್ಯೆ : 32538/04-05 ಈ ಸದರಿ ಅನುಸೂಚಿ ಸ್ವತ್ತನ್ನು ಖರೀದಿಸಬಯಸಿರುತ್ತಾರೆ. ಸಾರ್ವಜನಿಕರಲ್ಲಿ ಯಾರಿಗೇ ಆದರೂ ಸದರೀ ಅನುಸೂಚಿ ಸ್ವತ್ತನ್ನು ಖರೀದಿಸುವ ಬಗ್ಗೆ ಯಾವುದೇ ರೀತಿಯ ಹಕ್ಕು-ಹಿತಾಸಕ್ತಿ ತಂಟೆ-ತಕರಾರು ಆಕ್ಷೇಪಣೆಗಳು ಇದ್ದಲ್ಲಿ, ಅವರ ವಕೀಲರ ಈ ಕೆಳಕಂಡ ವಿಳಾಸಕ್ಕೆ ಸೂಕ್ತವಾದ ದಾಖಲಾತಿಸಾಕ್ಷ್ಯಗಳನ್ನು ಈ ಪ್ರಕಟಣೆಗೊಂಡ 10 ದಿನಗಳೊಳಗಾಗಿ ತಲುಪಿಸತಕ್ಕದ್ದು. ತದನಂತರ ಬಂದ ಆಕ್ಷೇಪಣೆಗಳು ನನ್ನ ಕಕ್ಷಿದಾರರ ಹಿತಾಸಕ್ತಿಗಳಿಗೆ ಬಾಧಕವಾಗುವುದಿಲ್ಲ ಹಾಗೂ ಸದ್ಭಾವಿಕ ಖರೀದಿಯಾಗಿರುತ್ತದೆ ಎಂದು ತಿಳಿಯಿರಿ.
ಅನುಸೂಚಿತ ಸ್ವತ್ತು : ನಿವೇಶನ ಸಂಖ್ಯೆ-11, ಖಾತಾಸಂಖ್ಯೆ-34 ಹುಳಿಮಾವು ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕ್, ಹಾಲಿ ಬಿಬಿಎಂಪಿ ಬೊಮ್ಮನಹಳ್ಳಿ ವಲಯ ಪೂರ್ವ ಪಶ್ಚಿಮ 80 ಅಡಿಗಳು ಉತ್ತರ ದಕ್ಷಿಣ 35 ಅಡಿಗಳು
ಚಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ನಿವೇಶನ-10 ಉತ್ತರಕ್ಕೆ ನಿವೇಶನ ಸಂ.12 ದಕ್ಷಿಣಕ್ಕೆ ರಸ್ತೆ. ಈ ಮಧ್ಯೆ ಇರುವ ನಿವೇಶನ-11 ಖರೀದಿಸಬಯಸುವ ಸ್ವತ್ತು ಆಗಿದ್ದು ಆಕ್ಷೇಪಣೆಗಳು ಇದ್ದಲ್ಲಿ, ಶ್ರೀಮತಿ ಜ್ಞಾನಮಲರ್ ನಾಗಮೀನ ರಾಧಾಕೃಷ್ಣನ್ ಮೊ. 9742023421 ಗೆ ಅಗಲಿ ಅವರ ವಕೀಲರಾದ ಶ್ರೀ ಕೆ. ಭೀಮಣ್ಣ ಮೊ. 9901758998 ರವರ ವಿಳಾಸಕ್ಕೆ ಆಗಲಿ ದಾಖಲಾತಿ ಸಾಕ್ಷಿಯೊಂದಿಗೆ ಆಕ್ಷೇಪಣೆ ಸಲ್ಲಿಸಬಹುದು
ಸಹಿ/- ಕೆ. ಬೀಮಣ್ಣ ವಕೀಲರು

ಭವಿಷ್ಯ

Astrology

★॥ಶ್ರೀದುರ್ಗಾಪರಮೇಶ್ವರಿ॥★ ಆರಾಧನೆಯಿಂದ ಗಂಡಹೆಂಡತಿ ಸಮಸ್ಯೆ, ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಪ್ರೀತಿಯಲ್ಲಿಮೋಸ ಯಾವುದೇ ಸಮಸ್ಯೆಗಳಿಗೆ ಶಾಶ್ವತ ಪರಿಹಾರ. ಶ್ರೀರಾಘವೇಂದ್ರಗುರೂಜಿ. 8050061378

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಧರ್ಮಸ್ಥಳ: 7022443071

★ದೈವಜ್ಞ, ಶ್ರೀದೇವಾನಂದನ್★ ರವರಿಂದ ಸರ್ವತೋಮುಖ ಅಭಿವೃದ್ಧಿ ಸುಖಶಾಂತಿ ಮಹಾವಶೀಕರಣ ಆಕರ್ಷಣ ಮತ್ತು ಶತ್ರು ಕೃತವ್ಯಾಧಿಗಳ ಪರಿಹಾರಕ್ಕೆ ಇಂದೇ ಸಂಪರ್ಕಿಸಿ: 9845005009

ನಂ.1 ವಶೀಕರಣ ಸ್ಪೆಷಲಿಸ್ಟ್ ತಾಂತ್ರಿಕ್: ಸ್ತ್ರೀಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿಮೋಸ, ಗಂಡಹೆಂಡತಿ ಕಲಹ, ನಾಗಸಾಧುಗಳಿಂದ ವಶೀಕರಣ 3ದಿನಗಳಲ್ಲಿ ಪರಿಹಾರ 6360611244

ಸ್ತ್ರೀ-ಪುರುಷ ವಶೀಕರಣ ಇಷ್ಟಪಟ್ಟವರು ನಿಮ್ಮಂತಾಗಲು ನಿಮ್ಮ ಯಾವುದೇ ಕಠಿಣ ಸಮಸ್ಯೆಗಳಿಗೆ ಕಡಿಮೆ ಖರ್ಚಿನಲ್ಲಿ ಒಂದು ದಿನದಲ್ಲಿ ಕೇರಳದಿಂದ ನೇರ ಪರಿಹಾರ.9148890039

ಪ್ರವಾಸ

Travel

ದೆಹಲಿ, ಯಮುನೋತ್ರಿ, ಗಂಗೋತ್ರಿ,ಕೇದಾರ್‌ನಾಥ್, ಬದರಿನಾಥ್ 04.05.2022, 22.05.2022, 04.06.2022 ರಿಂದ 18/14 ದಿನಗಳು. ದೆಹಲಿ,ಆಗ್ರಾ.ಮಥುರಾ ಕಾಶಿ, ಗಯಾ, ಬದರಿನಾಥ,ಕೇದಾರ್‌ನಾಥ್ 01.05.2022 ರಿಂದ 18/13ದಿನಗಳು ಸ್ವಯಂಭೂ,ಹಿಮಲಿಂಗ, ಅಮರನಾಥ್, ವೈಷ್ಣೋದೇವಿ ಕಾಶ್ಮೀರ್22.06.2022, 30.06.2022 ರಿಂದ13/17 ದಿನಗಳು ಸಂಪರ್ಕಿಸಿ: 080-26508925, 9980993631. ಶ್ರೀಚೈತನ್ಯ ಟ್ರಾವಲ್ಸ್, ಚಾಮರಾಜಪೇಟೆ, ಬೆಂಗಳೂರು-18

24 ವರ್ಷಗಳ ಅನುಭವಿ ಪ್ರವಾಸಿ ಸಂಸ್ಥೆಯಿಂದ 11.06.2022 27.06.2022 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆ. 27.05.2022 04.06.2022 ರಿಂದ 8 ದಿನಗಳ ಶಿಮ್ಲಾ,ಕುಲುಮನಾಲಿ, ಚಂಡಿಘಡ್ 07.05.2022, 16.05.2022 ರಿಂದ 7 ದಿನಗಳ ಕಾಶಿ,ಗಯಾ 30.06.2022 09.07.2022 ರಿಂದ 12/8 ದಿನಗಳ ಅಮರನಾಥ್,ಕಾಶ್ಮೀರ್ ಪ್ರವಾಸಗಳು ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು23. 080-23385837 8088887677

15 ದಿನಗಳ ಕಾಶಿ,ದೆಹಲಿ ಪ್ರವಾಸ. 17ದಿನಗಳ ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ಚಾರ್‌ಧಾಮ್ ಮತ್ತು ಜೂನ್ ಜುಲೈನಲ್ಲಿ ಅಮರನಾಥ್ ಪ್ರವಾಸ. ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರ ಸೇವಸಂಘ, ಗಿರಿನಗರ ಬೆಂಗಳೂರು 9916473906 8861111568

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 02/04/22 ದೆಹಲಿ, ವೈಷ್ಣೋದೇವಿ. 14/04/22 ರಾಮೇಶ್ವರಂ, ಕನ್ಯಾಕುಮಾರಿ. 26/05/22 ಕಾಶಿ ವಿಶ್ವನಾಥ, ಜಾರ್ಖಂಡ್ ವೈದ್ಯನಾಥ, ಗಯ. 9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

9ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಜಿ. ಸುಧಾರಾಣಿ
ನೀವು ನಮ್ಮನ್ನಗಲಿ ಇಂದಿಗೆ ಒಂಬತ್ತು ವರ್ಷಗಳು ಕಳೆದವು. ನಿಮ್ಮ ನೆನಪು ಸದಾ ನಮ್ಮ ಹೃದಯಗಳಲ್ಲಿ ಹಚ್ಚಹಸಿರಾಗಿ ಉಳಿದಿದೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುವ
ಪತಿ: ಶ್ರೀ ಎಂ. ತಿಮ್ಮಾರೆಡ್ಡಿ,
ಮಕ್ಕಳು: ಟಿ. ಸ್ಮಿತಾ ಮತ್ತು ಟಿ. ಮಹೇಶ್‌ಬಾಬು ಹಾಗೂ ಮೊಮ್ಮಕ್ಕಳು
ವಿಳಾಸ: ನಂ. 28, 24ನೇ ಮುಖ್ಯರಸ್ತೆ, ಅಂಚೆ ಕಛೇರಿ ಮುಂಭಾಗ, ಅಗರಗ್ರಾಮ, ಸರ್ಜಾಪುರ ರಸ್ತೆ, ಬೆಂಗಳೂರು. ಫೋನ್: 98866 81404

LOOKING TO BUILD, BUY OR SELL A PROPERTY
Please refer Classifieds on Sunday

OBITUARY

CA Shri K Purnachandra Rao (K.P. Rao)
It is with great sadness that we announce the demise of CA Shri K Purnachandra Rao (K.P. Rao) at Bangalore on 7th April 2022.
He taught all of us to work hard, never to give up and live life to the fullest.
Last rites at Mithila, 21/28, Craig Park Layout, M G Road, Bangalore -560 001
Cremation at Wilson Garden crematorium at 2 pm.
Mourned by Family Members, Partners and Staff of K P RAO & CO, Chartered Accountants, Bangalore, Hyderabad, Chennai & Mysore

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮೊದಲ ವಿಕೆಟ್‌ಗೆ ಅಮೋಘ ಜೊತೆಯಾಟವಾಡಿದ ರಾಹುಲ್: ಗೌತಮ್, ಬಿಷ್ಣೋಯಿ ಮೋಡಿ

ಡಿಕಾಕ್ ಅರ್ಧಶತಕ; ಲಖನೌ ಜಯಭೇರಿ

ನವಿ ಮುಂಬೈ (ಪಿಟಿಐ): ಆರಂಭಿಕ ಬ್ಯಾಟರ್, ವಿಕೆಟ್ ಕೀಪರ್ ಕ್ವಿಂಟನ್ ಡಿ ಕಾಕ್ ಅವರ ಸ್ಫೋಟಕ ಅರ್ಧಶತಕ ಮತ್ತು ನಾಯಕ ಕೆ.ಎಲ್.ರಾಹುಲ್ ಜೊತೆಗೆ ಸೇರಿಸಿದ 73 ರನ್‌ಗಳ ಬಲದಿಂದ ಲಖನೌ ಸೂಪರ್ ಜೈಂಟ್ಸ್ ತಂಡ ಭರ್ಜರಿ ಜಯ ಗಳಿಸಿತು.

ಡಿ.ವೈ. ಪಾಟೀಲ್ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಲಖನೌ 6 ವಿಕೆಟ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮಣಿಸಿತು.

150 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಲಖನೌ ತಂಡಕ್ಕೆ ರಾಹುಲ್ ಮತ್ತು ಕ್ವಿಂಟನ್ ಉತ್ತಮ ಅರಂಭ ಒದಗಿಸಿದರು. ರಾಹುಲ್ ಔಟಾದ ನಂತರ ಸತತವಾಗಿ ವಿಕೆಟ್‌ಗಳು ಉರುಳಿದವು. ಆದರೆ ಕ್ವಿಂಟನ್ ಡಿ ಕಾಕ್ ಕ್ರೀಸ್‌ನಲ್ಲಿ ಭದ್ರವಾಗಿ ತಳವೂರಿದರು. 16ನೇ ಓವರ್‌ನಲ್ಲಿ ಕ್ವಿಂಟನ್ ಔಟಾದಾಗ ತಂಡ ಆತಂಕಕ್ಕೆ ಒಳಗಾಯಿತು.

ಕೃಣಾಲ್ ಪಾಂಡ್ಯ ಮತ್ತು ಆಯುಷ್ ಬದೋನಿ ಕೊನೆಯಲ್ಲಿ ಒತ್ತಡ ಮೆಟ್ಟಿನಿಂತು ಆಡಿದರು. ಬದೋನಿ 3 ಎಸೆತಗಳಲ್ಲಿ 10 ರನ್ ಸಿಡಿಸಿ ತಂಡವನ್ನು ಜಯದ ದಡ ಸೇರಿಸಿದರು.

ಪೃಥ್ವಿ ಶಾ ಅರ್ಧಶತಕ: ಟಾಸ್ ಗೆದ್ದ ಲಖನೌ ಸೂಪರ್‌ಜೈಂಟ್ಸ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಪೃಥ್ವಿ ಶಾ ಅರ್ಧಶತಕದ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಗೌರವಯುತ ಮೊತ್ತ ಕಲೆಹಾಕಿತ್ತು.

ಲಖನೌ ತಂಡದ ಬೌಲರ್‌ಗಳ ಶಿಸ್ತಿನ ದಾಳಿಯಲ್ಲಿ ವಿಕೆಟ್‌ಗಳನ್ನು ರಕ್ಷಿಸಿಕೊಳ್ಳಲು ಡೆಲ್ಲಿ ಬ್ಯಾಟರ್‌ಗಳು ಅಬ್ಬರದ ಆಟದ ಬದಲು ಎಚ್ಚರಿಕೆಯಿಂದ ಆಡಿದರು.

ಇನಿಂಗ್ಸ್ ಆರಂಭಿಸಿದ ಪೃಥ್ವಿ ಶಾ ಮತ್ತು ಡೇವಿಡ್ ವಾರ್ನರ್ ಉತ್ತಮ ಅಡಿಪಾಯ ಹಾಕಿದರು. ಆದರೆ, ಇದರಲ್ಲಿ ಪೃಥ್ವಿ(61; 34ಎ) ಅವರದ್ದೇ ಸಿಂಹಪಾಲು. ತಂಡವು ಅವರಿಂದಾಗಿ ಏಳು ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 60 ರನ್‌ಗಳ ಗಡಿ ಮುಟ್ಟಿತು. ಇನ್ನೊಂದು ಬದಿಯಲ್ಲಿದ್ದ ಆಸ್ಟ್ರೇಲಿಯಾದ ಸ್ಫೋಟಕ ಬ್ಯಾಟರ್ ವಾರ್ನರ್ 12 ಎಸೆತಗಳನ್ನು ಆಡಿ ನಾಲ್ಕು ರನ್ ಮಾತ್ರ ಗಳಿಸಿದರು.

ಎಂಟನೇ ಓವರ್‌ನಲ್ಲಿ ಕನ್ನಡಿಗ ಕೃಷ್ಣಪ್ಪ ಗೌತಮ್ ಪೃಥ್ವಿ ಶಾ ವಿಕೆಟ್ ಪಡೆಯುವಲ್ಲಿ ಯಶಸ್ವಿಯಾದರು. ಜೊತೆಯಾಟ ಮುರಿದುಬಿತ್ತು. ಒಂಬತ್ತನೇ ಓವರ್‌ನಲ್ಲಿ ವಾರ್ನರ್ ಮತ್ತು 11ನೇ ಓವರ್‌ನಲ್ಲಿ ರೋವ್ಮನ್ ಪೊವೆಲ್ ವಿಕೆಟ್‌ಗಳನ್ನು ಗಳಿಸಿದ ಸ್ಪಿನ್ನರ್ ರವಿ ಬಿಷ್ಣೋಯಿ ಸಂಭ್ರಮಿಸಿದರು.

ಪಂತ್–ಖಾನ್ ಜೊತೆಯಾಟ: ಈ ಹಂತದಲ್ಲಿ ಜೊತೆಗೂಡಿದ ನಾಯಕ ರಿಷಭ್ ಪಂತ್ (ಔಟಾಗದೆ 39; 36ಎ) ಮತ್ತು ಸರ್ಫರಾಜ್ ಖಾನ್ (ಔಟಾಗದೆ 36; 28ಎ) ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 73 ರನ್‌ಗಳನ್ನು ಸೇರಿಸಿದರು.

ಆದರೆ, ಇವರಿಬ್ಬರೂ ಹೆಚ್ಚು ಬಿರುಸಿನ ಆಟವನ್ನು ಆಡಲು ಬೌಲರ್‌ಗಳು ಅವಕಾಶ ನೀಡಲಿಲ್ಲ. ಅದರಲ್ಲೂ ಗೌತಮ್ ನಾಲ್ಕು ಓವರ್‌ಗಳಲ್ಲಿ 23 ರನ್ ಮತ್ತು ರವಿ 22 ರನ್‌ಗಳನ್ನು ಮಾತ್ರ ಕೊಟ್ಟರು. ಆವೇಶ್ ಖಾನ್ ಮೂರು ಓವರ್‌ಗಳಲ್ಲಿ 31 ರನ್ ಕೊಟ್ಟು ತುಟ್ಟಿಯಾದರು.

ಲಖನೌ ಸೂಪರ್ ಜೈಂಟ್ಸ್ ತಂಡದ ಆರಂಭಿಕ ಬ್ಯಾಟರ್ ಕ್ವಿಂಟನ್ ಡಿ ಕಾಕ್ ಅವರ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್ 3ಕ್ಕೆ 149 (20 ಓವರ್)
ಪೃಥ್ವಿ ಸಿ ಡಿಕಾಕ್ ಬಿ ಗೌತಮ್ 61 (34 ಎ, 4x9, 6x2), ಡೇವಿಡ್ ಸಿ ಬದೋನಿ ಬಿ ರವಿ 4 (12 ಎ), ರೋವ್ಮನ್ ಬಿ ರವಿ 3 (10 ಎ), ರಿಷಭ್ ಔಟಾಗದೆ 39 (36 ಎ, 4x3, 6x2), ಸರ್ಫರಾಜ್ ಔಟಾಗದೆ 36 (28 ಎ, 4x3)
ಇತರೆ (ಲೆಗ್ ಬೈ 2, ವೈಡ್ 4) 6
ವಿಕೆಟ್ ಪತನ: 1-67 (ಪೃಥ್ವಿ ಶಾ, 7.3), 2-69 (ಡೇವಿಡ್ ವಾರ್ನರ್, 8.3), 3-74 (ರೋವ್ಮನ್ ಪೊವೆಲ್, 10.3)
ಬೌಲಿಂಗ್: ಜೇಸನ್ ಹೋಲ್ಡರ್ 4–0–30–0, ಕೃಷ್ಣಪ್ಪ ಗೌತಮ್ 4–1–23–1, ಆವೇಶ್ ಖಾನ್ 3–0–32–0, ರವಿ ಬಿಷ್ಣೋಯಿ 4–0–22–2, ಆ್ಯಂಡ್ರ್ಯು ಟೈ 3–0–28–0, ಕೃಣಾಲ್ ಪಾಂಡ್ಯ 2–0–12–0

ಲಖನೌ ಸೂಪರ್ ಜೈಂಟ್ಸ್ 4ಕ್ಕೆ 155 (19.4 ಓವರ್)
ರಾಹುಲ್ ಸಿ ಶಾ ಬಿ ಕುಲದೀಪ್ 24 (25 ಎ, 4x1, 6x1), ಕ್ವಿಂಟನ್ ಸಿ ಸರ್ಫರಾಜ್ ಬಿ ಕುಲದೀಪ್ 80 (52 ಎ, 4x9, 6x2), ಲೂಯಿಸ್ ಸಿ ಕುಲದೀಪ್ ಬಿ ಲಲಿತ್ 5 (13 ಎ) ದೀಪಕ್ ಸಿ ಅಕ್ಷರ್ ಬಿ ಶಾರ್ದೂಲ್ 11 (13 ಎ), ಕೃಣಾಲ್ ಔಟಾಗದೆ 19 (14 ಎ), ಆಯುಷ್ ಔಟಾಗದೆ 10 (3 ಎ, 4x1, 6x1)
ಇತರೆ (ಲೆಗ್‌ಬೈ 2, ನೋಬಾಲ್ 2, ವೈಡ್ 2) 6
ವಿಕೆಟ್ ಪತನ: 1-73 (ಕೆ.ಎಲ್. ರಾಹುಲ್, 9.4), 2-86 (ಎವಿನ್ ಲೂಯಿಸ್, 12.3), 3-122 (ಕ್ವಿಂಟನ್ ಡಿ ಕಾಕ್, 15.6), 4-145 (ದೀಪಕ್ ಹೂಡಾ, 19.1)
ಬೌಲಿಂಗ್: ಮುಸ್ತಫಿಜುರ್ ರಹಮಾನ್ 4–0–26–0, ಲಲಿತ್ ಯಾದವ್ 4–0–21–1, ಶಾರ್ದೂಲ್ ಠಾಕೂರ್ 3.4–0–29–1, ಆ್ಯನ್ರಿಚ್ ನಾರ್ಕಿಯ 2.2–0–35–0, ಅಕ್ಷರ್ ಪಟೇಲ್ 2–0–11–0, ಕುಲದೀಪ್ ಯಾದವ್ 3.4–0–31–2

ಫಲಿತಾಂಶ: ಲಖನೌ ಸೂಪರ್ ಜೈಂಟ್ಸ್‌ಗೆ 6 ವಿಕೆಟ್‌ಗಳ ಜಯ

ಗುಜರಾತ್ ಟೈಟನ್ಸ್ ಓಟಕ್ಕೆ ಕಿಂಗ್ಸ್ ಸವಾಲು

ಲಿವಿಂಗ್‌ಸ್ಟೋನ್, ಲಾಕಿ ಫರ್ಗ್ಯುಸನ್ ಜಿದ್ದಾಜಿದ್ದಿ ನಿರೀಕ್ಷೆ

ಮುಂಬೈ(ಪಿಟಿಐ): ಆಡಿದ ಎರಡೂ ಪಂದ್ಯಗಳಲ್ಲಿ ಗೆದ್ದಿರುವ ಹಾರ್ದಿಕ್ ಪಾಂಡ್ಯ ನಾಯಕತ್ವದ ಗುಜರಾತ್ ಟೈಟನ್ಸ್ ತಂಡವು ಆತ್ಮವಿಶ್ವಾಸಭರಿತ ಮಯಂಕ್ ಅಗರವಾಲ್ ನೇತೃತ್ವದ ಪಂಜಾಬ್ ಕಿಂಗ್ಸ್ ಎದುರು ಶುಕ್ರವಾರ ಕಣಕ್ಕಿಳಿಯಲಿದೆ.

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಪಂಜಾಬ್ ತಂಡದ ಲಿಯಾಮ್ ಲಿವಿಂಗ್‌ಸ್ಟೋನ್ ಮತ್ತು ಗುಜರಾತ್ ತಂಡದ ಬೌಲರ್ ಲಾಕಿ ಫರ್ಗ್ಯುಸನ್ ಅವರ ನಡುವೆ ಜಿದ್ದಾಜಿದ್ದಿನ ಪೈಪೋಟಿಯ ನಿರೀಕ್ಷೆ ಇದೆ. ಚೆನ್ನೈ ತಂಡದ ಎದುರಿನ ಪಂದ್ಯದಲ್ಲಿ ಲಿಯಾಮ್ ಮಿಂಚಿನ ಅರ್ಧಶತಕ ಬಾರಿಸಿ, ಎರಡು ವಿಕೆಟ್ ಕೂಡ ಗಳಿಸಿದ್ದರು. ಫರ್ಗ್ಯುಸನ್ ಡೆಲ್ಲಿ ಎದುರಿನ ಪಂದ್ಯದಲ್ಲಿ ನಾಲ್ಕು ವಿಕೆಟ್ ಗಳಿಸಿ ಮಿಂಚಿದ್ದರು.

ಗುಜರಾತ್ ತಂಡದಲ್ಲಿ ಫರ್ಗ್ಯುಸನ್ ಮತ್ತು ಮೊಹಮ್ಮದ್ ಶಮಿ ಅವರನ್ನೊಳಗೊಂಡ ಉತ್ತಮ ಬೌಲಿಂಗ್ ಪಡೆ ಇದೆ. ಸ್ಪಿನ್ನರ್ ರಶೀದ್ ಖಾನ್ ಮತ್ತು ವರುಣ್ ಆ್ಯರನ್ ಅವರ ಜೊತೆಗೆ ಇದ್ದಾರೆ. ಬ್ಯಾಟರ್‌ಗಳಾದ ರಾಹುಲ್ ತೆವಾಟಿಯಾ, ಮ್ಯಾಥ್ಯೂ ವೇಡ್, ಶುಭಮನ್ ಗಿಲ್ ಅವರೂ ಉತ್ತಮ ಲಯದಲ್ಲಿದ್ದಾರೆ. ಅದರಿಂದಾಗಿ ತಂಡವು ಗೆಲುವಿನ ಓಟವನ್ನು ಮುಂದುವರಿಸುವ ಛಲದಲ್ಲಿದೆ.

ಆದರೆ ಮೂರು ಪಂದ್ಯಗಳನ್ನು ಆಡಿ ಎರಡರಲ್ಲಿ ಜಯಿಸಿರುವ ಪಂಜಾಬ್ ಕಿಂಗ್ಸ್ ಕೂಡ ಸಮತೋಲನ ತಂಡವನ್ನು ಹೊಂದಿದೆ. ಬ್ಯಾಟರ್ ಮಯಂಕ್, ಶಿಖರ್ ಧವನ್, ಶಾರೂಖ್ ಖಾನ್, ಆಲ್‌ರೌಂಡರ್ ಒಡೀನ್ ಸ್ಮಿತ್, ಭನುಕಾ ರಾಜಪಕ್ಸ ಮತ್ತು ಕಗಿಸೊ ರಬಾಡ ತಂಡದ ಗೆಲುವಿಗೆ ಮಹತ್ವದ ಕಾಣಿಕೆ ನೀಡಬಲ್ಲ ಸಮರ್ಥರಾಗಿದ್ದಾರೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡಗಳನ್ನು ಮಣಿಸಿ ಹುಮ್ಮಸ್ಸಿನಲ್ಲಿರುವ ಪಂಜಾಬ್ ಕಿಂಗ್ಸ್ ತಂಡವು ಹಾರ್ದಿಕ್ ಪಾಂಡ್ಯ ಬಳಗಕ್ಕೆ ಪ್ರಬಲ ಪೈಪೋಟಿ ನೀಡಲು ಸಿದ್ಧವಾಗಿದೆ.

ಪಂದ್ಯ ಆರಂಭ: ರಾತ್ರಿ 7.30ರಿಂದ
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್.



ಲಾಕಿ ಫರ್ಗ್ಯುಸನ್

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	205
ಕ್ವಿಂಟನ್	ಲಖನೌ	149
ಇಶಾನ್	ಮುಂಬೈ	149

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಉಮೇಶ್	ಕೋಲ್ಕತ್ತ	9
ಯಜುವೇಂದ್ರ	ರಾಜಸ್ಥಾನ	7
ಆವೇಶ್ ಖಾನ್	ಲಖನೌ	7

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಕೋಲ್ಕತ್ತ	4	3	1	0	0	6
ಲಖನೌ	4	3	1	0	0	6
ರಾಜಸ್ಥಾನ	3	2	1	0	0	4
ಗುಜರಾತ್	2	2	0	0	0	4
ಪಂಜಾಬ್	3	2	1	0	0	4
ಬೆಂಗಳೂರು	3	2	1	0	0	4
ಡೆಲ್ಲಿ	3	1	2	0	0	2
ಚೆನ್ನೈ	3	0	3	0	0	0
ಮುಂಬೈ	3	0	3	0	0	0
ಹೈದರಾಬಾದ್	2	0	2	0	0	0

*ಗುರುವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಕುಂಬ್ಳೆ–ಕೊಹ್ಲಿ ಪ್ರಕರಣದ ಒಳಸುಳಿ ಬಿಚ್ಚಿಟ್ಟ ರಾಯ್

ನವದೆಹಲಿ(ಪಿಟಿಐ): ಭಾರತ ತಂಡದಲ್ಲಿ ಮುಖ್ಯ ಕೋಚ್ ಆಗಿದ್ದ ತಮ್ಮನ್ನು ಸರಿಯಾಗಿ ನಡೆಸಿಕೊಂಡಿಲ್ಲವೆಂಬ ಭಾವನೆ ಅನಿಲ್ ಕುಂಬ್ಳೆಯವರಲ್ಲಿತ್ತು. ತಂಡದಲ್ಲಿದ್ದ ಅಹಿತಕರ ವಾತಾವರಣದಿಂದಾಗಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವಂತಾಯಿತು. ಅವರು ಅನುಸರಿಸುತ್ತಿದ್ದ ಕಠಿಣ ಶಿಸ್ತಿನ ನಡವಳಿಕೆಯು ತಂಡದಲ್ಲಿ ಅಸಮಾಧಾನ ಮೂಡಲು ಕಾರಣವಾಗಿತ್ತು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಆಡಳಿತಗಾರರ ಸಮಿತಿಯ ಮಾಜಿ ಮುಖ್ಯಸ್ಥ ವಿನೋದ್ ರಾಯ್ ತಮ್ಮ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ.

ವಿನೋದ್ ರಾಯ್ ಬರೆದ 'ನಾಟ್ ಜಸ್ಟ್ ಎ ನೈಟ್ ವಾಚ್‌ಮ್ಯಾನ್: ಮೈ ಇನಿಂಗ್ಸ್ ವಿಥ್ ಬಿಸಿಸಿಐ' ಪುಸ್ತಕವನ್ನು ರೂಪಾ ಪ್ರಕಾಶನವು ಪ್ರಕಟಿಸಿದೆ. ನಿವೃತ್ತ ನ್ಯಾಯಮೂರ್ತಿ ಆರ್.ಎಂ. ಲೋಧಾ ಸಮಿತಿಯ ಶಿಫಾರಸುಗಳನ್ವಯ ರಚಿತವಾದ ನಿಯಮಗಳನ್ನು ಜಾರಿಗೊಳಿಸಲು ಸುಪ್ರೀಂ ಕೋರ್ಟ್‌ನಿಂದ ಆಡಳಿತ ಸಮಿತಿಯನ್ನು ನೇಮಕ ಮಾಡಲಾಗಿತ್ತು. 33 ತಿಂಗಳು ಅಧಿಕಾರದಲ್ಲಿದ್ದ ಅವರು ತಮ್ಮ ಅನುಭವಗಳನ್ನು ಈ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ.

2017ರಲ್ಲಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಭಾರತ ತಂಡ ಸೋತ ಸಂದರ್ಭದಲ್ಲಿಯೂ ಸಿಒಎ ಆಡಳಿತದಲ್ಲಿತ್ತು. ಆ ಸಂದರ್ಭದಲ್ಲಿ ಅನಿಲ್ ಕುಂಬ್ಳೆ ಮತ್ತು ವಿರಾಟ್ ಕೊಹ್ಲಿ ನಡುವೆ ಭಿನ್ನಾಭಿಪ್ರಾಯ ಮೂಡಿತ್ತು. ವಿವಾದದ ರೂಪವನ್ನೂ ಪಡೆದುಕೊಂಡಿತ್ತು. ಕುಂಬ್ಳೆ ರಾಜೀನಾಮೆ ಕೊಟ್ಟು ಹೊರನಡೆದಿದ್ದರು.

ವಿರಾಟ್ ಕೊಹ್ಲಿ ಮತ್ತು ಅನಿಲ್ ಕುಂಬ್ಳೆ



ವಿನೋದ್ ರಾಯ್

'ತಂಡದ ನಾಯಕ ಕೊಹ್ಲಿಯೊಂದಿಗೆ ಆಗ ಮಾತನಾಡಿದಾಗ ಕುಂಬ್ಳೆಯವರ ಅತಿ ಕಠಿಣ ಶಿಸ್ತಿನ ನಿಯಮಗಳಿಂದ ಯುವ ಆಟಗಾರರು ಬೆದರಿದ್ದಾರೆಂದು ಹೇಳಿದ್ದರು. ವ್ಯವಸ್ಥಾಪಕ ಮಂಡಳಿಯ ಕೆಲ ಸದಸ್ಯರೂ ಕೂಡ ಕುಂಬ್ಳೆಯವರದ್ದು ಅತಿಯಾದ ಶಿಸ್ತು ಮತ್ತು ಬಿಗಿ ಧೋರಣೆಯಿಂದ ಆಟಗಾರರು ಬೇಸರಗೊಂಡಿದ್ದಾರೆಂದು ಹೇಳಿದ್ದರು. ಅದಾದ ಕೂಡಲೇ ಲಂಡನ್‌ನಲ್ಲಿ ಕ್ರಿಕೆಟ್ ಸಲಹಾ ಸಮಿತಿ (ಸಿಎಸಿ) ನಡೆಸಿದ ತುರ್ತು ಸಭೆಯಲ್ಲಿ ಇಬ್ಬರನ್ನೂ ಪ್ರತ್ಯೇಕವಾಗಿ ಕರೆಸಿ ಮಾತನಾಡಲಾಗಿತ್ತು. ಮೂರು ದಿನಗಳ ಕಾಲ ಚರ್ಚೆಗಳ ನಂತರ ಕುಂಬ್ಳೆಯವರನ್ನು ಮುಖ್ಯ ಕೋಚ್ ಆಗಿ ಮರುನೇಮಕ ಮಾಡಲು ಶಿಫಾರಸ್ಸು ಮಾಡಲಾಗಿತ್ತು. ಆಗ ಸಮಿತಿಯಲ್ಲಿ ಸಚಿನ್ ತೆಂಡೂಲ್ಕರ್, ಸೌರವ್ ಗಂಗೂಲಿ ಮತ್ತು ವಿವಿಎಸ್ ಲಕ್ಷ್ಮಣ್ ಇದ್ದರು' ಎಂದು ರಾಯ್ ಬರೆದಿದ್ದಾರೆ.

ಆದರೆ, ಕುಂಬ್ಳೆ ಮರುನೇಮಕವಾಗಲಿಲ್ಲ. ಎಲ್ಲವೂ ಕೊಹ್ಲಿಯ ಅಭಿಪ್ರಾಯಗಳಂತೆಯೇ ನಡೆದಿತ್ತು ಎಂಬುದಕ್ಕೆ ನಂತರದ ಬೆಳವಣಿಗೆಗಳೇ ಸಾಕ್ಷಿ.

'ಇಂಗ್ಲೆಂಡ್‌ನಿಂದ ಮರಳಿದ ನಂತರವೂ ಕುಂಬ್ಳೆಯೊಂದಿಗೆ ದೀರ್ಘ ಚರ್ಚೆ ಮಾಡಿದ್ದೆವು. ಇಡೀ ಪ್ರಕರಣದ ಕುರಿತು ಅವರು ಅತೀವ ಬೇಸರಗೊಂಡಿದ್ದರು. ತಮ್ಮನ್ನು ಸರಿಯಾಗಿ ನಡೆಸಿಕೊಂಡಿರಲಿಲ್ಲ ಮತ್ತು ನಾಯಕ ಅಥವಾ ತಂಡಕ್ಕೆ ಅತಿಯಾದ ಮಹತ್ವದ ಕೊಟ್ಟಿದ್ದು ಸರಿಯಲ್ಲವೆಂಬ ಭಾವನೆ ವ್ಯಕ್ತಪಡಿಸಿದ್ದರು. ತಂಡದಲ್ಲಿ ಶಿಸ್ತು ಮತ್ತು ವೃತ್ತಿಪರತೆಯನ್ನು ನೆಲೆಗೊಳಿಸುವುದು ಕೋಚ್ ಕೆಲಸ. ತಂಡದಲ್ಲಿ ಎಲ್ಲರಿಗಿಂತಲೂ ಹಿರಿಯ ವ್ಯಕ್ತಿಯೂ ಆಗಿರುವ ತರಬೇತುದಾರರನ್ನು ಗೌರವಿಸಬೇಕೆಂದಿದ್ದರು' ಎಂದು ವಿನೋದ್ ಬರೆದಿದ್ದಾರೆ.

'ಪ್ರಕರಣದ ಕುರಿತು ಕೊಹ್ಲಿ ಮತ್ತು ಕುಂಬ್ಳೆಯವರು ಮೌನವಾಗಿದ್ದದ್ದು ವಿವೇಕಯುತ ನಡವಳಿಕೆಯಾಗಿತ್ತು. ಈ ವಿಷಯವಾಗಿ ಕುಂಬ್ಳೆ ಸಾರ್ವಜನಿಕವಾಗಿ ಎಲ್ಲಿಯೂ ಮಾತನಾಡಲಿಲ್ಲ. ಇದು ಅವರ ಪ್ರಬುದ್ಧತೆ ಮತ್ತು ಘನತೆಯ ನಡವಳಿಕೆಯಾಗಿತ್ತು' ಎಂದು ಅಭಿಪ್ರಾಯಪಟ್ಟಿದ್ದಾರೆ.

ಕ್ರಿಕೆಟ್: ಶುಭಾಂಗ್ ಮೋಡಿಗೆ ಒಲಿದ ಜಯ

ಜೈಪುರ: ಎಡಗೈ ಬೌಲರ್ ಶುಭಾಂಗ್ ಹೆಗಡೆ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಕರ್ನಾಟಕ ತಂಡವು ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 121 ರನ್‌ಗಳಿಂದ ಉತ್ತರಾಖಂಡ ವಿರುದ್ಧ ಜಯಿಸಿತು.

ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಕರ್ನಾಟಕವು ಮೊದಲ ಇನಿಂಗ್ಸ್‌ನಲ್ಲಿ 10 ರನ್‌ಗಳ ಮುನ್ನಡೆ ಗಳಿಸಿತ್ತು. ಎರಡನೇ ಇನಿಂಗ್ಸ್‌ನಲ್ಲಿ 172 ರನ್‌ಗಳಿಗೆ ಆಲೌಟ್ ಆಗಿತ್ತು ಕಿಶನ್ ಬೆದರೆ (72; 198ಎ, 4X6, 6X1) ಮತ್ತೊಂದು ಅರ್ಧಶತಕ ಹೊಡೆದರು.

182 ರನ್‌ಗಳ ಗುರಿ ಬೆನ್ನಟ್ಟಿದ ಉತ್ತರಾಖಂಡ ತಂಡವನ್ನು ಶುಭಾಂಗ್ (23ಕ್ಕೆ7) ಮತ್ತು ರೋಹಿತ್ ಕುಮಾರ್ (33ಕ್ಕೆ3) ಕಟ್ಟಿಹಾಕಿದರು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: ಮೊದಲ ಇನಿಂಗ್ಸ್: 66 ಓವರ್‌ಗಳಲ್ಲಿ 246, **ಉತ್ತರಾಖಂಡ:** 84.1 ಓವರ್‌ಗಳಲ್ಲಿ 236. **ಎರಡನೇ ಇನಿಂಗ್ಸ್: ಕರ್ನಾಟಕ:** 66.2 ಓವರ್‌ಗಳಲ್ಲಿ 172 (ಕಿಶನ್ ಬೆದರೆ 72, ಹಿಮಾಂಶು ಬಿಷ್ಟ್ 50ಕ್ಕೆ3, ಮನೀಷ್ ಕುಮಾರ್ 53ಕ್ಕೆ4), **ಉತ್ತರಾಖಂಡ:** 25.2 ಓವರ್‌ಗಳಲ್ಲಿ 61 (ಅಖಿಲ್ ಸಿಂಗ್ ರಾವತ್ ಔಟಾಗದೆ 38, ಶುಭಾಂಗ್ ಹಗಡೆ 23ಕ್ಕೆ7, ಎ.ಸಿ. ರೋಹಿತ್ ಕುಮಾರ್ 33ಕ್ಕೆ3) ಫಲಿತಾಂಶ: ಕರ್ನಾಟಕ ತಂಡಕ್ಕೆ 121 ರನ್‌ಗಳ ಜಯ.

ಭಾರತ ಮಹಿಳೆಯರಿಗೆ ಸೆಮಿಫೈನಲ್ ಕನಸು

ಪೊಚೆಫ್‌ಸ್ಟ್ರೂಮ್ (ಪಿಟಿಐ): ಭಾರತ ತಂಡ ಜೂನಿಯರ್ ಮಹಿಳೆಯರ ವಿಶ್ವಕಪ್ ಹಾಕಿ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಕೊರಿಯಾವನ್ನು ಶುಕ್ರವಾರ ಎದುರಿಸಲಿದೆ.

ಮೂರು ಪಂದ್ಯಗಳಲ್ಲಿ ಒಟ್ಟು 9 ಪಾಯಿಂಟ್‌ಗಳನ್ನು ಕಲೆ ಹಾಕಿರುವ ಭಾರತ ತಂಡ 'ಡಿ' ಗುಂಪಿನ ಅಗ್ರಸ್ಥಾನದಲ್ಲಿದೆ. ವೇಲ್ಸ್ ವಿರುದ್ಧ 5–1ರಲ್ಲಿ, ಜರ್ಮನಿ ಎದುರು 2–1ರಲ್ಲಿ ಮತ್ತು ಮಲೇಷ್ಯಾ ವಿರುದ್ಧ 4–0ಯಿಂದ ತಂಡ ಜಯ ಗಳಿಸಿದೆ.

ಕೊರಿಯಾ ಖಾತೆಯಲ್ಲಿ ಕೇವಲ 3 ಪಾಯಿಂಟ್‌ಗಳು ಇವೆ. ಅದರೆ ಉತ್ತಮ ಗೋಲು ಸರಾಸರಿಯಿಂದಾಗಿ 'ಸಿ' ಗುಂಪಿನಲ್ಲಿ ಎರಡನೇ ಸ್ಥಾನ ಗಳಿಸಲು ಅದಕ್ಕೆ ಸಾಧ್ಯವಾಗಿದೆ.

ಕೊರಿಯಾ ಎದುರು ಈ ವರೆಗೆ ಆಡಿರುವ 13 ಪಂದ್ಯಗಳ ಪೈಕಿ ಭಾರತ 11ರಲ್ಲಿ ಜಯ ಗಳಿಸಿದೆ. ಆದ್ದರಿಂದ ಶುಕ್ರವಾರದ ಪಂದ್ಯದಲ್ಲೂ ಸುಲಭ ಜಯ ಸಾಧಿಸುವ ಹುಮ್ಮಸ್ಸಿನಲ್ಲಿದೆ.

ಒಲಿಂಪಿಕ್ಸ್‌ನಲ್ಲಿ ಆಡಿದ ಅನುಭವವಿರುವ ನಾಯಕಿ ಸಲಿಮಾ ಟೆಟೆ, ಸ್ಟ್ರೈಕರ್‌ಗಳಾದ ಶರ್ಮಿಳಾ ದೇವಿ ಮತ್ತು ಲಾಲ್‌ರೆಮ್ಸಿಯಾಮಿ ಅವರ ಬಲ ಭಾರತ ತಂಡಕ್ಕಿದೆ.

ಯುವ ಆಟಗಾರ್ತಿ ಮುಮ್ತಾಜ್ ಖಾನ್ 5 ಗೋಲು ಗಳಿಸಿ ದ್ದಾರೆ. ಮಲೇಷ್ಯಾ ಎದುರಿನ ಪಂದ್ಯದಲ್ಲಿ ಹ್ಯಾಟ್ರಿಕ್‌ನೊಂದಿಗೆ ಮಿಂಚಿದ್ದಾರೆ.

ಲಾಲ್‌ರೆಮ್ಸಿಯಾಮಿ ಮತ್ತು ಲಾಲ್‌ರಿಂಡಿಕಿ ಕೂಡ ತಂಡದ ಭರವಸೆ ಎನಿಸಿದ್ದಾರೆ. ಅವರು ತಲಾ ಎರಡು ಗೋಲು ಗಳಿಸಿದ್ದಾರೆ. ಸಂಗೀತಾ ಕುಮಾರಿ ಮತ್ತು ಡ್ರ್ಯಾಗ್ ಫ್ಲಿಕ್ಕರ್ ದೀಪಿಕಾ ಒಂದೊಂದು ಗೋಲು ಗಳಿಸಿ ತಂಡದಲ್ಲಿ ನಿರೀಕ್ಷೆ ಮೂಡಿಸಿದ್ದಾರೆ. ಉಪನಾಯಕಿ ಇಶಿಕಾ ಚೌಧರಿ ಅವರ ಮೇಲೆಯೂ ಭರವಸೆ ಇದೆ.

ಕ್ವಾರ್ಟರ್ ಫೈನಲ್ ಹಣಾಹಣಿ

ಭಾರತ–ಕೊರಿಯಾ
ಆರಂಭ: ಮಧ್ಯಾಹ್ನ 12.30

ನೆದರ್ಲೆಂಡ್ಸ್–ದಕ್ಷಿಣ ಆಫ್ರಿಕಾ
ಆರಂಭ: ಮಧ್ಯಾಹ್ನ 2.45

ಇಂಗ್ಲೆಂಡ್–ಅಮೆರಿಕ
ಆರಂಭ: ರಾತ್ರಿ 7.15

ಅರ್ಜೆಂಟೀನಾ–ಜರ್ಮನಿ
ಆರಂಭ: ರಾತ್ರಿ 9.30

(ಸಮಯ: ಭಾರತೀಯ ಕಾಲಮಾನ)
ನೇರ ಪ್ರಸಾರ
https://watch.hockey

ನಿತೀಶ್ ರಾಣಾ

ರಾಣಾಗೆ ದಂಡ; ಬೂಮ್ರಾಗೆ ವಾಗ್ದಂಡನೆ

ಮುಂಬೈ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಬ್ಯಾಟರ್ ನಿತೀಶ್ ರಾಣಾ ಅವರಿಗೆ ಪಂದ್ಯದ ಸಂಭಾವನೆಯ ಶೇ 10ರಷ್ಟು ದಂಡ ಮತ್ತು ಮುಂಬೈ ಇಂಡಿಯನ್ಸ್ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರಿಗೆ ಎಚ್ಚರಿಕೆ ನೀಡಲಾಗಿದೆ.

ಬುಧವಾರ ನಡೆದ ಕೊಲ್ಕತ್ತ ಮತ್ತು ಮುಂಬೈ ನಡುವಣ ಪಂದ್ಯದಲ್ಲಿ ಇವರಿಬ್ಬರೂ ಲೆವಲ್ –1 ನಿಯಮ ಉಲ್ಲಂಘನೆ ಮಾಡಿದ್ದರು ಎಂದು ಐಪಿಎಲ್ ಆಡಳಿತ ಸಮಿತಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಿತೀಶ್ ಮತ್ತು ಬೂಮ್ರಾ ಅವರು ತಮ್ಮ ತಪ್ಪನ್ನು ವಿಚಾರಣೆ ಸಂದರ್ಭದಲ್ಲಿ ಒಪ್ಪಿಕೊಂಡಿದ್ದಾರೆ. ಅಶಿಸ್ತಿನ ವರ್ತನೆಗಾಗಿ ಈ ದಂಡ ವಿಧಿಸಲಾಗಿದೆ.

ಟೆಸ್ಟ್, ಏಕದಿನ ಕ್ರಿಕೆಟ್‌ಗೆ ಮಿಗ್ನಾನ್ ವಿದಾಯ

ಜೋಹಾನ್ಸ್‌ಬರ್ಗ್ (ಪಿಟಿಐ): ದಕ್ಷಿಣ ಆಫ್ರಿಕಾ ಮಹಿಳಾ ಕ್ರಿಕೆಟ್ ತಂಡದ ಬ್ಯಾಟರ್ ಮಿಗ್ನಾನ್ ಡು ಪ್ರೀಜ್ ಅವರು ಏಕದಿನ ಮತ್ತು ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿದ್ದಾರೆ.

ಈಚೆಗೆ ನಡೆದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವು ಲೀಗ್ ಹಂತದಲ್ಲಿ ಹೊರಬೀಳಲು ದಕ್ಷಿಣ ಆಫ್ರಿಕಾ ಎದುರು ಸೋಲು ಕಾರಣವಾಗಿತ್ತು. ಆ ಪಂದ್ಯದಲ್ಲಿ ಮಿಗ್ನಾನ್ ಅಮೋಘ ಬ್ಯಾಟಿಂಗ್ ಮೂಲಕ ತಮ್ಮ ತಂಡದ ಗೆಲುವಿನ ರೂವಾರಿಯಾಗಿದ್ದರು.

ಭವಿಷ್ಯದಲ್ಲಿ ಟಿ20 ಕ್ರಿಕೆಟ್ ಮೇಲೆ ಸಂಪೂರ್ಣ ಗಮನ ಕೇಂದ್ರಿಕರಿಸುವುದಾಗಿ 32 ವರ್ಷದ ಮಿಗ್ನಾನ್ ತಿಳಿಸಿದ್ದಾರೆ.

'ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಅವಕಾಶ ಪಡೆದ ಅದೃಷ್ಟಶಾಲಿ ನಾನಾಗಿದ್ದೇನೆ. ಬಹಳಷ್ಟು ಸುಂದರವಾದ ನೆನಪುಗಳು ನನ್ನದಾಗಿವೆ. ನನ್ನ ಕುಟುಂಬಕ್ಕೆ ಹೆಚ್ಚು ಸಮಯ ಕೊಡುವೆ ಮತ್ತು ಚುಟುಕು ಕ್ರಿಕೆಟ್ ಮಾದರಿಯಲ್ಲಿ ಆಡುವೆ' ಎಂದು ಮಿಗ್ನಾನ್ ತಿಳಿಸಿದ್ದಾರೆ.

'ದೀರ್ಘ ಮಾದರಿಯ ಕ್ರಿಕೆಟ್‌ಗೆ ವಿದಾಯ ಹೇಳಲು ಇದು ಸಕಾಲವಾಗಿದೆ. ದಕ್ಷಿಣ ಆಫ್ರಿಕಾದ ಮಹಿಳಾ ಕ್ರಿಕೆಟ್ ತಂಡವು ಉತ್ತಮವಾಗಿದೆ. ಯುವಪೀಳಿಗೆಗೆ ಅವಕಾಶಗಳು ಹೆಚ್ಚು ಸಿಗಬೇಕು' ಎಂದು ಹೇಳಿದ್ದಾರೆ.

2007ರಲ್ಲಿ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಮಿಗ್ನಾನ್ 154 ಪಂದ್ಯಗಳನ್ನು ಆಡಿದ್ದಾರೆ. 46 ಪಂದ್ಯಗಳಲ್ಲಿ ನಾಯಕಿಯಾಗಿ ತಂಡವನ್ನು ಮುನ್ನಡೆಸಿದ್ದಾರೆ.

ಮಿಗ್ನಾನ್ ಡು ಪ್ರೀಜ್

ಏಕದಿನ ಕ್ರಿಕೆಟ್‌ನಲ್ಲಿ 3760 ರನ್ ಗಳಿಸಿದ್ದಾರೆ. ಅವರು ದಕ್ಷಿಣ ಆಫ್ರಿಕಾದ ಅತಿ ಹೆಚ್ಚು ರನ್ ಗಳಿಸಿರುವ ಬ್ಯಾಟರ್ ಆಗಿದ್ದಾರೆ. ಅದರಲ್ಲಿ ಎರಡು ಶತಕ ಮತ್ತು 18 ಅರ್ಧಶತಕಗಳಿವೆ.

2014ರಲ್ಲಿ ಅವರು ಭಾರತದ ಎದುರು ಟೆಸ್ಟ್‌ನಲ್ಲಿ ಪದಾರ್ಪಣೆ ಮಾಡಿದ್ದು, ಆ ಪಂದ್ಯದಲ್ಲಿ ಶತಕ ಕೂಡ ಗಳಿಸಿದ್ದರು. ಅದರ ನಂತರ ದಕ್ಷಿಣ ಆಫ್ರಿಕಾ ತಂಡವು ಟೆಸ್ಟ್ ಪಂದ್ಯ ಆಡಿಲ್ಲ.

108 ಅಂತರರಾಷ್ಟ್ರೀಯ ಟಿ20 ಪಂದ್ಯಗಳಲ್ಲಿಯೂ ಅವರು ಆಡಿದ್ದಾರೆ.

ಕೊರಿಯಾ ಓಪನ್: ಲಕ್ಷ್ಯ ಸೇನ್, ಬಾಂಸೊಡ್‌ಗೆ ನಿರಾಶೆ

ಸಿಂಧು, ಶ್ರೀಕಾಂತ್ ಜಯಭೇರಿ

ಸಂಚ್ಯೊನ್, ಕೊರಿಯಾ (ಪಿಟಿಐ): .ವಿ.ಸಿಂಧು ಮತ್ತು ಕಿದಂಬಿ ಶ್ರೀಕಾಂತ್ ಅವರು ಕೊರಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಸಿಂಧು 26ನೇ ಕ್ರಮಾಂಕದ ಆಟಗಾರ್ತಿ ಅಯಾ ಒಹೊರಿ ವಿರುದ್ಧ 21–15, 21–10ರಲ್ಲಿ ಜಯ ಗಳಿಸಿದರು. ಈ ಮೂಲಕ ಜಪಾನ್ ಆಟಗಾರ್ತಿ ಎದುರು ಈ ವರೆಗೆ ಆಡಿದ ಎಲ್ಲ 12 ಪಂದ್ಯಗಳನ್ನೂ ಗೆದ್ದ ಸಾಧನೆ ತಮ್ಮದಾಗಿಸಿಕೊಂಡರು.

ಶ್ರೀಕಾಂತ್ ಅವರು ಇಸ್ರೇಲ್‌ನ ಮಿಶಾ ಜಿಲ್ಬರ್ಮನ್ ಎದುರು 21–18, 21–6ರಲ್ಲಿ ಗೆದ್ದರು. ಆದರೆ ಲಕ್ಷ್ಯ ಸೇನ್ ಎರಡನೇ ಸುತ್ತಿನಲ್ಲಿ ಸೋತು ಹೊರಬಿದ್ದರು.

ಮೂರನೇ ಶ್ರೇಯಾಂಕಿತೆ ಪಿ.ವಿ. ಸಿಂಧು ಎಂಟರ ಘಟ್ಟದ ಪಂದ್ಯದಲ್ಲಿ ಥಾಯ್ಲೆಂಡ್‌ನ ಬುಸನಾನ್ ಒಂಗಬ ಮ್ರುಂಫನ್ ಅವರನ್ನು ಎದುರಿಸುವರು. ಕಳೆದ ತಿಂಗಳಲ್ಲಿ ನಡೆದ ಸ್ವಿಸ್ ಓಪನ್ ಟೂರ್ನಿಯ ಫೈನಲ್‌ನಲ್ಲಿ ಅವರನ್ನು ಸಿಂಧು ಮಣಿಸಿದ್ದರು. ಬುಸನಾನ್ ಎದುರು ಈ ವರೆಗೆ ಅಡಿರುವ 17 ಪಂದ್ಯಗಳ ಪೈಕಿ 16ರಲ್ಲಿ ಸಿಂಧು ಜಯ ಗಳಿಸಿದ್ದಾರೆ.

ಕಿದಂಬಿಗೆ ಸನ್ ವ್ಯಾನ್ ಹೊ ಎದುರಾಳಿ: ಕಿದಂಬಿ ಶ್ರೀಕಾಂತ್ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ ಸ್ಥಳೀಯ ಆಟಗಾರ ಹಿಂದೆ ಒಂದನೇ ಸ್ಥಾನ ಅಲಂಕರಿಸಿದ್ದ ಸನ್ ವ್ಯಾನ್ ಹೊ ಎದುರು ಸೆಣಸುವರು.

ಲಕ್ಷ್ಯ ಸೇನ್ 20–22, 9–21ರಲ್ಲಿ ವಿಶ್ವ ಕ್ರಮಾಂಕದಲ್ಲಿ 24ನೇ ಸ್ಥಾನದಲ್ಲಿರುವ ಶೆಸರ್ ಹಿರೆನ್ ರುಟ್ಸವಿಟೊಗೆ ಮಣಿದರು. ಮಹಿಳಾ ವಿಭಾಗದಲ್ಲಿ ಮಾಳವಿಕಾ ಬಾಂಸೊಡ್ ಕೂಡ ಸೋತು ಹೊರಬಿದ್ದರು. ಥಾಯ್ಲೆಂಡ್‌ನ ಪೋರ್ನಪಾವಿ ಚೊಚುವಾಂಗ್ ಎದುರು ಅವರು 8–21, 14–21ರಲ್ಲಿ ಸೋತರು.

ಪುರುಷರ ಡಬಲ್ಸ್‌ನಲ್ಲಿ ವಿಶ್ವ ಕ್ರಮಾಂಕದ ಏಳನೇ ಸ್ಥಾನದಲ್ಲಿರುವ ಸಾತ್ವಿಕ್ ಸಾಯಿರಾಜ್ ರಣಕಿ ರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಸಿಂಗಪುರದ ಹೀ ಯಾಂಗ್ ಕಾಯ್ ಟೆರಿ ಮತ್ತು ಲೊಹ್ ಕೀನ್ ಹೀನ್ ಜೋಡಿಯನ್ನು 21-15, 21-19ರಲ್ಲಿ ಮಣಿಸಿದರು. 36 ನಿಮಿಷಗಳ ಈ ಪಂದ್ಯದ ಗೆಲುವಿನ ಮೂಲಕ ಭಾರತದ ಜೋಡಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು. ಮಿಶ್ರ ಡಬಲ್ಸ್‌ನಲ್ಲಿ ಸುಮೀತ್ ರೆಡ್ಡಿ ಮತ್ತು ಅಶ್ವಿನಿ ಪೊನ್ನಪ್ಪ ಅವರು 20-22, 21-18, 14-21ರಲ್ಲಿ ಐದನೇ ಶ್ರೇಯಾಂಕದ ಚೀನಾ ಜೋಡಿ ಒವು ಕ್ಸುವಾನ್ ಯಿ ಮತ್ತು ಹ್ವಾಂಗ್ ಯಾ ಕಿಯಾಂಗ್ ಅವರಿಗೆ ಮಣಿದರು. ಪುರುಷರ ಡಬಲ್ಸ್‌ನಲ್ಲಿ ಅರ್ಜುನ್ ಮತ್ತು ಧ್ರುವ ಕಪಿಲ ಅವರು ಎರಡನೇ ಶ್ರೇಯಾಂಕದ ಇಂಡೊನೇಷ್ಯಾ ಆಟಗಾರರಾದ ಮೊಹಮ್ಮದ್ ಅಹ್ಸನ್ ಮತ್ತು ಹೇಂದ್ರ ಸೇತ್ಯವಾನ್ ಎದುರಿನ ಪಂದ್ಯದಲ್ಲಿ 5–8ರ ಹಿನ್ನಡೆ ಅನುಭವಿಸಿದ್ದ ಸಂದರ್ಭದಲ್ಲಿ ನಿವೃತ್ತಿ ಪಡೆದರು.

ಪಿ.ವಿ.ಸಿಂಧು –ಪಿಟಿಐ ಚಿತ್ರ

ಮಂಗಳೂರಿನಲ್ಲಿ ದೇಶದ ಎರಡನೇ ರಾಷ್ಟ್ರೀಯ ಆಯುಷ್ ಕ್ರೀಡಾ ಔಷಧ ಕೇಂದ್ರ

ಕ್ರೀಡಾಪಟುಗಳಿಗೆ ಆಯುಷ್ ಚಿಕಿತ್ಸಾ ಸ್ಪರ್ಶ

• ಮಹೇಶ ಎಸ್. ಕನ್ನೇಶ್ವರ

ಮಂಗಳೂರು: ರಾಷ್ಟ್ರೀಯ ಆಯುಷ್ ಅಭಿಯಾನ ಯೋಜನೆಯಡಿ ಮಂಗಳೂರಿನಲ್ಲಿ ಕ್ರೀಡಾಪಟುಗಳಿಗಾಗಿಯೇ ಪ್ರತ್ಯೇಕ ರಾಷ್ಟ್ರೀಯ ಆಯುಷ್ ಕ್ರೀಡಾ ಔಷಧ ಕೇಂದ್ರ (ಆಯುಷ್ ಸ್ಪೋರ್ಟ್ಸ್ ಮೆಡಿಸಿನ್ ಸೆಂಟರ್) ಶೀಘ್ರದಲ್ಲೇ ಆರಂಭವಾಗಲಿದೆ.

ಇದು ರಾಜ್ಯದ ಮೊದಲ ಮತ್ತು ದೇಶದ ಎರಡನೇ ಕೇಂದ್ರವಾಗಲಿದೆ. ಕೇರಳದ ತ್ರಿಶೂರ್‌ನಲ್ಲಿ ಈಗಾಗಲೇ ಇಂಥ ಕೇಂದ್ರವೊಂದು ಕಾರ್ಯಾರಂಭ ಮಾಡಿದೆ.

ರಾಷ್ಟ್ರೀಯ ಆಯುಷ್ ಕ್ರೀಡಾ ಔಷಧ ಕೇಂದ್ರ ಆರಂಭಕ್ಕೆ ಜಿಲ್ಲಾ ಆಯುಷ್ ಇಲಾಖೆ ಸಲ್ಲಿಸಿದ ಪ್ರಸ್ತಾವಕ್ಕೆ ಕೇಂದ್ರ ಆಯುಷ್ ಸಚಿವಾಲಯವು ಹಸಿರು ನಿಶಾನೆ ನೀಡಿದೆ. ಇದಕ್ಕಾಗಿ ₹2.50 ಕೋಟಿ ಅನುದಾನ ಬಿಡುಗಡೆ ಆದೇಶವೂ ಬಂದಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಈ ಕೇಂದ್ರ ಕಾರ್ಯ ನಿರ್ವಹಿಸಲಿದೆ. ಇದು ಕ್ರೀಡಾಪಟುಗಳಿಗಾಗಿಯೇ ಇರುವ ಕೇಂದ್ರವಾಗಿದ್ದು, ಅವರ ದೈಹಿಕ ಕ್ಷಮತೆ (ಫಿಟ್‌ನೆಸ್) ಕಾಪಾಡುವುದು ಮತ್ತು ರೋಗನಿರೋಧಕ ಶಕ್ತಿ ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲಿದೆ. ಕ್ರೀಡಾಪಟುಗಳ ಕಾರ್ಯಕ್ಷಮತೆ ಹಾಗೂ ಆತ್ಮವಿಶ್ವಾಸ ಹೆಚ್ಚಿಸಿ, ಉತ್ತಮ ಸಾಧನೆ ಮಾಡಲು ನೆರವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕ್ರೀಡಾಪಟುಗಳ ಆರೋಗ್ಯ ರಕ್ಷಣೆಗೆ ಬೇಕಾದ ಮಾಹಿತಿ, ಮಾರ್ಗದರ್ಶನ, ಅನುಸರಿಸಬೇಕಾದ ದಿನಚರಿ ಸೇರಿದಂತೆ ವಿವಿಧ ಮಾಹಿತಿಗಳನ್ನು ತಜ್ಞ ವೈದ್ಯರು ನೀಡುವರು. ಆಹಾರ ಕ್ರಮ, ಅಭ್ಯಾಸ, ದೈಹಿಕ, ಮಾನಸಿಕ ಆರೋಗ್ಯ ಕಾಪಾಡುವುದು.

ಈ ಕೇಂದ್ರದ ಹೊಣೆ ಆಗಿದೆ. ಮಂಗಳೂರಿನ ಹ್ಯಾಟ್‌ಹಿಲ್ ಆಯುಷ್ ಕೇಂದ್ರ ಅಥವಾ ವೆನ್ಲಾಕ್ ಆಯುಷ್ ಆಸ್ಪತ್ರೆ ವಿಭಾಗದಲ್ಲಿ ಶೀಘ್ರವೇ ಕೇಂದ್ರ ಕಾರ್ಯಾರಂಭ ಮಾಡಲಿದೆ.

ಆಯುರ್ವೇದ, ಯುನಾನಿ, ಹೋಮಿಯೊಪಥಿ ವೈದ್ಯರು ಫಿಸಿಯೊಥೆರಪಿಸ್ಟ್ ಹಾಗೂ ಆಪ್ತ ಸಮಾಲೋಚಕರನ್ನು ನೇಮಕ ಮಾಡಿಕೊಳ್ಳಲು ಸರ್ಕಾರ ಸೂಚನೆ ನೀಡಿದೆ. ಆಯುರ್ವೇದ ಪದ್ಧತಿಯ ಡಯಟ್ ಜತೆಗೆ ಬೇರೆ ಬೇರೆ ಪದ್ಧತಿಯ ಔಷಧಗಳೂ ಲಭ್ಯವಾಗಲಿವೆ. ಕ್ರೀಡಾಪಟುಗಳು ಗಾಯಗೊಂಡರೆ, ಚಿಕಿತ್ಸಾ ಸೌಲಭ್ಯ ಈ ಕೇಂದ್ರದಲ್ಲಿ ಲಭ್ಯವಿರುತ್ತದೆ ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ. ಇಕ್ಬಾಲ್ ಹೇಳಿದರು.



ಡಾ. ಇಕ್ಬಾಲ್

'ಎಲ್ಲ ಥೆರಪಿ, ಚಿಕಿತ್ಸೆ ಲಭ್ಯ'

'ಎರಡು ವರ್ಷಗಳಿಂದ ಪಟ್ಟ ಶ್ರಮಕ್ಕೆ ಫಲ ಸಿಕ್ಕಿದೆ. ಜಿಲ್ಲೆಯ ಸಂಸದ ಹಾಗೂ ಶಾಸಕರ ಪ್ರಯತ್ನದಿಂದ ಮಂಗಳೂರಿಗೆ ಈ ಕೇಂದ್ರ ಮಂಜೂರಾಗಿದೆ. ಬೇರೆ ರಾಜ್ಯಗಳ ಕ್ರೀಡಾಪಟುಗಳೂ ಇಲ್ಲಿ ಚಿಕಿತ್ಸೆ ಪಡೆಯಬಹುದು. ಕಟ್ಟಡ, ಸಿಬ್ಬಂದಿ ನೇಮಕಾತಿ, ಸಂಬಳ, ಸೇರಿದಂತೆ ಮೂಲಸೌಕರ್ಯಗಳಿಗೆ ಸರ್ಕಾರ ₹2.50 ಕೋಟಿ ಅನುದಾನ ನೀಡಿದೆ. ಇನ್ನೂ ಅನುದಾನ ಬಿಡುಗಡೆ ಆಗಲಿದೆ.

ಪಂಚಕರ್ಮ, ಯುನಾನಿ, ನ್ಯಾಚುರೋಪತಿ ವಿವಿಧ ಥೆರಪಿಗಳು ಈ ಕೇಂದ್ರದಲ್ಲಿ ಸಿಗಲಿವೆ. ಬೇರೆ ಬೇರೆ ಕ್ರೀಡಾಪಟುಗಳನ್ನು ಆಹ್ವಾನಿಸಿ ಅವರು ಯಾವ ಚಿಕಿತ್ಸಾ ಕ್ರಮಗಳನ್ನು ಇಷ್ಟ ಪಡುತ್ತಾರೆ ಎಂಬುದನ್ನು ನೋಡಿಕೊಂಡು, ಅಂತಹ ಕ್ರಮವನ್ನು ಅನುಸರಿಸುತ್ತೇವೆ ಎಂದು ಜಿಲ್ಲಾ ಅಯುಷ್ ಅಧಿಕಾರಿ ಡಾ. ಇಕ್ಬಾಲ್ ಹೇಳಿದರು.

ಚೆಂಡಿನೊಂದಿಗೆ ಮುನ್ನುಗ್ಗಿದ ಕರೀಂ ಬೆನ್ಜೆಮಾ –ಎಎಫ್‌ಪಿ ಚಿತ್ರ

ಕಾಮನ್‌ವೆಲ್ತ್ ಕ್ರೀಡಾಕೂಟ: ಮಿರಾಬಾಯಿ ಮನವಿ ತಿರಸ್ಕೃತ

ನವದೆಹಲಿ (ಪಿಟಿಐ): ಭಾರತದ ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಅವರಿಗೆ ಮುಂಬರುವ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ 55 ಕೆಜಿ ವಿಭಾಗದಲ್ಲಿ ಸ್ಪರ್ಧಿಸಲು ಆಯೋಜಕರು ಅವಕಾಶ ನಿರಾಕರಿಸಿದ್ದಾರೆ. ಹೀಗಾಗಿ ಮೀರಾ, 49 ಕೆಜಿ ವಿಭಾಗದಲ್ಲಿ ಸ್ಪರ್ಧಿಸಬೇಕಿದೆ.

ಮೀರಾಬಾಯಿ ಅವರನ್ನು 55 ಕೆಜಿ, ಜಿಲಿ ದಲಬೆಹೆರಾ (49 ಕೆಜಿ) ಮತ್ತು ಎಸ್. ಬಿಂದ್ಯಾರಾಣಿ ದೇವಿ (59ಕೆಜಿ) ಅವರನ್ನು ಕಣಕ್ಕಿಳಿಸಲು ಭಾರತ ವೇಟ್‌ಲಿಫ್ಟಿಂಗ್ ಫೆಡರೇಷನ್ (ಐಡಬ್ಲ್ಯುಎಲ್‌ಎಫ್) ಯೋಜಿಸಿತ್ತು. ಇದರಿಂದ ಭಾರತಕ್ಕೆ ವೆಟ್‌ಲಿಫ್ಟಿಂಗ್‌ನಲ್ಲಿ ಪದಕ ಗಳನ್ನು ಗೆಲ್ಲುವ ಅವಕಾಶಗಳು ಹೆಚ್ಚುತ್ತಿದ್ದವು.

ಬರ್ಮಿಂಗ್‌ಹ್ಯಾಮ್‌ನಲ್ಲಿ ಜುಲೈ 28ರಿಂದ ಆಗಸ್ಟ್ 8ರವರೆಗೆ ನಡೆಯಲಿರುವ ಕಾಮನ್‌ವೆಲ್ತ್ ಕೂಟದಲ್ಲಿ 64 ಕೆಜಿ ವಿಭಾಗದ ವೇಟ್‌ಲಿಫ್ಟಿಂಗ್‌ನಲ್ಲಿ ಪಾಪ್ಪಿ ಹಜಾರಿಕಾ ಸ್ಪರ್ಧಿಸುವರು. ಮೀರಾಬಾಯಿ ಟೋಕಿಯೊ ಒಲಿಂಪಿಕ್ಸ್‌ನಲ್ಲಿ 49 ಕೆಜಿ ವಿಭಾಗದಲ್ಲಿ ಬೆಳ್ಳಿ ಪದಕ ಜಯಿಸಿದ್ದರು.

‘ಮೀರಾ ಮನವಿಯನ್ನು ತಳ್ಳಿಹಾಕಿರುವುದರಿಂದ ಯಾವುದೇ ನಷ್ಟವಿಲ್ಲ. ಅವರ ಪದಕ ಜಯದ ಅವಕಾಶ ಈಗಲೂ ಇದೆ. ಆದ್ದರಿಂದ ನಿರಾಶರಾಗಬೇಕಿಲ್ಲ’ ಎಂದು ಅವರ ಕೋಚ್ ವಿಜಯ್ ಶರ್ಮಾ ತಿಳಿಸಿದ್ದಾರೆ.

ಚಾಂಪಿಯನ್ಸ್ ಲೀಗ್: ಬೆನ್ಜೆಮಾ ಹ್ಯಾಟ್ರಿಕ್; ರಿಯಲ್ ಜಯಭೇರಿ

ಮ್ಯಾಡ್ರಿಡ್ (ಎಎಫ್‌ಪಿ): ಕರೀಂ ಬೆನ್ಜೆಮಾ ಗಳಿಸಿದ ಹ್ಯಾಟ್ರಿಕ್ ಗೋಲುಗಳು ಚಾಂಪಿಯನ್ಸ್ ಲೀಗ್ ಟೂರ್ನಿಯಲ್ಲಿ ರಿಯಲ್ ಮ್ಯಾಡ್ರಿಡ್ ತಂಡಕ್ಕೆ ಭರ್ಜರಿ ಗೆಲುವು ತಂದುಕೊಟ್ಟಿತು. ಗುರುವಾರ ಸ್ಟ್ಯಾನ್‌ಫರ್ಡ್ ಬ್ರಿಜ್‌ನಲ್ಲಿ ನಡೆದ ಪಂದ್ಯದಲ್ಲಿ ರಿಯಲ್ ಮ್ಯಾಡ್ರಿಡ್ 3–1ರಲ್ಲಿ ಚೆಲ್ಸಿ ವಿರುದ್ಧ ಜಯ ಗಳಿಸಿತು.

21 ಮತ್ತು 24ನೇ ನಿಮಿಷಗಳಲ್ಲಿ ಬೆನ್ಜೆಮಾ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು. 40ನೇ ನಿಮಿಷದಲ್ಲಿ ಕಯ್ ಹವೆಟ್ಜ್ ಗಳಿಸಿದ ಗೋಲಿನೊಂದಿಗೆ ಚೆಲ್ಸಿ ಪಾಳಯದಲ್ಲಿ ಭರವಸೆ ಮೂಡಿತು. ಆದರೆ 46ನೇ ನಿಮಿಷದಲ್ಲಿ ಬೆನ್ಜೆಮಾ ಮತ್ತೊಂದು ಗೋಲು ಗಳಿಸಿ ಹ್ಯಾಟ್ರಿಕ್ ಪೂರೈಸುವುದರೊಂದಿಗೆ ತಂಡದ ಮುನ್ನಡೆಯನ್ನು ಮತ್ತಷ್ಟು ಹೆಚ್ಚಿಸಿದರು.

ನಂತರ ಎದುರಾಳಿಗಳನ್ನು ನಿಯಂತ್ರಿಸಿದ ರಿಯಲ್ ಮ್ಯಾಡ್ರಿಡ್ ಗೆಲುವು ತನ್ನದಾಗಿಸಿಕೊಂಡಿತು.

ಆರ್ಥಿಕ ಫೇರ್‌ಪ್ಲೇಗೆ ಯುಯೆಫಾ ಹೊಸ ನೀತಿ: ನ್ಯಾನ್, ಸ್ವಿಟ್ಜರ್ಲೆಂಡ್: ಆರ್ಥಿಕ ಫೇರ್ ಪ್ಲೇ (ಎಫ್‌ಎಫ್‌ಪಿ) ಪರವಾನಗೆ ಮೇಲೆ ನಿಯಂತ್ರಣ ಹೇರುವ ಸಂಬಂಧ ಹೊಸ ನೀತಿಯನ್ನು ಜಾರಿಗೆ ತರಲು ಯುರೋಪಿಯನ್ ಫುಟ್‌ಬಾಲ್ ಸಂಸ್ಥೆಗಳ ಫೆಡರೇಷನ್ (ಯುಯೆಫಾ) ನಿರ್ಧರಿಸಿದೆ.

ಆಟಗಾರರ ವೇತನ ನಿಗದಿ ಮಾಡುವಾಗ ಮತ್ತು ಟ್ರಾನ್ಸ್‌ಫರ್ ಸಂದರ್ಭದಲ್ಲಿ ಅನುಸರಿಸಬೇಕಾದ ನೀತಿಯನ್ನು 2010ರಲ್ಲಿ ಜಾರಿಗೆ ತರಲಾಗಿತ್ತು. ಅದರಲ್ಲಿ ಮಾರ್ಪಾಟು ಮಾಡಲು ಯುಯೆಫಾ ಆಡಳಿತ ನಿರ್ಧರಿಸಿದೆ. ಇದರಿಂದಾಗಿ ಕ್ಲಬ್‌ಗಳು ನಷ್ಟ ಅನುಭವಿಸಲಿವೆ ಎನ್ನಲಾಗಿದೆ.

ಯುಯೆಫಾದಲ್ಲಿ 55 ಸದಸ್ಯ ರಾಷ್ಟ್ರಗಳಿದ್ದು ಸಾವಿರಕ್ಕೂ ಹೆಚ್ಚು ಕ್ಲಬ್‌ಗಳು ಇದರಲ್ಲಿ ಒಳಗೊಂಡಿವೆ. ಯುರೋಪಿಯನ್ ಯೂನಿಯನ್ ಮತ್ತು ಆಯಾ ರಾಷ್ಟ್ರಗಳ ಕಾರ್ಮಿಕ ನೀತಿಗಳನ್ನು ಅಳವಡಿಸಬೇಕಾದ ಅನಿವಾರ್ಯತೆ ಇದೆ. ಹೀಗಾಗಿ ವೇತನಕ್ಕೆ ಸಂಬಂಧಿಸಿ ನಿರ್ದಿಷ್ಟ ಮೊತ್ತವನ್ನು ನಿಗದಿ ಮಾಡಲಿಲ್ಲ.

ಗಾಲ್ಫ್: 13ರ ಪೋರಿಗೆ ಪ್ರಶಸ್ತಿ

ನವದೆಹಲಿ (ಪಿಟಿಐ): ಡಿಜಿಸಿ ಮಹಿಳೆಯರ ಓಪನ್ ಅಮೆಚೂರ್ ಗಾಲ್ಫ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಗೆದ್ದು 13 ವರ್ಷದ ರಿಯಾ ಜೇಡಾನ್ ಗಮನ ಸೆಳೆದಿದ್ದಾರೆ. ಸಹೋದರಿ ಲಾವಣ್ಯ ಅವರೊಂದಿಗೆ ನಡೆದ ಜಿದ್ದಾಜಿದ್ದಿಯ ಪೈಪೋಟಿಯಲ್ಲಿ ರಿಯಾ ಮೇಲುಗೈ ಸಾಧಿಸಿದರು. ಜೂನಿಯರ್ ಬಾಲಕಿಯರ ವಿಭಾಗದ ಟ್ರೋಫಿ ಕೂಡ ಅವರ ಮುಡಿಯೇರಿತು.

ಅಸ್ಸಾಂ ಎದುರಿನ ಪಂದ್ಯದಲ್ಲಿ ಕರ್ನಾಟಕದ ಆಟಗಾರ್ತಿ ಪಾಯಿಂಟ್ ಗಳಿಸಿದರು

ಬ್ಯಾಸ್ಕೆಟ್‌ಬಾಲ್: ಕರ್ನಾಟಕ ಮಹಿಳೆಯರಿಗೆ ಕೇರಳ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಮಹಿಳಾ ತಂಡ ಚೆನ್ನೈಯಲ್ಲಿ ನಡೆಯುತ್ತಿರುವ 71ನೇ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ ಕೇರಳ ತಂಡವನ್ನು ಎದುರಿಸಲಿದೆ.

ನೆಹರು ಕ್ರೀಡಾಂಗಣದಲ್ಲಿ ಗುರುವಾರ ನಡೆದ ಕೊನೆಯ ಲೀಗ್ ಪಂದ್ಯದಲ್ಲಿ ಕರ್ನಾಟಕ ತಂಡದವರು ಅಸ್ಸಾಂ ವಿರುದ್ಧ 80–47ರಲ್ಲಿ ಗೆಲುವು ಸಾಧಿಸಿದರು. ಈ ಮೂಲಕ ನಾಕೌಟ್ ಹಂತಕ್ಕೆ ಪ್ರವೇಶಿಸಿದರು. ಅಸ್ಸಾಂ ಕೂಡ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದು ಭಾರತೀಯ ರೈಲ್ವೆ ತಂಡವನ್ನು ಎದುರಿಸಲಿದೆ. ತಮಿಳುನಾಡು ತಂಡ ಪಂಜಾಬ್ ವಿರುದ್ಧ ಮತ್ತು ತೆಲಂಗಾಣ ತಂಡ ಮಧ್ಯಪ್ರದೇಶ ಎದುರು ಸೆಣಸಲಿದೆ.

21 ಪಾಯಿಂಟ್ ಗಳಿಸಿದ ಚಂದನ ಅವರು ಅಸ್ಸಾಂ ಎದುರಿನ ಪಂದ್ಯದಲ್ಲಿ ಕರ್ನಾಟಕದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ರಿನಿ 14 ಮತ್ತು ಲೋಪಾಮುದ್ರ 13 ಪಾಯಿಂಟ್ ಕಲೆ ಹಾಕಿದರು. ಅಸ್ಸಾಂಗಾಗಿ ರೀನಾ ಪಟೇಲ್ ಮತ್ತು ಜೋನಲ್ ದತ್ತ ತಲಾ 11, ಗೀತಾ ಸಹಾನಿ 10 ಪಾಯಿಂಟ್ ಗಳಿಸಿದರು.

ಕರ್ನಾಟಕ ಪುರುಷರ ತಂಡಕ್ಕೆ ಎರಡನೇ ಗೆಲುವು: ಪುರುಷರ ವಿಭಾಗದಲ್ಲಿ ಪಂಜಾಬ್ ವಿರುದ್ಧ 90–81ರಲ್ಲಿ ಗೆದ್ದ ಕರ್ನಾಟಕ ‘ಇ’ ಗುಂಪಿನಲ್ಲಿ ಎರಡನೇ ಜಯ ದಾಖಲಿಸಿಕೊಂಡಿತು. ಅರವಿಂದ 30 ಪಾಯಿಂಟ್ ಕಲೆ ಹಾಕಿದರೆ ಅನಿಲ್ ಕುಮಾರ್ ಬಿ.ಕೆ 22 ಮತ್ತು ಹರೀಶ್ ಮುತ್ತು ಕುಮಾರ್ 12 ಪಾಯಿಂಟ್ ಗಳಿಸಿದರು. ಪಂಜಾಬ್ ಪರವಾಗಿ ತಜಿಂದರ್ ಪಾಲ್ ಸಿಂಗ್ 19, ಅಮ್ಜೋತ್ ಸಿಂಗ್ 13, ಕನ್ವರ್ ಗುರ್ಬಾಲ್ ಸಿಂಗ್ ಸಂಧು 12 ಪಾಯಿಂಟ್ ಗಳಿಸಿದರು.

ಮಂಡ್ಯದಲ್ಲಿ ರಾಷ್ಟ್ರೀಯ ಚೆಸ್

ಮಂಡ್ಯ: ಮಂಡ್ಯ ಚೆಸ್ ಅಕಾಡೆಮಿ, ತುಮಕೂರು ಚೆಸ್ ಸಂಸ್ಥೆ, ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ ಹಾಗೂ ಅಖಿಲ ಭಾರತ ಚೆಸ್ ಸಂಸ್ಥೆ ಸಹಯೋಗದಲ್ಲಿ ಏಪ್ರಿಲ್ 9ರಿಂದ 14ರವರೆಗೆ ರಾಷ್ಟ್ರೀಯ 12 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ಚೆಸ್ ಟೂರ್ನಿ ಆಯೋಜಿಸಲಾಗಿದೆ ಎಂದು ಅಕಾಡೆಮಿಯ ಮುಖ್ಯಸ್ಥ ಮಂಜುನಾಥ್ ಜೈನ್ ಹೇಳಿದರು.

‘ಅಮರಾವತಿ ಹೋಟೆಲ್‌ನಲ್ಲಿ ಟೂರ್ನಿ ಆಯೋಜಿಸಲಾಗಿದ್ದು ಒಟ್ಟು ₹ 8 ಲಕ್ಷ ಮೌಲ್ಯದ ಬಹುಮಾನ, 40 ಟ್ರೋಫಿಗಳು, ಭಾಗವಹಿಸಿದ ಎಲ್ಲಾ ಮಕ್ಕಳಿಗೂ ನೆನಪಿನ ಕಾಣಿಕೆ ನೀಡಲಾಗುವುದು’ ಎಂದು ಅವರು ತಿಳಿಸದರು.

‘ಪ್ರವೇಶ ಶುಲ್ಕ ₹1,500 ನಿಗದಿ ಮಾಡಲಾಗಿದೆ. ಉದ್ಘಾಟನಾ ಸಮಾರಂಭದಲ್ಲಿ ಅಖಿಲ ಭಾರತ ಚೆಸ್ ಸಂಸ್ಥೆಯ ಕಾರ್ಯದರ್ಶಿ ಭಗತ್‌ಸಿಂಗ್ ಚೌಹಾಣ್, ಜಿಲ್ಲಾ ಚೆಸ್ ಸಂಸ್ಥೆಯ ಅಧ್ಯಕ್ಷ ಟಿ.ವರಪ್ರಸಾದ್ ಭಾಗವಹಿಸುವರು’ ಎಂದು ವಿವರಿಸಿದರು.

ಅಕಾಡೆಮಿ ನಿರ್ದೇಶಕರಾದ ಎನ್. ಮಾಧುರಿ ಜೈನ್, ರಾಘವೇಂದ್ರ ಇದ್ದರು.

ಮಾಹಿತಿಗೆ ಮೊ.8050244338/ 9481674011 ಸಂಪರ್ಕಿಸಬಹುದು.